₹ 6 @vishwavaninews epaper.vishwavani.news vishwavani.news ಬೆಂಗಳೂರು | ಹುಬ್ಬಳ್ಳಿ | ಮಂಗಳೂರು | ದಾವಣಗೆರೆ | ಕಲಬುರಗಿ | ಬೆಳಗಾವಿ ಶನಿವಾರ 22.03.2025 ಸಂಪುಟ: 10 ಸಂಚಿಕೆ: 67 ಪುಟಗಳು: 12 ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್

ವಿಶ್ವವಾಣಿ
ವಿಶ್ವಾಸವೇ ವಿಶ್ವ

## ಬೆಳಗಿದ ಕಾವೇರಿ ಆರತಿ

ಬೆಂಗಳೂರಿನ ಸ್ಯಾಂಕಿ ಟ್ಯಾಂಕ್ ಆವರಣದಲ್ಲಿ ಕಾವೇರಿ ಆರತಿಗೆ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಚಾಲನೆ ನೀಡಿ ಗಂಗಮ್ಮ ದೇವಿಗೆ ಪತ್ನಿ ಸಮೇತರಾಗಿ ಪೂಜೆ ಸಲ್ಲಿಸಿದರು.

### ಸೊಂಪಾದ ಪುಟಗಳು

ಅಂಬೇಡ್ಕರ್ ಮತ್ತು ಆರೆಸ್ಸೆಸ್: ಸಮಾನ ಚಿಂತನೆಗಳು

ವೀಕೆಂಡ್ ವಿತ್ ಮೋಹನ್
ಮೋಹನ್ ವಿಶ್ವ 6

ದಶವಿಧ ಪಾಪಗಳು ತರದಿರಲಿ ಸ್ವಾಸ್ಥ್ಯಕ್ಕೆ ಧಕ್ಕೆ!

ಸ್ವಾಸ್ಥ್ಯವೆಂಬ ಸ್ವಾತಂತ್ರ್ಯ
ಡಾ. ಸಾಧನಾ ಶ್ರೀ 7

### ದಾರಿದೀಪೋಕ್ತಿ

ನಿಮ್ಮ ಬಗ್ಗೆ ಗಾಸಿಪ್ ಹರಡುವವರನ್ನು ಎದುರಿಸುತ್ತಾ ಮಾನಸಿಕ ನೆಮ್ಮದಿಯನ್ನು ಎಂದಿಗೂ ಹಾಳು ಮಾಡಿಕೊಳ್ಳಬಾರದು. ಅವರು ನಿಮ್ಮ ಬಗ್ಗೆ ಇಲ್ಲ ಸಲ್ಲದ್ದನ್ನು ಮಾತಾಡಲಿ. ಕಾರಣ ಅವರ್ಯಾರೂ ನಿಮ್ಮ ಜೀವನದ ಮೌಲ್ಯವನ್ನು ಹೆಚ್ಚಿಸುವುದಿಲ್ಲ.

### ವಕ್ರತುಂಡೋಕ್ತಿ

ಗುಂಡು ಪಾರ್ಟಿ ಮಾಡಿದ ಮರುದಿನವೂ ಒಂದು ವಿಷಯ ನಿಮ್ಮ ಮನಸ್ಸಿನಲ್ಲಿದೆ ಅಂದ್ರೆ ಅದು ನಿಮ್ಮ ಮನಸ್ಸನ್ನು ತಟ್ಟಿದೆ ಎಂದರ್ಥ.

## ಗುತ್ತಿಗೆಯಲ್ಲಿ ಮುಸ್ಲಿಂ ಮೀಸಲಿಗೆ ಅಸ್ತು

**ಬೆಂಗಳೂರು:** ಬಿಜೆಪಿ-ಜೆಡಿಎಸ್‌ನ ವಿರೋಧದ ಹೊರತಾಗಿಯೂ ಗುತ್ತಿಗೆಯಲ್ಲಿ ಮುಸ್ಲಿಮರಿಗೆ ಮೀಸಲು ನೀಡುವ ವಿಧೇಯಕಕ್ಕೆ ಉಭಯ ಸದನಗಳಲ್ಲಿ ಅನುಮೋದನೆ ಸಿಕ್ಕಿದೆ. ವಿಧಾನಸಭೆಯಲ್ಲಿ 18 ಬಿಜೆಪಿ ಶಾಸಕರ ಅಮಾನತಿನ ಬಳಿಕ ಬಿಜೆಪಿ ಸದಸ್ಯರು ಪ್ರತಿಭಟನೆ ನಡೆಸುತ್ತಿದ್ದ ನಡುವೆಯೇ ಅಲ್ಪಸಂಖ್ಯಾತರಿಗೆ ಗುತ್ತಿಗೆ ಕಾಮಗಾರಿಗಳಲ್ಲಿ ಶೇ.4ರಷ್ಟು ಮೀಸಲು ನೀಡುವ ತಿದ್ದುಪಡಿ ವಿಧೇಯಕವನ್ನು ಅಂಗೀಕರಿಸಲಾಯಿತು. ಈ ವಿಧೇಯಕದ ವಿರುದ್ಧ ಬಿಜೆಪಿ ಹೋರಾಡುವುದಾಗಿ ತಿಳಿಸಿದೆ.

## ಚಲನಚಿತ್ರ ನಿರ್ದೇಶಕ ಎ.ಟಿ.ರಘು ನಿಧನ

**ಬೆಂಗಳೂರು:** ಚಲನಚಿತ್ರ ನಿರ್ದೇಶಕ ಎ.ಟಿ.ರಘು(76) ನಿಧನರಾಗಿದ್ದಾರೆ. ಕೆಲ ವರ್ಷಗಳಿಂದ ಅನಾರೋಗ್ಯದಿಂದ ಬಳಲುತ್ತಿದ್ದ ಅವರು ಬೆಂಗಳೂರಿನ ಆರ್.ಟಿ.ನಗರದಲ್ಲಿರುವ ತಮ್ಮ ನಿವಾಸದಲ್ಲಿ ಕೊನೆಯುಸಿರೆಳೆದಿದ್ದಾರೆ.

### ಮಾತಂದ್ರೆ ಮಾತು

ಮರ್ಯಾದೆಗೇಡಿ, ಕಿಡಿಗೇಡಿ ನನ್ನ ಮೇಲೆ ಮತ್ತೆ ವಿಷ ಕಕ್ಕಿರುವುದು ಹತಾಶೆ ಅಷ್ಟೇ. ಆಕಾಶಕ್ಕೆ ಉಗಿದರೆ ಮುಖದ ಮೇಲೆಯೇ ಬೀಳುತ್ತದೆ ಮಂಕೆ. ಇಷ್ಟೂ ಸಾಮಾನ್ಯಜ್ಞಾನವೂ ಇಲ್ಲವೇ? ಕುಂಬಳಕಾಯಿ ಕಳ್ಳನಿಗೆ ಕೋಪ ಬಂದಿದೆ.

– ಎಚ್.ಡಿ.ಕುಮಾರಸ್ವಾಮಿ
ಕೇಂದ್ರ ಸಚಿವ

### ಫನ್‌ತರಂಗ

– ರಘುಪತಿ ಶೃಂಗೇರಿ –

ಸಿ.ಎನ್.ಅಶ್ವತ್ಥ ನಾರಾಯಣ್ | ದೊಡ್ಡಣ್ಣ ಗೌಡ ಎಚ್.ಪಾಟೀಲ್ | ಎಸ್.ಆರ್. ವಿಶ್ವನಾಥ್ | ಚೆನ್ನಬಸಪ್ಪ(ಚೆನ್ನಿ) | ಉಮಾನಾಥ್ ಕೋಟ್ಯಾನ್ | ಯಶಪಾಲ್ ಸುವರ್ಣ | ಬಿ.ಪಿ.ಹರೀಶ್ | ಡಾ.ಚಂದ್ರು ಲಮಾಣಿ | ಶರಣು ಸಲಗರ | ಶೈಲೇಂದ್ರ ಬೆಲ್ದಾಳೆ | ಸಿ.ಕೆ.ರಾಮಮೂರ್ತಿ | ಮುನಿರತ್ನ | ಧೀರಜ್ ಮುನಿರಾಜ್ | ಭರತ್ ಶೆಟ್ಟಿ | ಬಸವರಾಜ್ ಮತ್ತಿಮೂಡ್ | ಸುರೇಶ್ ಗೌಡ | ಬಿ.ಎ.ಬಸವರಾಜ್ | ಎಂ.ಆರ್.ಪಾಟೀಲ್

# ಹನಿಬಾಂಬ್ ಕೋಲಾಹಲ 18 ಶಾಸಕರ ಅಮಾನತು

**ವಿಧಾನಸಭೆಯಲ್ಲಿ ಮತ್ತೆ ಹನಿಟ್ರ್ಯಾಪ್ ಸದ್ದು | ಸಿಬಿಐ ತನಿಖೆಗೆ ಬಿಜೆಪಿ ಸದಸ್ಯರ ಪಟ್ಟು | ಸ್ಪೀಕರ್ ಆಸನದತ್ತ ಧಾವಿಸಿ ಗದ್ದಲ, ಪೇಪರ್ ತೂರಾಟ**
**18 ಶಾಸಕರು 6 ತಿಂಗಳು ಅಮಾನತು | ರಾಜ್ಯಪಾಲರಿಗೆ ಕೇಸರಿ ಪಡೆ ದೂರು | ನೊಂದು ರಾಜೀನಾಮೆಗೆ ಮುಂದಾದ ರಾಯರಡ್ಡಿ, ಬಿ.ಆರ್.ಪಾಟೀಲ್**

ವಿಶ್ವವಾಣಿ ಸುದ್ದಿಮನೆ

**ವಿಧಾನಸಭೆ:** 'ಟ್ರ್ಯಾಪ್ ಮಾಡಲು 'ಜೇನ'ನ್ನು ಕಳುಹಿಸಿದವರ್‍ಯಾರು ಎಂಬುದನ್ನು ಸಿಐಬಿನಿಂದ ತನಿಖೆ ನಡೆಸಬೇಕು' ಎಂಬ ಮಾತಿನಿಂದ ಶುರುವಾದ ಜಟಾಪಟಿ ತೀವ್ರ ಸ್ವರೂಪ ಪಡೆದು, ರಾಜ್ಯದ ಇತಿಹಾಸದಲ್ಲಿಯೇ ಮೊದಲ ಬಾರಿ ಬರೋಬ್ಬರಿ 18 ಶಾಸಕರನ್ನು ಸದನದಿಂದ ಆರು ತಿಂಗಳ ಕಾಲ ಅಮಾನತ್ತಿನಲ್ಲಿಟ್ಟಿರುವ ಘಟನೆ ಶುಕ್ರವಾರ ಸದನದಲ್ಲಿ ನಡೆದಿದೆ. ಈ ಮೂಲಕ ಇಷ್ಟು ದಿನ ಹಲವು ಮಾದರಿ ಸಂಸದೀಯ ನಡೆಗಳಿಗೆ ಸಾಕ್ಷಿಯಾಗಿದ್ದ ಕರ್ನಾಟಕ ವಿಧಾನಸಭೆ, ಕೆಟ್ಟ ಸಂಸದೀಯ ನಡೆಗೆ ಸಾಕ್ಷಿಯಾಗಿದೆ.

ವಿಧಾನಮಂಡಲದ ಅಧಿವೇಶದ ಅಂತಿಮ ದಿನದಂದು ನಡೆದ ಘಟನೆಯಲ್ಲಿ ಪೀಠಕ್ಕೆ ಅಗೌರವ ತೋರಿದ ಹಿನ್ನೆಲೆ 18 ಬಿಜೆಪಿ ಶಾಸಕರನ್ನು ಕಲಾಪದಿಂದ ಆರು ತಿಂಗಳು ಅಮಾನತುಗೊಳಿಸಿ ಸ್ಪೀಕರ್ ಯು.ಟಿ. ಖಾದರ್ ಆದೇಶ ಹೊರಡಿಸಿದ್ದಾರೆ. ಈ ಆದೇಶವನ್ನು ಪ್ರಶ್ನಿಸಿ ಬಿಜೆಪಿಗರು ರಾಜ ಭವನದ ಕದತಟ್ಟಿದ್ದು, ಒಂದು ವೇಳೆ ಅಲ್ಲಿಯೂ ನಿರೀಕ್ಷಿತ ಫಲ ಸಿಗದಿದ್ದರೆ ನ್ಯಾಯಾಲಯದ ಮೆಟ್ಟಿಲೇರಿರುವ ಸಾಧ್ಯತೆ ದಟ್ಟವಾಗಿದೆ.

ಗುರುವಾರ ಸಂಜೆಯಿಂದ ವಿಧಾನಸಭೆಯಲ್ಲಿ ಶುರುವಾದ ಹನಿಟ್ರ್ಯಾಪ್ ಗದ್ದಲ ಶುಕ್ರವಾರ ಸದನ ಆರಂಭವಾಗುತ್ತಿದ್ದಂತೆ

ಪ್ರತಿಧ್ವನಿಸಿತು. ಮುಖ್ಯಮಂತ್ರಿಗಳ ಉತ್ತರಕ್ಕೂ ಅವಕಾಶ ಕೊಡದ ಬಿಜೆಪಿಗರು, 'ಪ್ರಕರಣವನ್ನು ಸಿಬಿಐಗೆ ವಹಿಸಬೇಕು' ಎಂದು ಆಗ್ರಹಿಸಿ ಬಾವಿಯಲ್ಲಿಯೇ ದಿನ ಕಳೆಯಲು ತೀರ್ಮಾನಿಸಿದರು. ಈ ನಡುವೆಯೇ ಮುಖ್ಯ ಮಂತ್ರಿಗಳು ಉತ್ತರ ನೀಡಲು ಮುಂದಾಗುತ್ತಿದ್ದಂತೆ ಗಲಾಟೆ ಹೆಚ್ಚಿಸಿದ ಬಿಜೆಪಿಗರು, ಆಡಳಿತ ಪಕ್ಷದ ವಿರುದ್ಧ ಘೋಷಣೆ ಕೂಗಿದರು. ಸ್ಪೀಕರ್ ಪೀಠದ ಮೇಲೆ ಏರಿ ಬಂದ ಬಿಜೆಪಿ ಸದಸ್ಯರು ತಮ್ಮ ಆಕ್ರೋಶ ಹೊರಹಾಕಿದರು.

→ 8

### ಪೀಠಕ್ಕೆ ಅಗೌರವ ಸಹಿಸುವುದಿಲ್ಲ: ಖಾದರ್

ಇದಕ್ಕೂ ಮೊದಲು ಕಾನೂನು ಮತ್ತು ಸಂಸದೀಯ ಸಚಿವ ಎಚ್.ಕೆ.ಪಾಟೀಲ್ ಅವರು ಅಮಾನತು ಪರವಾಗಿ ನಿರ್ಣಯ ಮಂಡಿಸಿದರು. ಬಳಿಕ ಸಭಾಧ್ಯಕ್ಷ ಯು.ಟಿ.ಖಾದರ್ ರೂಲಿಂಗ್ ನೀಡುತ್ತಾ, ಪೀಠದ ಮಹತ್ವ, ಪಾವಿತ್ರ್ಯತೆ ಕಾಪಾಡಬೇಕು. ಪೀಠದ ಗೌರವಕ್ಕೆ ಧಕ್ಕೆ ಮಾಡಕೂಡದು. ಪೀಠಕ್ಕಿಂತ ನಾವು ದೊಡ್ಡವರಲ್ಲ. ನಾವೆಲ್ಲರೂ ಬದ್ಧತೆ, ಶಾಂತತೆಯಿಂದ ನಡೆದುಕೊಳ್ಳಬೇಕು. ಪೀಠದ ಮೇಲೆ ಹತ್ತಿ ಅಗೌರವ ತೋರಿದ್ದಾರೆ. ಕಾರ್ಯಕಲಾಪಕ್ಕೆ ಅಡ್ಡಿಪಡಿಸಿ ಸದನದಲ್ಲಿ ಬೇಜವಾಬ್ದಾರಿಯಿಂದ ವರ್ತಿಸಲಾಗಿದೆ. ಖಾದರ್ ಕ್ಷಮಿಸಬಹುದು ಆದರೆ, ಪೀಠ ಸಹಿಸುವುದಿಲ್ಲ ಎಂದು ಎಚ್ಚರಿಕೆ ನೀಡಿದರು.

### 6 ತಿಂಗಳ ಕಾಲ ಸದನಕ್ಕೆ ಬಾರದಂತೆ ತಡೆ

ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು ಮಂಡಿಸಿದ ಹಾಗೂ ಸದನ ಅಂಗೀಕರಿಸಿದ ಪ್ರಸ್ತಾವದಂತೆ 21.03.2025ರಂದು ಸದನದಲ್ಲಿ ಪೀಠದ ಆದೇಶ ಲೆಕ್ಕಿಸದೇ ಸದನದ ಕಾರ್ಯಕಲಾಪಗಳಿಗೆ ಅಡ್ಡಿಯುಂಟು ಮಾಡುತ್ತಾ, ಅಶಿಸ್ತು ಹಾಗೂ ಅಗೌರವದಿಂದ ನಡೆದುಕೊಂಡಿದ್ದರಿಂದ 18 ಶಾಸಕರನ್ನು ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಾವಳಿಗಳ ನಿಯಮ 348ರ ಮೇರೆಗೆ ತಕ್ಷಣದಿಂದ ಜಾರಿಗೆ ಬರುವಂತೆ 6 ತಿಂಗಳುಗಳ ಕಾಲ ಸದನಕ್ಕೆ ಬಾರದಂತೆ ತಡೆಹಿಡಿದು, ಅಮಾನತುಗೊಳಿಸಲಾಗಿರುತ್ತದೆ ಎಂದು ರೂಲಿಂಗ್ ನೀಡಲಾಯಿತು.

### ಏನೆಲ್ಲ ನಿಷಿದ್ಧ ?

- ಅಮಾನತು ಅವಧಿಯಲ್ಲಿ ಶಾಸಕರು ವಿಧಾನಸಭೆಯ ಸಭಾಂಗಣ, ಲಾಬಿ ಮತ್ತು ಗ್ಯಾಲರಿಗಳಿಗೆ ಪ್ರವೇಶಿಸುವಂತಿಲ್ಲ
- ಅವರು ಸದಸ್ಯರಾಗಿರುವ ವಿಧಾನಮಂಡಲದ, ವಿಧಾನಸಭೆಯ ಸ್ಥಾಯಿ ಸಮಿತಿ ಸಭೆಗಳಲ್ಲೂ ಭಾಗವಹಿಸುವಂತಿಲ್ಲ
- ವಿಧಾನಸಭೆಯ ಕಾರ್ಯಕಲಾಪಗಳ ಪಟ್ಟಿಯಲ್ಲಿ ಅವರ ಹೆಸರಿನಲ್ಲಿ ಯಾವುದೇ ವಿಷಯ ನಮೂದು ಮಾಡುವಂತಿಲ್ಲ
- ಅಮಾನತುಗೊಂಡ ಅವಧಿಯಲ್ಲಿ ಅವರು ನೀಡುವ ಯಾವುದೇ ಸೂಚನೆಗಳನ್ನು ಸ್ವೀಕರಿಸಲಾಗುವುದಿಲ್ಲ.
- ಈ ಅವಧಿಯಲ್ಲಿ ನಡೆಯುವ ಸಮಿತಿಗಳ ಚುನಾವಣೆಯಲ್ಲಿ ಮತದಾನಕ್ಕೆ ಅರ್ಹರಿರುವುದಿಲ್ಲ
- ಯಾವುದೇ ದಿನಭತ್ಯೆ ಪಡೆಯಲು ಅರ್ಹರಿರುವುದಿಲ್ಲ

ಹನಿ ಟ್ರ್ಯಾಪ್ ಪ್ರಕರಣದಲ್ಲಿ ಯಾರಿಗೇ ಅನ್ಯಾಯವಾಗಿದ್ದರೂ ರಕ್ಷಣೆ ಕೊಡಬೇಕಾಗಿರುವುದು ಸರಕಾರದ ಜವಾಬ್ದಾರಿ. ಕಾನೂನಿನ ಪ್ರಕಾರ ತಪ್ಪಿತಸ್ಥರಿಗೆ ಶಿಕ್ಷೆಯಾಗಲೇಬೇಕು. ರಾಜಣ್ಣ ಅವರು ದೂರು ಕೊಟ್ಟರೆ ಉನ್ನತಮಟ್ಟದ ತನಿಖೆ ಮಾಡಿಸಲಾಗುತ್ತದೆ.
– **ಸಿದ್ದರಾಮಯ್ಯ**, ಮುಖ್ಯಮಂತ್ರಿ

ಬಿಜೆಪಿ ಸಂಸ್ಕೃತಿಹೀನ ಪಕ್ಷ. ಅವರು ಜನಾದೇಶದಿಂದ ಸೋಲನುಭವಿಸಿದ್ದು, ವಿಧಾನಸಭೆಯಲ್ಲಿ ಹೇಗೆ ವರ್ತಿಸಬೇಕು ಎಂಬುದು ಗೊತ್ತಿಲ್ಲ. ಅವರು ಗೂಂಡಾಗಳು. ಇದು ನಾಚಿಕೆಗೇಡಿನ ವಿಚಾರ. ಕಳೆದ 36 ವರ್ಷಗಳಿಂದ ಇಂತಹ ವರ್ತನೆ ನೋಡಿಲ್ಲ
– **ಡಿ.ಕೆ.ಶಿವಕುಮಾರ್**, ಡಿಸಿಎಂ

ಶಾಸಕರನ್ನು ಅಮಾನತು ಮಾಡಿರುವುದು ಖಂಡನೀಯ. ಸ್ಪೀಕರ್‌ಗೆ ನಾವು ಯಾವುದೇ ಅನ್ಯಾಯ ಮಾಡಿಲ್ಲ. ನಾವು ನ್ಯಾಯ ಕೇಳಿದ್ದೇವೆ. ಅವರಿಂದ ಇದನ್ನು ನಿರೀಕ್ಷೆ ಮಾಡಿರಲಿಲ್ಲ. ಕಾಂಗ್ರೆಸ್‌ನ ಏಜೆಂಟರಂತೆ ಸ್ಪೀಕರ್ ಕೆಲಸ ಮಾಡುತ್ತಿದ್ದಾರೆ.
– **ಆರ್.ಅಶೋಕ**, ಪ್ರತಿಪಕ್ಷದ ನಾಯಕ

ಸ್ಪೀಕರ್ ನಿರ್ಧಾರ ಪ್ರಜಾಪ್ರಭುತ್ವ ವಿರೋಧಿ ನಡೆ. ಶಾಸಕರಿಗೆ ರಕ್ಷಣೆ ಕೊಡುವ ಸ್ಥಾನದಲ್ಲಿ ಸಭಾಧ್ಯಕ್ಷರು ಕುಳಿತಿದ್ದಾರೆ. ನಮಗೆ ರಕ್ಷಣೆ ಕೊಡಿ ಎಂದು ಪ್ರತಿಪಕ್ಷವಾಗಿ ನಾವು ಸಚಿವರ ಪರವಾಗಿ ಹೋರಾಟ ಮಾಡಿದರೆ ನಮ್ಮನ್ನು ಕತ್ತು ಹಿಡಿದು ಹೊರದಬ್ಬಿದ್ದು ಸರಿಯಲ್ಲ.
– **ಬಿ.ವೈ.ವಿಜಯೇಂದ್ರ** ಬಿಜೆಪಿ ರಾಜ್ಯಾಧ್ಯಕ್ಷ

### ಬಿಆರ್‌ಪಿ, ರಾಯರಡ್ಡಿ ರಾಜೀನಾಮೆ ಮಾತು

ಕಾಂಗ್ರೆಸ್‌ನ ಹಿರಿಯ ಶಾಸಕ ಬಿ.ಆರ್.ಪಾಟೀಲ್, ಈ ಘಟನೆಯಿಂದ ಮನನೊಂದು ರಾಜೀನಾಮೆ ನೀಡುವ ಮಾತುಗಳನ್ನು ಆಡಿದರು. ಮುಖ್ಯಮಂತ್ರಿಗಳ ಆರ್ಥಿಕ ಸಲಹೆಗಾರ ಬಸವರಾಜ ರಾಯರಡ್ಡಿ ಅವರೂ, 'ಇದನೆಲ್ಲ ನೋಡಿದರೆ ರಾಜೀನಾಮೆ ನೀಡಬೇಕು ಎನಿಸುತ್ತದೆ' ಎಂದು ಬೇಸರ ವ್ಯಕ್ತಪಡಿಸಿದರು.

## ಸಪ್ಲೈಯರ್ ಬಳಿ ಹ್ಯಾಂಡ್ ಗ್ರೆನೇಡ್

**ಬೆಂಗಳೂರು:** ನಗರದ ಸಂಪಿಗೆಹಳ್ಳಿ ಠಾಣೆ ವ್ಯಾಪ್ತಿಯ ಹೋಟೆಲ್‌ವೊಂದರಲ್ಲಿ ಸಪ್ಲೈಯರ್ ಆಗಿದ್ದ ಅಬ್ದುಲ್ ರೆಹಮಾನ್ ಎಂಬ ಯುವಕನ ಬ್ಯಾಗ್‌ನಲ್ಲಿ ಸ್ಫೋಟಕ ಹ್ಯಾಂಡ್ ಗ್ರೆನೇಡ್ ಪತ್ತೆಯಾಗಿದೆ. ಹೋಟೆಲ್ ಸಿಬ್ಬಂದಿಯೊಬ್ಬರು ಆಧಾರ್ ಕಾರ್ಡ್‌ಗಾಗಿ ಅಬ್ದುಲ್ ರೆಹಮಾನ್‌ನ ಬ್ಯಾಗ್ ಪರಿಶೀಲಿಸಿದಾಗ ಗ್ರೆನೇಡ್ ಪತ್ತೆಯಾಗಿದೆ. ಹೋಟೆಲ್‌ನವರು ಕೂಡಲೇ ಪೊಲೀಸರಿಗೆ ಮಾಹಿತಿ ರವಾನಿಸಿದ್ದಾರೆ. ಬಳಿಕ ಸ್ಥಳಕ್ಕೆ ದೌಡಾಯಿಸಿದ ಪೊಲೀಸರು ಅಬ್ದುಲ್ ರೆಹಮಾನ್ ಹಾಗೂ ಈತನ ಬ್ಯಾಗ್‌ನಲ್ಲಿ ಸಿಕ್ಕ ಸ್ಫೋಟಕಗಳನ್ನು ವಶಕ್ಕೆ ಪಡೆದು, ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ರವಾನಿಸಿದ್ದಾರೆ.

## ಕೆಪಿಎಸ್‌ಸಿ ಪರೀಕ್ಷೆ ಮುಂದೂಡಿಕೆ

**ಬೆಂಗಳೂರು:** ಕರ್ನಾಟಕ ಲೋಕಸೇವಾ ಆಯೋಗವು 2023-24ನೇ ಸಾಲಿನ ಗೆಜೆಟೆಡ್ ಪ್ರೊಬೆಷನರಿ ಗ್ರೂಪ್ 'ಎ' ಮತ್ತು 'ಬಿ' ವೃಂದದ 384 ಹುದ್ದೆಗಳ ನೇಮಕಾತಿ ಮುಖ್ಯ ಪರೀಕ್ಷೆಗೆ ನಿಗದಿ ಮಾಡಿದ್ದ ದಿನಾಂಕವನ್ನು ಮುಂದೂಡಿದೆ. ಮುಖ್ಯ ಪರೀಕ್ಷೆಯನ್ನು ಮಾರ್ಚ್ 28, 29, ಏಪ್ರಿಲ್ 1 ಹಾಗೂ 2ರಂದು ನಡೆಸುವುದಾಗಿ ಕೆಪಿಎಸ್‌ಸಿ ಫೆಬ್ರವರಿ 13ರಂದು ಪ್ರಕಟಿಸಿದ್ದ ಅಧಿಸೂಚನೆಯಲ್ಲಿ ಹೇಳಿತ್ತು. ಇದೀಗ, ಕಾರಣಾಂತರಗಳಿಂದಾಗಿ ಪರೀಕ್ಷೆ ಮುಂದೂಡಲಾಗಿದ್ದು, ಪರಿಷ್ಕೃತ ದಿನಾಂಕವನ್ನು ಶೀಘ್ರದಲ್ಲೇ ಆಯೋಗದ ವೆಬ್‌ಸೈಟ್‌ನಲ್ಲಿ ಪ್ರಕಟಿಸುವುದಾಗಿ ಉಲ್ಲೇಖಿಸಿದೆ.

## 1,600 ವಿಮಾನ ಸಂಚಾರ ವ್ಯತ್ಯಯ



**ಲಂಡನ್:** ಹೀಥ್ರೂ ವಿಮಾನ ನಿಲ್ದಾಣದಲ್ಲಿ ಭಾರಿ ಪ್ರಮಾಣದ ಬೆಂಕಿ ಅವಘಡ ಸಂಭವಿಸಿದೆ. ವಿಮಾನ ನಿಲ್ದಾಣ ಬಂದ್ ಮಾಡಿರುವುದರಿಂದ 1,600 ವಿಮಾನಗಳ ಹಾರಾಟದಲ್ಲಿ ವ್ಯತ್ಯಯ ಉಂಟಾಗಿದೆ. ನಗರದ ಪಶ್ಚಿಮ ಭಾಗದಲ್ಲಿ ವಿದ್ಯುತ್ ವ್ಯತ್ಯಯ ಉಂಟಾಗಿದ್ದು, 16,000 ಮನೆಗಳೂ ಸೇರಿದಂತೆ ವಿಮಾನ ನಿಲ್ದಾಣದಲ್ಲಿ ವಿದ್ಯುತ್ ಸಂಪರ್ಕ ಕಡಿತಗೊಂಡಿದೆ. ಮುನ್ನೆಚ್ಚರಿಕಾ ಕ್ರಮವಾಗಿ 150 ಜನರನ್ನು ಸ್ಥಳಾಂತರಿಸಲಾಗಿದೆ. ಜಾಗತಿಕ ಮಟ್ಟದಲ್ಲಿ ಒಟ್ಟು 1.45 ಲಕ್ಷ ಪ್ರಯಾಣಿಕರಿಗೆ ತೊಂದರೆಯಾಗಿದೆ ಎಂದು ವಿಮಾನಯಾನ ವಿಶ್ಲೇಷಣಾ ಕಂಪನಿ ಸಿರಿಯಮ್ ತಿಳಿಸಿದೆ.

## ನ್ಯಾಯಮೂರ್ತಿ ಮನೆಯಲ್ಲಿ ಕಂತೆ ಹಣ

**ಬೆಂಗಳೂರು:** ದೆಹಲಿ ಹೈಕೋರ್ಟ್ ನ್ಯಾಯಮೂರ್ತಿ ಯಶವಂತ್ ವರ್ಮಾ ಅವರ ದೆಹಲಿ ಮನೆಯಲ್ಲಿ ಮಾರ್ಚ್ 14ರಂದು ಅಗ್ನಿ ಅವಘಡ ಸಂಭವಿಸಿತ್ತು. ಈ ವೇಳೆ ಅವರ ಮನೆಯಲ್ಲಿ ಅಪಾರ ಪ್ರಮಾಣದ ನೋಟಿನ ಕಂತೆಗಳು ಪತ್ತೆಯಾಗಿವೆ ಎಂದು ಅಗ್ನಿಶಾಮಕ ಇಲಾಖೆ ಅಧಿಕಾರಿಗಳು ಸಕ್ಷಮ ಪ್ರಾಧಿಕಾರಕ್ಕೆ ಮಾಹಿತಿ ನೀಡಿದ್ದರು. ಈ ಪ್ರಕರಣ ಇದೀಗ ರಾಷ್ಟ್ರಮಟ್ಟದ ಗಮನ ಸೆಳೆದಿದೆ. ಪ್ರಕರಣಕ್ಕೆ ಸಂಬಂಧಿಸಿದಂತೆ ದೆಹಲಿ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ದೇವೇಂದ್ರ ಕುಮಾರ್ ಉಪಾಧ್ಯಾಯ ಅವರಿಂದ ಸುಪ್ರೀಂಕೋರ್ಟ್ ಸತ್ಯಶೋಧನಾ ವರದಿ ಕೋರಿದೆ.

## ಪಾಕ್‌ನಲ್ಲಿ ರಕ್ತಪಾತ: ಸೇನಾ ಕ್ಯಾಪ್ಟನ್ ಹತ್ಯೆ

**ಪೇಶಾವರ್:** ಪಾಕಿಸ್ತಾನದ ಪ್ರಕ್ಷುಬ್ಧ ಖೈಬರ್ ಪಖ್ತುಂಖ್ವಾದಲ್ಲಿ 10 ಹೋರಾಟಗಾರರನ್ನು ಹತ್ಯೆ ಮಾಡಿರುವುದಾಗಿ ಪಾಕಿಸ್ತಾನ ಸೇನೆ ಹೇಳಿದೆ. ಈ ಕಾರ್ಯಾಚರಣೆಯಲ್ಲಿ ಪಾಕಿಸ್ತಾನಿ ಸೇನಾ ಕ್ಯಾಪ್ಟನ್ ಹಸ್ನೈನ್ ಅಖ್ತರ್ ಕೂಡ ಮೃತಪಟ್ಟಿದ್ದು, ಮೂವರು ಸೈನಿಕರು ಗಾಯಗೊಂಡಿದ್ದಾರೆ. ಸ್ಥಳದಲ್ಲಿದ್ದ ಶಸ್ತ್ರಾಸ್ತ್ರಗಳು ಮತ್ತು ಮದ್ದುಗುಂಡುಗಳನ್ನು ವಶಪಡಿಸಿಕೊಳ್ಳಲಾಗಿದೆ. ಗುಪ್ತಚರ ಮಾಹಿತಿಯ ಆಧಾರದ ಮೇಲೆ ದಕ್ಷಿಣ ವಜೀರಿಸ್ತಾನದ ಗಡಿಯಲ್ಲಿರುವ ಡೇರಾ ಇಸ್ಮಾಯಿಲ್ ಖಾನ್ ಜಿಲ್ಲೆಯ ಕರ್ಗಿ ಮಲಾಂಗ್ ಪ್ರದೇಶದಲ್ಲಿ ಈ ಕಾರ್ಯಾಚರಣೆ ನಡೆದಿದೆ ಎನ್ನಲಾಗಿದೆ.

## ಕಾವೇರಿ ನದಿ ಮಾಲಿನ್ಯ ತಡೆಗೆ ತಂಡ ರಚನೆ



**ಮಡಿಕೇರಿ:** ಕಾವೇರಿ ನದಿ ಮಲೀನತೆ ಹಾಗೂ ನದಿ ಪಾತ್ರಗಳ ಒತ್ತುವರಿ ತಡೆಯಲು ತಂಡ ರಚಿಸಲಾಗುವುದು ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಹೇಳಿದರು. ತಾಲೂಕಿನ ಭಾಗಮಂಡಲದ ಭಗಂಡೇಶ್ವರ ದೇಗುಲದಲ್ಲಿ ಶುಕ್ರವಾರ ಪೂಜೆ ಸಲ್ಲಿಸಿ, ತೀರ್ಥ ಸಂಗ್ರಹಿಸಿದ ಬಳಿಕ ಮಾತನಾಡಿ, ವಿಶ್ವ ಜಲದಿನದ ಅಂಗವಾಗಿ ಒಂದು ವಾರಗಳ ಕಾಲ ಜಲ ಸಂರಕ್ಷಣೆ ಅಭಿಯಾನ ನಡೆಯಲಿದೆ. ನೀರಿನ ದುರ್ಬಳಕೆ ತಡೆಗಟ್ಟಿ, ಸದ್ಬಳಕೆ ಮಾಡುವಂತೆ ಜಾಗೃತಿ ಮೂಡಿಸುವುದೇ ಕಾವೇರಿ ಆರತಿ ಉದ್ದೇಶ. ಕಾವೇರಿ ಆರತಿ ಆಯೋಜಿಸಲು ಈಗಾಗಲೇ ಹಣ ಮೀಸಲಿಡಲಾಗಿದೆ ಎಂದು ಹೇಳಿದರು.

**ಹನಿಟ್ರ್ಯಾಪ್ ಕದನದ ನಡುವೆ ಸಂಬಳ ಹೆಚ್ಚಳದಲ್ಲಿ ಒಂದಾದ ಜನನಾಯಕರು**

# ಸಿಎಂ, ಸಚಿವರು, ಶಾಸಕರ ವೇತನ, ಭತ್ಯೆ ಡಬಲ್

**ವಿಧಾನಸಭೆ:** ಹನಿಟ್ರ್ಯಾಪ್ ತನಿಖೆಗೆ ಸಂಬಂಧಿಸಿದಂತೆ ಇಡೀ ದಿನ ನಡೆದ ಗದ್ದಲ-ಗಲಾಟೆ, ವಾಕ್ಸಮರದ ನಡುವೆಯೂ ಶಾಸಕರ ವೇತನ ಹೆಚ್ಚಳಕ್ಕೆ ಸಂಬಂಧಿಸಿದ ವಿಷಯದಲ್ಲಿ ಮಾತ್ರ ಎಲ್ಲ ಶಾಸಕರು ಸರ್ವಾನುಮತದಿಂದ ಒಪ್ಪಿಗೆ ನೀಡುವ ಮೂಲಕ ತಮ್ಮ ವೇತನವನ್ನು ದುಪ್ಪಟ್ಟು ಮಾಡಿಕೊಂಡಿದ್ದಾರೆ.

ಶುಕ್ರವಾರ ವಿಧಾನಸಭೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ವೇತನ ಮತ್ತು ವಿವಿಧ ಭತ್ಯೆಗಳನ್ನು ಹೆಚ್ಚಿಸಲು ಅವಕಾಶ ಕಲ್ಪಿಸುವ 'ಕರ್ನಾಟಕ ಮಂತ್ರಿಗಳ ಸಂಬಳಗಳು ಮತ್ತು ಭತ್ಯೆಗಳ (ತಿದ್ದುಪಡಿ) ಮಸೂದೆ-2025' ಮತ್ತು 'ಕರ್ನಾಟಕ ವಿಧಾನ ಮಂಡಲದವರ ಸಂಬಳಗಳು, ಪಿಂಚಣಿಗಳು ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕ'ವನ್ನು ಮಂಡಿಸಿದರು.

ಬೇರೆಲ್ಲ ವಿಧೇಯಕಗಳನ್ನು ವಿರೋಧಿಸಿದ್ದ ಬಿಜೆಪಿ ಶಾಸಕರು, ಈ ವಿಧೇಯಕ ಮಂಡನೆಯಾಗುತ್ತಿದ್ದಂತೆ ಯಾವುದೇ ರೀತಿಯ ವಿರೋಧ ತೋರಲಿಲ್ಲ. ಇದರಿಂದ ಉಭಯ ಸದನದಲ್ಲಿ ವಿಧೇಯಕ ಸರ್ವಾನುಮತದಿಂದ ಅನುಮೋದನೆಯಾಯಿತು. ಇನ್ನು ಮುಖ್ಯಮಂತ್ರಿ, ಸಚಿವರು, ಶಾಸಕರು, ಸ್ಪೀಕರ್, ಮುಖ್ಯಸಚೇತಕರು, ಪ್ರತಿಪಕ್ಷ ನಾಯಕರು ಸೇರಿದಂತೆ ಎಲ್ಲರ ವೇತನ ದುಪ್ಪಟ್ಟಾಗಲಿದೆ. ಇದರೊಂದಿಗೆ ವಿಶೇಷ ಭತ್ಯೆಯನ್ನು ಹೆಚ್ಚಿಸಿಕೊಳ್ಳಲು ಒಪ್ಪಿಗೆ ನೀಡಲಾಗಿದೆ. ಶಾಸಕರ, ಸಚಿವರ, ಸಭಾಧ್ಯಕ್ಷರ ವೇತನ ಹೆಚ್ಚಳದಿಂದ ವಾರ್ಷಿಕವಾಗಿ ರಾಜ್ಯ ಸರಕಾರಕ್ಕೆ ಸುಮಾರು 59ರಿಂದ 60 ಕೋಟಿ ರು. ಹೆಚ್ಚುವರಿ ಹೊರೆಯಾಗಲಿದೆ ಎಂದು ಅಂದಾಜಿಸಲಾಗಿದೆ.

**ಹೆಚ್ಚಳವಾಗದ ರಾಜ್ಯಪಾಲರ ವೇತನ:** ಈ ವೇತನ ಪರಿಷ್ಕರಣೆ ಸಮಯದಲ್ಲಿಯೇ ರಾಜ್ಯಪಾಲರ ವೇತನವೂ ಪರಿಷ್ಕರಣೆಯಾಗಲಿದೆ ಎನ್ನಲಾಗಿತ್ತು. ಆದರೆ ವಿಧೇಯಕದಲ್ಲಿ ರಾಜ್ಯಪಾಲರ ವೇತನದ ಬಗ್ಗೆ ಪ್ರಸ್ತಾಪಿಸಿಲ್ಲ. ಆದ್ದರಿಂದ ಮುಂದಿನ ದಿನಗಳಲ್ಲಿ ರಾಜ್ಯಪಾಲರ ವೇತನ ಹೆಚ್ಚಳವಾಗಬಹುದು ಎನ್ನಲಾಗಿದೆ.

### ಏರಿಕೆಯಾದ ವೇತನ ಎಷ್ಟು?

| ಯಾರಿಗೆ | ಹಿಂದಿನ ವೇತನ | ಪರಿಷ್ಕೃತ |
|---|---|---|
| ಮುಖ್ಯಮಂತ್ರಿ | 75,000 | 1,50,000 |
| ಸಚಿವರು | 60,000 | 1.25 ಲಕ್ಷ |
| ಪ್ರತಿಪಕ್ಷ ನಾಯಕರು | 60,000 | 80,000 |
| ಶಾಸಕರು | 40,000 | 80,000 |
| ವಿಧಾನಸಭಾಧ್ಯಕ್ಷ | 75,000 | 1.25 ಲಕ್ಷ |
| ವಿಧಾನ ಪರಿಷತ್ ಸಭಾಪತಿ | 75,000 | 1.25 ಲಕ್ಷ |

**ಇತರ ಭತ್ಯೆ**

| | |
|---|---|
| ಮುಖ್ಯಮಂತ್ರಿ, ಸಚಿವರ ಆತಿಥ್ಯ ಭತ್ಯೆ | 4.50-5 ಲಕ್ಷ |
| ಸಚಿವರ ಮನೆ ಬಾಡಿಗೆ ಭತ್ಯೆ | 1.20-2.50 ಲಕ್ಷ |
| ಪಿಂಚಣಿ | 50,000-75,000 |
| ಹೆಚ್ಚುವರಿ ಪಿಂಚಣಿ | 5,000-20,000 |

**ಸಭಾಧ್ಯಕ್ಷರು, ಸಭಾಪತಿ**

| | |
|---|---|
| ವೇತನ ಭತ್ಯೆ | 4-5 ಲಕ್ಷ |
| ಮನೆ ಬಾಡಿಗೆ ಭತ್ಯೆ | 1.6-2 ಲಕ್ಷ |
| ವಿವಿಧ ಮರುಪಾವತಿ ಭತ್ಯೆ | 20,000-25,000 |
| ದಿನನಿತ್ಯ ಭತ್ಯೆ (ಹೊರ ರಾಜ್ಯ) | 3,500-5,000 |
| ವಸತಿ ಭತ್ಯೆ | 7,000-10,000 |

**ಉಪಾಧ್ಯಕ್ಷರು ಮತ್ತು ಉಪಸಭಾಪತಿ**

| | | |
|---|---|---|
| ಸಂಬಳ: | 60 ಸಾವಿರ | 80 ಸಾವಿರ |
| ಸಂಬಳ ಭತ್ಯೆ: | 2.5-3 ಲಕ್ಷ | |

**ಶಾಸಕರಿಗೆ ಇರುವ ಸೌಲಭ್ಯ**

| | |
|---|---|
| ವೇತನ ಭತ್ಯೆ | 4-5 ಲಕ್ಷ |
| ಮನೆ ಬಾಡಿಗೆ ಭತ್ಯೆ | 1.6-2 ಲಕ್ಷ |
| ವಿವಿಧ ಮರುಪಾವತಿ ಭತ್ಯೆ | 20,000-25,000 |
| ದಿನನಿತ್ಯ ಭತ್ಯೆ (ಹೊರ ರಾಜ್ಯ) | 3,500-5,000 |
| ವಸತಿ ಭತ್ಯೆ | 7,000-10,000 |

**ಉಪಾಧ್ಯಕ್ಷರು ಮತ್ತು ಉಪಸಭಾಪತಿ**

| | | |
|---|---|---|
| ಸಂಬಳ: | 60 ಸಾವಿರ | 80 ಸಾವಿರ |
| ಸಂಬಳ ಭತ್ಯೆ: | | 2.5-3 ಲಕ್ಷ |

- ಪಿಂಚಣಿ : 50,000ರಿಂದ 75,000 ರು.ಗೆ ಹೆಚ್ಚಳ
- ಹೆಚ್ಚುವರಿ ಪಿಂಚಣಿ: 5,000ದಿಂದ 20ಸಾವಿರ ರು.
- ಹೆಚ್ಚುವರಿ ಪ್ರಯಾಣ ಭತ್ಯೆ (ಸಹಚರರೊಂದಿಗೆ): ಒಂದು ಲಕ್ಷದಿಂದ ಎರಡು ಲಕ್ಷ ರು.
- ಮಾಜಿ ಸದಸ್ಯರ ವೈದ್ಯಕೀಯ ಭತ್ಯೆ: 5,000 ರು.ಗಳಿಂದ 20,000 ರು.
- ಸ್ಥಿರ ವೈದ್ಯಕೀಯ ಭತ್ಯೆ: 2,500 ರು.ಗಳಿಂದ 10,000 ರು.
- ಕ್ಷೇತ್ರ ಪ್ರಯಾಣ ಭತ್ಯೆ: 60,000 ದಿಂದ 80,000 ರು.
- ರೈಲ್ವೆ / ವಿಮಾನ ದರ (ವಾರ್ಷಿಕ): 2.5 ಲಕ್ಷದಿಂದ 3.5 ಲಕ್ಷ
- ದೂರವಾಣಿ ಶುಲ್ಕ: 20,000ದಿಂದ 35 ಸಾವಿರ ರು.ಗೆ
- ಕ್ಷೇತ್ರ ಭತ್ಯೆ: 60,000 ರಿಂದ 1.1 ಲಕ್ಷ
- ಅಂಚೆ ಶುಲ್ಕ: 5,000 ದಿಂದ 10,000 ರು.

# ಇಂದಿನಿಂದ ಐಪಿಎಲ್ ರಂಗು

**ಆರ್‌ಸಿಬಿ, ಕೆಕೆಆರ್ ನಡುವಿನ ಮೊದಲ ಪಂದ್ಯಕ್ಕೆ ಮಳೆ ಭೀತಿ**



**ಕೋಲ್ಕತ್ತಾ:** ಇಂದಿನಿಂದ ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯ 18ನೇ ಆವೃತ್ತಿ ಆರಂಭವಾಗಲಿದ್ದು, ಎರಡು ತಿಂಗಳ ಕಾಲ ಕ್ರಿಕೆಟ್‌ಪ್ರೇಮಿಗಳಿಗೆ ರಸದೌತಣ ಬಡಿಸಲು ಆಟಗಾರರು ಸಜ್ಜಾಗಿದ್ದಾರೆ.

ಶನಿವಾರ ಕೋಲ್ಕತಾದ ಈಡನ್ ಗಾರ್ಡನ್ಸ್‌ನಲ್ಲಿ ಹಾಲಿ ಚಾಂಪಿಯನ್ ಕೆಕೆಆರ್ ತಂಡಕ್ಕೆ ಆರ್‌ಸಿಬಿ ಸವಾಲಾಕಲು ಸಜ್ಜಾಗಿದೆ. ಎರಡೂ ತಂಡಗಳು ಈಗಾಗಲೇ ಕಠಿಣ ಅಭ್ಯಾಸ ನಡೆಸಿವೆ. ಆದರೆ ಮೊದಲ ಪಂದ್ಯಕ್ಕೂ ಮುನ್ನ ಮಳೆ ಆತಂಕ ಎದುರಾಗಿದೆ. ಶುಕ್ರವಾರ ಕೂಡ ಅಭ್ಯಾಸ ಮಾಡಲು ಮಳೆ ಅಡ್ಡಿಯಾಗಿದ್ದರಿಂದ ಇಡೀ ಮೈದಾನವನ್ನು ಕವರ್ ಮಾಡಲಾಗಿತ್ತು. ಶುಕ್ರವಾರ ಮಳೆ ಬಂದಿರುವುದು ಶನಿವಾರದ ಮಳೆ ಆತಂಕವನ್ನು ಮತ್ತಷ್ಟು ಹೆಚ್ಚಿಸಿದೆ. ಶನಿವಾರ ಕೋಲ್ಕತಾದಲ್ಲಿ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ಕೊಟ್ಟಿದೆ. ಅಲ್ಲದೆ ಆರೆಂಜ್ ಅಲರ್ಟ್ ಕೂಡ ಘೋಷಣೆ ಮಾಡಿದೆ.

### ಶ್ರೇಯಾ ಹಾಡು, ದಿಶಾ ನೃತ್ಯ





ಕೋಲ್ಕತ್ತದ ಈಡನ್ ಗಾರ್ಡನ್ಸ್‌ನಲ್ಲಿ ಇಂದು ಸಂಜೆ 6 ಗಂಟೆಗೆ ಐಪಿಎಲ್ ಕ್ರಿಕೆಟ್ ಟೂರ್ನಿಯ 18ನೇ ಆವೃತ್ತಿಯ ಉದ್ಘಾಟನೆ ಸಮಾರಂಭ ನಡೆಯಲಿದ್ದು, ಬಾಲಿವುಡ್ ತಾರೆಯರ ದಂಡು ಸೇರುವ ನಿರೀಕ್ಷೆ ಇದೆ. ಉದ್ಘಾಟನಾ ಸಮಾರಂಭದಲ್ಲಿ ಹಿನ್ನೆಲೆ ಗಾಯಕಿ ಶ್ರೇಯಾ ಘೋಷಾಲ್, ಗಾಯಕರಾದ ಅರಿಜಿತ್ ಸಿಂಗ್ ಮತ್ತು ಕರಣ್ ಔಜ್ಲಾ ಅವರು ಹಾಡಲಿದ್ದಾರೆ. ನಟಿ ದಿಶಾ ಪಟಾಣಿ, ಶ್ರದ್ಧಾ ಕಪೂರ್ ಮತ್ತು ನಟ ವರುಣ್ ಧವನ್ ಅವರ ನೃತ್ಯ ಕಾರ್ಯಕ್ರಮ ನಡೆಯಲಿದೆ.

## ಸಮಾಚಾರ ಸಣ್ಣದಲ್ಲ

### ನಕಲಿ ಪೊಲೀಸ್ ಸೆರೆ

ಬೆಂಗಳೂರು: ಪೊಲೀಸ್ ಎಂದು ಹೇಳಿಕೊಂಡು ರಾಜಧಾನಿಯ ಯುವಕ ಯುವತಿಯರಿಗೆ ಕಿರುಕುಳ ನೀಡುತ್ತಿದ್ದ ನಕಲಿ ಪೊಲೀಸ್‌ನನ್ನ ಜಯನಗರ ಪೊಲೀಸರು ಬಂಧಿಸಿದ್ದಾರೆ. ಆಸೀಫ್ ಬಂಧಿತ ಆರೋಪಿ. ವೃತ್ತಿಯಲ್ಲಿ ಆಟೋ ಚಾಲಕನಾಗಿದ್ದ ಆಸೀಫ್ ಪೊಲೀಸ್ ಎಂದು ಹೇಳಿಕೊಂಡು ಬಂದು ಹಣ ವಸೂಲಿ ಮಾಡುತ್ತಿದ್ದ. ಪಾರ್ಕ್‌ನಲ್ಲಿರುವವರನ್ನು ಟಾರ್ಗೆಟ್ ಮಾಡಿಕೊಂಡು ಹಣ ನೀಡುವಂತೆ ಕಿರುಕುಳ ನೀಡುತ್ತಿದ್ದ. ಆಸಿಫ್ ಇಬ್ಬರಿಂದ 12 ಗ್ರಾಂನ ಚಿನ್ನದ ಸರ ಹಾಗೂ 5 ಗ್ರಾಂನ ರಿಂಗ್ ಹಾಗೂ 10,000 ರು. ಹಣ ಡ್ರಾ ಮಾಡಿಸಿಕೊಂಡು ಪರಾರಿಯಾಗಿದ್ದ. ಪೊಲೀಸ್ ಎಂದು ಹೇಳಿ ಪಾರ್ಕ್‌ನಲ್ಲಿ ಕೂರುವವರಿಂದ ಸುಲಿಗೆ ಮಾಡುತ್ತಿದ್ದ ಆಸೀಫ್, ಇದೇ ರೀತಿ ಸಾಕಷ್ಟು ಪ್ರಕರಣಗಳಲ್ಲಿ ಭಾಗಿಯಾಗಿರುವ ಅನುಮಾನ ವ್ಯಕ್ತವಾಗಿದೆ. ಇದೀಗ ಆರೋಪಿಯನ್ನು ಜಯನಗರ ಪೊಲೀಸರು ಬಂಧಿಸಿದ್ದು, ಪ್ರಕರಣ ದಾಖಲಿಸಿಕೊಂಡಿದ್ದಾರೆ.

### ಕಂಪನಿಗೆ ವಂಚನೆ: ಖದೀಮ ಸೆರೆ

ಬೆಂಗಳೂರು: ಕಂಪನಿಗೆ ಸೇರಿದ 96 ಲಕ್ಷ ಮೌಲ್ಯದ ವೆಲ್ಡಿಂಗ್ ರಾಡ್‌ಗಳನ್ನು ವಿವಿಧ ಅಂಗಡಿಗಳಿಗೆ ಮಾರಾಟ ಮಾಡಿ, ಮಾರಾಟದಿಂದ ಬಂದ ಹಣವನ್ನು ತಮ್ಮ ವೈಯುಕ್ತಿಕ ಅಕೌಂಟ್‌ಗೆ ಮತ್ತು ನಗದು ರೂಪದಲ್ಲಿ ಪಡೆದು ಒಳ ಸಂಚು ರೂಪಿಸಿ ಮೋಸ ಮಾಡಿದ್ದ ಖದೀಮನೊಬ್ಬನನ್ನು ಹಲಸೂರುಗೇಟ್ ಪೊಲೀಸರು ಬಂಧಿಸಿ 11,24,334 ಲಕ್ಷ ನಗದನ್ನು ಜಪ್ತಿ ಮಾಡುವಲ್ಲಿ ಯಶಸ್ವಿಯಾಗಿದ್ದಾರೆ. ದಯಾನಂದ ಅಗರ್‌ವಾಲ್ ಬಂಧಿತ ಆರೋಪಿ. ಹಲಸೂರು ಗೇಟ್ ವ್ಯಾಪ್ತಿಯ ಎಸ್.ಪಿ.ರೋಡ್‌ನಲ್ಲಿರುವ ಹಾರ್ಡ್‌ವೇರ್ ಐಟಂಗಳಿಗೆ ಸಂಬಂಧಪಟ್ಟ ಪ್ರೈವೇಟ್ ಲಿಮಿಟೆಡ್ ಕಂಪನಿಯೊಂದರಲ್ಲಿ ನಾಲ್ವರು ಸೇಲ್ಸ್ ಮ್ಯಾನ್‌ಗಳು ಕಳೆದ ಅ.1 ಡಿ.14 ರವರೆಗೆ ಕೆಲಸ ನಿರ್ವಹಿಸುತ್ತಿದ್ದ ಅವಧಿಯಲ್ಲಿ ಬೆಂಗಳೂರು, ಮಂಡ್ಯ ಹಾಗೂ ಚನ್ನಪಟ್ಟಣದ ವಿವಿಧ ಅಂಗಡಿಗಳಿಗೆ 96 ಲಕ್ಷ ಮೌಲ್ಯದ ವೆಲ್ಡಿಂಗ್ ರಾಡ್‌ಗಳನ್ನು ಮಾರಾಟ ಮಾಡಿ, ಮಾರಾಟ ಮಾಡಿದ ಹಣವನ್ನು ತಮ್ಮ ವೈಯಕ್ತಿಕ ಅಕೌಂಟ್‌ಗೆ ಮತ್ತು ನಗದು ರೂಪದಲ್ಲಿ ಹಣವನ್ನು ಪಡೆದುಕೊಂಡು ಒಳಸಂಚು ರೂಪಿಸಿ ಕಂಪನಿಗೆ ಮೋಸ ಮಾಡಿರುವ ಕಂಪನಿಯ ಮಾಲೀಕರು ನಾಲ್ವರು ಸೇಲ್ಸ್ ಮ್ಯಾನ್‌ಗಳ ವಿರುದ್ಧ ದೂರನ್ನು ಸಲ್ಲಿಸಿದ್ದರು.

ವಿರಾಮ
ಪ್ರತಿ ಭಾನುವಾರ

# ಹನಿಗದ್ದಲಕ್ಕೆ 18 ಶಾಸಕರ ಅಮಾನತಾಗಿದ್ದು ಹೇಗೆ?

## ವಿಧಾನಸಭೆಯಲ್ಲಿ ಹನಿಟ್ರ್ಯಾಪ್ ಗದ್ದಲ | ಪೇಪರ್ ಹರಿದು ಸ್ಪೀಕರ್ ಪೀಠದತ್ತ ಎಸೆದ ಪ್ರತಿಪಕ್ಷಗಳ ಸದಸ್ಯರು

**ವಿಧಾನಸಭೆ:** ಹನಿಟ್ರ್ಯಾಪ್ ಪ್ರಕರಣವನ್ನು ಸಿಬಿಐ ಅಥವಾ ಹಾಲಿ ಹೈಕೋರ್ಟ್ ನ್ಯಾಯಾಧೀಶರಿಂದ ತನಿಖೆ ನಡೆಸಬೇಕೆಂದು ಆಗ್ರಹಿಸಿದ ಬಿಜೆಪಿ ಸದಸ್ಯರು ವಿಧಾನಸಭೆಯ ಬಾವಿಗಿಳಿದು, ಬಜೆಟ್ ಹಾಗೂ ಮಸೂದೆಗಳ ಪ್ರತಿಗಳನ್ನು ಹರಿದು ಪ್ರತಿಭಟನೆ ನಡೆಸಿದರು.

ಬಜೆಟ್ ಮೇಲೆ ನಡೆದ ಚರ್ಚೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬೆಳಗ್ಗೆ ಉತ್ತರ ನೀಡಲು ಮುಂದಾದರು. ಈ ವೇಳೆ ಬಿಜೆಪಿ-ಜೆಡಿಎಸ್ ಶಾಸಕರು, ಗುರುವಾರ ವಿಧಾನಸಭೆಯಲ್ಲಿ ಸಚಿವ ಕೆ.ಎನ್.ರಾಜಣ್ಣ ಬಹಿರಂಗಪಡಿಸಿದ ಹನಿಟ್ರ್ಯಾಪ್ ಪ್ರಕರಣ ಮುಂದಿಟ್ಟುಕೊಂಡು ಮುಖ್ಯಮಂತ್ರಿಗಳಿಂದ ಸ್ಪಷ್ಟನೆ ಬಯಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಕರಣದ ತನಿಖೆ ನಡೆಸುವುದಾಗಿ ಹೇಳಿದರು. ಅದರ ಹೊರತಾಗಿಯೂ ಪ್ರತಿಪಕ್ಷಗಳ ಶಾಸಕರು ಸಭಾಧ್ಯಕ್ಷರ ಮುಂದಿನ ಬಾವಿಗಿಳಿದು ಧರಣಿ ಆರಂಭಿಸಿದರು. ಮುಖ್ಯಮಂತ್ರಿಯವರು ಬಜೆಟ್ ಮೇಲಿನ ಚರ್ಚೆಗೆ ಉತ್ತರ ಓದಲು ಆರಂಭಿಸಿದಾಗ, ಪ್ರತಿಪಕ್ಷಗಳ ಶಾಸಕರು ಘೋಷಣೆಗಳನ್ನು ಕೂಗಿ ಉತ್ತರಕ್ಕೆ ಅಡ್ಡಿಪಡಿಸಲು ಮುಂದಾದರು. ಅದಕ್ಕೆ ಕ್ಯಾರೇ ಎನ್ನದ ಸಿದ್ದರಾಮಯ್ಯ ಅವರು ಉತ್ತರ ನೀಡುವುದನ್ನು ಮುಂದುವರಿಸಿದರು.

ಲಿಖಿತ ಉತ್ತರ ಓದಿದ ಬಳಿಕ ಬಜೆಟ್ ಅಂಗೀಕಾರ ನೀಡುವಂತೆ ಸದನಕ್ಕೆ ಮನವಿ ಸಲ್ಲಿಸಿದರು. ಸಭಾಧ್ಯಕ್ಷ ಯು.ಟಿ.ಖಾದರ್ 2025-26ನೇ ಸಾಲಿನ ಬಜೆಟ್‌ನ ಹಣಕಾಸು ಮಸೂದೆ ಅಂಗೀಕರಿಸಲು ಮುಂದಾದಾಗ, ಪ್ರತಿಪಕ್ಷದ ನಾಯಕ ಆರ್.ಅಶೋಕ, ರಾಜ್ಯದ ತೆರಿಗೆದಾರರ ಹಣವನ್ನು ಕಾಂಗ್ರೆಸ್ ಸರಕಾರ ದುರುಪಯೋಗ ಪಡಿಸಿಕೊಳ್ಳುತ್ತಿದೆ. ಮುಸ್ಲಿಮರಿಗೆ ಗುತ್ತಿಗೆ ಕಾಮಗಾರಿಯಲ್ಲಿ ಶೇ.4ರಷ್ಟು ಮೀಸಲಾತಿ ನೀಡುತ್ತಿರುವುದು ಸರಿಯಲ್ಲ, ಇದು ರಾಜ್ಯಕ್ಕೆ ಮಾಡಿರುವ ದ್ರೋಹ. ಈ ಅಪರಾಧ ಜನ ಕ್ಷಮಿಸುವುದಿಲ್ಲ. ಸಚಿವರು ಹನಿಟ್ರ್ಯಾಪ್ ಬಗ್ಗೆ ಆರೋಪ ಮಾಡಿದ್ದರೂ ಸರಕಾರ ಅದನ್ನು ಕಡೆಗಣಿಸುತ್ತಿದೆ ಎಂದು ವಾಗ್ದಾಳಿ ನಡೆಸಿದರು.

ಸಚಿವ ರಾಜಣ್ಣ ವಿಷಯ ಪ್ರಸ್ತಾಪಿಸಿದ್ದಾರೆ. ಅವರು ಇದುವರೆಗೂ ದೂರು ಕೊಟ್ಟಿಲ್ಲ. ದೂರು ಕೊಟ್ಟ ನಂತರ ತನಿಖೆ ಮಾಡುತ್ತೇವೆ. ದೂರಿನಲ್ಲಿ ಏನಿದೆ ಎಂದು ಊಹೆ ಮಾಡಿ ತನಿಖೆ ಮಾಡಲು ಆಗಲ್ಲ. ಗುರುವಾರವೇ ಉನ್ನತ ಮಟ್ಟದ ತನಿಖೆ ನಡೆಸುತ್ತೇವೆ. ಮುಖ್ಯಮಂತ್ರಿಗಳ ಜತೆ ಚರ್ಚೆ ಮಾಡಿ ಯಾವ ಮಟ್ಟದ ತನಿಖೆ ಎಂಬ ಬಗ್ಗೆ ನಿರ್ಧಾರ ಮಾಡುತ್ತೇವೆ. ನಿಮ್ಮ ಮುಂದೆ ಮುಚ್ಚಿಡುವ ಪ್ರಯತ್ನ ಏನಿಲ್ಲ, ನ್ಯಾಯಾಂಗ ತನಿಖೆ ನಡೆಸಬೇಕು ಎಂಬ ನಿಮ್ಮ ಸಲಹೆಯನ್ನು ಪರಿಗಣಿಸುತ್ತೇವೆ.

– ಡಾ.ಜಿ. ಪರಮೇಶ್ವರ ಗೃಹ ಸಚಿವ

### ಪೇಪರ್ ತೂರಿದ ಸದಸ್ಯರು

ಇತರೆ ಹಣಕಾಸು ವಿಧೇಯಕಗಳನ್ನು ಮುಖ್ಯಮಂತ್ರಿ ಮಂಡಿಸಿ, ಅಂಗೀಕಾರಕ್ಕೆ ಮನವಿ ಮಾಡಿದಾಗ ವಿರೋಧ ಪಕ್ಷಗಳಿಂದ ವ್ಯಾಪಕ ಆಕ್ರೋಶ ಕೇಳಿ ಬಂತು. ಕಾಗದಪತ್ರಗಳನ್ನು ತೂರಲಾರಂಭಿಸಿದರು. ಕೆಲವು ಶಾಸಕರು ಸಭಾಧ್ಯಕ್ಷರ ಪೀಠದ ಕಡೆಗೆ ಹಾಗೂ ಆಡಳಿತ ಪಕ್ಷದವರ ಕಡೆಗೆ ಕಾಗದ ಪತ್ರಗಳನ್ನು ಎಸೆಯುತ್ತಿದ್ದರು. ಮುಖ್ಯಮಂತ್ರಿ ಅವರಿಗೂ ಕೆಲವು ಕಾಗದ ಪತ್ರಗಳು ತಗುಲಿದವು. ಆಗ ಸಚಿವ ಭೈರತಿ ಸುರೇಶ್, ಶಾಸಕ ರಂಗನಾಥ್, ಕೆ.ಎಂ.ಶಿವಲಿಂಗೇಗೌಡ ಸೇರಿದಂತೆ ಹಲವರು ಮುಖ್ಯಮಂತ್ರಿಯವರ ಸುತ್ತಲೂ ಕಾವಲಿಗೆ ನಿಂತರು. ಕಾಂಗ್ರೆಸ್‌ನ ಇತರ ಶಾಸಕರು ಮುಖ್ಯಮಂತ್ರಿಯವರ ಹಿಂಭಾಗದ ಸಾಲುಗಳಲ್ಲಿ ಬಂದು ಜಮಾಯಿಸಿದರು. ಇನ್ನು ಕೆಲವು ಶಾಸಕರು ತಮ್ಮ ಸ್ಥಾನದಲ್ಲೇ ಕುಳಿತು ಮೂಕ ಪ್ರೇಕ್ಷಕರಂತೆ ಎಲ್ಲವೂ ನೋಡುತ್ತಿದ್ದರು. ಮುಖ್ಯಮಂತ್ರಿಯವರ ಬಳಿ ನಿಂತಿದ್ದ ಕಾಂಗ್ರೆಸ್ ಸಚಿವರು, ಶಾಸಕರು ಹಾಗೂ ಪ್ರತಿಪಕ್ಷಗಳ ಸದಸ್ಯರ ನಡುವೆ ಮಾತಿನ ಚಕಮಕಿ ನಡೆಯಿತು. ನೀವೇನೂ ರೌಡಿಗಳೇ? ಹೊಡೆಯುತ್ತೀರಾ ಬನ್ನಿ, ಕೈ ನೋಡೇಬಿಡೋಣ ಎಂದೆಲ್ಲಾ ವಾಗ್ವಾದಗಳು ವಿನಿಮಯವಾದವು. ಅತ್ತ ಸ್ಪೀಕರ್ ಅವರ ಮುಖಕ್ಕೆ ಕಾಗದಪತ್ರಗಳು ತಾಗದಂತೆ ಮಾರ್ಷಲ್‌ಗಳು ಕೈ ಅಡ್ಡ ಇಟ್ಟು ತಡೆಯುತ್ತಿದ್ದರು.

ಗದ್ದಲ ಜೋರಾದಾಗ ಪ್ರತಿಪಕ್ಷಗಳ ಎಲ್ಲಾ ಶಾಸಕರು ಸದನದ ಬಾವಿಯಲ್ಲಿ ಜಮಾಯಿಸಿ ಜೋರು ಗಲಾಟೆ ಮಾಡಿದರು. ಸದನದ ಹೊರಗಿದ್ದ ಎಲ್ಲಾ ಮಾರ್ಷಲ್‌ಗಳು ಒಳಗೆ ಧಾವಿಸಿ ರಕ್ಷಣೆಗೆ ನಿಂತರು. ಇತ್ತ ಮುಖ್ಯಮಂತ್ರಿಗಳ ಬಳಿಯೂ ಗದ್ದಲ ಹೆಚ್ಚಾದಾಗ ಒಂದು ಹಂತದಲ್ಲಿ ಮುಖ್ಯಮಂತ್ರಿ ಬಳಿ ನಿಂತಿದ್ದ ಸಚಿವ ಭೈರತಿ ಸುರೇಶ್ ಸಿಟ್ಟಿನಿಂದ ಕಿರುಪುಸ್ತಕವನ್ನು ವಿರೋಧ ಪಕ್ಷಗಳತ್ತ ಎಸೆದು ಆಕ್ರೋಶ ಹೊರಹಾಕಿದರು. ಕಾಲುನೋವಿನಿಂದ ಕುಳಿತುಕೊಂಡೇ ವಿಧೇಯಕಗಳ ಅಂಗೀಕಾರಕ್ಕೆ ಮನವಿ ಮಾಡುತ್ತಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಪ್ರತಿಪಕ್ಷಗಳ ನಡವಳಿಕೆಗೆ ತೀವ್ರ ಆಕ್ರೋಶ ವ್ಯಕ್ತಪಡಿಸಿದರು. ಇದಾದ ನಂತರ ಸಿಎಂ, ಸಂಸದೀಯ ಸಚಿವರು ಹಾಗೂ ಸ್ಪೀಕರ್ ಸಭೆ ನಡೆಸಿ ಅಂತಿಮವಾಗಿ 18 ಶಾಸಕರ ಅಮಾನತು ಮಾಡಲಾಯಿತು.

### ಬಿಜೆಪಿಗರ ವಿರುದ್ಧ ಭೈರತಿ ಕೆಂಡ

ಬಿಜೆಪಿಗರು ಬಾವಿಗಿಳಿದು ಪ್ರತಿಭಟನೆ ನಡೆಸುವಾಗ ಆರಂಭದಲ್ಲಿ ಸ್ಪೀಕರ್ ಪೀಠದತ್ತ ಪೇಪರ್‌ಗಳನ್ನು ತೂರುತ್ತಿದ್ದರು. ಬಳಿಕ ಸಿದ್ದರಾಮಯ್ಯ ಅವರತ್ತಲೂ ಪೇಪರ್ ಬಿಸಾಡಿದರು. ಇದಕ್ಕೆ ತೀವ್ರ ಅಕ್ಷೇಪವ್ಯಕ್ತಪಡಿಸಿದ ಸಚಿವ ಭೈರತಿ ಸುರೇಶ್, ಸಿದ್ದರಾಮಯ್ಯ ಅವರ ರಕ್ಷಣೆಗೆ ಮುಂದಾದರು. ಈ ಸಮಯದಲ್ಲಿ ಕಾಂಗ್ರೆಸ್ ಎಲ್ಲ ಶಾಸಕರು ಸಿದ್ದರಾಮಯ್ಯ ಅವರ ಹಿಂದೆ, ಅಕ್ಕ-ಪಕ್ಕ ನಿಂತು ಬೆಂಬಲ ಸೂಚಿಸಿದರು. ಈ ವೇಳೆ ಸುರೇಶ್, ಬಿಜೆಪಿಗರ ವಿರುದ್ಧ ವಾಗ್ದಾಳಿ ನಡೆಸಿ, ಕುಸ್ತಿ ಬನ್ನಿ ಎಂದು ಸವಾಲು ಹಾಕಿದ ಘಟನೆಯೂ ನಡೆಯಿತು.

### ಸಿ.ಡಿ. ಮಾಲೀಕ ಯಾರಯ್ಯ?

ಬಿಜೆಪಿ-ಜೆಡಿಎಸ್ ಶಾಸಕರು ಬಾವಿಗಿಳಿದು ಪ್ರತಿಭಟನೆ ನಡೆಸುವಾಗ ಸರಕಾರದ ವಿರುದ್ಧ ವಾಗ್ದಾಳಿ ನಡೆಸಿದರು. ಯಾರಯ್ಯ.. ಯಾರಯ್ಯ.. ಸಿ.ಡಿ. ಮಾಲೀಕ ಯಾರಯ್ಯ.., ಯಾರಯ್ಯ.. ಯಾರಯ್ಯ.. ಸಿ.ಡಿ. ಫ್ಯಾಕ್ಟರಿ ಓನರ್ ಯಾರಯ್ಯ,. ಕಾಂಗ್ರೆಸ್ ಪಕ್ಷ ಹನಿಟ್ರ್ಯಾಪ್ ಪಕ್ಷ, ಮುಖ್ಯಮಂತ್ರಿ ಕುರ್ಚಿಗಾಗಿ ಹನಿಟ್ರ್ಯಾಪ್.. ಹನಿಟ್ರ್ಯಾಪ್.., ಸ್ಯಾಂಕಿಯಲ್ಲಿ ಕಾವೇರಿ ಆರತಿ, ಸದನದಲ್ಲಿ ಮಂಗಳಾರತಿ.. ಬ್ಲ್ಯಾಕ್ ಮೇಲ್ ಬ್ಲ್ಯಾಕ್ ಮೇಲ್ ಕಾಂಗ್ರೆಸ್ ಬ್ಲ್ಯಾಕ್ ಮೇಲ್.. ಎಂಬ ಘೋಷಣೆಗಳನ್ನು ಧರಣಿನಿರತ ಪ್ರತಿಪಕ್ಷ ಸದಸ್ಯರು ಕೂಗಲಾರಂಭಿಸಿದರು. ಇದರಿಂದ ಸದನದಲ್ಲಿ ಗದ್ದಲ, ಕೋಲಾಹಲದ ವಾತಾವರಣ ರೂಪುಗೊಂಡಿತು.

ಬಜೆಟ್ ಒಳಗೊಂಡ ವಿತ್ತೀಯ ವಿಧೇಯಕ ಅಂಗೀಕಾರವಾಗಿದೆ ಎಂದು ಸಭಾಧ್ಯಕ್ಷರು ಪ್ರಕಟಿಸುತ್ತಿದ್ದಂತೆ ಬಿಜೆಪಿಯ ಶಾಸಕರು ಕಾಗದ ಪತ್ರಗಳನ್ನು ಹರಿದು ತೂರಲಾರಂಭಿಸಿದರು. ಸಭಾಧ್ಯಕ್ಷರ ಪೀಠದ ಬಳಿ ಧಾವಿಸಿ ಅಲ್ಲಿಯೇ ನಿಂತು ಕಾಗದ ಪತ್ರಗಳನ್ನು ಹರಿದು ತೂರಿ ಧಿಕ್ಕಾರದ ಘೋಷಣೆಗಳನ್ನು ಕೂಗಿದರು. ಮಾರ್ಷಲ್‌ಗಳು ಸ್ಪೀಕರ್ ರಕ್ಷಣೆಗೆ ಹತ್ತಿರ ಬರಲು ಪ್ರಯತ್ನಿಸಿದರು. ಆದರೆ ಸ್ಪೀಕರ್ ಅವರೇ ಮಾರ್ಷಲ್‌ಗಳನ್ನು ಮುಂದೆ ಬರದಂತೆ ಸೂಚನೆ ನೀಡಿದರು. ಬಿಜೆಪಿಯ ಸಿ.ಕೆ. ರಾಮಮೂರ್ತಿ, ಮಹೇಶ್ ಟೆಂಗಿನಕಾಯಿ ಸೇರಿದಂತೆ ಹಲವು ಶಾಸಕರು ಸಿಡಿ ಗಳನ್ನು ಹಿಡಿದು ಸಭಾಧ್ಯಕ್ಷರ ಬಳಿಯೇ ನಿಂತು ಘೋಷಣೆ ಕೂಗುತ್ತಿದ್ದರು.

ಸಭಾಧ್ಯಕ್ಷರ ಪೀಠ ಬಿಟ್ಟು ಕೆಳಗಿಳಿಯುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಹಲವು ಬಾರಿ ಬಿಜೆಪಿ ಶಾಸಕರಿಗೆ ಸೂಚನೆ ನೀಡಿದರು. ವಿಧಾನಸಭೆಯ ಜಂಟಿ ಕಾರ್ಯದರ್ಶಿಯವರು ಸಭಾಧ್ಯಕ್ಷರ ಬಳಿ ಬಂದು ಶಾಸಕರನ್ನು ಕೆಳಗಿಳಿಸುವಂತೆ ಸ್ಪೀಕರ್ ಅವರಿಗೆ ಸಲಹೆ ನೀಡಿದರು. ಸಭಾಧ್ಯಕ್ಷ ಸೂಚನೆ ಹೊರತಾಗಿಯೂ ಶಾಸಕರು ಕೆಳಗಿಳಿಯದೆ ಅಲ್ಲೇ ನಿಂತಿದ್ದರು. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಶಾಸಕರು ಕೆಳಗೆ ಬರಬೇಕು. ಇಲ್ಲವಾದರೆ ಮಾರ್ಷಲ್‌ಗಳು ತಳ್ಳುತ್ತಾರೆ. ನಿಮಗೆ ತಳ್ಳಿಸಿಕೊಳ್ಳಲು ಆಸೆಯೇ? ಎಂದು ಗದರಿದರು. ಈ ಹಂತದಲ್ಲಿ ಸಭಾಧ್ಯಕ್ಷರು ಕಲಾಪವನ್ನು 10 ನಿಮಿಷಗಳ ಕಾಲ ಮುಂದೂಡುವುದಾಗಿ ಪ್ರಕಟಿಸಿದರು. ಆದರೆ ಬಾಕಿ ಇರುವ ವಿಧೇಯಕಗಳ ಅಂಗೀಕಾರವನ್ನು ಪೂರ್ಣಗೊಳಿಸಿದ ನಂತರ ಕಲಾಪ ಮುಂದೂಡುವಂತೆ ಮುಖ್ಯಮಂತ್ರಿ ಹಾಗೂ ಸಚಿವರು ಸಲಹೆ ನೀಡಿದರು.

ಹನಿಟ್ರ್ಯಾಪ್‌ಗೆ ಜಾತಿ, ಪಕ್ಷ ಯಾವುದೂ ಇಲ್ಲ. ಅಧಿಕಾರ ದಾಹವೇ ಇದರ ಹಿಂದೆ ಇರುತ್ತದೆ. ಸಚಿವ ರಾಜಣ್ಣನವರು ಹೊರಗೂ ಮಾತನಾಡಬಹುದಿತ್ತು. ಆದರೆ ಅವರು ಸದನದಲ್ಲಿ ಬಂದು ಕಣ್ಣೀರು ಹಾಕಿ ಆತಂಕ ತೋಡಿಕೊಂಡಿದ್ದಾರೆ. ಕೇಂದ್ರದ ನಾಯಕರು ಇದ್ದಾರೆ ಎಂದೆಲ್ಲಾ ಹೇಳಿದ್ದಾರೆ. ಹಾಗಾಗಿ ಈ ಬಗ್ಗೆ ನ್ಯಾಯಾಂಗ ತನಿಖೆ ನಡೆಸಿ.

– ಸುನೀಲ್‌ಕುಮಾರ್ ಶಾಸಕ

ರಾಜಣ್ಣ ಅವರು ಮಾಡಿರುವ ಆರೋಪ ಗಂಭೀರವಾಗಿದೆ. ಈ ಸರಕಾರದಲ್ಲಿ ಸಚಿವರುಗಳಿಗೆ ಅಭದ್ರತೆ ಕಾಡುತ್ತಿದೆ. ಹನಿಟ್ರ್ಯಾಪ್ ದೊಡ್ಡ ದಂಧೆಯಾಗಿದೆ. ಮುಖ್ಯಮಂತ್ರಿ ಹುದ್ದೆಗಾಗಿ ಎಲ್ಲ ಧ್ವಂಸ ಮಾಡುತ್ತಾರೆ. ಇದು ಗಂಭೀರ ವಿಚಾರ, ಈ ಬಗ್ಗೆ ನ್ಯಾಯಾಂಗ ತನಿಖೆ ನಡೆಸಿ.

– ಆರ್. ಅಶೋಕ್ ಪ್ರತಿಪಕ್ಷ ನಾಯಕ

ಅಶೋಕ್ ಅವರು ಊಹೆ ಮಾಡಿ ಮಾತನಾಡುತ್ತಿದ್ದಾರೆ. ಸಿಎಂ ಹುದ್ದೆಗೆ ಹನಿಟ್ರ್ಯಾಪ್ ನಡೆದಿದೆ ಎಂಬುದು ಸರಿಯಲ್ಲ. ಪ್ರತಿಪಕ್ಷ ನಾಯಕನಾಗಲು ಮಾಡಿರಬಹುದಲ್ಲವೇ?

– ದಿನೇಶ್ ಗುಂಡೂರಾವ್ ಆರೋಗ್ಯ ಸಚಿವ

ಸುನೀಲ್‌ಕುಮಾರ್ ಮಾತಿಗೆ ನಮ್ಮ ಸಹಮತ ಇದೆ. ನಮಗೆ ನೈತಿಕತೆ ಇರಬೇಕು, ಸದನಕ್ಕೂ ಇರಬೇಕು. ಅಧಿಕಾರ, ದುಡ್ಡು ಏನೇ ಕಾರಣಕ್ಕೂ ಹನಿಟ್ರ್ಯಾಪ್ ಮಾಡಬಹುದು. ಹಿಂದಿನ ಸಚಿವರು ಬಾಂಬ್ ಹೋಟೆಲ್‌ನಲ್ಲಿದ್ದರು. ಆಗ ಏನಾಯಿತು. ಅವರೆಲ್ಲಾ ನ್ಯಾಯಾಲಯದ ತಡೆಯಾಜ್ಞೆ ತಂದರು. ಆಗ ಸದನದಲ್ಲಿ ಚರ್ಚೆಯಾಗಿತ್ತಾ?

– ಪ್ರಿಯಾಂಕ್ ಖರ್ಗೆ ಸಚಿವ

# ಚಿನ್ನಾಭರಣ ಕಳವು: ದಂಪತಿ ಬಂಧನ

**ಬೆಂಗಳೂರು:** ಕೆಲಸ ಮಾಡುತ್ತಿದ್ದ ಮನೆಯಲ್ಲಿ ಚಿನ್ನಾಭರಣ ಕಳವು ಮಾಡಿದ್ದ ಕೇರ್ ಟೇಕರ್ ಮಹಿಳೆ ಮತ್ತು ಆಕೆಯ ಪತಿ ಸೇರಿ ಇಬ್ಬರನ್ನು ಹೆಣ್ಣೂರು ಪೊಲೀಸರು ಬಂಧಿಸಿ 20 ಲಕ್ಷ ಮೌಲ್ಯದ 253 ಗ್ರಾಂ ಚಿನ್ನಾಭರಣಗಳನ್ನು ವಶಪಡಿಸಿಕೊಂಡಿದ್ದಾರೆ. ಹೆಣ್ಣೂರಿನ ಸೋನಿಯಾ (25), ಆಕೆಯ ಪತಿ ಪ್ರದೀಪ್ (26) ಬಂಧಿತ ಆರೋಪಿ ಗಳು. ಕಳೆದ ಡಿ. 31ರಂದು ಹೆಣ್ಣೂರು ಠಾಣಾ ವ್ಯಾಪ್ತಿಯ ಅಪಾರ್ಟ್‌ಮೆಂಟ್‌ವೊಂದರಲ್ಲಿ ವಾಸವಿರುವ ವಿಶ್ವನಾಥ್ ವಯೋವೃದ್ಧರ ಮನೆಯಲ್ಲಿ ಕಳವು ಮಾಡಿದ್ದರು.

# ಬೇಸಿಗೆಗೆ ಕುಡಿವ ನೀರು, ಹಾಲಿ ಬೆಳೆಗೂ ನೀರು

## ತುಂಗಭದ್ರಾ, ನೀರಾವರಿ ಸಲಹಾ ಸಮಿತಿ ಸಭೆಯಲ್ಲಿ ತೀರ್ಮಾನ

ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಶುಕ್ರವಾರ ತಮ್ಮ ಅಧ್ಯಕ್ಷತೆಯಲ್ಲಿ ನಡೆದ ತುಂಗಭದ್ರಾ, ನೀರಾವರಿ ಸಲಹಾ ಸಮಿತಿ ಸಭೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ, ನೀರಾವರಿ ಸಲಹಾ ಸಮಿತಿ ಅಧ್ಯಕ್ಷ ಶಿವರಾಜ್ ತಂಗಡಗಿ ಮಾತನಾಡಿದರು.

**ಬೆಂಗಳೂರು:** ಬೇಸಿಗೆಯಲ್ಲಿ ಕುಡಿಯುವ ನೀರು ಹಾಗೂ ಹಾಲಿ ಬೆಳೆಗಳಿಗೆ ಯಾವುದೇ ಸಮಸ್ಯೆಯಾಗದಂತೆ ರಾಯಚೂರು, ಕೊಪ್ಪಳ, ಬಳ್ಳಾರಿ ಹಾಗೂ ವಿಜಯನಗರ ಜಿಲ್ಲೆಗಳಿಗೆ ನೀರು ಹರಿಸಲು ತೀರ್ಮಾನ ಕೈಗೊಳ್ಳಲಾಗಿದೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ, ನೀರಾವರಿ ಸಲಹಾ ಸಮಿತಿ ಅಧ್ಯಕ್ಷ ಶಿವರಾಜ್ ತಂಗಡಗಿ ಹೇಳಿದ್ದಾರೆ.

ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಶುಕ್ರವಾರ ತಮ್ಮ ಅಧ್ಯಕ್ಷತೆಯಲ್ಲಿ ನಡೆದ ತುಂಗಭದ್ರಾ, ನೀರಾವರಿ ಸಲಹಾ ಸಮಿತಿ ಸಭೆ ಬಳಿಕ ಮಾತನಾಡಿದ ಸಚಿವರು, ಪ್ರಸ್ತುತ ಜಲಾಶಯದಲ್ಲಿ ನೀರಿನ ಸಾಮರ್ಥ್ಯ 18 ಟಿಎಂಸಿ, ಇದರಲ್ಲಿ ಡೆಟ್ ಸ್ಟೋರೇಜ್ 2 ಟಿಎಂಸಿ, ಆವಿಯಾಗುವಿಕೆ 1.2 ಟಿಎಂಸಿ, ಈ ಪೈಕಿ ರಾಜ್ಯದ ಪಾಲು 11 ಟಿಎಂಸಿ, ಆಂಧ್ರಪ್ರದೇಶದ ಪಾಲು 4 ಟಿಎಂಸಿ ಇದೆ. ಈ ಹಿನ್ನೆಲೆಯಲ್ಲಿ ಜಲಾಶಯದಲ್ಲಿನ ನೀರಿನ ಲಭ್ಯತೆ ಆಧಾರಿಸಿ ನಾಲ್ಕು ಜಿಲ್ಲೆಗ್ಗಳಿಗೆ ಕುಡಿಯುವ ನೀರು ಒಳಗೊಂಡಂತೆ ನೀರಾವರಿಗೆ ಈ ಕೆಳಗಿನಂತೆ ಹಂಚಿಕೆ ಮಾಡಲಾಗಿದೆ ಎಂದು ತಿಳಿಸಿದರು.

ತುಂಗಭದ್ರಾ ಎಡದಂಡೆ ಮುಖ್ಯಕಾಲುವೆ ಮೂಲಕ ಏ.1ರಿಂದ ಏ.10ರವರೆಗೆ ಕುಡಿಯುವ ನೀರು ಒಳಗೊಂಡಂತೆ ಹಾಗೂ ನಿಂತ ಬೆಳೆಗಳ ಸಂರಕ್ಷಣೆಗಾಗಿ 3000 ಕ್ಯುಸೆಕ್ ನಂತೆ ನೀರು ಹರಿಸಲಾಗುವುದು. ಎಡದಂಡೆ ವಿಜಯನಗರ ಕಾಲುವೆಗೆ ಏ.11ರಿಂದ ಮೇ 10ರವರೆಗೆ 150 ಕ್ಯುಸೆಕ್‌ನಂತೆ ವಿತರಣಾ ಕಾಲುವೆ 1 ರಿಂದ 11ಎ ವರೆಗೆ ಅಥವಾ ಈ ಕಾಲುವೆಯಡಿ ನೀರಿನ ಲಭ್ಯತೆಯು ಇರುವವರೆಗೆ ಮಾತ್ರ ಇದ್ದಲ್ಲಿ ಯಾವುದೇ ಮೊದಲು ಅದು ಅನ್ವಯಿಸುತ್ತದೆ ಎಂದು ಹೇಳಿದರು.

ಸಭೆಯಲ್ಲಿ ಸಚಿವ ಜಮೀರ್ ಅಹ್ಮದ್, ಶರಣ್ ಪ್ರಕಾಶ್ ಪಾಟೀಲ್, ಮಾಜಿ ಸಚಿವ ಬಿ.ನಾಗೇಂದ್ರ, ಶಾಸಕರಾದ ನಾಗರಾಜ್, ಎಚ್.ಆರ್.ಗವಿಯಪ್ಪ, ಹಂಪನಗೌಡ ಬಾದರ್ಲಿ, ಗಣೇಶ್, ಇನ್ನಿತರರು ಉಪಸ್ಥಿತರಿದ್ದರು.

ತುಂಗಭದ್ರಾ ಬಲದಂಡೆ ಕೆಳಮಟ್ಟದ ಕಾಲುವೆಗೆ ಲಭ್ಯವಾಗುವ ನೀರಿನಲ್ಲಿ ಏ.1ರಿಂದ ಏ.10ರವರೆಗೆ ಕುಡಿಯುವ ನೀರು ಒಳಗೊಂಡಂತೆ ಹಾಗೂ ನಿಂತ ಬೆಳೆಗಳ ಸಂರಕ್ಷಣೆಗಾಗಿ 450 ಕ್ಯುಸೆಕ್ ನಂತೆ ನೀರು ಹರಿಸಲಾಗುವುದು. ಇನ್ನು ರಾಯ ಬಸವಣ್ಣ ಕಾಲುವೆಗೆ ಏ.1ರಿಂದ ಮೇ 31ರವರೆಗೆ ಲಭ್ಯವಾಗುವ ನೀರಿನಲ್ಲಿ 200 ಕ್ಯುಸೆಕ್ ನಂತೆ ನೀರು ಹರಿಸಲಾಗುವುದು. ಕುಡಿಯುವ ನೀರು ಮತ್ತು ನಿಂತ ಬೆಳೆಗಳಿಗೆ ಆದ್ಯತೆ ಕೊಟ್ಟು ನೀರು ಒದಗಿಸಲು ತೀರ್ಮಾನ ಮಾಡಲಾಗಿದೆ. ಈ ಸಂದರ್ಭದಲ್ಲಿ ಯಾವುದೇ ತೊಂದರೆಯಾಗದ ರೀತಿಯಲ್ಲಿ ನಿಷೇಧಾಜ್ಞೆ ಮೂಲಕ ನೀರು ಹರಿಸಲಾಗುವುದು.

–ಶಿವರಾಜ್ ತಂಗಡಗಿ ಸಚಿವ

# ಹೋಟೆಲ್ ಸಿಬ್ಬಂದಿ ಬಳಿ ಹ್ಯಾಂಡ್ ಗ್ರೆನೇಡ್ ಪತ್ತೆ

## ಸಂಪಿಗೇಹಳ್ಳಿ ಪೊಲೀಸರಿಂದ ಆರೋಪಿ ಅಬ್ದುಲ್ ರೆಹಮಾನ್ ಬಂಧನ

**ಬೆಂಗಳೂರು:** ಹೋಟೆಲ್‌ವೊಂದರ ಸಿಬ್ಬಂದಿ ಬ್ಯಾಗ್‌ನಲ್ಲಿ ಸ್ಫೋಟಕ ಹ್ಯಾಂಡ್ ಗ್ರೆನೇಡ್ ಪತ್ತೆಯಾಗಿದ್ದು ಹಲವು ಅನುಮಾನ ಹುಟ್ಟುಹಾಕಿದ್ದು, ಆರೋಪಿಯನ್ನು ತೀವ್ರ ವಿಚಾರಣೆಗೆ ಒಳಪಡಿಸಲಾಗಿದೆ.

ಸಂಪಿಗೇಹಳ್ಳಿ ಬಳಿಯ ಬೆಳ್ಳಳ್ಳಿಯ ಅಬ್ದುಲ್ ರೆಹಮಾನ್ ಬ್ಯಾಗ್‌ನಲ್ಲಿ ಹ್ಯಾಂಡ್ ಗ್ರೆನೇಡ್ ಸಿಕ್ಕಿದೆ. ಹೋಟೆಲ್ ಸಿಬ್ಬಂದಿಯೊಬ್ಬರು, ಆಧಾರ್ ಕಾರ್ಡ್‌ಗಾಗಿ ಅಬ್ದುಲ್ ರೆಹಮಾನ್‌ನ ಬ್ಯಾಗ್ ಪರಿಶೀಲಿಸಿದಾಗ ಗ್ರೇನೆಡ್ ಪತ್ತೆಯಾಗಿದೆ. ಕೂಡಲೇ ಹೋಟೆಲ್‌ನವರು ಪೊಲೀಸರಿಗೆ ಮಾಹಿತಿ ರವಾನಿಸಿದ್ದಾರೆ. ಬಳಿಕ ಸ್ಥಳಕ್ಕೆ ದೌಡಾಯಿಸಿದ ಸಂಪೀಗೆಹಳ್ಳಿ ಪೊಲೀಸರು ಮೊದಲಿಗೆ ಹೋಟೆಲ್ ಅವರಿಂದ ಮಾಹಿತಿ ಪಡೆದುಕೊಂಡು ನಂತರ ರೆಹಮಾನ್ ಬ್ಯಾಗ್ ಚೆಕ್ ಮಾಡಿದಾಗ ಹ್ಯಾಂಡ್ ಗ್ರೆನೇಡ್ ಕಂಡುಬಂದಿದೆ.

ಅಬ್ದುಲ್ ರೆಹಮಾನ್ ಹಾಗೂ ಈತನ ಬ್ಯಾಗ್‌ನಲ್ಲಿ ಸಿಕ್ಕ ಸ್ಫೋಟಕಗಳನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ. ಬಾಂಬ್ ಮಾದರಿಯ ಸ್ಫೋಟಕ ವಶಕ್ಕೆ ಪಡೆದಿರುವ ಪೊಲೀಸರು ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ರವಾನಿಸಿದ್ದಾರೆ. ಮತ್ತೊಂದೆಡೆ ಕೋಗಿಕ್ರಾಸ್ ಬಳಿಯ ಬೆಳ್ಳಳ್ಳಿಯ ನಿವಾಸಿಯಾಗಿರುವ ಅಬ್ದುಲ್ ರೆಹಮಾನ್ ನನ್ನು ಪೊಲೀಸರು ತೀವ್ರ ವಿಚಾರಣೆಗೆ ಒಳಪಡಿಸಲಾಯಿತು.

ಆರೋಪಿ ಬಳಿ ಯಾವುದೇ ಮೊಬೈಲ್ ಇಲ್ಲ. ಸ್ಥಳೀಯ ಹುಡುಗನಾಗಿರುವ 23 ವರ್ಷದ ಅಬ್ದುಲ್ ರೆಹಮಾನ್ ಇದುವರೆಗೂ ಯಾವುದೇ ಅಪರಾಧ ಪ್ರಕರಣಗಳಲ್ಲಿ ಭಾಗಿಯಾಗಿರುವುದು ಪತ್ತೆಯಾಗಿಲ್ಲ. ಸದ್ಯ ಆರೋಪಿಯ ವಿಚಾರಣೆ ನಡೆಯುತ್ತಿದೆ.

-ರಮೇಶ್ ಬಾನೋತ್
ಪೂರ್ವ ವಿಭಾಗ ಜಂಟಿ ಪೊಲೀಸ್ ಆಯುಕ್ತ



ಹ್ಯಾಂಡ್ ಗ್ರೆನೇಡ್ ಪತ್ತೆಯಾಗಿದ್ದೇಗೆ?: ಅಬ್ದುಲ್ ರೆಹಮಾನ್ ತಾನು ಬೆಳ್ಳಹಳ್ಳಿಯ ನಿವಾಸಿ ಎಂದು ಹೇಳಿಕೊಂಡು ವೈಭವ್ ಹೋಟೆಲ್‌ನಲ್ಲಿ ಸಪ್ಲೈಯರ್ ಆಗಿ ಕೆಲಸಕ್ಕೆ ಸೇರಿಕೊಂಡಿದ್ದ. ಬಳಿಕ ಹೋಟೆಲ್‌ನವರು ಆಧಾರ್ ಕಾರ್ಡ್ ಕೇಳಿದ್ದಾರೆ. ಆದರೆ ಆತ ಕಾರ್ಡ್ ಕೇಳಿದಾಗ ಕೊಟ್ಟಿಲ್ಲ. ಎರಡು ದಿನಗಳು ಕಳೆದರೂ ಸಹ ಆಧಾರ್ ಕಾರ್ಡ್ ಕೊಟ್ಟಿಲ್ಲ. ಇದರಿಂದ ಹೋಟೆಲ್ ಸಿಬ್ಬಂದಿಯೊಬ್ಬರು ಶೆಡ್‌ನಲ್ಲಿದ್ದ ರೆಹಮಾನ್‌ನ ಬ್ಯಾಗ್ ಚೆಕ್ ಮಾಡಿದಾಗ ಹ್ಯಾಂಡ್ ಗ್ರೆನೇಡ್ ಪತ್ತೆಯಾಗಿದೆ. ಇದರಿಂದ ಬೆಚ್ಚಿಬಿದ್ದ ಸಿಬ್ಬಂದಿ ಕೂಡಲೇ ಹೋಟೆಲ್ ಸಿಬ್ಬಂದಿ ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ಮಾಹಿತಿ ಆಧರಿಸಿ ಸ್ಥಳಕ್ಕೆ ಸಂಪಿಗೆಹಳ್ಳಿ ಪಿಎಸ್‌ಐ ದೌಡಾಯಿಸಿ ಮೊದಲು ಹೋಟೆಲ್ ಮಾಲೀಕರ ಬಳಿ ಮಾಹಿತಿ ಪಡೆದುಕೊಂಡು ಬಳಿಕ ರೆಹಮಾನ್ ಬ್ಯಾಗ್ ಪರಿಶೀಲನೆ ಮಾಡಿದಾಗ ಹ್ಯಾಂಡ್ ಗ್ರೆನೇಡ್ ಪತ್ತೆಯಾಗಿದೆ. ಆ ತಕ್ಷಣವೇ ಅಬ್ದುಲ್ ರೆಹಮಾನ್ ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ ಎಲ್ಲಿಯೋ ಸಿಕ್ಕಿತ್ತು. ಬಾಂಬ್ ಮಾದರಿಯ ವಸ್ತು ರಸ್ತೆಯಲ್ಲಿ ಸಿಕ್ಕಿತ್ತು ಎಂದು ಹೇಳಿದ್ದಾನೆ ಎಂದು ತಿಳಿದುಬಂದಿದೆ. ಆದರೂ ಬಿಡದ ಸಂಪಿಗೇಹಳ್ಳಿ ಪೊಲೀಸರು ಅಬ್ದುಲ್ ರೆಹಮಾನ್ ವಿರುದ್ಧ ಎಫ್‌ಐಆರ್ ದಾಖಲಿಸಿಕೊಂಡಿದ್ದು, ಗ್ರೆನೇಡ್ ಎಲ್ಲಿ ಇತ್ತು? ಅದು ಹೇಗೆ ಸಿಕ್ತು? ಅದನ್ನ ಏಕೆ ತಗೆದುಕೊಂಡುಬಂದಿದ್ದು? ಏನಾದರೂ ಬ್ಲಾಸ್ಟ್ ಮಾಡುವ ಪ್ಲ್ಯಾನ್ ಏನಾದರೂ ಇತ್ತಾ? ಹೀಗೆ ಎಲ್ಲಾ ಆಯಾಮಗಳಲ್ಲಿ ತನಿಖೆ ಚುರುಕುಗೊಳಿಸಿದ್ದಾರೆ.

POONAWALLA FINCORP

ಪೂನಾವಲ್ಲಾ ಫಿನ್‌ಕಾರ್ಪ್ ಲಿಮಿಟೆಡ್
ಕಾರ್ಪೋರೇಟ್ ಕಚೇರಿ : ಯುನಿಟ್ ನಂ. 2401, 24ನೇ ಮಹಡಿ, ಅಲ್ಟಿಮಸ್, ಡಾ. ಜಿ ಎಂ ಭೋಸ್ಲೆ ಮಾರ್ಗ್, ವರ್ಲಿ, ಮುಂಬಯಿ 400 018 (ಮಹಾರಾಷ್ಟ್ರ)
ನೋಂದಾಯಿತ ಕಚೇರಿ: 201 ಮತ್ತು 202, 2ನೇ ಮಹಡಿ, ಎಪಿ81, ಕೋರೆಗಾಂವ್ ಪಾರ್ಕ್ ಅನೆಕ್ಸ್ ಮುಂದ್ವಾ, ಪುಣೆ 411 036 (ಮಹಾರಾಷ್ಟ್ರ)

ಅಪೆಂಡಿಕ್ಸ್ –IV (ನಿಯಮ 8(1)ನ್ನು ನೋಡಿ ಸ್ವಾಧೀನತೆ ಸೂಚನೆ (ಸ್ಥಿರ ಆಸ್ತಿಗಳಿಗೆ)

ಕೆಳಸಹಿದಾರರು ಪೂನಾವಾಲ್ಲಾ ಫಿನ್‌ಕಾರ್ಪ್ ಲಿಮಿಟೆಡ್ (ಈ ಮೊದಲು ಮ್ಯಾಗ್ಮ ಫಿನ್‌ಕಾರ್ಪ್ ಲಿಮಿಟೆಡ್ ಎಂದಾಗಿತ್ತು) ಇದರ ಅಧಿಕೃತ ಅಧಿಕಾರಿಯಾಗಿದ್ದು, ಇದರ ಕಾರ್ಪೋರೇಟ್/ನೋಂದಾಯಿತ ಕಚೇರಿಯಾಗಿದ್ದು, ಸೆಕ್ಯುರಿಟೈಜೇಶನ್ ಮತ್ತು ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಶಿಯಲ್ ಅಸೆಟ್ ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯುರಿಟಿ ಇಂಟರೆಸ್ಟ್ ಕಾಯಿದೆ 2002 ರ (ಇನ್ನು ಮುಂದೆ "ಕಾಯಿದೆ" ಎನ್ನಲಾಗುವುದು) ಮತ್ತು ಸೆಕ್ಷನ್13(2)ರ ಹೇಳಲಾದ ಕಾಯಿದೆಯಂತೆ ನಿಮಯ 3ನ್ನು ಓದಿಕೊಂಡು ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳು, 2002 ರ ಅನ್ವಯ ಈ ಕೆಳಗಿನ ಸಾಲಗಾರರಿಗೆ ತಗಾದೆ ಸೂಚನೆಯನ್ನು ನೀಡಿದ್ದು, ನೋಟೀಸಿನಲ್ಲಿ ತಿಳಿಸಿರುವಂತೆ ಬಾಕಿ ಮೊತ್ತವನ್ನು ಈ ನೋಟೀಸ್ ನೀಡಿದ 60 ದಿನಗಳಲ್ಲಿ ಪಾವತಿಸುವಂತೆ ಸೂಚಿಸಲಾಗಿತ್ತು.
ಸಾಲಗಾರರು ಹಣವನ್ನು ಮರುಪಾವತಿ ಮಾಡಲು ವಿಫಲರಾಗಿದ್ದು, ಸಾಲಗಾರರು ಹಾಗೂ ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ತಿಳಿಸುವುದೇನೆಂದರೆ, ಕೆಳಸಹಿದಾರರು ಈ ಕೆಳಗೆ ವಿವರಿಸಿರುವ ಸ್ಥಿರಾಸ್ತಿಗಳನ್ನು ಸೆಕ್ಷನ್ 13 (4) ಕಾಯಿದೆ ನಿಯಮ 8 ನ್ನು ಓದಿಕೊಂಡಂತೆ ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳು 2002ರ ಅನ್ವಯ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ 20ನೇ ಮಾರ್ಚ್ 2025 ರಂದು ಸ್ವಾಧೀನ ಪಡಿಸಿಕೊಂಡಿರುತ್ತಾರೆ.
ಸಾಲಗಾರರು ಹಾಗೂ ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ತಿಳಿಸುವುದೇನೆಂದರೆ, ಈ ಸ್ವತ್ತುಗಳ ಬಗ್ಗೆ ಯಾರೂ ವ್ಯವಹರಿಸಕೂಡದು, ಒಂದು ವೇಳೆ ವ್ಯವಹರಿಸಿದ್ದೇ ಆದಲ್ಲಿ ಪೂನಾವಾಲ್ಲಾ ಫಿನ್‌ಕಾರ್ಪ್ ಲಿಮಿಟೆಡ್ (ಈ ಮೊದಲು ಮ್ಯಾಗ್ಮ ಫಿನ್‌ಕಾರ್ಪ್ ಲಿಮಿಟೆಡ್ ಎಂದಾಗಿತ್ತು) ಗೆ ಬರಬೇಕಾದ ಬಾಕಿ ಹಣ ಹಾಗೂ ನಂತರದ ಬಡ್ಡಿಯನ್ನು ಪಾವತಿಸಬೇಕಾಗುವುದು. ಸೆಕ್ಷನ್ 13(8) ರ ಸರ್ಫೇಸಿ ಕಾಯಿದೆ ಹಾಗೂ ನಿಯಮಗ ಳನುಸಾರ ಭದ್ರತಾ ಆಸ್ತಿಗಳನ್ನು ನೀವು ಮರುಪಡೆಯಲು ಅವಕಾಶವಿದೆ ಎಂಬುದನ್ನು ನಿಮ್ಮ ಗಮನಕ್ಕೆ ತರುತ್ತಿದ್ದೇವೆ. ಸ್ವಾಧೀನಕ್ಕೆ ಪಡೆದುಕೊಂಡ ಆಸ್ತಿಯ ವಿವರಗಳು ಈ ಕೆಳಗಿನಂತಿದೆ.

| ಸಾಲಗಾರರ, ಸಹ-ಸಾಲಗಾರರ, ಹೆಸರು | ಭದ್ರತಾ ಸ್ವತ್ತಿನ ವಿವರ | ಸ್ವಾಧೀನತೆ ಪಡೆದ ದಿನಾಂಕ | ಶಾಸನಬದ್ಧ ತಗಾದೆ ಸೂಚನೆ ದಿನಾಂಕ | ತಗಾದೆ ಸೂಚನೆಯಂತೆ ಮೊತ್ತ (ರೂ.) |
|---|---|---|---|---|
| ಶ್ರೀನಿವಾಸ ವಿ ಮತ್ತು ಸಿಹಿ ಐಶ್ವರ್ಯ ಆರ್ ಶ್ರೀನಿವಾಸ ವಿ | ಆಸ್ತಿಯ ಷೆಡ್ಯೂಲ್: ಆಸ್ತಿಯ ಎಲ್ಲಾ ಭಾಗಗಳು ಸೇರಿದಂತೆ ಸೈಟ್ ನಂ. 54, ಅಸೆಸ್‌ಮೆಂಟ್ ಖಾತಾ ನಂ. 5437/5247/54, ವಿಸ್ತೀರ್ಣ: ಪೂರ್ವದಿಂದ ಪಶ್ಚಿಮಕ್ಕೆ: (37+36.6)/2 ಅಡಿ, ಉತ್ತರದಿಂದ ದಕ್ಷಿಣಕ್ಕೆ: (37+36.6)/2 ಅಡಿ ಒಟ್ಟು 1103 ಚದರ ಅಡಿಯು ಅತ್ತಿಬೆಲೆ ಹೋಬಳಿ, ಆನೇಕಲ್ ತಾಲೂಕು, ಬೆಂಗಳೂರು ಜಿಲ್ಲೆ ಇಲ್ಲಿದ್ದು, ಚಕ್ಕುಬಂದಿ: ಪೂರ್ವಕ್ಕೆ: ಸೈಟ್ ನಂ. 55, ಪಶ್ಚಿಮಕ್ಕೆ: ಸೈಟ್ ನಂ. 53, ಉತ್ತರಕ್ಕೆ: 25 ಅಡಿ ರಸ್ತೆ, ದಕ್ಷಿಣಕ್ಕೆ: ಎ ಎಲ್ ಶ್ರೀನಿವಾಸ್‌ರವರಿಗೆ ಸೇರಿದ ಆಸ್ತಿ. ಸೈಟ್ ನಂ. 55 ಅಸೆಸ್‌ಮೆಂಟ್ ನಂ. 5438/5248/55, ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ (37+37.6)2 ಅಡಿ ಉತ್ತರದಿಂದ ದಕ್ಷಿಣಕ್ಕೆ: (37+36.6)/2 ಅಡಿ ಒಟ್ಟು 1103 ಚದರ ಅಡಿಯು ಅತ್ತಿಬೆಲೆ ಹೋಬಳಿ, ಆನೇಕಲ್ ತಾಲೂಕು, ಬೆಂಗಳೂರು ಜಿಲ್ಲೆ ಇಲ್ಲಿದ್ದು, ಚಕ್ಕುಬಂದಿ: ಪೂರ್ವಕ್ಕೆ: ಸೈಟ್ ನಂ. 56, ಪಶ್ಚಿಮಕ್ಕೆ: ಸೈಟ್ ನಂ. 54, ಉತ್ತರಕ್ಕೆ: 25 ಅಡಿ ರಸ್ತೆ, ದಕ್ಷಿಣಕ್ಕೆ: ಎ ಎಲ್ ಶ್ರೀನಿವಾಸ್‌ರವರಿಗೆ ಸೇರಿದ ಆಸ್ತಿ. | 20.03.2025 | 21.11.2024 | ಸಾಲದ ಸಂಖ್ಯೆ LAP0113100000010348435 ರೂ.1,45,62,737/- (ಒಂದು ಕೋಟಿ ನಲವತ್ತೈದು ಲಕ್ಷ ಅರುವತ್ತೆರಡು ಸಾವಿರದ ಏಳುನೂರ ಮೂವತ್ತೇಳು ರೂಪಾಯಿಗಳು ಮಾತ್ರ) ಜೊತೆಗೆ 10.25% ಭವಿಷ್ಯದ ವಾರ್ಷಿಕ ಬಡ್ಡಿ 21.11.2024 ರಿಂದ ಹಣ ಸಂಪೂರ್ಣ ಪಾವತಿಯಾಗುವವರೆಗೆ. |

ದಿನಾಂಕ: 22.03.2025
ಸ್ಥಳ: ಬೆಂಗಳೂರು
ಅಧಿಕೃತ ಅಧಿಕಾರಿ
ಪೂನಾವಲ್ಲಾ ಫಿನ್‌ಕಾರ್ಪ್ ಲಿಮಿಟೆಡ್ ಪರವಾಗಿ
(ಸಹಿ)

POONAWALLA FINCORP

ಪೂನಾವಲ್ಲಾ ಫಿನ್‌ಕಾರ್ಪ್ ಲಿಮಿಟೆಡ್
ಕಾರ್ಪೋರೇಟ್ ಕಚೇರಿ : ಯುನಿಟ್ ನಂ. 2401, 24ನೇ ಮಹಡಿ, ಅಲ್ಟಿಮಸ್, ಡಾ. ಜಿ ಎಂ ಭೋಸ್ಲೆ ಮಾರ್ಗ್, ವರ್ಲಿ, ಮುಂಬಯಿ 400 018 (ಮಹಾರಾಷ್ಟ್ರ)
ನೋಂದಾಯಿತ ಕಚೇರಿ: 201 ಮತ್ತು 202, 2ನೇ ಮಹಡಿ, ಎಪಿ81, ಕೋರೆಗಾಂವ್ ಪಾರ್ಕ್ ಅನೆಕ್ಸ್ ಮುಂದ್ವಾ, ಪುಣೆ 411 036 (ಮಹಾರಾಷ್ಟ್ರ)

ಅಪೆಂಡಿಕ್ಸ್ –IV (ನಿಯಮ 8(1)ನ್ನು ನೋಡಿ ಸ್ವಾಧೀನತೆ ಸೂಚನೆ (ಸ್ಥಿರ ಆಸ್ತಿಗಳಿಗೆ)

ಕೆಳಸಹಿದಾರರು ಪೂನಾವಾಲ್ಲಾ ಫಿನ್‌ಕಾರ್ಪ್ ಲಿಮಿಟೆಡ್ (ಈ ಮೊದಲು ಮ್ಯಾಗ್ಮ ಫಿನ್‌ಕಾರ್ಪ್ ಲಿಮಿಟೆಡ್ ಎಂದಾಗಿತ್ತು) ಇದರ ಅಧಿಕೃತ ಅಧಿಕಾರಿಯಾಗಿದ್ದು, ಇದರ ಕಾರ್ಪೋರೇಟ್/ನೋಂದಾಯಿತ ಕಚೇರಿಯಾಗಿದ್ದು, ಸೆಕ್ಯುರಿಟೈಜೇಶನ್ ಮತ್ತು ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಶಿಯಲ್ ಅಸೆಟ್ ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯುರಿಟಿ ಇಂಟರೆಸ್ಟ್ ಕಾಯಿದೆ 2002 ರ (ಇನ್ನು ಮುಂದೆ "ಕಾಯಿದೆ" ಎನ್ನಲಾಗುವುದು) ಮತ್ತು ಸೆಕ್ಷನ್13(2)ರ ಹೇಳಲಾದ ಕಾಯಿದೆಯಂತೆ ನಿಮಯ 3ನ್ನು ಓದಿಕೊಂಡು ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳು, 2002 ರ ಅನ್ವಯ ಈ ಕೆಳಗಿನ ಸಾಲಗಾರರಿಗೆ ತಗಾದೆ ಸೂಚನೆಯನ್ನು ನೀಡಿದ್ದು, ನೋಟೀಸಿನಲ್ಲಿ ತಿಳಿಸಿರುವಂತೆ ಬಾಕಿ ಮೊತ್ತವನ್ನು ಈ ನೋಟೀಸ್ ನೀಡಿದ 60 ದಿನಗಳಲ್ಲಿ ಪಾವತಿಸುವಂತೆ ಸೂಚಿಸಲಾಗಿತ್ತು.
ಸಾಲಗಾರರು ಹಣವನ್ನು ಮರುಪಾವತಿ ಮಾಡಲು ವಿಫಲರಾಗಿದ್ದು, ಸಾಲಗಾರರು ಹಾಗೂ ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ತಿಳಿಸುವುದೇನೆಂದರೆ, ಕೆಳಸಹಿದಾರರು ಈ ಕೆಳಗೆ ವಿವರಿಸಿರುವ ಸ್ಥಿರಾಸ್ತಿಗಳನ್ನು ಸೆಕ್ಷನ್ 13 (4) ಕಾಯಿದೆ ನಿಯಮ 8 ನ್ನು ಓದಿಕೊಂಡಂತೆ ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳು 2002ರ ಅನ್ವಯ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ 20ನೇ ಮಾರ್ಚ್ 2025 ರಂದು ಸ್ವಾಧೀನ ಪಡಿಸಿಕೊಂಡಿರುತ್ತಾರೆ.
ಸಾಲಗಾರರು ಹಾಗೂ ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ತಿಳಿಸುವುದೇನೆಂದರೆ, ಈ ಸ್ವತ್ತುಗಳ ಬಗ್ಗೆ ಯಾರೂ ವ್ಯವಹರಿಸಕೂಡದು, ಒಂದು ವೇಳೆ ವ್ಯವಹರಿಸಿದ್ದೇ ಆದಲ್ಲಿ ಪೂನಾವಾಲ್ಲಾ ಫಿನ್‌ಕಾರ್ಪ್ ಲಿಮಿಟೆಡ್ (ಈ ಮೊದಲು ಮ್ಯಾಗ್ಮ ಫಿನ್‌ಕಾರ್ಪ್ ಲಿಮಿಟೆಡ್ ಎಂದಾಗಿತ್ತು) ಗೆ ಬರಬೇಕಾದ ಬಾಕಿ ಹಣ ಹಾಗೂ ನಂತರದ ಬಡ್ಡಿಯನ್ನು ಪಾವತಿಸಬೇಕಾಗುವುದು.

| ಸಾಲಗಾರರ ಹೆಸರು | ಭದ್ರತಾ ಸ್ವತ್ತಿನ ವಿವರ | ಸ್ವಾಧೀನತೆ ಪಡೆದ ದಿನಾಂಕ | ಶಾಸನಬದ್ಧ ತಗಾದೆ ಸೂಚನೆ ದಿನಾಂಕ | ತಗಾದೆ ಸೂಚನೆಯಂತೆ ಮೊತ್ತ (ರೂ.) |
|---|---|---|---|---|
| ಪದ್ಮ ಟ್ರೇಡರ್ಸ್ ರಂಜೀತ ಕುಮಾರಿ ಎಮ್ ಮನೋಜ್ ಕುಮಾರ್ ಓಸ್ವಾಲ್ | ಆಸ್ತಿಯ ಎಲ್ಲಾ ಭಾಗಗಳು ಸೇರಿದಂತೆ ವಾಸಯೋಗ್ಯ ಅಪಾರ್ಟ್‌ಮೆಂಟ್ ನಂ. ಎಮ್‌ಎ803, ಎಂಟನೆ ಮಹಡಿಯಲ್ಲಿದ್ದು, ವಿಂಗ್ ಎ ಹಂತ 3 ಮಲ್ಬರಿ ಟವರ್, ಹಂತ 1 ವಾಸಯೋಗ್ಯವಾಗಿ ಅಭಿವೃದ್ಧಿಗೊಂಡ ಪ್ರಾಜೆಕ್ಟ್ ಪಾರ್ಕ್ ವೆಸ್ಟ್ ನ ಸುಪರ್ ಬಿಲ್ಟಪ್ ಪ್ರದೇಶ 150.41 ಚದರ ಮೀಟರ್ ಜೊತೆಗೆ ಭಾಗ ಮಾಡಲಾಗದ ಪಾಲು 487.63 ಚದರ ಅಡಿ ಜೊತೆಗೆ ಒಂದು ಕಾರು ನಿಲುಗಡೆಗೆ ಸ್ಥಳಾವಕಾಶವಿದ್ದು, ಮತ್ತು ಭಾಗ ಮಾಡಲಾಗದ ಪಾಲು ಮುನ್ಸಿಪಲ್ ನಂ. 1/1 (ಪಿಐಡಿ ನಂ. 31-42-1/1) ವಿಸ್ತೀರ್ಣ 52.8337 ಎಕರೆಗಳು ಬಿನ್ನಿಪೇಟೆ ವಾಸಯೋಗ್ಯ ವಸತಿಗೃಹಗಳು, ಬಿನ್ನಿಪೇಟೆ ವಾರ್ಡ್ ನಂ. 31, ಸರ್ವೆ ನಂ. 10, 11, 12 ರಲ್ಲಿ ರಚಿತವಾಗಿದ್ದು, ಬೋಗನಹಳ್ಳಿ ಗ್ರಾಮ ಮತ್ತು ಸರ್ವೆ ನಂ. 32, ಗುಟ್ಟಹಳ್ಳಿ ಗ್ರಾಮ, ಹಲಸೂರು ಹೋಬಳಿ, ಬೆಂಗಳೂರು ತಾಲೂಕು ಮತ್ತು ಸರ್ವೆ ನಂ. 42-47, ಜೋಡಿ ಕೆಂಪಾಪುರ ಗ್ರಾಮ ಹಲಸೂರು ಹೋಬಳಿ, ಬೆಂಗಳೂರು ತಾಲೂಕು ಮತ್ತು ಚಕ್ಕುಬಂದಿ: ಪೂರ್ವಕ್ಕೆ: ಹೊಸಕೆರೆ ರಸ್ತೆ (ಟ್ಯಾಂಕ್ ಬಂಡ್ ರಸ್ತೆ ಸಿರ್ಸಿ ವೃತ್ತದ ಕಡೆಯಿಂದ ಮೈಸೂರು ರಸ್ತೆ ಕಡೆಗೆ) ಪಶ್ಚಿಮಕ್ಕೆ: ಗೋರಿಪಾಳ್ಯ ರಂಗನಾಥ ಕಾಲೋನಿ ಮತ್ತು ಹೊಸ ಬಿನ್ನಿ ಲೇಔಟ್, ಉತ್ತರಕ್ಕೆ: ಹೊಸ ಬಿನಿ ಲೇಔಟ್ ಖಾಸಗಿ ಆಸ್ತಿ ಮತ್ತು ಮುನ್ಸಿಪಲ್ ನಂ. 1/1 ರ ಭಾಗ ಇಟಿಎ ಕರ್ನಾಟಕ ಎಸ್ಟೇಟ್ಸ್ ಪ್ರೈವೇಟ್ ಲಿಮಿಟೆಡ್ ರವರಿಂದ ಉಳಿಸಿಕೊಳ್ಳಲ್ಪಟ್ಟಿದೆ, ದಕ್ಷಿಣಕ್ಕೆ: ಗೋರಿಪಾಳ್ಯ. | 20.03.2025 | 21.11.2024 | ಸಾಲದ ಸಂಖ್ಯೆ LAP0113100000007529140 ರೂ.1,42,97,616/- (ಒಂದು ಕೋಟಿ ನಲವತ್ತೆರಡು ಲಕ್ಷ ತೊಂಭತ್ತೇಳು ಸಾವಿರದ ಆರುನೂರ ಹದಿನಾರು ರೂಪಾಯಿಗಳು ಮಾತ್ರ) ಜೊತೆಗೆ 10.00% ಭವಿಷ್ಯದ ವಾರ್ಷಿಕ ಬಡ್ಡಿ 21.11.2024 ರಿಂದ ಹಣ ಸಂಪೂರ್ಣ ಪಾವತಿಯಾಗುವವರೆಗೆ. |

ದಿನಾಂಕ: 22.03.2025
ಸ್ಥಳ: ಬೆಂಗಳೂರು
ಅಧಿಕೃತ ಅಧಿಕಾರಿ
ಪೂನಾವಲ್ಲಾ ಫಿನ್‌ಕಾರ್ಪ್ ಲಿಮಿಟೆಡ್ ಪರವಾಗಿ
(ಸಹಿ)

Altum Credo Home Finance
ALTUM CREDO HOME FINANCE PVT. LTD.
CIN: U65999PN2016PTC166384
Regd. Office: No. 451/1, 1st Floor and 2nd Floor, West Chord, IInd Stage, Basaweshwaranagar, Mahalakshmipuram, BBMP Ward No. 14, Nagapura, Rajajinagar Bangalore - 560079

RELOCATION OF BRANCH

This is to notify that general public and customers that its branch in Rajajinagar Bangalore is being relocated.
Please visit our website at www.altumcredo.com or call us on 020-27293709/10 for further assistance or support

PUBLIC NOTICE

This is to inform the general public that our client Sri. Muralidhar Kakarla, Aged about 44 years, S/o Late Srihari Kakarla, Residing at Teachers Colony, Ram Nagar, Podalakur, Nellore District – 524345, Andhra Pradesh is the absolute owner in peaceful possession and enjoyment of all that piece and parcel of the immovable property bearing **Sy. No.35/1, measuring 1 Acre 26 Guntas and 2 Guntas Kharab land,** duly converted from Agricultural to Non Agricultural Residential Purpose from Deputy Commissioner, Kolar **vide Official Memorandum bearing No. ALN.SR.358/2017–18 dated 18/06/2018,** situated at Marasandra Village, Kasaba Hobli, Malur Taluk, Kolar District, and bounded on East by: Sy. No.35/2, West by: Sy. No.34/8, North by: Sy. No.33/2, South by: Sy. No.38/8, hereinafter referred to as **"SCHEDULE PROPERTY"**.

Our client Sri. Muralidhar Kakarla with an intent to develop had entered into Registered Joint Development Agreement dated 21/03/2023, duly registered in Book – I, as Document No. MLR-1-11869-2022-23, stored in C.D. No. MLRD 1241 and also executed a Registered General Power of Attorney dated 21/03/2023, duly registered in Book – IV, as Document No. MLR-4-01009-2022-23, stored in C.D. No. MLRD 1241 in favour of **M/s Ridhi Ventures,** A Proprietorship Concern, Having its office at No. 1343, 2nd Floor, Prema Paradise, YDY Block, AECS Layout, 60 Feet Main Road, Bangalore – 560 037, Represented by its Proprietor **Sri. N. Chalapathi,** S/o N.Ramanna, Aged about 46 years.

Since, the Developer M/s Ridhi Ventures has failed to develop the schedule property as per the agreed terms, our client has cancelled the General Power of Attorney dated 21/03/2023 executed in favour of M/s Ridhi Ventures through a Legal Notice dated 21/03/2025 and called upon M/s Ridhi Ventures not to deal with the schedule property in any manner based on the G.P.A dated 21/03/2023 and the GPA dated 21/03/2023 stands cancelled with immediate effect.

That in order to avoid any further litigation I hereby warn General public not to enter in to any contact, agreement or deal in any manner with M/s Ridhi Ventures pertaining to schedule property is concerned since he no power to deal with the schedule property, inspite of that, if any transaction takes place between M/s Ridhi Ventures and public in general the same would-be void transaction and our client is not responsible for the alleged void transaction and the alleged purchasers will not get any right title and interest in the schedule property or any part thereof.

SCHEDULE PROPERTY

All that piece and parcel of the immovable property bearing **Sy. No.35/1, measuring 1 Acre 26 Guntas and 2 Guntas Kharab land,** duly converted from Agricultural to Non Agricultural Residential Purpose from Deputy Commissioner, Kolar vide **Official Memorandum bearing No. ALN.SR.358/2017–18 dated 18/06/2018,** situated at Marasandra Village, Kasaba Hobli, Malur Taluk, Kolar District, and bounded on:
East by : Sy No.35/2,
West by : Sy. No. 34/8,
North by : Sy. No.33/2,
South by : Sy. No.38/8

**B.C. AVINASH, Advocate,**
**For M/s The Firm,** No. A/30, Raja Mansion, Ranga Rao Road, Shankarpuram, Bangalore – 560 004, Ph: +91 98860 57709

## ಸಮಾಚಾರ ಸಣ್ಣದಲ್ಲ

### ಬಿಜೆಪಿ ಸಂಸ್ಕೃತಿಹೀನ ಪಕ್ಷ: ಡಿಸಿಎಂ ಡಿಕೆಶಿ

**ಬೆಂಗಳೂರು:** ಬಿಜೆಪಿ ಸಂಸ್ಕೃತಿ ಹೀನ ಪಕ್ಷ. ಅವರು ಜನಾದೇಶದಿಂದ ಸೋಲನು ಭವಿಸಿದ್ದು, ವಿಧಾನಸಭೆಯಲ್ಲಿ ಹೇಗೆ ವರ್ತಿಸಬೇಕು ಎಂಬುದು ಗೊತ್ತಿಲ್ಲ. ಅವರು ಗೂಂಡಾಗಳು. ಇದು ನಾಚಿಕೆಗೇಡಿನ ವಿಚಾರ. ನಾನು ಕಳೆದ 36 ವರ್ಷಗಳಿಂದ ವಿಧಾನಸಭೆಯಲ್ಲಿದ್ದು, ಎಂದೂ ಇಂತಹ ವರ್ತನೆ ನೋಡಿಲ್ಲ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ವಾಗ್ದಾಳಿ ನಡೆಸಿದರು. ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿ, ಮುಖ್ಯಮಂತ್ರಿಗಳು ಹಾಗೂ ಗೃಹಮಂತ್ರಿಗಳು ಹನಿಟ್ರ್ಯಾಪ್ ವಿಚಾರವಾಗಿ ಹೇಳಿಕೆ ನೀಡಿದ್ದು, ಯಾರಾದರೂ ಒಬ್ಬರು ದೂರು ನೀಡಿದರೆ ಕ್ರಮ ತೆಗೆದುಕೊಳ್ಳಬಹುದು. ವಿಧಾನಸೌಧದಲ್ಲೇ ಅತ್ಯಾಚಾರ ಎಸಗಿದ್ದಾರೆ ಎಂದು ಸಂತ್ರಸ್ತೆಯೊಬ್ಬರು ದೂರಿನಲ್ಲಿ ಆರೋಪಿಸಿದ್ದಾರೆ. ಈ ವಿಚಾರ ನ್ಯಾಯಾಲದಲ್ಲಿದೆ. ಬಾಂಬೆ ಬಾಯ್ಸ್ ನ್ಯಾಯಾಲಯದಲ್ಲಿ ತಡೆಯಾಜ್ಞೆ ತಂದಿರುವುದು ಯಾವ ಕಾರಣಕ್ಕೆ? ಎಂದು ತಿರುಗೇಟು ನೀಡಿದರು. ಅವರ ಬಾಣದ ಗುರಿ ಯಾರ ಕಡೆ ಇದೆ ಎಂದು ಕೇಳಿದಾಗ, ಅವರು ಯಾರತ್ತ ಗುರಿ ಇಟ್ಟಿದ್ದಾರೋ ಗೊತ್ತಿಲ್ಲ. ಇದು ಅವರ ಸೆಲ್ಫ್ ಗೋಲ್ ಇರಬೇಕು ಎಂದು ವ್ಯಂಗವಾಡಿದರು.

### ಕನ್ನಡ ಪಠ್ಯ ಬೋಧನೆಗೆ ಕನ್ನಡ ಶಿಕ್ಷಕರೇ ಇರಲಿ

**ಬೆಂಗಳೂರು:** ಕರ್ನಾಟಕ ಪಶು ವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನ ವಿವಿ ವ್ಯಾಪ್ತಿಯಲ್ಲಿರುವ ಎಲ್ಲ ಶಿಕ್ಷಣ ಸಂಸ್ಥೆಗಳಲ್ಲಿ ಕರ್ನಾಟಕ ಸರಕಾರದ ಕನ್ನಡ ಪಠ್ಯ ವಸ್ತುಗಳನ್ನು ಕನ್ನಡ ಭಾಷಾ ಅಧ್ಯಾಪಕರ ಬದಲಿಗೆ ಅನ್ಯ ವಿಷಯ ತಜ್ಞರು ಬೋಧಿಸುತ್ತಿರುವುದು ವೃತ್ತಿ ಶಿಕ್ಷಣದಲ್ಲಿ ಕನ್ನಡದ ಉಳಿವಿಗೆ ಮಾರಕವಾಗಿದ್ದು, ಕನ್ನಡ ಬೋಧನೆಗೆ ಕನ್ನಡ ವಿಷಯ ತಜ್ಞರನ್ನು ಬಳಸಿಕೊಳ್ಳಬೇಕೆಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ಡಾ.ಪುರುಷೋತ್ತಮ ಬಿಳಿಮಲೆ ಆಗ್ರಹಿಸಿದ್ದಾರೆ. ಪಶು ಸಂಗೋಪನಾ ಸಚಿವ ಕೆ.ವೆಂಕಟೇಶ್ ಅವರಿಗೆ ಪತ್ರ ಬರೆದಿರುವ ಬಿಳಿಮಲೆ, ವೃತ್ತಿ ಶಿಕ್ಷಣ ದಲ್ಲಿ ಕಡ್ಡಾಯವಾಗಿ ಕನ್ನಡ ಬೋಧಿಸುವ ಕುರಿತಂತೆ ಕನ್ನಡ ಅಭಿವೃದ್ಧಿ ಪ್ರಾಧಿಕಾರವು 2015ರಲ್ಲಿ ಸರಕಾರಕ್ಕೆ ವರದಿ ಸಲ್ಲಿಸಿ ಕನ್ನಡ ಬೋಧನೆ ಕಡ್ಡಾಯಗೊಳಿಸುವ ಕುರಿತಂತೆ ಸಲಹೆ ನೀಡಿರುತ್ತದೆ. ರಾಜ್ಯ ಸರಕಾರವು ಪ್ರಾಧಿಕಾರದ ಶಿಫಾರಸನ್ನು ಪರಿಗಣಿಸಿ ಸಾಂಸ್ಕೃತಿಕ ಕನ್ನಡ ಮತ್ತು ಬಳಕೆ ಕನ್ನಡ ಪಠ್ಯ ವಿಷಯಗಳ ಬೋಧನೆಗೆ ಆದೇಶ ಹೊರಡಿಸಿದೆ. ಆದರೆ ಆದೇಶ ಅನುಷ್ಠಾನಗೊಳ್ಳಲು ಬಹಳ ಮುಖ್ಯವಾದ ಅಡೆತಡೆ ಗಳಿವೆ. ಕನ್ನಡೇತರ ಮತ್ತು ಕನ್ನಡಿಗ ವಿದ್ಯಾರ್ಥಿಗಳ ಕನ್ನಡ ಭಾಷಾ ಪ್ರೌಢಿಮೆ ಖಚಿತಪಡಿಸಿಕೊಳ್ಳುವ ಸಲುವಾಗಿ ಅಳವಡಿಸಲಾಗಿರುವ ಪಠ್ಯಕ್ರಮ ಬೋಧನೆಗೆ ಕನ್ನಡ ಭಾಷಾ ಬೋಧಕರ ಅವಶ್ಯಕತೆ ಇದ್ದು, ಹಲವಾರು ಶಿಕ್ಷಣ ಸಂಸ್ಥೆಗಳಲ್ಲಿ ಕನ್ನಡ ಭಾಷಾ ಬೋಧಕರ ನೇಮಕಾತಿ ಆಗಿರುವುದಿಲ್ಲ. ಇದು ಭಾಷಾ ವಿಷಯಗಳ ಬೋಧನೆಯ ಬಗ್ಗೆ ಇರುವ ಶಿಕ್ಷಣ ಸಂಸ್ಥೆಗಳ ಅನಾದರ ಅಭಿವ್ಯಕ್ತಿಸುತ್ತದೆ. ಈ ಹಿನ್ನೆಲೆ ವಿಶ್ವವಿದ್ಯಾಲಯದ ಎಲ್ಲ ಕಾಲೇಜುಗಳಲ್ಲಿ ಕನ್ನಡ ಬೋಧನೆಗೆ ಕನ್ನಡ ವಿಷಯ ತಜ್ಞರನ್ನು ಬಳಸಿಕೊಳ್ಳಬೇಕೆಂದು ಆಗ್ರಹಿಸಿದ್ದಾರೆ.

### ವಿಧಾನಸೌಧ ಚಲೋ

**ಬೆಂಗಳೂರು:** ತಮ್ಮ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ವಿಶೇಷಚೇತನರು ಆರಂಭಿಸಿದ್ದ ಬೈಕ್ ರ್‍ಯಾಲಿಯ ಮೂಲಕ ವಿಧಾನಸೌಧ ಚಲೋ ಶುಕ್ರವಾರ ಬೆಂಗಳೂರು ತಲುಪಿದೆ. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕರ್ನಾಟಕ ಅಂಗವಿಕಲರ ರಾಜ್ಯ ಒಕ್ಕೂಟದ ಕಾರ್ಯದರ್ಶಿ ಅರುಣ್‌ಕುಮಾರ.ಎಸ್, ಅಂಗವಿಕಲರ ಹಕ್ಕುಗಳನ್ನು ಈಡೇರಿಸುವಂತೆ 25 ವರ್ಷದಿಂದ ಹೋರಾಟ ಮಾಡುತ್ತ ಬಂದಿದ್ದೇವೆ. ಬೇಡಿಕೆ ಈಡೇರದ ಕಾರಣ ನಮ್ಮ ಮನವಿ ಪತ್ರವನ್ನು ಸರಕಾರಕ್ಕೆ ಸಲ್ಲಿಸುವ ಉದ್ದೇಶದಿಂದ ಮಾ.18ರಂದು ಬಸವನ ಬಾಗೇವಾಡಿಯಿಂದ ಚಲೋ ಆರಂಭಿಸಿ ಹಲವು ಜಿಲ್ಲೆಗಳ ಮೂಲಕ ಮಾ.21ರಂದು ವಿಧಾನಸೌಧಕ್ಕೆ ಬಂದು ತಲುಪಿ ಸರಕಾರದ ಗಮನ ಸೆಳೆಯುವ ಪ್ರಯತ್ನ ಮಾಡಲಾಗಿದೆ ಎಂದರು.

---

ಇದೇ ಮೊದಲ ಬಾರಿಗೆ ಆಯೋಜಿಸಿದ್ದ ಕಾವೇರಿ ಆರತಿ | ಮುಂದಿನ ದಸರಾ ವೇಳೆಗೆ ಕೆಆರ್‌ಎಸ್‌ನಲ್ಲಿಯೂ ಆಯೋಜನೆ

# ಸ್ಯಾಂಕಿ ಕೆರೆಯಲ್ಲಿ ಮನಸೆಳೆದ ಕಾವೇರಿ ಆರತಿ

ವಿಶ್ವಜಲದಿನದ ಅಂಗವಾಗಿ ಮಲ್ಲೇಶ್ವರದ ಸ್ಯಾಂಕಿ ಕೆರೆ ಆವರಣದಲ್ಲಿ ನಡೆದ 'ಕಾವೇರಿ ಆರತಿ'ಗೆ ಉಪಮುಖ್ಯಮಂತ್ರಿ, ಡಿ.ಕೆ ಶಿವಕುಮಾರ್, ಸಚಿವರಾದ ರಾಮಲಿಂಗಾರೆಡ್ಡಿ, ದಿನೇಶ್ ಗುಂಡೂರಾವ್ ಸೇರಿದಂತೆ ಹಲವರ ಸಮ್ಮುಖದಲ್ಲಿ ಚಾಲನೆ ದೊರೆಯಿತು. ▶▶ **ಚಿತ್ರ ಸುಧಾಕರ್ ದೇವರಾಜ್**

ಸ್ಯಾಂಕಿ ಕೆರೆಯಲ್ಲಿ ಶುಕ್ರವಾರ ನಡೆದ ಕಾವೇರಿ ಆರತಿಯ ಮನಮೋಹಕ ದೃಶ್ಯ. ಗಮನ ಸೆಳೆದ ಗಾಯಕಿ ಅನನ್ಯಾ ಭಟ್, ರಘು ದೀಕ್ಷಿತ್ ತಂಡದಿಂದ ಸಂಗೀತ ಕಾರ್ಯಕ್ರಮ.

**ಬೆಂಗಳೂರು:** ನೀರಿನ ಜಾಗೃತಿ ಮೂಡಿಸುವ ಹಾಗೂ ಮುಂದಿನ ಬೇಸಿಗೆಯಲ್ಲಿ ನೀರಿನ ಕೊರತೆಯಾಗದಂತೆ ಪ್ರಾರ್ಥನೆ ಸಲ್ಲಿಸುವ ಉದ್ದೇಶದಿಂದ ಇದೇ ಮೊದಲ ಬಾರಿಗೆ ಆಯೋಜಿಸಿದ್ದ ಬೆಂಗಳೂರಿನ ಸ್ಯಾಂಕಿ ಕೆರೆಯಲ್ಲಿ ಆಯೋಜಿಸಿದ್ದ ಕಾವೇರಿ ಆರತಿ ಅದ್ದೂರಿಯಾಗಿ ನೆರವೇರಿತು.

ವಿಶ್ವಜಲದಿನದ ಅಂಗವಾಗಿ ಮಲ್ಲೇಶ್ವರದ ಸ್ಯಾಂಕಿ ಕೆರೆ ಆವರಣದಲ್ಲಿ ಇದೇ ಮೊದಲ ಬಾರಿಗೆ ನಡೆದ 'ಕಾವೇರಿ ಆರತಿ'ಗೆ ಉಪಮುಖ್ಯಮಂತ್ರಿ, ಡಿ.ಕೆ ಶಿವಕುಮಾರ್, ಸಚಿವರಾದ ರಾಮಲಿಂಗಾರೆಡ್ಡಿ, ದಿನೇಶ್ ಗುಂಡೂರಾವ್ ಸೇರಿದಂತೆ ಹಲವರ ಸಮ್ಮುಖದಲ್ಲಿ ಚಾಲನೆ ದೊರೆಯಿತು. ವಾರಣಾಸಿಯ ಗಂಗಾ ಆರತಿ ಮಾದರಿಯಲ್ಲಿ ಇದೇ ಮೊದಲ ಬಾರಿಗೆ ಬೆಂಗಳೂರಲ್ಲಿ ಕಾವೇರಿ ಆರತಿ ನಡೆಯಿತು.

ಇದಕ್ಕೂ ಮೊದಲು ಡಿಸಿಎಂ ಡಿ.ಕೆ.ಶಿವಕುಮಾರ್ ಅವರು ಶುಕ್ರವಾರ ಭಾಗಮಂಡಲದಿಂದ ತಂದ ಕಾವೇರಿ ಜಲಕ್ಕೆ ಕಾಡುಮಲ್ಲೇಶ್ವರ ದೇವಾಲಯದಲ್ಲಿ ವಿಶೇಷ ಪೂಜೆ ಮಾಡಲಾಯಿತು. ಈ ವೇಳೆ ಗಂಗಾ ದೇವಿಗೆ ಹೋಮ ಸಲ್ಲಿಸಲಾಯಿತು. ಬಳಿಕ 108 ಕಲಶಗಳೊಂದಿಗೆ ಮೆರವಣಿಗೆ ಮೂಲಕ ಸ್ಯಾಂಕಿ ಕೆರೆಗೆ ತರಲಾಯಿತು. ಕಾವೇರಿ ಮಾತೆಗೆ ಡಿಸಿಎಂ ಡಿ.ಕೆ ಶಿವಕುಮಾರ್ ವಿಶೇಷ ಪೂಜೆ ನೆರವೇರಿಸಿದರು. ಸ್ಯಾಂಕಿ ಕೆರೆಯ ತೇಲುವ ವೇದಿಕೆಯಲ್ಲಿ ವಾರಾಣಸಿಯ ಪ್ರಸಿದ್ಧ ತಂಡದಿಂದ ಕಾವೇರಿ ಆರತಿ ಮೂಲಕ ಪ್ರತಿಜ್ಞಾವಿಧಿ ಸ್ವೀಕಾರ ಮಾಡಿತು. ಗಾಯಕಿ ಅನನ್ಯಾ ಭಟ್, ರಘು ದೀಕ್ಷಿತ್ ತಂಡದಿಂದ ಸಂಗೀತ ಕಾರ್ಯಕ್ರಮ ನಡೆದರೆ, 3ಡಿ ಮ್ಯಾಪಿಂಗ್ ಮಾದರಿಯಲ್ಲಿ ವಿದ್ಯುತ್ ಅಲಂಕಾರವಿತ್ತು.

#### ಪ್ರತಿಜ್ಞಾವಿಧಿ ಬೋಧನೆ

ದೈನಂದಿನ ಚಟುವಟಿಕೆಗಳಿಗಾಗಿ ಮಿತವಾಗಿ ನೀರನ್ನು ಬಳಸಿ, ನೀರನ್ನು ಉಳಿಸು ತ್ತೇನೆ. ಮಳೆನೀರು ಕೊಯ್ಲು ವಿಧಾನ ಅನುಸರಿಸುವ ಮೂಲಕ ಅಂತರ್ಜಲ ಮರುಪೂರ್ಣಕ್ಕೆ ಸಹಕರಿಸುತ್ತೇನೆ. ಜಲ ಮೂಲಗಳನ್ನು ರಕ್ಷಿಸುವುದಾಗಿ ಮತ್ತು ಭವಿಷ್ಯದ ಪೀಳಿಗೆಗಾಗಿ ಅವುಗಳ ಸಂರಕ್ಷಣೆಯನ್ನು ಮಾಡುತ್ತೇನೆ. ನಾನು, ನನ್ನ ಕುಟುಂಬ, ಸಮುದಾಯದಲ್ಲಿ ನೀರು ಉಳಿಸುವ ಬಗ್ಗೆ ಜಾಗೃತಿ ಮೂಡಿಸುತ್ತೇನೆ. ಸುಸ್ಥಿರ ಭವಿಷ್ಯದ ನಿರ್ಮಾಣಕ್ಕಾಗಿ ನನ್ನ ಜೀವನದಲ್ಲಿ ಈ ಕ್ರಮಗಳನ್ನು ಅಳವಡಿಸಿಕೊಳ್ಳುವ ಪ್ರತಿಜ್ಞೆ ಮಾಡುತ್ತೇನೆ, ಜೈ ಹಿಂದ್, ಜೈ ಕಾವೇರಿ, ಜೈ ಕರ್ನಾಟಕ ಎಂದು ಶಿವಕುಮಾರ್ ಅವರು ಸಾರ್ವಜನಿಕರಿಗೆ ವಿಶ್ವಜಲ ಪ್ರತಿಜ್ಞಾ ವಿಧಿ ಬೋಧಿಸಿದರು.

ಡಿಸಿಎಂ ಡಿ.ಕೆ. ಶಿವಕುಮಾರ್ ಮಾತನಾಡಿ, ಬರಗಾಲ ಬಂದಾಗ, ಬಾವಿ ಬತ್ತಿದಾಗ ನಮಗೆ ನೀರಿನ ಮೌಲ್ಯ ಅರಿವಾಗುತ್ತದೆ. ಬೆಂಗಳೂರಿನಲ್ಲಿ ಕುಡಿಯುವ ನೀರಿಗಾಗಿ ಕಾವೇರಿ 5ನೇ ಹಂತದ ಯೋಜನೆ ಜಾರಿ ಮಾಡಲಾಗಿದೆ. ಆಮೂಲಕ 110 ಹಳ್ಳಿ ಗಳಿಗೆ ನೀರು ಒದಗಿಸಲಾಗಿದೆ. ಈ ವರ್ಷ ಎಷ್ಟೇ ಕಷ್ಟ ಬಂದರೂ ನೀರಿನ ಸಮಸ್ಯೆ ಎದುರಾಗಬಾರದು ಎಂದು ನಾವು ಸಂಕಲ್ಪ ಮಾಡಿದ್ದೇವೆ ಎಂದರು.

#### ಕಾವೇರಿ ಆರತಿಗೆ ಸಮಿತಿ ರಚನೆ

ಬೆಂಗಳೂರಿನಲ್ಲಿ ಮೊದಲ ಬಾರಿಗೆ ಕಾವೇರಿ ಆರತಿ ಪ್ರಾರಂಭ ಮಾಡಿದ್ದೇವೆ. ಕೆಆರ್ ಎಸ್ ಜಲಾಶಯದ ಬಳಿಯೂ ಕಾವೇರಿ ಆರತಿ ಕಾರ್ಯಕ್ರಮ ಮಾಡಲು ನಾನು ಪ್ರಯತ್ನಿಸುತ್ತಿದ್ದೇನೆ. ಅದಕ್ಕಾಗಿ ಸಮಿತಿಯನ್ನು ರಚಿಸಲಾಗಿದೆ. ದಸರಾ ಸಂದರ್ಭದಲ್ಲಿ ಈ ಕಾರ್ಯಕ್ರಮ ಮಾಡುವ ಯೋಜನೆ ಇದೆ ಎಂದು ಉಪಮುಖ್ಯಮಂತ್ರಿ ಡಿಕೆಶಿ ಹೇಳಿದರು.

ಶನಿವಾರ ವಿಶ್ವ ಜಲದಿನ, ಕಾವೇರಿ ಆರತಿ ಮೂಲಕ ಬೃಹತ್ ಪ್ರತಿಜ್ಞಾ ವಿಧಿ ಸ್ವೀಕಾರ ಕಾರ್ಯಕ್ರಮವಿದೆ. 25ಕ್ಕೂ ಹೆಚ್ಚು ಶಾಸಕರು ಆಗಮಿಸಿದ್ದಾರೆ. ಇವತ್ತು ತಲಕಾವೇರಿಯಿಂದ ನೀರು ತಂದಿದ್ದೇವೆ. ಇಲ್ಲಿ ಸುತ್ತಮುತ್ತ ಪೌರಾಣಿಕ ದೇವಾಲಯಗಳಿವೆ, ಶಕ್ತಿ ದೇವತೆಗಳು ಇವೆ. ನೀರಿಲ್ಲದೇ ಯಾರ ಬದುಕಿಲ್ಲ, ಹಾಗಾಗಿ ನೀರನ್ನು ಉಳಿಸಬೇಕಿದೆ. ದಸರಾ ವೇಳೆಗೆ ಕೆಆರ್‌ಎಸ್ ಜಲಾಶಯದ ಕೆಳಗೆ ಕಾವೇರಿ ಆರತಿ ಕಾರ್ಯಕ್ರಮ ಮಾಡುತ್ತೇವೆ. ಎಷ್ಟೇ ಕಷ್ಟ ಬಂದರೂ ಬೆಂಗಳೂರಿಗೆ ಬೇಸಿಗೆಯಲ್ಲಿ ನೀರಿನ ಅಭಾವ ಉಂಟಾಗಬಾರದು ಅಂತಾ ಸಂಕಲ್ಪ ಮಾಡೋಣ.

**-ಡಿ.ಕೆ.ಶಿವಕುಮಾರ್**, ಉಪಮುಖ್ಯಮಂತ್ರಿ

---

ಮಹಿಳಾ ಗ್ರಾಮಸಭೆ, ಮಹಿಳಾ ಸಪ್ತಾಹ ಕಾರ್ಯಕ್ರಮ

## ಮಹಿಳೆಯರ ಆರ್ಥಿಕ ಸಾಮರ್ಥ್ಯ ವೃದ್ಧಿ

ವಿಶ್ವ ಮಹಿಳಾ ದಿನಾಚರಣೆ ಪ್ರಯುಕ್ತ ಬಾಗಲೂರು ಗ್ರಾ.ಪಂ.ವತಿಯಿಂದ ಆಯೋಜಿಸಿದ್ದ 'ಮಹಿಳಾ ಗ್ರಾಮಸಭೆ' ಮತ್ತು 'ಮಹಿಳಾ ಸಪ್ತಾಹ' ಕಾರ್ಯಕ್ರಮದಲ್ಲಿ ನಾನಾ ಕ್ಷೇತ್ರದಲ್ಲಿ ಸಾಧನೆ ಮಾಡಿದ ಮಹಿಳಾ ಸಾಧಕರನ್ನು ಸನ್ಮಾನಿಸಲಾಯಿತು.

**ಬೆಂಗಳೂರು:** ಮಹಿಳೆಯರು ರಾಜಕೀಯ, ಸಾಮಾಜಿಕ, ಶೈಕ್ಷಣಿಕ, ವಿಜ್ಞಾನ-ತಂತ್ರಜ್ಞಾನ ಸೇರಿದಂತೆ ವಿವಿಧ ಕ್ಷೇತ್ರದಲ್ಲಿ ಅತ್ಯುತ್ತಮ ಸಾಧನೆ ಮಾಡುತ್ತಿದ್ದು, ಆರ್ಥಿಕ ಶಕ್ತಿಯಾಗಿ ಹೊರಹೊಮ್ಮುತ್ತಿದ್ದಾರೆ ಎಂದು ಬಾಗಲೂರು ಗ್ರಾ.ಪಂ ಅಧ್ಯಕ್ಷ ಎ.ಕೆಂಪೇಗೌಡ ಪ್ರಶಂಸೆ ವ್ಯಕ್ತಪಡಿಸಿದರು.

ವಿಶ್ವ ಮಹಿಳಾ ದಿನಾಚರಣೆ ಪ್ರಯುಕ್ತ ಬಾಗಲೂರು ಗ್ರಾ.ಪಂ.ವತಿಯಿಂದ ಗುರುವಾರ ಆಯೋಜಿಸಿದ್ದ 'ಮಹಿಳಾ ಗ್ರಾಮಸಭೆ' ಮತ್ತು 'ಮಹಿಳಾ ಸಪ್ತಾಹ' ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ರಾಷ್ಟ್ರಪತಿ ದ್ರೌಪದಿ ಮುರ್ಮು, ಮಾಜಿ ಪ್ರಧಾನಿ ಇಂದಿರಾ ಗಾಂಧಿ, ಮಾಜಿ ರಾಷ್ಟ್ರಪತಿ ಪ್ರತಿಭಾ ಪಾಟೀಲ್ ರಾಜಕೀಯ ಕ್ಷೇತ್ರದಲ್ಲಿ ಅತ್ಯುತ್ತಮ ಸಾಧನೆ ಮಾಡಿರುವ ದೇಶದ ಅಪ್ರತಿಮ ಮಹಿಳಾ ಸಾಧಕಿಯರಾಗಿದ್ದಾರೆ. ಸುದೀರ್ಘ ಅಂತರಿಕ್ಷ ಯಾನ ಮುಗಿಸಿ ಎರಡು ದಿನಗಳ ಹಿಂದೆ ಧರೆಗೆ ಮರಳಿದ ಸುನಿತಾ ವಿಲಿಯಮ್ಸ್, ಬಾಹ್ಯಾಕಾಶ ಕ್ಷೇತ್ರದ ಸಾಧನೆ ಹಾದಿಯಲ್ಲಿ ತಮ್ಮ ಪ್ರಾಣವನ್ನೇ ಬಲಿದಾನ ಮಾಡಿದ ಕಲ್ಪನಾ ಚಾವ್ಲಾ ಅವರ ಸಾಧನೆ ಜಗತ್ತನ್ನೇ ನಿಬ್ಬೆರಗಾಗುವಂತೆ ಮಾಡಿದೆ ಎಂದರು.

ಬೆಂಗಳೂರು ನಗರ ಜಿಪಂ ಸಿಇಒ ಲತಾಕುಮಾರಿ ಸಹ ಓರ್ವ ಸಾಧಕ ಮಹಿಳೆಯಾಗಿದ್ದು, ಅತ್ಯುತ್ತಮ ಕಾರ್ಯ ವೈಖರಿ, ಜನಸ್ಪಂದನೆ ಮೂಲಕ ಜನಪ್ರಿಯತೆ ಗಳಿಸಿದ್ದಾರೆ. ಬಾಗಲೂರು ಗ್ರಾಮದಲ್ಲಿ ಎನ್.ಎಂ.ಆರ್.ಎಲ್. ಭವನ ನಿರ್ಮಾಣಕ್ಕೆ 16 ಲಕ್ಷ ರು.ಗಳ ಅನುದಾನ ನೀಡಿ ಸಹಕರಿಸಿದ ಅವರನ್ನು ಈ ಸಂದರ್ಭದಲ್ಲಿ ಸ್ಮರಿಸಬೇಕು ಎಂದರು.

ಕಾರ್ಯಕ್ರಮದಲ್ಲಿ ಗ್ರಾ.ಪಂ ಮಾಜಿ ಅಧ್ಯಕ್ಷ ಡಿ.ಜಗನ್ನಾಥ್, ಪದ್ಮಾವತಿ ವೆಂಕಟರಾಜು, ಗ್ರಾ.ಪಂ ಉಪಾಧ್ಯಕ್ಷೆ ರಫೀಯಾ ಸುಲ್ತಾನ್ ದಸ್ತಗಿರಿ, ಬಾಗಲೂರು ಪ್ರಾಕೃಪ ಸಹಕಾರ ಸಂಘದ ಅಧ್ಯಕ್ಷ ಎ. ವೆಂಕಟರಾಜು, ಗ್ರಾ.ಪಂ ಸದಸ್ಯರು ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳಿದ್ದರು, ಇಲಾಖೆಯಲ್ಲಿ ಮಹಿಳೆಯರಿಗೆ ಲಭ್ಯವಿರುವ ಸೌಲಭ್ಯಗಳ ಕುರಿತು ಮಾಹಿತಿ ನೀಡಿದರು.

## ಇಲಾಖೆಯ ಪ್ರಗತಿಗೆ ಎಲ್ಲರೂ ಶ್ರಮಿಸಿ

ನಗರದ ಬಾಲ ಭವನದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಪ್ರಗತಿ ಪರಿಶೀಲನಾ ಸಭೆ ನಡೆಯಿತು. ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಉಪಸ್ಥಿತರಿದ್ದರು.

**ಬೆಂಗಳೂರು:** ಅಂಗನವಾಡಿ ಕೇಂದ್ರಗಳಿಗೆ ಸರಬರಾಜು ಮಾಡುತ್ತಿರುವ ಪೂರಕ ಪೌಷ್ಟಿಕ ಆಹಾರ ಗುಣಮಟ್ಟದ ನಿಗಾವಹಿಸಬೇಕು ನಿರ್ಲಕ್ಷ್ಯ ವಹಿಸಿದರೆ ಆಯಾಯ ಉಪ ನಿರ್ದೇಶಕರನ್ನು ಹೊಣೆಗಾರರನ್ನಾಗಿ ಮಾಡಲಾಗುವುದು ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಖಾತೆ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಎಚ್ಚರಿಕೆ ನೀಡಿದ್ದಾರೆ.

ಬಾಲ ಭವನದಲ್ಲಿ ನಡೆದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಜಿಲ್ಲಾ ಉಪ ನಿರ್ದೇಶಕರು, ಜಿಲ್ಲಾ ನಿರೂಪಣಾಧಿಕಾರಿಗಳು ಮತ್ತು ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳೊಂದಿಗಿನ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿದ ಅವರು, ಅಂಗನವಾಡಿಗಳಿಗೆ ಪೂರೈಕೆ ಮಾಡುತ್ತಿರುವ ಆಹಾರ ಕಳಪೆ ಗುಣಮಟ್ಟದ್ದಾಗಿದ್ದರೆ ಕೂಡಲೇ ಪರಿಶೀಲಿಸಿ, ವಾಪಸ್ ಕಳುಹಿಸಲು ಹಿಂದೇಟು ಹಾಕಬಾರದು. ಮಕ್ಕಳಿಗೆ ಗುಣಮಟ್ಟದ ಆಹಾರ ಪೂರೈಕೆ ಆಗಬೇಕೆನ್ನುವುದು ಎಲ್ಲರ ಆಶಯ. ಹಾಗಾಗಿ, ಈ ಬಗ್ಗೆ ಎಚ್ಚರ ವಹಿಸಬೇಕು ಎಂದರು. ಪೋಷಣ್ ಟ್ರ್ಯಾಕರ್ ಕುರಿತು ಜಿಲ್ಲಾವಾರು ಮಾಹಿತಿ ಪಡೆದ ಸಚಿವರು, ಇಲಾಖೆಯ ಕಾರ್ಯಕ್ರಮ, ಯೋಜನೆ ಸೂಕ್ತ ರೀತಿಯಲ್ಲಿ ಜಾರಿ ಮಾಡದ ಉಪ ನಿರ್ದೇಶಕರನ್ನು ತೀವ್ರ ತರಾಟೆಗೆ ತೆಗೆದು ಕೊಂಡರು. ಪೋಷಣ್ ಟ್ರ್ಯಾಕರ್‌ಗೆ ಸಂಬಂಧಿಸಿದಂತೆ ಉಪ ನಿರ್ದೇಶಕರು, ಪ್ರತಿದಿನ ಸಿಡಿಪಿಒಗಳ ಸಭೆ ನಡೆಸಿ, ಪ್ರಗತಿ ಪರಿಶೀಲಿಸುವಂತೆ ಸೂಚಿಸಿದರು.

#### ನೇಮಕಾತಿ ಅಕ್ರಮ ತನಿಖೆಗೆ ಆದೇಶ

ಬೀದರ್ ಜಿಲ್ಲೆಯಲ್ಲಿ ಅಂಗನವಾಡಿ ಕಾರ್ಯಕರ್ತೆಯರ ಹಾಗೂ ಸಹಾಯಕಿಯರ ನೇಮಕಾತಿಯಲ್ಲಿ ಅಕ್ರಮ ನಡೆದಿರುವ ಆರೋಪ ಕೇಳಿ ಬಂದಿರುವ ಹಿನ್ನೆಲೆ ತನಿಖೆಗೆ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಆದೇಶಿಸಿದ್ದಾರೆ.

## ಕ್ರೀಡಾ ಪ್ರತಿಭೆಗಳಿಗೆ ಉದ್ಯೋಗ ಸಿಗುತ್ತಿಲ್ಲ: ಶ್ರೀನಿವಾಸಗೌಡ

**ಬೆಂಗಳೂರು:** ದೇಶದ ಕ್ರೀಡಾ ಪ್ರತಿಭೆಗಳಿಗೆ ಸರಿಯಾದ ವಯಸ್ಸಿಗೆ ಉದ್ಯೋಗ ಸಿಗದೆ ಅವಲಂಬಿತರಾಗಿ ಜೀವನ ನಡೆಸಬೇಕಾಗಿದೆ ಎಂದು ಬಿಇಟಿಎಲ್ ಟೋಲ್ ವ್ಯವಸ್ಥಾಪಕ ಶ್ರೀನಿವಾಸಗೌಡ ಹೇಳಿದರು.

ಇಲೆಕ್ಟ್ರಾನಿಕ್ ಸಿಟಿ ಟೋಲ್ ಕಚೇರಿಯಲ್ಲಿ ಪ್ಯಾರಾ ಥ್ರೋಬಾಲ್ ಟೀಮ್ ಇಂಡಿಯಾ ಕ್ಯಾಪ್ಟನ್ ರೇಣುಕಾ ಶ್ರೀನಿವಾಸ್‌ಗೆ ಅಭಿನಂದನೆ ಸಲ್ಲಿಸಿ ಮಾತನಾಡಿ, ಕ್ರಿಕೆಟ್, ಫುಟ್‌ಬಾಲ್, ಹಾಕಿ ಮುಂತಾದ ಕ್ರೀಡೆಗಳಲ್ಲಿ ಬದುಕು ಕಟ್ಟಿಕೊಳ್ಳಲು ಲಕ್ಷಾಂತರ ಯುವ ಜನತೆ ಹಾತೊರೆಯುತ್ತಾರೆ. ಅವಕಾಶ ವಂಚಿತರಾಗಿ ಕನಿಷ್ಠ ಪದವಿ ವ್ಯಾಸಂಗ ಮುಗಿಸದೆ ಪರಿತಪಿಸಬೇಕಾಗಿದೆ. ಸರಕಾರ ಈ ಬಗ್ಗೆ ಕಾಳಜಿ ವಹಿಸಿ ಯುವ ಜನತೆಯ ಉದ್ಯೋಗದ ಬಗ್ಗೆ ಚರ್ಚಿಸಿ ಉತ್ತಮ ತೀರ್ಮಾನ ಕೈಗೊಳ್ಳಬೇಕೆಂದು ಕೋರಿದರು.

ರೇಣುಕಾ ಶ್ರೀನಿವಾಸ್ ಮಾತನಾಡಿ, ಬದಲಿ ಆಟಗಾರ್ತಿಯಾಗಿ ಭಾರತ ತಂಡಕ್ಕೆ ಸೇರಿದ ನಾನು ಭಾರತ ತಂಡದ ನಾಯಕಿ ಆಗುವ ಕನಸು ಕಂಡಿರಲಿಲ್ಲ. ಆಡಬೇಕು ಗೆಲ್ಲಬೇಕು ಎಂಬ ಛಲದೊಂದಿಗೆ ತಂಡ ಮುನ್ನಡೆಸಲು ಸಹ ಆಟಗಾರ್ತಿಯರನ್ನು ವಿಶ್ವಾಸಕ್ಕೆ ಪಡೆಯುವ ಕಲೆ ಕರಗತವಾಯಿತು. ಈವರೆಗಿನ ಎಲ್ಲ ಗೆಲುವು ಎಲ್ಲರೂ ಸಮನಾಗಿ ಹಂಚಿಕೊಂಡಿದ್ದೇವೆ. ಪ್ಯಾರಾ ಒಲಂಪಿಕ್ಸ್‌ನಲ್ಲಿ ಚಿನ್ನ ಗೆಲ್ಲುವ ಅಚಲ ವಿಶ್ವಾಸ ವಿದೆ ಎಂದರು. ಕ್ಯಾಪ್ಟನ್ ಬಲದೇವಸಿಂಗ್ ಮಾತನಾಡಿ, ಸೇನೆಯಲ್ಲಿ 35 ವರ್ಷ ಸೇವೆ ಸಲ್ಲಿಸಿ ಹಲವು ಯುದ್ಧದಲ್ಲಿ ಪಾಲ್ಗೊಂಡಿದ್ದೇನೆ ಎಂದರು.

---

ಅಖಿಲ ಭಾರತೀಯ ಪ್ರತಿನಿಧಿ ಸಭಾದ ಸಮಾವೇಶದಲ್ಲಿ ಆರ್‌ಎಸ್‌ಎಸ್ ಜಂಟಿ ಕಾರ್ಯದರ್ಶಿ ಮುಕುಂದ ಹೇಳಿಕೆ

# ಕ್ಷೇತ್ರ ಪುನರ್ ವಿಂಗಡಣೆಯಲ್ಲಿ ಆರ್‌ಎಸ್‌ಎಸ್ ಪಾತ್ರವಿಲ್ಲ

**ಬೆಂಗಳೂರು:** ಅಖಿಲ ಭಾರತೀಯ ಪ್ರತಿನಿಧಿ ಸಭಾದ ಮೂರು ದಿನಗಳ ಸಮಾವೇಶವನ್ನು ಶುಕ್ರವಾರ ಚನ್ನೇನಹಳ್ಳಿಯ ಜನಸೇವಾ ವಿದ್ಯಾ ಕೇಂದ್ರದಲ್ಲಿ ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ಉದ್ಘಾಟಿಸಿದರು.

ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಆರ್‌ಎಸ್‌ಎಸ್ ಜಂಟಿ ಕಾರ್ಯದರ್ಶಿ ಸಿ.ಆರ್. ಮುಕುಂದ, ಕೆಲವು ಸಮಕಾಲೀನ ಮತ್ತು ಜ್ವಲಂತ ಸಮಸ್ಯೆಗಳ ಕುರಿತು ತೀವ್ರ ನಿರ್ಧಾರಗಳು ಸಭೆಯಲ್ಲಿ ಚರ್ಚಿಸಲಾಗುವುದು, ಇದರಲ್ಲಿ ಆರ್‌ಎಸ್‌ನ 32 ಅಂಗಸಂಸ್ಥೆಗಳ ಮುಖ್ಯಸ್ಥರು ಭಾಗವಹಿಸಲಿದ್ದಾರೆ ಎಂದರು.

ಆರ್‌ಎಸ್‌ಎಸ್ ತನ್ನ ಶತಮಾನೋತ್ಸವ ವರ್ಷದಲ್ಲಿ ತನ್ನ ಕೆಲಸವನ್ನು ವಿಸ್ತರಿಸುವತ್ತ ಕೆಲಸ ಮಾಡುತ್ತಿದ್ದರೂ, ಅದು ಗ್ರಾಮೀಣ ಮಂಡಲಗಳ ಮೇಲೆ ಹೆಚ್ಚು ಗಮನಹರಿಸುತ್ತಿದೆ. ಆಡಳಿತಾತ್ಮಕ ತಿಳುವಳಿಕೆಯ ಪ್ರಕಾರ, ದೇಶವನ್ನು 58,981 ಗ್ರಾಮೀಣ ಮಂಡಲಗಳಾಗಿ ವಿಂಗಡಿಸಲಾಗಿದೆ, ಅವುಗಳಲ್ಲಿ 30,717 ಮಂಡಲಗಳಲ್ಲಿ ದೈನಂದಿನ ಶಾಖೆಗಳು ಮತ್ತು 9,200 ಮಂಡಲಗಳಲ್ಲಿ ಸಾಪ್ತಾಹಿಕ ಮಿಲನಗಳು ನಡೆಯುತ್ತಿವೆ. ಒಟ್ಟು 39,917 ಕಳೆದ ವರ್ಷಕ್ಕೆ ಹೋಲಿಸಿದರೆ ಶೇ.67 ಹೆಚ್ಚಳವಾಗಿದೆ. ಸಂಘದ ಕೆಲಸಕ್ಕೆ ಸೇರುವ ಯುವಕರ ಸಂಖ್ಯೆಯಲ್ಲಿನ ಹೆಚ್ಚಳ. ಪ್ರತಿ ವರ್ಷ, ಲಕ್ಷಾಂತರ ಯುವಕರು, ವಿಶೇಷವಾಗಿ 14-25 ವರ್ಷ ವಯಸ್ಸಿನವರು, ಸ್ವಯಂ ಸೇವಕರಾಗಿ ಆರ್‌ಎಸ್‌ಎಸ್ ಸೇರುತ್ತಾರೆ. ದೇಶಾದ್ಯಂತ ಒಟ್ಟು 4,415 ಪ್ರಾರಂಭಿಕ ವರ್ಗಗಳಲ್ಲಿ 2,22,962 ಜನರು ಭಾಗವಹಿಸಿದ್ದರು, ಅವರಲ್ಲಿ 1,63,000 ಜನರು 14-25 ವರ್ಷ ವಯಸ್ಸಿನವರು. ಈ ವರ್ಗಗಳಲ್ಲಿ 20,000 ಕ್ಕೂ ಹೆಚ್ಚು ಜನರು 40 ವರ್ಷಕ್ಕಿಂತ ಮೇಲ್ಪಟ್ಟವರು ಎಂದು ಮಾಹಿತಿ ನೀಡಿದರು.

ಚನ್ನೇನಹಳ್ಳಿಯ ಜನಸೇವಾ ವಿದ್ಯಾ ಕೇಂದ್ರದಲ್ಲಿ ನಡೆಯುತ್ತಿರುವ ಅಖಿಲ ಭಾರತೀಯ ಪ್ರತಿನಿಧಿ ಸಭಾದ ಮೂರು ದಿನಗಳ ಬೃಹತ್ ಸಮಾವೇಶವನ್ನು ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ಭಾರತಾಂಬೆಗೆ ಪುಷ್ಪ ನಮನ ಸಲ್ಲಿಸುವ ಮೂಲಕ ಉದ್ಘಾಟಿಸಿದರು.

**ಕ್ಷೇತ್ರ ವಿಂಗಡನೆಯಲ್ಲಿ ಆರ್‌ಎಸ್‌ಎಸ್ ಪಾತ್ರವಿಲ್ಲ:** ಲೋಕಸಭಾ ಕ್ಷೇತ್ರಗಳ ಸಂಖ್ಯೆ ಹೆಚ್ಚಿಸುವ ಅಥವಾ ನಿಗದಿಪಡಿಸುವ ನಿರ್ಧಾರ ಕೇಂದ್ರ ಸರಕಾರ ತೆಗೆದುಕೊಳ್ಳುತ್ತದೆ ಅದರಲ್ಲಿ ಆರ್‌ಎಸ್‌ಎಸ್‌ನ ಯಾವ ಪಾತ್ರವಿಲ್ಲ. ಕ್ಷೇತ್ರ ಪುನರ್ ವಿಂಗಡಣೆ ನಂತರವೂ ದಕ್ಷಿಣ ರಾಜ್ಯಗಳು ಲೋಕಸಭಾ ಕ್ಷೇತ್ರಗಳ ಸಂಖ್ಯೆ ಉಳಿಸಿಕೊಳ್ಳುತ್ತವೆ ಎಂದು ಕೇಂದ್ರ ಸಚಿವರು ಸ್ಪಷ್ಟಪಡಿಸಿದ್ದಾರೆ. ಹೀಗಿರುವಾಗ ಉತ್ತರ ದಕ್ಷಿಣ ವಿಭಾಗದ ಚರ್ಚೆ ಸೂಕ್ತವಲ್ಲ. ಇದನ್ನು ರಾಜಕೀಯವಾಗಿ ಬಳಸಿಕೊಳ್ಳುವ ಅಗತ್ಯವಿಲ್ಲ. ಒಂದು ಸಂಘಟನೆಯಾಗಿ, ರಾಷ್ಟ್ರೀಯ ಏಕತೆಗೆ ಸವಾಲು ಹಾಕುತ್ತಿರುವ ಶಕ್ತಿಗಳ ಬಗ್ಗೆ, ವಿಶೇಷವಾಗಿ ಉತ್ತರ ದಕ್ಷಿಣ ವಿಭಜನೆ ಹೆಚ್ಚಿಸುವ ಶಕ್ತಿಗಳ ಬಗ್ಗೆ ನಾವು ಕಳವಳ ಹೊಂದಿದ್ದೇವೆ, ಅದು ಕ್ಷೇತ್ರ ಪುನರ್‌ವಿಂಗಡಣೆಯಾಗಲಿ ಅಥವಾ ಭಾಷೆಗಳಾಗಲಿ. ವಿಚಾರ ಪರಿವಾರಗೆ ಸಂಬಂಧಿಸಿದ ವಿವಿಧ ಸಂಘಟನೆಗಳ ಆರ್‌ಎಸ್‌ಎಸ್ ಸ್ವಯಂ ಸೇವಕರು ಮತ್ತು ಕಾರ್ಯಚಟುವಟಿಕೆಗಳು ವಿಶೇಷವಾಗಿ ದಕ್ಷಿಣ ರಾಜ್ಯಗಳಲ್ಲಿ ಸಾಮರಸ್ಯ ತರಲು ಕೈಲಾದಷ್ಟು ಪ್ರಯತ್ನಿಸುತ್ತಿವೆ ಎಂದರು.

#### ಮಣಿಪುರ ಸಹಜ ಸ್ಥಿತಿಗೆ ತರಲು ಪ್ರಯತ್ನ

ಮಣಿಪುರದಲ್ಲಿ ನಡೆಯುತ್ತಿರುವ ಘಟನೆ ಬಗ್ಗೆ ಆರ್‌ಎಸ್‌ಎಸ್ ವಿಷಾದ ವ್ಯಕ್ತಪಡಿಸುತ್ತದೆ, ಕೇಂದ್ರ ಸರಕಾರ ಸಮಸ್ಯ ಬಗೆಹರಿಸಲು ರಾಜಕೀಯವಗಿ ಮತ್ತು ಆಡಳಿತಾತ್ಮಕ ಕ್ರಮ ಕೈಗೊಂಡಿರುವುದು ಪರಿಸ್ಥಿತಿ ಸುಧಾರಿಸಲು ಸಹಾಯಕಾಗಬಹುದು. ಸಮಾಜಿಕ ಸಂಘಟನೆಯಾಗಿ ಹೋರಾಡುತ್ತಿರುವ ವಿವಿಧ ಬುಡಕಟ್ಟು ನಾಯಕರ ನಡುವೆ ಮಾತುಕತೆ ನಡೆಸಲು ಆರ್‌ಎಸ್‌ಎಸ್ ಪ್ರಯತ್ನಿಸುತ್ತಿದೆ ಸ್ವಲ್ಪ ಸಮಯ ತೆಗೆದುಕೊಂಡರು ಪರಿಸ್ಥಿತಿ ಸಹಜ ಸ್ಥಿತಿಗೆ ಬರುವ ವಿಶ್ವಾಸವಿದೆ ಎಂದು ಮುಕುಂದ ತಿಳಿಸಿದರು.

ಶಾಲೆಗಳ ಪಠ್ಯದಲ್ಲಿ ಹಿಂದಿ ಹೇರಿಕೆ, ರು. ಚಿಹ್ನೆ ಬಳಕೆ ಸಂಬಂಧಿಸಿದಂತೆ ಹಲವು ಸಮಸ್ಯೆಗಳು ರಾಜಕೀಯ ಪ್ರೇರಿತವಾಗಿವೆ. ಈ ಸಮಸ್ಯೆಗಳ ಪರಿಹರಿಸಲು ರಾಜಕೀಯ ನಾಯಕರಿಗಿಂತ ಸಾಮಾಜಿಕ ನಾಯಕರು ಸೂಕ್ತ, ಸಮಸ್ಯೆಯ ಮೂಲ ಅರಿತು ಅವುಗಳಿಗೆ ರಚನಾತ್ಮಕವಾಗಿ ಪರಿಹಾರ ಕಂಡುಕೊಳ್ಳಬೇಕಿದೆ. ಪ್ರತಿಯೊಬ್ಬರೂ ತಮ್ಮ ಮಾತೃಭಾಷೆ ಕಲಿಯಬೇಕು ಅದರ ಜತೆಗೆ ಪ್ರದೇಶದ ಪ್ರಾದೇಶಿಕ ಅಥವಾ ಮಾರುಕಟ್ಟೆ ಭಾಷೆ ಮತ್ತು ವೃತ್ತಿ ಭಾಷೆ ಕಲಿಯಬೇಕು.

**-ಸಿ.ಆರ್.ಮುಕುಂದ,**
ಆರ್‌ಎಸ್‌ಎಸ್ ಜಂಟಿ ಕಾರ್ಯದರ್ಶಿ

# ವಿಶ್ವದ ಗಮನ ಸೆಳೆಯುತ್ತಿರುವ ಕಾಪು ದೇವಳ

## ಚಂದ್ರಶೇಖರ ಸ್ವಾಮೀಜಿ ಕುಟುಂಬ ಸಮೇತ ಕಾಪು ದೇವಳಕ್ಕೆ ಭೇಟಿ | ಮಾರಿಗುಡಿ ದೇವಸ್ಥಾನದ ವಾಸ್ತುಶಿಲ್ಪಕ್ಕೆ ಮೆಚ್ಚುಗೆ

**ಬೆಂಗಳೂರು:** ಭಕ್ತರ ಕಷ್ಟ ಸುಖ ಅಮ್ಮನ ಮಡಿಲಿನಲ್ಲಿಯೇ ಆಲಿಸುವಂತಹ ವಾತಾವರಣ ಕಾಪು ಹೊಸಮಾರಿಗುಡಿಯ ಸಾನ್ನಿಧ್ಯದಲ್ಲಿ ಕಾಣಬಹುದು. ನೂತನವಾಗಿ ನಿರ್ಮಾಣವಾಗಿರುವ ದೇಗುಲದ ವಾಸ್ತುಶಿಲ್ಪವು ಅದ್ಭುತವಾಗಿ ವಿಶ್ವದ ಗಮನ ಸೆಳೆಯುತ್ತಿದೆ ಎಂದು ಆಧ್ಯಾತ್ಮಿಕ ಗುರು, ಅಂತಾರಾಷ್ಟ್ರೀಯ ವಾಸ್ತುತಜ್ಞ ಚಂದ್ರಶೇಖರ ಸ್ವಾಮೀಜಿ ಹೇಳಿದರು.

ಜೀರ್ಣೋದ್ಧಾರಗೊಂಡಿರುವ ಕಾಪು ಶ್ರೀಹೊಸಮಾರಿಗುಡಿಗೆ ಕುಟುಂಬ ಸಹಿತ ಭೇಟಿ ನೀಡಿ ವಿಶೇಷ ಪ್ರಾರ್ಥನೆ ಸಲ್ಲಿಸಿ ಮಾತನಾಡಿದ ಅವರು, ತುಳುನಾಡಿನ ಪರಂಪರೆಗೆ ಎಲ್ಲಿಯೂ ಚ್ಯುತಿಬಾರದೇ ಇಷ್ಟಾರ್ಥ ಸಿದ್ಧಿಸುವ ಕ್ಷೇತ್ರವಾಗಿರುವ ಕಾಪುವಿನ ಅಮ್ಮನನ್ನು ಆರಾಧಿಸಿಕೊಂಡು ಭಕ್ತಿಯ ಶಕ್ತಿ ನೀಡುವಂತಹ ಕ್ಷೇತ್ರವಾಗಲಿ ಎಂದು ಆಶಿಸಿದರು.

ಈ ವೇಳೆ ಜ್ಯೋತಿಷಿ ವಿಶ್ವನಾಥ ಭಟ್.ಎಸ್.ಕೋಡಿ, ಉಷಾ ವಿಶ್ವನಾಥ ಭಟ್, ಮುಲ್ಕಿ ಚಂದ್ರಶೇಖರ ಸ್ವಾಮೀಜಿ ಆಶ್ರಮದ ನಿರ್ದೇಶಕ ರಾಹುಲ್ ಚಂದ್ರಶೇಖರ್, ಸಂಚಾಲಕ ಗುರುಪ್ರಸಾದ್ ಭಟ್ ಮುಂಡ್ಕೂರು, ಪುನೀತ್ ಕೃಷ್ಣ ಮುಲ್ಕಿ, ಭದ್ರತಾ ಸಿಬ್ಬಂದಿ ಗಣೇಶ್ ಆಳ್ವ, ವಿನಯ ಶೆಟ್ಟಿ, ಸಂಜಯ ಕುಮಾರ್ ದೇವಸ್ಥಾನದ ಅಭಿವೃದ್ಧಿ ಸಮಿತಿ ಅಧ್ಯಕ್ಷ ಕೆ. ವಾಸುದೇವ ಶೆಟ್ಟಿ, ಪ್ರಧಾನ ಕಾರ್ಯದರ್ಶಿ ರಮೇಶ್ ಹೆಗ್ಡೆ ಕಲ್ಯ, ವ್ಯವಸ್ಥಾಪನಾ ಸಮಿತಿಯ ಸದಸ್ಯರುಗಳಾದ ಶೇಖರ್ ಸಾಲ್ಯಾನ್, ಮನೋಹರ್ ರಾವ್ ಕಲ್ಯ, ನವದುರ್ಗಾ ಲೇಖನ ಯಜ್ಞ ಸಮಿತಿ ಮಹಿಳಾ ವಿಭಾಗ ಅಧ್ಯಕ್ಷೆ ಗೀತಾಂಜಲಿ ಎಮ್ .ಸುವರ್ಣ, ಕಾರ್ಯಾಧ್ಯಕ್ಷೆ ಸಾವಿತ್ರಿ ಗಣೇಶ್, ಪ್ರಬಂಧಕ ಗೋವರ್ಧನ್ ಸೇರಿಗಾರ್ ಮತ್ತು ಸಿಬ್ಬಂದಿ ಲಕ್ಷ್ಮಣ್ ಶೆಟ್ಟಿ ಮಂಡೇಡಿ ಉಪಸ್ಥಿತರಿದ್ದರು.

ಕಾಪು ಶ್ರೀಹೊಸಮಾರಿಗುಡಿಗೆ ಕುಟುಂಬ ಸಹಿತ ಭೇಟಿ ನೀಡಿದ ವಾಸ್ತುತಜ್ಞ ಚಂದ್ರಶೇಖರ ಸ್ವಾಮೀಜಿ ಅವರನ್ನು ಗೌರವಿಸಿದರು.

### ಮಕ್ಕಳಿಗೆ ತಾಯಿ ಮಡಿಲೇ ಶ್ರೇಷ್ಠ

**ಮಕ್ಕಳಿಗೆ ತಾಯಿಯ ಮಡಿಲೇ ಶ್ರೇಷ್ಠ. ಅಂತೆಯೇ ಕಾಪುವಿನ ಅಮ್ಮನ ಸನ್ನಿಧಾನದಲ್ಲಿ ಕಷ್ಟ ಹೇಳಿಕೊಂಡಲ್ಲಿ ಸುಖ ಶಾಂತಿ ನೆಮ್ಮದಿಯನ್ನು ಪ್ರಸಾದದ ರೂಪದಲ್ಲಿ ಕರುಣಿಸುವ ಈ ಕ್ಷೇತ್ರದ ವೈಭವವು ಜಗತ್ತಿಗೆ ಪಸರಿಸಬೇಕು. ಭಕ್ತರು ತಮ್ಮ ಶ್ರದ್ಧಾಪೂರ್ವಕವಾಗಿ ಸಂಘಟನಾತ್ಮಕವಾಗಿ ದೇವಳದ ನಿರ್ಮಾಣದಲ್ಲಿ ತೊಡಗಿಕೊಂಡಿದ್ದಾರೆ. ಧಾರ್ಮಿಕ ಚಿಂತನೆ ಜಾಗೃತಿಗೊಳಿಸುವ ಇಂತಹ ಕ್ಷೇತ್ರಗಳ ಪಾವಿತ್ರತೆ ಉಳಿಸಿ ಬೆಳೆಸಿ ಮುಂದಿನ ಪೀಳಿಗೆಗೆ ಧರ್ಮ ಬೋಧನಾ ಕ್ಷೇತ್ರವಾಗಬೇಕು, ನಮ್ಮ ಸೇವಾಶ್ರಮದಿಂದ ದೇಗುಲಗಳ ಜೀರ್ಣೋದ್ಧಾರಕ್ಕೆ ಮಹತ್ವದ ಯೋಜನೆ ರೂಪಿಸಿಕೊಂಡು ಹಂತ ಹಂತವಾಗಿ ಕಾರ್ಯರೂಪಕ್ಕೆ ತರಲಾಗುತ್ತಿದೆ. ಕರಾವಳಿಯ ಎಲ್ಲಾ ಧಾರ್ಮಿಕ ಕ್ಷೇತ್ರಗಳ ಪುನರುತ್ಥಾನಕ್ಕೆ ಆದ್ಯತೆ ನೀಡಲಾಗುತ್ತಿದೆ ಎಂದು ಅಂತಾರಾಷ್ಟ್ರೀಯ ವಾಸ್ತುತಜ್ಞ ಚಂದ್ರಶೇಖರ ಸ್ವಾಮೀಜಿ ಹೇಳಿದರು.**

## ಸಮಾಚಾರ ಸಣ್ಣದಲ್ಲ

### ಪಿನಾಯಿಲ್ ಕುಡಿದು ವಿದ್ಯಾರ್ಥಿನಿ ಆತ್ಮಹತ್ಯೆ

**ಗದಗ:** ಪ್ರೀತಿ, ಪ್ರೇಮ, ಮದುವೆ ವಿಷಯದಲ್ಲಿ 42ರ ಅಂಕಲ್ ಕಿರುಕುಳಕ್ಕೆ ಬೇಸತ್ತು ವಿದ್ಯಾರ್ಥಿನಿ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ನಗರದ ಬೆಟಗೇರಿ ಬಾಲಕಿಯರ ವೃತ್ತಿಪರ ಹಾಸ್ಟೆಲ್‌ನಲ್ಲಿ ನಡೆದಿದೆ. ಜಿಲ್ಲೆಯ ಮುಂಡರಗಿ ತಾಲೂಕಿನ ವಿರಪಾಪೂರ ತಾಂಡಾದ ನಿವಾಸಿ ವಂದನಾ (19) ಪಿನಾಯಿಲ್ ಸೇವಿಸಿ ಆತ್ಮಹತ್ಯೆ ಮಾಡಿಕೊಂಡ ವಿದ್ಯಾರ್ಥಿನಿ. ವಂದನಾ ಗದಗದ ಜಿಮ್ಸ್ ಕಾಲೇಜಿನಲ್ಲಿ ಪ್ಯಾರಾ ಮೆಡಿಕಲ್ ವ್ಯಾಸಂಗ ಮಾಡುತ್ತಿದ್ದಳು. ಸಮಾಜ ಕಲ್ಯಾಣ ಇಲಾಖೆ ಬೆಟಗೇರಿ ಡಾ.ಬಿ.ಆರ್ ಅಂಬೇಡ್ಕರ್ ಸರಕಾರಿ ಮೆಟ್ರಿಕ್ ನಂತರದ ವೃತ್ತಿಪರ ಬಾಲಕಿಯರ ಹಾಸ್ಟೆಲ್ ನಲ್ಲಿದ್ದಕೊಂಡೇ ವ್ಯಾಸಂಗ ಮಾಡುತ್ತಿದ್ದಳು. ಗುರುವಾರ ಹಾಸ್ಟೆಲ್‌ನಲ್ಲಿ ಪಿನಾಯಿಲ್ ಸೇವಿಸಿದ್ದಾಳೆ, ಕೂಡಲೇ ನಗರದ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದ್ರೆ ಚಿಕಿತ್ಸೆ ಫಲಕಾರಿಯಾಗದೇ ಶುಕ್ರವಾರ ಸಾವನ್ನಪ್ಪಿದ್ದಾಳೆ.

ವಿರಾಮ
ಪ್ರತಿ ಭಾನುವಾರ

### ಮಹಿಳೆಗೆ ಥಳಿತ: ಮತ್ತಿಬ್ಬರ ಸೆರೆ

**ಉಡುಪಿ:** ಮಲ್ಪೆ ಬಂದರಿನಲ್ಲಿ ಮೀನು ಕದ್ದಿರುವುದಾಗಿ ಆರೋಪಿಸಿ ಮಹಿಳೆಯನ್ನು ಮರಕ್ಕೆ ಕಟ್ಟಿ ಹಾಕಿ ಹಲ್ಲೆ ನಡೆಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಮತ್ತಿಬ್ಬರನ್ನು ಬಂಧಿಸಲಾಗಿದೆ. ಲೀಲಾ ಮತ್ತು ಪಾರ್ವತಿ ಬಂಧಿತರು ಎಂದು ಪೊಲೀಸರು ತಿಳಿಸಿದ್ದಾರೆ. ಹಲ್ಲೆ ಪ್ರಕರಣದ ಕುರಿತು ಸರಿಯಾಗಿ ಮಾಹಿತಿ ಸಂಗ್ರಹಿಸದ ಕಾರಣ ಮಲ್ಪೆ ಪೊಲೀಸ್ ಠಾಣೆಯ ಹೆಡ್ ಕಾನ್‌ಸ್ಟೇಬಲ್ ಸುರೇಶ್ ಮತ್ತು ಕಾನ್‌ಸ್ಟೇಬಲ್ ನಾಗರಾಜ್ ಅವರನ್ನು ಅಮಾನತುಗೊಳಿಸಲಾಗಿದೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಅರುಣ್ ಕೆ. ತಿಳಿಸಿದ್ದಾರೆ.

### ಕಲಾಪ ಕೋಲಾಹಲ: 18 ಶಾಸಕರ ಅಮಾನತು

← ಮೊದಲಪುಟದಿಂದ

ಸ್ಪೀಕರ್ ಪೀಠದ ಮೇಲೆ ಬಿಜೆಪಿ ಸದಸ್ಯರು ಕಾಗದ ಪ್ರತಿಗಳನ್ನು ಹರಿದು ಎಸೆದು ಗದ್ದಲ ಎಬ್ಬಿಸಿದ್ದರು. ಇದರೊಂದಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರತ್ತಲೂ ಕಾಗದವನ್ನು ಬಿಸಾಕಿದ್ದರಿಂದ ಆಡಳಿತ-ಪ್ರತಿಪಕ್ಷದ ನಡುವೆ ತೀವ್ರ ವಾಕ್ಸಮರ ನಡೆಯಿತು. ಸಭಾಧ್ಯಕ್ಷರ ಪೀಠ ಏರಿದ್ದು, ಹರಿದ ಕಾಗದ ಎಸೆದಿದ್ದನ್ನು ಮುಂದಿಟ್ಟುಕೊಂಡು, ಪೀಠಕ್ಕೆ ಅಗೌರವ ತೋರಿದ 18 ಮಂದಿ ಬಿಜೆಪಿ ಸದಸ್ಯರನ್ನು ಸದನ ಕಲಾಪದಿಂದ 6 ತಿಂಗಳಿಗೆ ಅಮಾನ ತುಗೊಳಿಸಿ ಸ್ಪೀಕರ್ ರೂಲಿಂಗ್ ನೀಡಿದ್ದಾರೆ.

ಅಮಾನತುಗೊಳಿಸುವ ಆದೇಶ ನೀಡಿದ ಬಳಿಕವೂ ಸದನದಲ್ಲಿಯೇ ಉಳಿದುಕೊಂಡ ಶಾಸಕರನ್ನು ಮಾರ್ಷಲ್‌ಗಳು ಎತ್ತಿಕೊಂಡು ಬಂದು ಹೊರಕಳುಹಿಸಿದ್ದಾರೆ. ಬಳಿಕ ಸದನ ಆರಂಭಗೊಂಡಾಗಲೂ ಬಿಜೆಪಿಗರು ಪ್ರತಿಭಟನೆ ಮುಂದುವರಿ ಸಿದ್ದರಿಂದ, ಸದನವನ್ನು ಅನಿರ್ದಿಷ್ಟಾವಧಿಗೆ ಮುಂದೂಡಲಾಯಿತು.

# ಮಗು ಕೈಗೆ ಬರೆ, ಡೈಪರ್‌ಗೆ ಕಾರದ ಪುಡಿ

## ಅಂಗನವಾಡಿ ಸಹಾಯಕಿಯಿಂದ ಅವಮಾನೀಯ ಕೃತ್ಯ

**ರಾಮನಗರ:** ಮಗು ಹಠ ಮಾಡುತ್ತಿದೆ ಎಂದು ಅಂಗನವಾಡಿ ಸಹಾಯಕಿಯೊಬ್ಬರು ಮಗುವಿನ ಕೈಗೆ ಬರೆ ಎಳೆದು, ಡೈಪರ್‌ಗೆ ಕಾರದ ಪುಡಿ ಹಾಕಿ ವಿಕೃತಿ ಮೆರೆದಿರುವ ಘಟನೆ ಕನಕಪುರ ತಾಲೂಕಿನ ಮಹರಾಜಕಟ್ಟೆ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ರಮೇಶ್ ಹಾಗೂ ಚೈತ್ರಾ ದಂಪತಿಯ ಎರಡೂವರೆ ವರ್ಷದ ಮಗು ಮೇಲೆ ಅಂಗನವಾಡಿ ಸಹಾಯಕಿ ಹಲ್ಲೆ ಮಾಡಿದ್ದರು. ಅಂಗನವಾಡಿಯಲ್ಲಿ ಮಗು ಹಠ ಮಾಡ್ತಿದೆ ಎಂದು ಕೈ ಮೇಲೆ ಬರೆ ಹಾಕಿ ಬಳಿಕ ಡೈಪರ್ ಒಳಗೆ ಚಂದ್ರಮ್ಮ ಕಾರದಪುಡಿ ಹಾಕಿದ್ದರು. ಅಂಗನವಾಡಿಯಿಂದ ಮಗು ಕರೆತರಲು ಹೋದಾಗ ಪೋಷಕರಿಗೆ ಹಲ್ಲೆಯ ವಿಚಾರ ತಿಳಿದಿದೆ. ಈ ಪ್ರಕರಣ ತಡವಾಗಿ ಬೆಳಕಿಗೆ ಬಂದಿದ್ದು, ಅಂಗನವಾಡಿ ಸಹಾಯಕಿ ಚಂದ್ರಮ್ಮ ವಿರುದ್ಧ ಕನಕಪುರ ಟೌನ್ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

### ಕ್ರಮಕ್ಕೆ ಆಗ್ರಹ

**ಕೃತ್ಯ ಎಸಗಿದ ಅಂಗನವಾಡಿ ಸಹಾಯಕಿ ಮೇಲೆ ಶಿಸ್ತು ಕ್ರಮಕೈಗೊಳ್ಳುವಂತೆ ಮೇಲಧಿಕಾರಿಗೆ ಪತ್ರ ಬರೆಯಲಾಗಿದೆ ಎಂದು ಸಿಡಿಪಿಒ ವಿ.ನಾರಾಯಣ್ ತಿಳಿಸಿದ್ದಾರೆ. ಯಾವ ಕಾರಣಕ್ಕೆ ಈ ರೀತಿ ಮಾಡಿದ್ದಾರೆ ಎಂಬುದು ತಿಳಿದು ಬಂದಿಲ್ಲ. ಚಂದ್ರಮ್ಮ ವಿರುದ್ಧ ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ತಮ್ಮ ಮನೆಯಲ್ಲಿನ ಒತ್ತಡದಿಂದ ಮಗುವಿಗೆ ಈ ರೀತಿ ಮಾಡಿದ್ದಾರೆ ಎಂದು ಪೋಷಕರು ದೂರಿದ್ದಾರೆ. ಅಂಗನವಾಡಿ ಸಹಾಯಕಿಯ ವಿರುದ್ಧ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದ್ದಾರೆ.**

# ಕೊನೆಗೂ ಸೆರೆಯಾದ ಕಾಡಾನೆ ವಿಕ್ರಾಂತ್

**ಹಾಸನ:** ಬೇಲೂರು ಭಾಗದ ಜನರ ನಿದ್ದೆಗೆಡಿಸಿದ್ದ ಹಾಗೂ ಅರಣ್ಯ ಇಲಾಖೆಗೆ ತಲೆನೋವಾಗಿದ್ದ ದೈತ್ಯಾಕಾರದ ಪುಂಡಾನೆ ವಿಕ್ರಾಂತ್‌ನನ್ನು ಸೆರೆ ಹಿಡಿಯುವಲ್ಲಿ ಅರಣ್ಯ ಇಲಾಖೆ ಯಶಸ್ವಿಯಾಗಿದೆ. ಸತತ ಮೂರು ದಿನಗಳಿಂದ ವಿಕ್ರಾಂತ್ ಸೆರೆ ಹಿಡಿಯಲು ಏಳು ಸಾಕಾನೆಗಳೊಂದಿಗೆ ಅರಣ್ಯ ಇಲಾಖೆ ಸಿಬ್ಬಂದಿ ಸತತ ಪ್ರಯತ್ನಪಟ್ಟಿದ್ದರು. ಇದೀಗ ವಿಕ್ರಾಂತ್ ಜತೆಗಿದ್ದ ಭೀಮನಿಂದ ಬೇರ್ಪಡಿಸಿ ಅರವಳಿಕೆ ನೀಡಿ ಕಾಡಾನೆಯನ್ನು ಇಟಿಎಫ್ ಸಿಬ್ಬಂದಿ ಸೆರೆಹಿಡಿದಿದ್ದಾರೆ.

ಮಂಗಳವಾರದಿಂದ ಬೇಲೂರಿನ ಕಾನನಹಳ್ಳಿ ಗ್ರಾಮದ ಬಳಿಯಿರುವ ಅರಣ್ಯದ ಬಳಿ ಏಳು ಸಾಕಾನೆಗಳು, ಇನ್ನೂರಕ್ಕೂ ಹೆಚ್ಚು ಅರಣ್ಯ ಇಲಾಖೆ ಹಾಗೂ ಪೊಲೀಸ್ ಸಿಬ್ಬಂದಿ ವಿಕ್ರಾಂತ್ ಸೆರೆ ಹಿಡಿಯುವ ಕಾರ್ಯಾಚರಣೆ ಆರಂಭಿಸಿದ್ದರು. ಮೊದಲ ದಿನ 6 ಗಂಟೆಗಳ ಕಾಲ ನಿರಂತರ ಪ್ರಯತ್ನಪಟ್ಟರೂ, ಅರಣ್ಯ ಇಲಾಖೆಗೆ ಚಳ್ಳೆ ಹಣ್ಣು ತಿನ್ನಿಸಿದಟ್ಟ ಅರಣ್ಯದೊಳಗೆ ಸೇರಿಕೊಂಡಿತ್ತು. ಎರಡನೇ ದಿನದ ಕಾರ್ಯಾಚರಣೆ ವೇಳೆ ಭೀಮ ಎಂಟ್ರಿಕೊಟ್ಟಿದ್ದರಿಂದ ಕೆಲಕಾಲ ಕಾರ್ಯಾಚರಣೆ ಸ್ಥಗಿತಗೊಳಿಸಿ, ಪುನಃ ಕಾರ್ಯಾಚರಣೆ ನಡೆಸಿದ್ದರು. ಗುಂಪಿನೊಳಗಿದ್ದ ವಿಕ್ರಾಂತನನ್ನು ಬೇರ್ಪಡಿಸಿ ಅರವಳಿಕೆ ಚುಚ್ಚುಮದ್ದು ನೀಡಲು ವೈದ್ಯರು ಹಾಗೂ ಇಟಿಎಫ್ ಸಿಬ್ಬಂದಿ ಪ್ರಯತ್ನಿಸಿದ್ದರೂ ಸಾಧ್ಯವಾಗಿರಲಿಲ್ಲ.

### ಅಕ್ರಮ ಗೋಮಾಂಸ ಸಾಗಾಟಕ್ಕೆ ತಡೆ

**ಮಂಗಳೂರು:** ನಗರದಲ್ಲಿ ಮತ್ತೆ ಅಕ್ರಮ ಗೋಮಾಂಸ ಸಾಗಾಟ ಜಾಲವನ್ನು ಹಿಂದೂ ಸಂಘಟನೆ ಕಾರ್ಯಕರ್ತರು ಪತ್ತೆಹಚ್ಚಿದ್ದಾರೆ. ರಿಕ್ಷಾದಲ್ಲಿ ಅಕ್ರಮವಾಗಿ ಗೋಮಾಂಸ ಸಾಗಾಟ ಮಾಡುತ್ತಿರುವ ಮಾಹಿತಿ ಪಡೆದ ಹಿಂದೂ ಸಂಘಟನೆ ಕಾರ್ಯಕರ್ತರು ಪಾಂಡೇಶ್ವರ ಬಳಿ ರಿಕ್ಷಾ ತಡೆದು ಪರಿಶೀಲನೆ ನಡೆಸಿದ್ದಾರೆ ಈ ವೇಳೆ ರಿಕ್ಷಾದಲ್ಲಿ ಸುಮಾರು 200 ಕೆಜಿಗೂ ಅಧಿಕ ಗೋಮಾಂಸ ಇರುವುದು ಪತ್ತೆಯಾಗಿದೆ. ಘಟನೆ ಸಂಬಂಧ ಪಾಂಡೇಶ್ವರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಕದ್ರಿ, ಕಲಶೇಖರ, ಪಡೀಲ್ ಬಳಿ ಅಕ್ರಮ ಗೋಮಾಂಸ ಸಾಗಾಟ ಪ್ರಕರಣ ಈ ಮೊದಲು ಪತ್ತೆಯಾಗಿತ್ತು. ಶುಕ್ರವಾರ ಪಾಂಡೇಶ್ವರದಲ್ಲಿ ಮತ್ತೊಂದು ಪ್ರಕರಣ ಬೆಳಕಿಗೆ ಬಂದಿದೆ.

### ಆಟೋ ಚಾಲಕ ಆತ್ಮಹತ್ಯೆ

**ಹಾವೇರಿ:** ನಗರದ ಇಜಾರಿ ಲಕಮಾಪುರದಲ್ಲಿರುವ ಮನೆಯೊಂದರಲ್ಲಿ ವಿನಾಯಕ್ ಸುರೇಶ ಕಂಬಾಳಿಮಠ (34) ಎಂಬುವವರು ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದು, ಈ ಸಂಬಂಧ ಹಾವೇರಿ ಶಹರ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ. ಸ್ಥಳೀಯ ನಿವಾಸಿಯಾಗಿದ್ದ ವಿನಾಯಕ್, ಆಟೋ ಚಾಲಕರಾಗಿದ್ದರು. ಸೆಲ್ಫಿ ವಿಡಿಯೊ ಚಿತ್ರೀಕರಿಸಿ ಹಾಗೂ ಮರಣ ಪತ್ರ ಬರೆದಿಟ್ಟು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಆತ್ಮಹತ್ಯೆ ಸಂಬಂಧ ವಿನಾಯಕ್ ಅವರ ಸಹೋದರಿ ದೂರು ನೀಡಿದ್ದು, ಅದರನ್ವಯ ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರಿಸಲಾಗಿದೆ ಎಂದು ಪೊಲೀಸರು ಹೇಳಿದರು.

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯಪಾಲಕ ಅಭಿಯಂತರರವರ ಕಛೇರಿ, ಕ.ನೀ.ನಿ.ನಿ. ಭೀಮಾ ಏತ ನೀರಾವರಿ ಯೋಜನೆ, ವಿಭಾಗ, ಅಫಜಲಪೂರ– 585301, Email: eeblis@rediffmail.com
No:EE/ KNNL/BLIS/AFZ/TS-1/2024-25/992 ದಿನಾಂಕ: 15/03/2025
:: ಶೇಕಡಾವಾರು ಅಲ್ಪಾವಧಿ ಟೆಂಡರ ಅಧಿಸೂಚನೆ ::
(ಇ–ಪ್ರೋಕ್ಯೂರಮೆಂಟ್ ಮುಖಾಂತರ ಮಾತ್ರ)
ವ್ಯವಸ್ಥಾಪಕ ನಿರ್ದೇಶಕರು, ಕ.ನೀ.ನಿ.ನಿ, ಬೆಂಗಳೂರು ಇವರ ಪರವಾಗಿ ಕಾರ್ಯಪಾಲಕ ಅಭಿಯಂತರರು, ಕ.ನೀ.ನಿ.ನಿ., ಭೀಮಾ ಏತ ನೀರಾವರಿ ಯೋಜನೆ, ವಿಭಾಗ ಅಫಜಲಪೂರ ಇವರಿಂದ ಅರ್ಹ ಗುತ್ತಿಗೆದಾರರಿಂದ ಈ ಕೆಳಗಿನ ಕಾಮಗಾರಿಗಳಿಗೆ ಟೆಂಡರ್ ಕರೆಯಲಾಗಿದೆ.
1) ಕಾಮಗಾರಿಯ ಹೆಸರು : PROVIDING SPARE TRANSFORMERS TO BALUNDAGI & ALLAGI LIFT JACKWELL UNDER BLIS. (ID-2864), 2) ಟೆಂಡರ್‌ಗಿಟ್ಟ ಮೊತ್ತ (ರೂ. ಲಕ್ಷಗಳಲ್ಲಿ) : ರೂ. 114.29 ಲಕ್ಷ (ಇ–ಪೋರ್ಟಲನಲ್ಲಿದ್ದಂತೆ), 3) ಇ.ಎಂ.ಡಿ. ಮೊತ್ತ (ರೂ.): ರೂ. 1,15,000, (ಇ–ಪೋರ್ಟಲನಲ್ಲಿದ್ದಂತೆ), 4) ಟೆಂಡರ್ ಶುಲ್ಕ : ಇ–ಪೋರ್ಟಲನಲ್ಲಿದ್ದಂತೆ, 5) ಅರ್ಹ ಗುತ್ತಿಗೆದಾರ : ಕೆ.ಪಿ.ಡಬ್ಲ್ಯೂ.ಡಿ. ದರ್ಜೆ–1 ಮತ್ತು ಮೇಲ್ಪಟ್ಟು. (ಇ–ಪೋರ್ಟಲನಲ್ಲಿದ್ದಂತೆ), 6) ಕಾಮಗಾರಿಯ ಅವಧಿ : 6 ತಿಂಗಳು (ಇ–ಪೋರ್ಟಲನಲ್ಲಿದ್ದಂತೆ)
ಇ–ಪ್ರೋಕ್ಯೂರಮೆಂಟ್ ಮುಖಾಂತರ ಟೆಂಡರ ಸಲ್ಲಿಸಲು ದಿನಾಂಕ 20.03.2025 ರಿಂದ 28.03.2025ರ 16.00 ಗಂಟೆಯ ವರೆಗೆ ನಿಗದಿಪಡಿಸಲಾಗಿದೆ. ತಾಂತ್ರಿಕ ಬಿಡ್ ತೆರೆಯುವ ದಿನಾಂಕ 29.03.2025 16.15 ಗಂಟೆಗೆ ಇರುತ್ತದೆ, ಆರ್ಥಿಕ ಬಿಡ್ ತೆರೆಯುವ ದಿನಾಂಕ 05.04.2025 11.00 ಗಂಟೆಗೆ ಇರುತ್ತದೆ, ಹೆಚ್ಚಿನ ಮಾಹಿತಿಗಾಗಿ ಈ ಕೆಳಗೆ ಸಹಿ ಮಾಡಿದವರಿಗೆ ಕಛೇರಿ ಸಮಯದಲ್ಲಿ ಮತ್ತು ಇ–ಪೋರ್ಟಲ website: www.kppp.karnataka.gov.in ನೋಡಬಹುದಾಗಿದೆ.
ಸಹಿ/– ಕಾರ್ಯಪಾಲಕ ಅಭಿಯಂತರರು, ಕ.ನೀ.ನಿ.ನಿ. ಭೀಮಾ ಏತ ನೀರಾವರಿ ಯೋಜನೆ, ವಿಭಾಗ, ಅಫಜಲಪೂರ– 585301
ವಾ.ಸಾ.ಸಂ.ಇ/ಕಲಬುರಗಿ/1132/ಕೆ.ಎಸ್.ಎಂ.ಸಿ.&ಎ/2024–25

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ
ಲೋಕೋಪಯೋಗಿ ಇಲಾಖೆ
ಕೊಡಗು ವಿಭಾಗ, ಮಡಿಕೇರಿ
ಟೆಂಡರ್ ಪ್ರಕಟಣೆ ಸಂಖ್ಯೆ: 45/2024–251/3927–30 ದಿನಾಂಕ: 19–03–2025
ಅಲ್ಪಾವಧಿ ಟೆಂಡರ್ ಪ್ರಕಟಣೆ
ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ಅಧಿನಿಯಮ 1999 ಹಾಗೂ ನಿಯಮಗಳು 2000 ರಂತೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ–4ರನ್ವಯ ದ್ವಿಲಕೋಟೆ ಪದ್ಧತಿಯಲ್ಲಿ ಲೋಕೋಪಯೋಗಿ ಇಲಾಖೆಯ ಕೊಡಗು ವಿಭಾಗದ ವ್ಯಾಪ್ತಿಯಲ್ಲಿನ ಕಾಮಗಾರಿಗಳನ್ನು ಲೆಕ್ಕಶೀರ್ಷಿಕೆ: 4059–ನ್ಯಾಯಾಲಯ ಕಟ್ಟಡಗಳ ನಿರ್ವಹಣೆ (ಅಪೆಂಡಿಕ್ಸ್–ಇ)ಯಡಿಯ 1 ಕಾಮಗಾರಿಗೆ (ಇಂಡೆಂಟ್ ಸಂಖ್ಯೆ: 18661) ಇ–ಸಂಗ್ರಹಣಾ ವೇದಿಕೆ ಮೂಲಕ 2ನೇ ಕರೆ ಟೆಂಡರ್ ಆಹ್ವಾನಿಸಲಾಗಿದ್ದು, ಕಾಮಗಾರಿಗಳ ಟೆಂಡರ್‌ಗಿಟ್ಟ ಮೊತ್ತ ರೂ.169.30 ಲಕ್ಷಗಳಾಗಿರುತ್ತದೆ. ಟೆಂಡರ್ ದಾಖಲಾತಿಗಳನ್ನು ಕರ್ನಾಟಕ ರಾಜ್ಯ ಸರ್ಕಾರದ ಇ–ಸಂಗ್ರಹಣಾ ವೇದಿಕೆ ಮುಖಾಂತರ ಪಡೆಯಬಹುದಾಗಿರುತ್ತದೆ. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 26–03–2025 ಸಂಜೆ 5.00 ಗಂಟೆಯಾಗಿರುತ್ತದೆ.
ಟೆಂಡರ್ ಸಂಪೂರ್ಣ ವಿವರಗಳನ್ನು ಇ–ಸಂಗ್ರಹಣಾ ವೇದಿಕೆ https://kppp.karnataka.gov.in ನಲ್ಲಿ ಪಡೆಯಬಹುದಾಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿರುತ್ತದೆ. ಯಾವುದೇ ತಿದ್ದುಪಡಿ/ಮಾರ್ಪಾಡುಗಳನ್ನು ಇ–ಪೋರ್ಟಲ್ ಮೂಲಕ ಮಾತ್ರ ಪ್ರಕಟಿಸಲಾಗುವುದು.
ಸಹಿ/–
ಕಾರ್ಯಪಾಲಕ ಇಂಜಿನಿಯರ್,
ಲೋಕೋಪಯೋಗಿ ಇಲಾಖೆ
ಕೊಡಗು ವಿಭಾಗ, ಮಡಿಕೇರಿ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಟಿ.ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು–560020
ಬೆಂಅಪ್ರಾ/ನಯೋಸ/CLU-362/3431/2024–25 ದಿನಾಂಕ:21/03/2025
ಪ್ರಕಟಣೆ
ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14-A ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ವ್ಯವಸಾಯ ವಲಯದಿಂದ ವಸತಿ ಉಪಯೋಗಕ್ಕೆ ಭೂ ಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂ ಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂ ಉಪಯೋಗ ಬದಲಾವಣೆ ಪ್ರಸ್ತಾವನೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿನಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜನಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಚೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

| ಕ್ರ. ಸಂ | ಅರ್ಜಿದಾರರ ಹೆಸರು | ತಾಲ್ಲೂಕು | ಹೋಬಳಿ | ಗ್ರಾಮದ ವಿವರ | ಸರ್ವೇ ನಂ: | ವಿಸ್ತೀರ್ಣ ಎ–ಗುಂ | ಪರಿಷ್ಕೃತ ಮಹಾಯೋಜನೆ 2015ರ ಪ್ರಕಾರ ಭೂ ಉಪಯೋಗ: | ಬದಲಾವಣೆ ಕೋರಿರುವ ಭೂ ಉಪಯೋಗ: |
|---|---|---|---|---|---|---|---|---|
| 1 | ಶ್ರೀ ಎ.ವೆಂಕಟ–ರಮಣ ಮತ್ತು ಇತರರು | ಆನೇಕಲ್ | ಸರ್ಜಾಪುರ | ದೊಮ್ಮಸಂದ್ರ | 119/1 | 1–30.08 | ವ್ಯವಸಾಯ ವಲಯ | ವಸತಿ |
| 2 | | | | | 119/3 | 0–33 | | |
| 3 | | | | | 133/4 | 2–20 | | |
| 4 | | | | | 134/3 | 1–00 | | |
| 5 | | | | | 134/4 | 1–08 | | |
| | | | | | ಒಟ್ಟು | 7–11.08 | | |

ಷರಾ: ಅರ್ಜಿದಾರರು ಈ ಜಮೀನಿನಲ್ಲಿ ವಿನ್ಯಾಸ ಅಭಿವೃದ್ಧಿಪಡಿಸುವುದರಿಂದ ಬಡವರು, ಮಧ್ಯಮ ವರ್ಗದವರಿಗೆ ಯೋಗ್ಯ ಬೆಲೆಯಲ್ಲಿ ನಿವೇಶನಗಳು ಲಭ್ಯವಾಗುತ್ತದೆ. ಈ ಜಮೀನಿನಲ್ಲಿ ವಿನ್ಯಾಸ ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ. ಈ ವಿನ್ಯಾಸ ಅಭಿವೃದ್ಧಿಯಿಂದ ಸುತ್ತಮುತ್ತಲಿನ ಪ್ರದೇಶ ಅಭಿವೃದ್ಧಿಗೆ ಸಹಕಾರಿಯಾಗಲಿದೆ. ಯೋಜನಾ ಬದ್ಧವಾದ ವಿನ್ಯಾಸ ರಚನೆಯಿಂದ ಉತ್ತಮ ರಸ್ತೆ, ನಾಗರಿಕ ಸೌಲಭ್ಯ ಜಾಗಗಳು, ಉದ್ಯಾನವನಗಳು, ಸಾರ್ವಜನಿಕ ಉಪಯೋಗಕ್ಕೆ ಲಭ್ಯವಾಗುತ್ತದೆ ಎಂಬ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ, ಪ್ರಶ್ನಿತ ಜಮೀನುಗಳನ್ನು 'ವ್ಯವಸಾಯ' ವಲಯದಿಂದ 'ವಸತಿ' ಉಪಯೋಗಕ್ಕೆ ಭೂ ಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.
ಸಹಿ/– ನಗರ ಯೋಜಕ ಸದಸ್ಯರು, ಬೆಂಅಪ್ರಾ, ಬೆಂಗಳೂರು.

ಜಿಲ್ಲಾ ಪಂಚಾಯತ್ ಚಿಕ್ಕಬಳ್ಳಾಪುರ
ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಚಿಕ್ಕಬಳ್ಳಾಪುರ
ಇ–ಪ್ರಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 22/2024–25 ದಿನಾಂಕ: 07.03.2025
ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ–III ರ ನಿಬಂಧನೆಗೊಳಪಟ್ಟಂತೆ ಟೆಂಡರ್‌ಗಳಿಗಾಗಿ ಅರ್ಜಿ ಆಹ್ವಾನಿಸಲಾಗಿದೆ.
ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕತೆ ಅಧಿನಿಯಮ2000ರ ಪ್ರಕಾರ ಐಟಂವಾರು ಇ–ಪ್ರಕ್ಯೂರ್‌ಮೆಂಟ್ ದ್ವಿ–ಲಕೋಟೆ ಪದ್ಧತಿಯಲ್ಲಿ (Double Cover System) ಚಿಕ್ಕಬಳ್ಳಾಪುರ ವಿವಿಧ ಲೆಕ್ಕಶೀರ್ಷಿಯಡಿ ಕೆಳಗೆ ನಮೂದಿಸಿರುವ ಕಾಮಗಾರಿಗಳಿಗೆ ಸೂಕ್ತ ದರ್ಜೆಯಲ್ಲಿ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿಸಿರುವ ಅಧಿಕೃತ ಗುತ್ತಿಗೆದಾರರಿಂದ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಇ–ಪ್ರಕ್ಯೂರ್‌ಮೆಂಟ್ ದಾಖಲೆಗಳಿಗಾಗಿ ಇಲಾಖಾ ವೆಬ್‌ಸೈಟ್ https://eproc.karnataka.gov.in ಮೂಲಕ ಅರ್ಜಿಯನ್ನು ಸಲ್ಲಿಸಲು ಕೋರಲಾಗಿದೆ. (1) E-procurement ಮುಖಾಂತರ ಅರ್ಜಿ ಸಲ್ಲಿಸುವ ಹಾಗೂ ಷೆಡ್ಯೂಲ್–ಬಿ ಗಳನ್ನು ವೆಬ್‌ಸೈಟ್‌ನಲ್ಲಿ ಭರ್ತಿ ಮಾಡಿ ಸಲ್ಲಿಸುವ ಕೊನೆಯ ದಿನಾಂಕ: 07.04.2025ರ 16.30 ರವರೆಗೆ.(2) ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: 08.04.2025 ರಂದು 16.35 ನಂತರ. (3) ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ: 09.04.2025 ರಂದು ಬೆಳಿಗ್ಗೆ 11.30 ನಂತರ (ಸಾಧ್ಯವಾದಲ್ಲಿ). (4) ಅರ್ಜಿ ಶುಲ್ಕ (ಹಿಂದಿರುಗಿಸಲಾಗುವುದಿಲ್ಲ): E-procurement ನಿಯಮಾನುಸಾರ.
ಸಹಿ/– ಕಾರ್ಯಪಾಲಕ ಅಭಿಯಂತರರು, ಪಂ.ರಾ.ಇಂ. ವಿಭಾಗ, ಚಿಕ್ಕಬಳ್ಳಾಪುರ
ವಾಸಾಸಂಇ/ಚಿಕ್ಕಬಳ್ಳಾಪುರ/ಆರ್.ಓ.ಸಂಖ್ಯೆ:433/ಕೆಎಸ್‌ಎಂಸಿಎ/2024–25

ಕರ್ನಾಟಕ ಸರಕಾರ
ಜಂಟಿ ನಿರ್ದೇಶಕರ ಕಾರ್ಯಾಲಯ, ಸಮಾಜ ಕಲ್ಯಾಣ ಇಲಾಖೆ
ಮಿನಿ ವಿಧಾನ ಸೌಧ ಎದುರುಗಡೆ, ಐವಾನ್–ಇ–ಶಾಹಿ–ರಸ್ತೆ, ಕಲಬುರಗಿ–585102
ದೂರವಾಣಿ ಸಂಖ್ಯೆ :08472–278621, ಇ–ಮೇಲ್ ವಿಳಾಸ: dswoglb@gmail.com
ಸಂ:ಜನಿ:ಸಕಇಕ:ಲೆಕ್ಕ:ಆಹಾರ:ಸಿಆರ್–42:2024–25 ದಿನಾಂಕ:20–03–2025
:: ಅಲ್ಪಾವಧಿ ಇ–ಟೆಂಡರ್ ತಿದ್ದುಪಡಿ ಪ್ರಕಟಣೆ ::
ದಿನಾಂಕ:27–01–2025 ರಂದು ಈ ಕಛೇರಿಯಿಂದ 2025–26 ಹಾಗೂ 2026–27ನೇ ಸಾಲಿಗಾಗಿ ಕಲಬುರಗಿ ಜಿಲ್ಲೆಯ ಇಲಾಖೆಯ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಮೆಟ್ರಿಕ್ ಪೂರ್ವ ಹಾಗೂ ಮೆಟ್ರಿಕ್ ನಂತರದ ಬಾಲಕ/ಬಾಲಕಿಯರ ವಿದ್ಯಾರ್ಥಿ ನಿಲಯಗಳಿಗೆ ಮತ್ತು ಭಾರತ ರತ್ನ ಡಾ:ಬಿ.ಆರ್.ಅಂಬೇಡ್ಕರ್ ವಸತಿ ಶಾಲೆಗಳಿಗೆ ಆಹಾರ ಹಾಗೂ ಇತರೆ ಸಾಮಗ್ರಿಗಳನ್ನು ಸರಬರಾಜು ಮಾಡಲು ಅರ್ಹ ನೊಂದಾಯಿತ ಏಜೆನ್ಸಿ/ಸಂಸ್ಥೆಗಳಿಂದ ಇ–ಪ್ರಕ್ಯೂರ್‌ಮೆಂಟ್ (e-Procurement) ಮೂಲಕ ಅಲ್ಪಾವಧಿ ಇ–ಟೆಂಡರ್ ಅಹ್ವಾನಿಸಲಾಗಿದೆ.
ಮುಂದುವರೆದು ಮಾನ್ಯ ಸರ್ಕಾರದ ಅಧೀನ ಕಾರ್ಯದರ್ಶಿಗಳು–1 ಸಮಾಜ ಕಲ್ಯಾಣ ಇಲಾಖೆ ಬೆಂಗಳೂರು ರವರ ಮಾರ್ಪಾಡು ಆದೇಶ ಸಂ:ಸಕಇ:738:ಪಕವಿ:2024 ದಿನಾಂಕ:19–03–2025 ರಲ್ಲಿ ಕೆಲವು ಷರತ್ತುಗಳನ್ನು ಮಾರ್ಪಾಡಿಸಿ ಆದೇಶಿಸಿರುವುದರಿಂದ ಈ ಕಛೇರಿಯಿಂದ ಈಗಾಗಲೇ ಕರೆದ ಟೆಂಡರದಲ್ಲಿ ಈ ಕೆಳಕಂಡ ಷರತ್ತುಗಳನ್ನು ಸೇರ್ಪಡೆಗೊಳಿಸಬೇಕಾಗಿರುತ್ತದೆ.
:: ಮಾರ್ಪಾಡು ಮಾಡಲಾದ ಷರತ್ತುಗಳು ::
1) ಟೆಂಡರ್‌ದಾರರ ಸರಾಸರಿ ವಹಿವಾಟು ಸಂಬಂಧ, ಟೆಂಡರ್ ಕರೆಯುವ ಹಿಂದಿನ ಐದು ಆರ್ಥಿಕ ಸಾಲುಗಳ ಪೈಕಿ, ಯಾವುದಾದರೂ ಎರಡು ಆರ್ಥಿಕ ಸಾಲುಗಳಲ್ಲಿ ಹಾಲಿ ಟೆಂಡರ್‌ಗಿಟ್ಟ ಒಟ್ಟು ಮೌಲ್ಯದ ಪೈಕಿ ಶೇ.80 ರಷ್ಟು ವಹಿವಾಟನ್ನು ಸದರಿ ಆಹಾರ ಸಾಮಗ್ರಿಗಳ ಸರಬರಾಕಿನಲ್ಲಿಯೇ ಹೊಂದಿರುವುದು ಕಡ್ಡಾಯವಾಗಿರುತ್ತದೆ. 2) ತೃಪ್ತಿಕರ ಪ್ರಮಾಣ ಪತ್ರ ಎಂದರೆ, ಖಾಸಗಿ ಸಂಸ್ಥೆಯು ಸಲ್ಲಿಸುವ ಪ್ರಮಾಣ ಪತ್ರಕ್ಕೆ ಮುಖ್ಯ ಕಾರ್ಯ ನಿರ್ವಾಹಣಾಧಿಕಾರಿ (ಸಿಇಓ/ಸಮನಾಂತರ ಅಧಿಕಾರಿಗಳು ಧೃಡೀಕರಿಸತಕ್ಕದ್ದು. ಉಳಿದಂತೆ ಖಾಸಗಿ ಸಂಸ್ಥೆಯು ನೀಡುವ ಅನುಭವ ಪ್ರಮಾಣ ಪತ್ರ / ಇತರೆ ಅಂಶಗಳ ಬಗ್ಗೆ ಟೆಂಡರ್ ಸಕ್ಷಮ ಪ್ರಾಧಿಕಾರವೇ ಅಂತಿಮ ನಿರ್ಧಾರ ತೆಗಗೆದುಕೊಳ್ಳಲಾಗುವುದು. 3) ಈ ಟೆಂಡರನಲ್ಲಿ ಕೇವಲ ಏಕಮಾತ್ರ ಬಿಡ್‌ದಾರರಿದ್ದಲ್ಲಿ, ಟೆಂಡರ್ ಸಕ್ಷಮ ಪರಾಧಿಕಾರವೇ ಏಕ ಮಾತ್ರ ಬಿಡ್‌ದಾರರೊಂದಿಗೆ ಮುಂದುವರೆಯುವ ಅಥವಾ ಮರು ಟೆಂಡರ್ ಕರೆಯುವ ಅಧಿಕಾರವನ್ನು ಟೆಂಡರ್ ಸಕ್ಷಮ ಪ್ರಾಧಿಕಾರದ ಅಧ್ಯಕ್ಷರಾದ ಜಿಲ್ಲಾಧಿಕಾರಿಗಳೇ ನಿರ್ಧರಿಸುವುದು.
:: ಇ–ಟೆಂಡರ್ ಮರು ಘಟನಾವಳಿಗಳು ::
ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ ದಿನಾಂಕ:27–01–2025, ಟೆಂಡರ್‌ಗೆ ಇಟ್ಟ ಅಂದಾಜು ಮೊತ್ತ ರೂ: 5744.34 ಲಕ್ಷಗಳು, ಟೆಂಡರ್ ಫಾರಂ ಅಪಲೋಡ್ ಮಾಡಲು ಪ್ರಾರಂಭದ ದಿನಾಂಕ:29–01–2025 ರಂದು ಬೆಳಿಗ್ಗೆ 10–00 ಗಂಟೆಯಿಂದ ದಿನಾಂಕ:01–04–2025 ರಂದು ಸಾಯಂಕಾಲ 5.30 ಗಂಟೆವರೆಗೆ, ಸ್ಯಾಂಪಲ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕ:25–03–2025 ಮಧ್ಯಾಹ್ನ 1–30 ಗಂಟೆ ಒಳಗೆ, ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 04–04–2025, ಆರ್ಥಿಕ ಬಿಡ್ ತೆರೆಯುವ ದಿನಾಂಕ:07–04–2025, ಇ.ಎಂ.ಡಿ ಮೊತ್ತ ರೂ: 57.44 ಲಕ್ಷ, ಹೆಚ್ಚಿನ ಮಾಹಿತಿಗಾಗಿ ಜಂಟಿ ನಿರ್ದೇಶಕರು ಸಮಾಜ ಕಲ್ಯಾಣ ಇಲಾಖೆ ಕಲಬುರಗಿ ರವರ ದೂರವಾಣಿ ಸಂಖ್ಯೆ:08472–278621 www.kppp.karnataka.gov.in. ಸಂಪರ್ಕಿಸಬಹುದಾಗಿದೆ.
ಸಹಿ/– ಜಂಟಿ ನಿರ್ದೇಶಕರು
ಸಮಾಜ ಕಲ್ಯಾಣ ಇಲಾಖೆ, ಕಲಬುರಗಿ
ವಾ.ಸಾ.ಸಂ.ಇ/ಕಲಬುರಗಿ/1129/ಕೆ.ಎಸ್.ಎಂ.ಸಿ.&ಎ/2024–25

ಸಾರ್ವಜನಿಕ ಗ್ರಂಥಾಲಯ ಇಲಾಖೆ
ಉಪನಿರ್ದೇಶಕರ ಕಛೇರಿ, ನಗರ ಕೇಂದ್ರ ಗ್ರಂಥಾಲಯ, ದಕ್ಷಿಣ ವಲಯ, 7ನೇ ಮುಖ್ಯ ರಸ್ತೆ, ಬಿ.ಟಿ.ಎಂ. 2ನೇ ಹಂತ, ಬೆಂಗಳೂರು–560 076.
email id: cclsouthzone@gmail.com. Tel: 26548829
ಸಂಖ್ಯೆ:ನಕೇಗ್ರಂ/ದವ/ಎ2/ಎಂ.ಟಿ–19/ಉ.ಗಾ.ಶು.ಯಂ/2353/2024–25 ದಿನಾಂಕ: 19–03–2025
ದರಪಟ್ಟಿ ಪ್ರಕಟಣೆ
2024–25ನೇ ಸಾಲಿಗೆ ನಗರ ಕೇಂದ್ರ ಗ್ರಂಥಾಲಯ ದಕ್ಷಿಣ ವಲಯ ಬೆಂಗಳೂರು ಈ ಕಛೇರಿ ವ್ಯಾಪ್ತಿಯಲ್ಲಿ ಬರುವ ಶಾಖಾ/ಸೇವಾ ಕೇಂದ್ರ ಗ್ರಂಥಾಲಯಗಳಿಗೆ ಗಾಳಿ ಶುದ್ಧೀಕರಣ ಯಂತ್ರಗಳನ್ನು ಸರಬರಾಜು ಮತ್ತು ಅಳವಡಿಕೆ ಮಾಡಲು ಈ ಕೆಲಸದಲ್ಲಿ ಅನುಭವ ಹೊಂದಿರುವ ನೊಂದಾಯಿತ ಸಂಸ್ಥೆಗಳಿಂದ ದರಪಟ್ಟಿಗಳನ್ನು ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಅನುಭವ ಇರುವ ನೊಂದಾಯಿತ ಸಂಸ್ಥೆಯವರು ದರಪಟ್ಟಿಗಳನ್ನು ಸಲ್ಲಿಸಬಹುದು.
ದರಪಟ್ಟಿ ಸಂಖ್ಯೆ: (1) ಸಂಖ್ಯೆ:ನಕೇಗ್ರಂ/ದವ/ಎ2/ಎಂ.ಟಿ–19/ಉ.ಗಾ.ಶು.ಯಂ/2353/2024–2, ದಿನಾಂಕ: 19–03–2025. (2) ದರಪಟ್ಟಿ ಫಾರಂಗಾಗಿ ಬೇಡಿಕೆ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕ ಹಾಗೂ ಸಮಯ: 25–03–2025 ರಂದು ಮಧ್ಯಾಹ್ನ 1.30 ಗಂಟೆಯೊಳಗೆ ದರಪಟ್ಟಿ ಫಾರಂ ಶುಲ ರೂ. 1000 ಯೊಂದಿಗೆ ಅರ್ಜಿ ಸಲ್ಲಿಸಬೇಕು. (3) ಖಾಲಿ ದರಪಟ್ಟಿ ಫಾರಂ ವಿತರಿಸಲು ಕೊನೆಯ ದಿನಾಂಕ ಹಾಗೂ ಸಮಯ: 26–03–2025 ರಂದು ಸಂಜೆ 4.00 ಗಂಟೆಯೊಳಗೆ ಮೇಲಿನಂತೆ ಅರ್ಜಿದಾರರಿಗೆ ಮಾತ್ರ ದರಪಟ್ಟಿ ಫಾರಂ ವಿತರಿಸಲಾಗುವುದು. (4) ಅಂದಾಜು ಮೊತ್ತ : ರೂ. 5 ಲಕ್ಷ (ಐದು ಲಕ್ಷ ರೂಪಾಯಿಗಳು ಮಾತ್ರ). (5) ಇ.ಎಂ.ಡಿ. ಮೊತ್ತ : ರೂ. 10,000/– (ರೂಪಾಯಿ ಹತ್ತು ಸಾವಿರ ಮಾತ್ರ) ಗಳನ್ನು ದಿನಾಂಕ: 26–03–2025 ರಂದು ಮಧ್ಯಾಹ್ನ: 2.00 ಗಂಟೆಯೊಳಗೆ ಈ ಕಛೇರಿಯಲ್ಲಿ ಪಾವತಿ ಮಾಡಿ ರಶೀದಿ ಪಡೆದು ರಶೀದಿಯನ್ನು ದರಪಟ್ಟಿಗೆ ಫಾರಂನೊಂದಿಗೆ ಲಗತ್ತಿಸತಕ್ಕದ್ದು. (6) ಭರ್ತಿ ಮಾಡಿದದರಪಟ್ಟಿ ಫಾರಂ ಸಲ್ಲಿಸಲು ಕೊನೆಯ ದಿನಾಂಕ ಹಾಗೂ ಸಮಯ : ದಿನಾಂಕ: 27–03–2025ರಂದು ಮಧ್ಯಾಹ್ನ: 12.00 ಗಂಟೆಯೊಳಗೆ ಹಾಗೂ ಅದೇ ದಿನ ಮಧ್ಯಾಹ್ನ: 1.00 ಗಂಟೆಗೆ ಹಾಜರಿದ್ದ ದರಪಟ್ಟಿದಾರರ ಸಮಕ್ಷಮದಲ್ಲಿ ತೆರೆಯಲಾಗುವುದು. (7) ದರಪಟ್ಟಿ ಸ್ವೀಕರಿಸುವ ಅಧಿಕಾರಿ : ಉಪ ನಿರ್ದೇಶಕರು ನಗರ ಕೇಂದ್ರ ಗ್ರಂಥಾಲಯ, ದಕ್ಷಿಣ ವಲಯ, ಬಿ.ಟಿ.ಎಂ. 2ನೇ ಹಂತ, ಬೆಂಗಳೂರು–560 076.
ಹೆಚ್ಚಿನ ವಿವರಗಳಿಗೆ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು.
ಸಹಿ/– (ಸರಸ್ವತಿ ಎನ್.)
ಉಪನಿರ್ದೇಶಕರು
ನಗರ ಕೇಂದ್ರ ಗ್ರಂಥಾಲಯ, ದಕ್ಷಿಣ ವಲಯ, ಬೆಂಗಳೂರು.
DIPR/CP/RO5844/AAPL/2024-25

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ
"ಜ್ಞಾನ ಸಂಗಮ", ಬೆಳಗಾವಿ–590018, ಕರ್ನಾಟಕ, ಭಾರತ
Ref. VTU/BGM/SAP/CW1/T-691,697/2024-25/6379 Dated: 21/03/2025
ಟೆಂಡರ ಪ್ರಕಟಣೆ
ಕುಲಸಚಿವರು, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾವಿ ಇವರಿಂದ ಕೆಳಕಂಡ ಕೆಲಸಗಳಿಗೆ (ದ್ವಿ ಲಕೋಟೆ ಪದ್ಧತಿಯಲ್ಲಿ) ಇ–ಟೆಂಡರ ಮೂಲಕ ಮೊಹರ ಬಂದ ದರಖಾಸ್ತುಗಳನ್ನು ಅರ್ಹ ತಯಾರಕರು / ಪೂರೈಕೆದಾರರಿಂದ ಆಹ್ವಾನಿಸಲಾಗಿದೆ.

| ಕ್ರ. ಸಂ | ಕೆಲಸದ ಹೆಸರು | ಟೆಂಡರ್‌ಗಿಟ್ಟ ಮೊತ್ತ | ಮುಂಗಡ ಠೇವಣಿ |
|---|---|---|---|
| 1 | T-691: Tender for Refurbishment of Laboratories in Bosch-Rexroth Centre at VTU Mysuru - 2nd Call. | 1,87,01,077/- | 2,81,000/- |
| 2 | T-697: Tender for Procurement of Hardware, Audio/Video, Furniture, Fixtures, Electrical, Networking etc., for establishment of Centralized Research Facility at VTU, CDOE, Mysuru. | 1,66,95,300/- | 2,50,500/- |

ಟೆಂಡರ್ ಪ್ರಿ ಬಿಡ್ ಮೀಟಿಂಗ್ ದಿನಾಂಕ: 25–03–2025 ರಂದು 11.00 ಗಂಟೆಗೆ ಆನ್‌ಲೈನ್ ಮೂಲಕ. ಟೆಂಡರ ಸಲ್ಲಿಸಲು ಕೊನೆಯ ದಿನಾಂಕ: 04–04–2025 ರ 2.30 ರ ವರೆಗೆ. ಟೆಂಡರ ತೆರೆಯುವ ದಿನಾಂಕ: 05–04–2025 ರ 4.00 ಗಂಟೆಗೆ. ಹೆಚ್ಚಿನ ಮಾಹಿತಿಗಾಗಿ www.vtu.ac.in ಮತ್ತು www.kppp.karnataka.gov.in ನೋಡಬಹುದು.
ಡಿಐಪಿಆರ್/ಬೆಳಗಾವಿ/1992/ಅಡ್ವರ್ಟೋ/2024–25 ಸಹಿ/– ಕುಲಸಚಿವರು, ವಿತಾವಿ, ಬೆಳಗಾವಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಛೇರಿ, ಚಿಕ್ಕಪೇಟೆ ವಿಭಾಗ, ಸಂಖ್ಯೆ.194, ಟಿ ಮರಿಯಪ್ಪ ರಸ್ತೆ, ಲಾಲ್‌ಭಾಗ ದಕ್ಷಿಣ ಗೇಟ್ ಎದುರು, ಸಿದ್ದಾಪುರ ವೃತ್ತ, ದೂ: 08026570088. ಇಮೇಲ್: eeckpbbmp@yahoo.com
ಸಂಖ್ಯೆ: ಕಾಅ/ಚಿಪೇ/ಇ–ಪ್ರೊಕ್/14/2024–25 ದಿನಾಂಕ: 21–03–2025
ಟೆಂಡರ್ ಪ್ರಕಟಣೆ
ಕಾರ್ಯಪಾಲಕ ಅಭಿಯಮತರರು, ಚಿಕ್ಕಪೇಟೆ ವಿಭಾಗ, ಬಿಬಿಎಂಪಿ, ಬೆಂಗಳೂರು ಇವರು ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೇದಿಕೆ ಅಡಿಯಲ್ಲಿ ಧರ್ಮರಾಯಸ್ವಾಮಿ ದೇವಸ್ಥಾನ ವಾರ್ಡ್ ಸಂಖ್ಯೆ 160 ರಲ್ಲಿ 2025 ಕರಗ ಹಬ್ಬದ ವೇಳೆಯಲ್ಲಿ ಹಬ್ಬದ ತ್ಯಾಜ್ಯಗಳನ್ನು ವಿಲೇವಾರಿಗಾಗಿ ಅಲ್ಪಾವಧಿ ಪ್ರಸ್ತಾವನೆ ಮನವಿ (ಆರ್‌ಎಫ್‌ಪಿ) ಯನ್ನು ಆಹ್ವಾನಿಸಿದ್ದಾರೆ.
1) ಕೆಪಿಪಿ ಪೋರ್ಟಲ್ ವೆಬ್‌ಸೈಟ್: https://kppp.karnataka.gov.in ನಲ್ಲಿ ಡಾಕ್ಯೂಮೆಂಟ್‌ನ್ನು ಡೌನ್‌ಲೋಡ್ ಮಾಡಿಕೊಳ್ಳುವ ದಿನಾಂಕ: 21/03/2025 ರಿಂದ. 2) ಯಾವುದೇ ವಿಚಾರಣೆಗಳನ್ನು ಸಲ್ಲಿಸುವ ಕೊನೆಯ ದಿನಾಂಕ: 24/03/2025 ರಂದು 2.00 ಗಂಟೆವರೆಗೆ. 3) ಬಿಡ್ ಪೂರ್ವ ಭಾವಿ ಸಭೆಯ ದಿನಾಂಕ ಮತ್ತು ಸಮಯ: 24/03/2025 ರಂದು ಮಧ್ಯಾಹ್ನ 3:00 ಗಂಟೆಗೆ. 4) ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಟೆಂಡರ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕ: 28/03/2025 ರಂದು ಸಂಜೆ 4:00 ಗಂಟೆವರೆಗೆ. 5) ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ ಮತ್ತು ಸಮಯ: 29/03/2025 ರಂದು ಸಂಜೆ 4.30 ಗಂಟೆಗೆ. 6) ಅರ್ಜಿಗಳನ್ನು ತೆರೆಯುವ ಸ್ಥಳ: ಆನ್‌ಲೈನ್ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ. 7) ಸಂಪರ್ಕಿಸುವ ವಿಳಾಸ:ಕಾರ್ಯಪಾಲಕ ಅಭಿಯಂತರರು, ಚಿಕ್ಕಪೇಟೆ ವಿಭಾಗ, ಸಂಖ್ಯೆ.194, ಟಿ ಮರಿಯಪ್ಪ ರಸ್ತೆ, ಲಾಲ್‌ಭಾಗ ದಕ್ಷಿಣ ಗೇಟ್ ಎದುರು, ಸಿದ್ದಾಪುರ ವೃತ್ತ. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಪಡೆಯಬಹುದು.
ಸಹಿ/– ಕಾರ್ಯಪಾಲಕ ಅಭಿಯಂತರರು, ಚಿಕ್ಕಪೇಟೆ ವಿಭಾಗ

ಮುಸಲ್ಮಾನರ ಓಲೈಕೆ ಮೂಲಕ ಧರ್ಮಗಳ ನಡುವೆ ಬೆಂಕಿ ಹಚ್ಚಲು ಮುಖ್ಯಮಂತ್ರಿಗಳು ಹೊರಟಿದ್ದು, ಇದನ್ನು ನಾವು ವಿರೋಧಿಸುತ್ತೇವೆ. ಈ ಎಲ್ಲ ವಿಚಾರ ಮುಂದಿಟ್ಟು ಬಿಜೆಪಿ- ಜೆಡಿಎಸ್ ರಾಜ್ಯವ್ಯಾಪಿ ಹೋರಾಟ ಮಾಡಲಿದೆ. ಓಲೈಕೆ ರಾಜಕಾರಣಕ್ಕೆ ಇತಿಶ್ರೀ ಹಾಕಬೇಕು.

-ಬಿ.ವೈ.ವಿಜಯೇಂದ್ರ, ಬಿಜೆಪಿ ರಾಜ್ಯಾಧ್ಯಕ್ಷ

ಹನಿಟ್ರ್ಯಾಪ್ ವಿಚಾರದಲ್ಲಿ ನ್ಯಾಯಾಧೀಶರು, ಕೇಂದ್ರದ ನಾಯಕರ, ಸಚಿವರ ಹೆಸರು ತಂದಿದ್ದಾರೆ. ಇದರ ನ್ಯಾಯಾಂಗ ಅಥವಾ ಸಿಬಿಐ ತನಿಖೆ ಆಗಬೇಕು. ಕೇಂದ್ರದ ನಾಯಕರ ಫೋನ್ ಬಂತೆಂದು ಇದನ್ನು ಮುಚ್ಚಿ ಹಾಕುವ ಕೆಲಸವನ್ನು ಕಾಂಗ್ರೆಸಿನವರು ಮಾಡಬಾರದು. ಟೋಪಿ ಹಾಕಿಲ್ಲ ಎಂಬುದು ಬಿಟ್ಟರೆ ಸಿದ್ದರಾಮಯ್ಯನವರು ಮುಸಲ್ಮಾನರ ಬಜೆಟ್ ಮಂಡಿಸಿದ್ದಾರೆ.

-ಆರ್.ಅಶೋಕ ಪ್ರತಿಪಕ್ಷದ ನಾಯಕ



# ವಿಧಾನ ಮಂಡಲ ಅಧಿವೇಶನ

ಬಿಜೆಪಿ ಶಾಸಕರಿಗೆ ತಿರುಗೇಟು ನೀಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ | ಉಭಯ ಸದನದಲ್ಲಿ ಬಜೆಟ್ ಮೇಲಿನ ಚರ್ಚೆಗೆ ಉತ್ತರ | ಕೇಂದ್ರದಿಂದ ನ್ಯಾಯಯುತ ಅನುದಾನ ಬಂದರೆ ಇನ್ನಷ್ಟು ಅಭಿವೃದ್ಧಿ

# ಮುಸ್ಲಿಮರ ಬಜೆಟ್ ಅಲ್ಲ; ಸರ್ವ ಜನಾಂಗದ ಬಜೆಟ್

**ವಿಶ್ವವಾಣಿ ಸುದ್ದಿಮನೆ** ಬೆಂಗಳೂರು

ಹನಿಟ್ರ್ಯಾಪ್ ಗಲಾಟೆಯ ನಡುವೆಯೂ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬಜೆಟ್ ಮೇಲಿನ ಚರ್ಚೆಗೆ ಸುದೀರ್ಘ ಉತ್ತರ ನೀಡಿದ್ದಾರೆ. ಬಿಜೆಪಿಗರ 'ಹಲಾಲ್ ಬಜೆಟ್' ತಿರುಗೇಟು ನೀಡಿರುವ ಸಿದ್ದು, ಇದು 'ಸರ್ವ ಜನಾಂಗದ ಬಜೆಟ್' ಎಂದು ಸಮರ್ಥಿಸಿಕೊಂಡಿದ್ದಾರೆ.

ಶುಕ್ರವಾರ ಬೆಳಗ್ಗೆ ವಿಧಾನಸಭೆಯಲ್ಲಿ, ಬಳಿಕ ವಿಧಾನಪರಿಷತ್‌ನಲ್ಲಿ ಬಜೆಟ್ ಮೇಲಿನ ಚರ್ಚೆಗೆ ಸುದೀರ್ಘ ಉತ್ತರ ನೀಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ 'ಕೇಂದ್ರ ಸರಕಾರದಿಂದ ಬರಬೇಕಿರುವ ಅನುದಾನ ಸರಿಯಾಗಿ ಬಂದರೆ ರಾಜ್ಯ ಅಭಿವೃದ್ಧಿ ಸಾಧ್ಯ'. ಇದರೊಂದಿಗೆ ಬಿಜೆಪಿಯವರು ಟೀಕಿಸುತ್ತಿರುವಂತೆ, ಇದು ಮುಸ್ಲಿಮರ ಬಜೆಟ್ ಅಲ್ಲ. ಬದಲಿಗೆ ಸರ್ವಸ್ಪರ್ಶಿ ಬಜೆಟ್. ನಮ್ಮ ಸರಕಾರ ನಾಡಿನ ಸಮಗ್ರ ಅಭಿವೃದ್ಧಿಗೆ ದುಡಿಯುತ್ತಿದೆ. ಸುಸ್ಥಿರ ಅಭಿವೃದ್ಧಿಯತ್ತ ಕರ್ನಾಟಕವನ್ನು ಮುನ್ನಡೆಸುವುದು ನಮ್ಮ ಗುರಿ ಎಂದಿದ್ದಾರೆ.

ಮುಂದಿನ ದಿನಗಳಲ್ಲಿ ರಾಜಸ್ವ ಕೊರತೆಯನ್ನು ಹೋಗಲಾಡಿಸಿ ರೆವಿನ್ಯು ಸರ್ಪ್ಲಸ್ ಬಜೆಟ್ ಮಂಡಿಸುವುದು ಕೂಡ ನಮ್ಮ ಧ್ಯೇಯ. ಬಲಿಷ್ಠರು ಮಾತ್ರ ಬದುಕುತ್ತವೆ ಎಂಬುದು ಡಾರ್ವಿನ್ ಸಿದ್ಧಾಂತ. ಅದಕ್ಕೆ ವಿರುದ್ಧವಾಗಿ ಅಸಹಾಯಕರಿಗೆ, ದುರ್ಬಲ ವರ್ಗಗಳಿಗೆ ಶಕ್ತಿ ತುಂಬಿ ಸಮಾಜವನ್ನು ಸಮಗ್ರ ರೀತಿಯಲ್ಲಿ ಹಾಗೂ ಮಾನವೀಯ ನೆಲೆಯಲ್ಲಿ ಮುನ್ನಡೆಸಬೇಕು ಎನ್ನುವ ಕಾಳಜಿಯಿಂದ ನಾವು ಈ ಬಜೆಟ್ ಅನ್ನು ರೂಪಿಸಿದ್ದೇವೆ. ಈ ಸಾಲಿನಲ್ಲಿ 4,09,549 ಕೋಟಿ ಗ್ರಾತದ ಬಜೆಟ್ ಮಂಡಿಸಿದ್ದು, ಕಳೆದ ವರ್ಷಕ್ಕೆ ಹೋಲಿಸಿದರೆ ಶೇ. 10.3 ರಷ್ಟು ಹೆಚ್ಚಿನ ಬೆಳವಣಿಗೆ ಕಂಡಿದೆ.

ರಾಜ್ಯ ಸರಕಾರ 3.12 ಲಕ್ಷ ಕೋಟಿ ಸಾಲ ಪಡೆದಿರುವುದು ನಿಜ. ಆದರೆ ಈ ಸಾಲವನ್ನು ಬಂಡವಾಳ ಯೋಜನೆಗಳಿಗೆ ಮತ್ತು ಕಲ್ಯಾಣ ಕಾರ್ಯಕ್ರಮಗಳಿಗೆ ಸಮರ್ಪಕವಾಗಿ ಬಳಕೆ ಮಾಡುವ ಮೂಲಕ ರಾಜ್ಯದ ಆರ್ಥಿಕ ಪ್ರಗತಿಗೆ ವಿನಿಯೋಗಿಸಲಾಗಿದೆ. ಅಲ್ಲದೆ ಈ ಅವಧಿಯಲ್ಲಿ ಮಾಡಿರುವ ಸಾಲ ಕೇಂದ್ರ ಸರಕಾರ ವಿಧಿಸಿರುವ ಮಿತಿಯೊಳಗೆ ನಿರ್ವಹಿಸಲಾಗಿರುತ್ತದೆ ಹಾಗೂ ನಮ್ಮ ಅಧಿಕಾರಾವಧಿಯಲ್ಲಿ ವಿತ್ತೀಯ ಶಿಸ್ತನ್ನು ಕಡ್ಡಾಯವಾಗಿ ಪಾಲನೆ ಮಾಡಿದ್ದೇನೆ ಎಂದು ವಿಶ್ವಾಸವ್ಯಕ್ತಪಡಿಸಿದರು.

**ಸಾಲ ಸುಳಿಗೆ ಸಿಲುಕಿರುವ ಆರೋಪ ಸರಿಯಲ್ಲ:** ರಾಜ್ಯ ಸರಕಾರದ ಸಾಲದ ಸುಳಿಯಲ್ಲಿ ಸಿಲುಕಿದೆ ಎಂಬ ವಿಪಕ್ಷಗಳ ಆರೋಪ ಸರಿಯಲ್ಲ. ವಾಸ್ತವ ಏನೆಂದರೆ 2013-14 ರಿಂದ 2017-18 ಹಾಗೂ 2023-24 ರಿಂದ 2024-25ರ ನನ್ನ ಸರಕಾರದ ಅವಧಿಯಲ್ಲಿ ಪಡೆದಿರುವ ಒಟ್ಟು ಸಾಲವು 3,21037 ಕೋಟಿ ರು.ಗಳು. ಈ ಅವಧಿಯಲ್ಲಿ ನಾನು ಹಿಂದಿನ ಸರಕಾರಗಳು ಮಾಡಿದ ಸುಮಾರು 75 ಸಾವಿರ ಕೋಟಿ ರುಯನ್ನು ತೀರಿಸಿದ್ದೇನೆ. ಅಲ್ಲದೆ ಈ ಅವಧಿಯಲ್ಲಿ ನಾನು 2,37,524 ಕೋಟಿ ರೂ.ಗಳಷ್ಟು ಅನುದಾನವನ್ನು ಬಂಡವಾಳ ಕಾಮಗಾರಿಗಳಿಗೆ ನೀಡಿರುತ್ತೇನೆ ಎಂದು ವಿವರಿಸಿದರು.

ಕೇಂದ್ರದಲ್ಲಿ ಮೋದಿಯವರ ನೇತೃತ್ವದ ಸರಕಾರ ಅಧಿಕಾರಕ್ಕೆ ಬಂದ ಮೇಲೆ ರಾಜ್ಯಗಳ ಆರ್ಥಿಕ ಸ್ಥಿತಿ ಸಂಕಷ್ಟಕ್ಕೆ ಸಿಲುಕಿಕೊಂಡಿದೆ. 2013 ರಿಂದ 17ರವರೆಗೂ ಕೇವಲ 4 ರಾಜ್ಯಗಳ ವಿತ್ತೀಯ ಕೊರತೆ ಶೇ. 3ಕ್ಕಿಂತ ಹೆಚ್ಚಿತ್ತು. ಹಾಗೆಯೇ 5 ರಾಜ್ಯಗಳ ಒಟ್ಟು ಹೊಣೆಗಾರಿಕೆಗಳು ಶೇ. 25ಕ್ಕಿಂತ ಹೆಚ್ಚು ಇದ್ದವು. ಆದರೆ 2024-25ರಲ್ಲಿ ದೇಶದ ಪ್ರಮುಖ 14 ರಾಜ್ಯಗಳ ಪೈಕಿ 10 ರಾಜ್ಯಗಳ ಒಟ್ಟು ಹೊಣೆಗಾರಿಕೆಗಳು ಶೇ. 25ಕ್ಕಿಂತ ಹೆಚ್ಚಿಗೆ ಇವೆ. ಅದೇ ರೀತಿ 5ಕ್ಕಿಂತ ಹೆಚ್ಚು ರಾಜ್ಯಗಳ ವಿತ್ತೀಯ ಕೊರತೆ ಶೇ. 3 ಕ್ಕಿಂತ ಹೆಚ್ಚಾಗಿದೆ ಎಂದು ಅವರು ತಿಳಿಸಿದರು.

ಈ ಬಾರಿ ನಮ್ಮ ಸರಕಾರ ಮಂಡಿಸಿರುವ ಬಜೆಟ್‌ನಲ್ಲಿ ಗ್ಯಾರಂಟಿ ಯೋಜನೆ ಮಾತ್ರವಲ್ಲದೇ, ಅವುಗಳನ್ನು ಮೀರಿದ ಯೋಜನೆ ನೀಡಿದ್ದೇನೆ ಎನ್ನುವ ಹೆಮ್ಮೆಯಿಂದ. 2025-26 ರಲ್ಲಿ ನಾನು 16ನೇ ಬಜೆಟ್ ಮಂಡಿಸಿದ್ದು, ಈ ಹಿಂದೆ ನಾನು ಮಂಡಿಸಿರುವ ಬಜೆಟ್ ಬಡವರ, ಮಹಿಳೆಯರ, ಮಕ್ಕಳ, ಶೋಷಿತರ, ದುರ್ಬಲ ವರ್ಗದವರ, ಯುವಜನರ, ಕಾರ್ಮಿಕರ, ರೈತರ, ಹಿಂದುಳಿದವರ, ಅಲ್ಪಸಂಖ್ಯಾತರ ಏಳ್ಗೆಯನ್ನು ಹಾಗೂ ಸಂಪತ್ತನ್ನು, ಉತ್ಪಾದನೆ ಮಾಡುವವರ ಹಿತರಕ್ಷಣೆಯನ್ನು ಗಮನದಲ್ಲಿಟ್ಟುಕೊಂಡು ನಾಡಿನ ಮೂಲಭೂತ ಸೌಲಭ್ಯಗಳಿಗೆ ಆದ್ಯತೆ ನೀಡುವ ಮೂಲಕ ಕಲ್ಯಾಣ ಕಾರ್ಯಕ್ರಮಗಳನ್ನು ರೂಪಿಸಿ, ಅನುಷ್ಠಾನ ಮಾಡುವ ಮೂಲಕ ಕರ್ನಾಟಕವನ್ನು ಸಮಗ್ರ ಹಾಗೂ ಸುಸ್ಥಿರ ಮಾದರಿಯಲ್ಲಿ ಅಭಿವೃದ್ಧಿಪಡಿಸಲು ಶ್ರಮಿಸುವ ನಿಟ್ಟಿನಲ್ಲಿ ನಾನು ಬಜೆಟ್‌ಗಳನ್ನು ರೂಪಿಸಿದ್ದೇನೆ. ಈ ಬಾರಿಯೂ ಅದೇ ಕೆಲಸವನ್ನು ಮಾಡಿದ್ದೇನೆ ಎಂಬ ದೃಢ ನಂಬಿಕೆ ತಮ್ಮದು ಎಂದರು.

ಹಿಂದಿನ ಸರಕಾರ ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದ ವಿದ್ಯುತ್ ಕಂಪನಿಗಳ ಬಲವರ್ಧನೆ ಮಾಡುವಲ್ಲಿ ವಿಫಲವಾಗಿತ್ತು. ಆದ್ದರಿಂದ 5,258 ಕೋಟಿಗಳಷ್ಟು ಗ್ರಾಮ ಪಂಚಾಯತಿಗಳ ಬಾಕಿ ವಿದ್ಯುತ್ ಬಿಲ್‌ಗಳನ್ನು ರಾಜ್ಯ ಸರಕಾರವೇ ಪಿಸಿಕೆಎಲ್ ಮುಖಾಂತರ ಸಾಲ ಪಡೆದು ಪಾವತಿಸುತ್ತಿದೆ. ಇದರೊಂದಿಗೆ ಹಿಂದಿನ ಸರಕಾರ ನೀರಾವರಿ ಪಂಪ್‌ಸೆಟ್‌ಗಳಿಗೆ ಕೊಡಬೇಕಾದ ಸಹಾಯಧನವನ್ನು ಪಾವತಿಸದ ಕಾರಣ ಸಮಸ್ಯೆಯಾಗಿದೆ.

-ಸಿದ್ದರಾಮಯ್ಯ, ಮುಖ್ಯಮಂತ್ರಿ

## ಮುಸ್ಲಿಮರಿಗೆ ಮೀಸಲು ಹಂಚಿಕೆಯಲ್ಲಿ ತಪ್ಪಿಲ್ಲ

ಮುಖ್ಯಮಂತ್ರಿ ಸಿದ್ದರಾಮಯ್ಯನವರು ಬಜೆಟ್ ಭಾಷಣದಲ್ಲಿ ಮುಸ್ಲಿಂ ಸಮುದಾಯಕ್ಕೆ ಶೇ. 4 ರಷ್ಟು ಗುತ್ತಿಗೆ ನೀಡುವ ಸರಕಾರದ ತೀರ್ಮಾನವನ್ನು ಸಮರ್ಥಿಸಿಕೊಂಡಿದ್ದಾರೆ. ಪ್ರತಿಪಕ್ಷಗಳು ನಮ್ಮ ಮುಸ್ಲಿಂ ಬಜೆಟ್ ಎಂದೆಲ್ಲಾ ಹೇಳಿದ್ದಾರೆ. ಇದು ಸರ್ವೋದಯದ ಬಜೆಟ್ ಎಂದು ಹೇಳಿ, ಭಾರಿಸು ಕನ್ನಡ ಡಿಂಡಿಮವ, ಓ ಕರ್ನಾಟಕ ಹೃದಯ ಶಿವ ಎಂಬ ರಾಷ್ಟ್ರಕವಿ ಕುವೆಂಪುರವರ ಕವನವನ್ನು ಉತ್ತರದಲ್ಲಿ ಉಲ್ಲೇಖಿಸಿ, ಇನ್ನಷ್ಟು ದಿನ ಧರ್ಮ ಧರ್ಮಗಳ ನಡುವೆ, ಜಾತಿ ಜಾತಿಗಳ ನಡುವೆ ದ್ವೇಷ, ಅಸಹನೆ ಹುಟ್ಟುಹಾಕುತ್ತೀರಿ, ಕುವೆಂಪು ಕಡೆಯದಾಯಿ ಸರ್ವೋದಯವಾಗಲಿ ಎನ್ನುತ್ತಾರೆ. ನಾವು ಬಜೆಟ್ ಪುಸ್ತಕದಲ್ಲಿ ಅದನ್ನೇ ಹೇಳಿದ್ದೇವೆ. ನಮ್ಮ ಉದ್ದೇಶವನ್ನು ಸೋಷಿಯಲ್ ಡಾರ್ವಿನಿಸಂ ಕಡೆಗೆ ಕೊಂಡೊಯ್ಯುವುದಲ್ಲ, ಸಂವಿಧಾನದ ಕಡೆಗೆ ಕೊಂಡೊಯ್ಯುವುದು, ದಮನಿತ ಮತ್ತ ಮಹಿಳೆಯರನ್ನು ಸಬಲೀಕರಣಗೊಳಿಸಿ ಈ ವರ್ಗಗಳಿಗೆ ನ್ಯಾಯ ಕೊಡುವುದು ಸಂವಿಧಾನದ ಆಶಯ. ಆ ಹಾದಿಯಲ್ಲೇ ನಾವು ಮುನ್ನಡೆದಿದ್ದೇವೆ ಎಂದರು. ದೇಶದ ಜನಸಂಖ್ಯೆಯಲ್ಲಿ ಅಲ್ಪಸಂಖ್ಯಾತರ ಪ್ರಮಾಣ ಶೇ. 15 ರಷ್ಟಿದೆ. ಇಷ್ಟು ದೊಡ್ಡ ಜನಸಂಖ್ಯೆಯ ಸಮುದಾಯದ ಕಲ್ಯಾಣಕ್ಕೆ ಈ ಬಾರಿ ಬಜೆಟ್‌ನಲ್ಲಿ 4514 ಕೋಟಿ ಒದಗಿಸಿದ್ದೇವೆ. ಇದು ಒಟ್ಟಾರೆ ಬಜೆಟ್‌ನಲ್ಲಿ ಶೇ. 1.1 ರಷ್ಟು ಮಾತ್ರ. ಇಷ್ಟಕ್ಕೆ ಇಷ್ಟೊಂದು ದ್ವೇಷ ಏಕೆ. ಶೇ. 15 ರಷ್ಟಿರುವ ಜನರನ್ನು ಅಭಿವೃದ್ಧಿಯ ಹಾದಿಗೆ ತರದೆ ಜಿಎಸ್‌ಡಿಪಿ ಮತ್ತು ಜಿಡಿಪಿಗಳನ್ನು ಹೆಚ್ಚು ಮಾಡಲು ಹೇಗೆ ಸಾಧ್ಯ. ಇದಷ್ಟೇ ಅಲ್ಲ, ಈ ಸಮುದಾಯಗಳನ್ನು ದೂರ ಇಡುವುದು ಸಂವಿಧಾನ ವಿರೋಧಿ ನಡೆಯೂ ಆಗಿದೆ ಎಂದು ಮುಖ್ಯಮಂತ್ರಿಗಳು ಬಜೆಟ್‌ನಲ್ಲಿ ಅಲ್ಪಸಂಖ್ಯಾತರಿಗೆ ಹಣ ಒದಗಿಸಿರುವುದನ್ನು ಸಮರ್ಥಿಸಿಕೊಂಡಿದ್ದಾರೆ.

## 12 ಸಾವಿರ ಕೋಟಿ ನಷ್ಟ

ಕೇಂದ್ರದಿಂದ ಬರಬೇಕಿರುವ ತೆರಿಗೆ ಕರ್ನಾಟಕಕ್ಕೆ ಸಮರ್ಪಕವಾಗಿ ಬರುತ್ತಿಲ್ಲ. ಯೋಜನೆಗಳನ್ನೂ ತೆಗೆದುಕೊಳ್ಳುತ್ತಿಲ್ಲ. ಕರ್ನಾಟಕಕ್ಕೆ 14ನೇ ಹಣಕಾಸು ಆಯೋಗವು ಶೇ.4.71ರಷ್ಟು ತೆರಿಗೆ ಪಾಲು ನೀಡಿತ್ತು. ಆದರೆ, 15ನೇ ಹಣಕಾಸು ಆಯೋಗವು ಶೇ.3.64ಕ್ಕೆ ಇಳಿಸಿದರು. ಶೇ.23ರಷ್ಟು ಕುಸಿತವಾಯಿತು. ಇದರಿಂದ ಪ್ರತಿ ವರ್ಷ 12 ಸಾವಿರ ಕೋಟಿ ರಾಜ್ಯಕ್ಕೆ ನಷ್ಟವಾಗುತ್ತಿದೆ. ಇದಷ್ಟೆ ಅಲ್ಲದೇ, 15ನೇ ಹಣಕಾಸು ಆಯೋಗವು 5,495 ಕೋಟಿ ವಿಶೇಷ ಅನುದಾನ ಕೊಡಲು ಶಿಫಾರಸು ಮಾಡಿತ್ತು. ಕೆರೆಗಳ ಅಭಿವೃದ್ಧಿಗೆ 3,000 ಕೋಟಿ ಹಾಗೂ ಫೆರಿಫೆರಲ್ ರಿಂಗ್ ರಸ್ತೆ ಅಭಿವೃದ್ಧಿಗೆ 3,000 ಕೋಟಿ ರು. ಶಿಫಾರಸು ಮಾಡಿತ್ತು. ಅದನ್ನೂ ಕೊಡಲಿಲ್ಲ ಎಂದು ಆರೋಪಿಸಿದರು. ಹಾಗೆಯೇ, ಭದ್ರಾ ಮೇಲ್ದಂಡೆ ಯೋಜನೆಗೆ 5,300 ಕೋಟಿ ರೂ. ಕೊಡುತ್ತೇವೆ ಎಂದು ಹೇಳಿ, ಕೊಡದೇ ದ್ರೋಹ ಮಾಡಲಾಗಿದೆ. ಈ ಕುರಿತು ವಿರೋಧ ಪಕ್ಷದವರು ತುಟಿಕ್ ಪಿಟಿಕ್ಕೆನ್ನುವುದಿಲ್ಲ. ಬದಲಾಗಿ ಮೋದಿ ಸರಕಾರದ ದ್ರೋಹವನ್ನು ಸಮರ್ಥಿಸುತ್ತಾರೆ ಎಂದು ಸಿಎಂ ಹೇಳಿದರು.

- 2024-25ರಲ್ಲಿ ಮೋದಿ ಸರಕಾರ 48.21 ಲಕ್ಷ ಕೋಟಿ ಬಜೆಟ್ ಮಂಡಿಸಿತ್ತು. ಆದರೆ, ಪರಿಷ್ಕೃತ ಅಂದಾಜುಗಳ ಪ್ರಕಾರ, ತೆರಿಗೆ ಸಂಗ್ರಹಣೆ ಕುಸಿದು, 47.16 ಲಕ್ಷ ಕೋಟಿಗೆ ಪರಿಷ್ಕರಣೆ ಮಾಡಿದೆ.
- ನಮ್ಮ ಸರಕಾರ ಎಲ್ಲಾ ಧರ್ಮದ ಪುರೋಹಿತರಿಗೆ ಸಮಾನವಾಗಿ ಮಾಸಿಕ 6000 ರು. ಗೌರವಧನ ನೀಡಲು ಉದ್ದೇಶಿಸಲಾಗಿದೆ.
- ಬಂಡವಾಳ ವೆಚ್ಚಗಳಿಗೆ ಈ ವರ್ಷ 83,200 ಕೋಟಿ ರು.ಗಳನ್ನು ಒದಗಿಸಿದ್ದೇವೆ. ಇಷ್ಟಾದರೂ ಸಹ, ಕರ್ನಾಟಕ ಸರಕಾರ ವಿತ್ತೀಯ ಶಿಸ್ತು ನಿಯಮದ ಅನುಗುಣವಾಗಿದೆ.
- ಕೇಂದ್ರ ಸರಕಾರ ಸೆಸ್ ನೆಪದಲ್ಲಿ ಸುಲಿಗೆ ಮಾಡುತ್ತಿದೆ. ಸೆಸ್‌ಗಳನ್ನು ತೆರಿಗೆ ಪಾಲಿನ ವ್ಯಾಪ್ತಿಗೆ ಒಳಪಡಿಸಬೇಕು ಎಂಬುದು ನಮ್ಮ ಒತ್ತಾಯವಾಗಿದೆ.

## ಯುಪಿಎ ಅವಧಿಯಲ್ಲಿ ಯಥೇಚ್ಛ ಅನುದಾನ

2005ರಿಂದ 2014ರ ವರೆಗಿನ 9 ವರ್ಷಗಳಲ್ಲಿ ಸುಮಾರು 7 ವರ್ಷಗಳ ಕಾಲ ಕಾಂಗ್ರೆಸ್ಸೇತರ ಸರಕಾರಗಳೇ ರಾಜ್ಯದಲ್ಲಿ ಆಡಳಿತ ನಡೆಸಿದ್ದವು. ಆದರೂ ಮನಮೋಹನ್ ಸಿಂಗ್ ಸರಕಾರ ಕರ್ನಾಟಕದ ಅಭಿವೃದ್ಧಿಗೆ ಅನುದಾನಗಳನ್ನು ಯಥೇಚ್ಛವಾಗಿ ಕೊಟ್ಟಿತ್ತು. ಮೂಲಸೌಕರ್ಯ ನಿರ್ಮಾಣ ಮಾಡಲು ಶ್ರಮಿಸಿತ್ತು. ಮೋದಿ ಅಧಿಕಾರಕ್ಕೆ ಬಂದ ಮೇಲೆ 10 ವರ್ಷಗಳಲ್ಲಿ ಹಿಂದೆ ನಿರ್ಮಿಸಿದ್ದಕ್ಕಿಂತ ಕಡಿಮೆ ಉದ್ದದ ಹೆದ್ದಾರಿಯನ್ನು ನಿರ್ಮಿಸಲಾಗಿದೆ. ಆದರೆ, ಮಹಾರಾಷ್ಟ್ರದಲ್ಲಿ 12,210 ಕಿ.ಮೀ., ಉತ್ತರ ಪ್ರದೇಶದಲ್ಲಿ 4,306 ಕಿ.ಮೀ., ಗುಜರಾತ್‌ನಲ್ಲಿ 3,405 ಕಿ.ಮೀ., ರಾಜಸ್ಥಾನದಲ್ಲಿ 3,060 ಕಿ.ಮೀ. ಉದ್ದದ ಹೆದ್ದಾರಿಗಳನ್ನು ನಿರ್ಮಾಣ ಮಾಡಲಾಗಿದೆ ಎಂದು ವಿವರಿಸಿದರು. ಈ ವರ್ಷ ಇನ್ನೂ ಎಲ್ಲ ರಾಜ್ಯಗಳ ಬಜೆಟ್ ಆಗದಿರುವ ಕಾರಣಕ್ಕೆ ನಾನು 2024-25ರ ಬಜೆಟ್‌ನಲ್ಲಿ ಕೇಂದ್ರ ಸರಕಾರದಿಂದ ತೆರಿಗೆ ಪಾಲು ಹಾಗೂ ಕೇಂದ್ರ ಪುರಸ್ಕೃತ ಯೋಜನೆಗಳಲ್ಲಿ ಎಷ್ಟೆಷ್ಟು ಅನುದಾನ ರಾಜ್ಯಗಳು ಪಡೆದಿವೆ ಎಂಬುದನ್ನು ಹೇಳುತ್ತೇನೆ ಎಂದರು.

---

ಬಿಜೆಪಿ, ಜೆಡಿಎಸ್ ಸದಸ್ಯರಿಂದ ಕಲಾಪದಲ್ಲಿ ಗದ್ದಲ

# ವಿಧಾನ ಪರಿಷತ್‌ನಲ್ಲೂ ಹನಿಟ್ರ್ಯಾಪ್ ದಂಗಲ್!

**ವಿಧಾನ ಪರಿಷತ್:** ವಿಧಾನಸಭೆ ಕಲಾಪದಲ್ಲಿ ನಡೆದ ಹನಿಟ್ರ್ಯಾಪ್ ಗದ್ದಲ, ಬಿಜೆಪಿ ಶಾಸಕರ ಅಮಾನತು ಪ್ರಕರಣ ವಿಧಾನ ಪರಿಷತ್‌ನಲ್ಲೂ ಪ್ರತಿಧ್ವನಿಸಿದ್ದು, ಬಿಜೆಪಿ ಸದಸ್ಯರು ಕಲಾಪಕ್ಕೆ ಅಡ್ಡಿಪಡಿಸಿದ ಘಟನೆ ನಡೆಯಿತು.

ಬಿಜೆಪಿ ಮತ್ತು ಜೆಡಿಎಸ್ ಸದಸ್ಯರು ಕೂಗಾಡುತ್ತಿರುವಾಗಲೇ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಡಿಸಿಎಂ ಡಿ.ಕೆ. ಶಿವಕುಮಾರ್ ಪರಿಷತ್ತನ್ನು ಪ್ರವೇಶಿಸಿದರು. ಅಸಲಿಗೆ ಕಾಂಗ್ರೆಸ್ ಸದಸ್ಯ ಪುಟ್ಟಣ್ಣ ಸದನದಲ್ಲಿ ಅಕ್ಷೇಪಾರ್ಹ ಪದವನ್ನು ಬಳಸಿದ್ದಕ್ಕೆ ಅವರನ್ನು ಸದನದಿಂದ ಹೊರ ಹಾಕಬೇಕೆಂದು ಪ್ರತಿಪಕ್ಷಗಳ ಸದಸ್ಯರು ಸಭಾಪತಿ ಬಸವರಾಜ ಹೊರಟ್ಟಿ ಅವರನ್ನು ಆಗ್ರಹಿಸುತ್ತಿದ್ದರು. ಇದೇ ವೇಳೆ ಹನಿಟ್ರ್ಯಾಪ್ ಪ್ರಕರಣ ಕುರಿತು ಮುನ್ನಲೆಗೆ ಬಂತು.

ಬಿಜೆಪಿ ಸದಸ್ಯರು ಪರಿಷತ್‌ನಲ್ಲಿಯೂ ಹನಿಟ್ರ್ಯಾಪ್ ಪ್ರಕರಣದ ವಿಚಾರ ಪ್ರಸ್ತಾಪಿಸಿ ಗದ್ದಲ ನಡೆಸಿದರು. ಜತೆ ಸಿ.ಡಿ ಪ್ರದರ್ಶನ ಮಾಡುವ ಮೂಲಕ ಉನ್ನತಮಟ್ಟದ ತನಿಖೆಯಾಗಬೇಕು. ಇದೇ ವೇಳೆ ಸಭಾಪತಿ ಪೀಠದ ಮುಂದೆ ತೆರಳಿ ನಿರ್ಣಯಗಳ ಪ್ರತಿ ಹರಿದು ತೂರಾಟಿ ಆಕ್ರೋಶ ವ್ಯಕ್ತಪಡಿಸಿದರು. ಈ ವೇಳೆ ಸಭಾಪತಿ ಬಸವರಾಜ ಹೊರಟ್ಟಿ ಅವರು ಕೆಲಕಾಲ ಕಲಾಪವನ್ನು ಮುಂದೂಡಿದರು.

ಈ ಬಗ್ಗೆ ವಿಧಾನ ಪರಿಷತ್ ಸದಸ್ಯ ಸಿಟಿ ರವಿ ಪ್ರತಿಕ್ರಿಯಿಸಿದ್ದು, ಹನಿಟ್ರ್ಯಾಪ್ ಪ್ರಕರಣ ಬಹಳ ಗಂಭೀರ ಪ್ರಕರಣ. ಆಡಳಿತ ಪಕ್ಷದ ಸಚಿವರೇ ಹನಿಟ್ರ್ಯಾಪ್‌ಗೆ ಬಲಿಯಾಗಿದ್ದಾರೆ. ಇದನ್ನು ಗಂಭೀರವಾಗಿ ತೆಗೆದುಕೊಂಡು ಸಿಬಿಐ ತನಿಖೆಗೆ ವಹಿಸಬೇಕು ಎಂದು ಒತ್ತಾಯಿಸಿದರು.

## ಸಿಬಿಐ ತನಿಖೆಯಾಗಲಿ

ಅಧಿಕಾರಕ್ಕಾಗಿ ಹನಿಟ್ರ್ಯಾಪ್ ಮಾಡಿ ಎಷ್ಟು ಜನರ ಸಾರ್ವಜನಿಕ ಬದುಕು ಹಾಳುಮಾಡಿದ್ದಾರೋ ಗೊತ್ತಿಲ್ಲ. ಇದೀಗ ಅವರದೇ ಸರಕಾರದ ಸಚಿವರೊಬ್ಬರ ವಿರುದ್ಧ ಮಾಡಿದ್ದಾರೆಂದರೆ ಇದೊಂದು ಗಂಭೀರ ಪ್ರಕರಣ. ಈ ವಿಚಾರದಲ್ಲಿ ಬ್ಲ್ಯಾಕ್‌ಮೇಲ್ ಕೂಡ ನಡೆದಿದೆ. ತನಗೆ ಬೇಕಾದಂತೆ ನಡೆಸಿಕೊಳ್ಳಲು ಈ ರೀತಿ ಹನಿಟ್ರ್ಯಾಪ್ ಮೂಲಕ ಬ್ಲ್ಯಾಕ್ ಮೇಲ್ ಮಾಡಲಾಗಿದೆ. ಹೀಗಾಗಿ ಇದರ ಹಿಂದೆ ಯಾರಿದ್ದಾರೆಂದು ತಿಳಿಯಬೇಕು, ಯಾರಾರ ಮನೆ, ರಾಜಕೀಯ ಬದುಕು ಹಾಳಾಗಿದೆ ಎಲ್ಲವೂ ಗೊತ್ತಾಗಬೇಕು. ಹಾಲಿನದ್ದು ಹಾಲಿಗೆ ನೀರಿನದ್ದು ನೀರಿಗೆ ಹೋಗಲಿ. ಹೀಗಾಗಿ ಈ ಪ್ರಕರಣವನ್ನು ಸಿಬಿಐ ತನಿಖೆಗೆ ಕೊಡಬೇಕೆಂದು ವಿಧಾನ ಪರಿಷತ್ ಸದಸ್ಯ ಸಿಟಿ ರವಿ ಮುಖ್ಯಮಂತ್ರಿಗೆ ಆಗ್ರಹಿಸಿದರು.

# ನಾವು ಕೂರಲ್ಲ, ಥೂ ನಿಮ್ಮ ಜನ್ಮಕ್ಕೆ...

**ವಿಧಾನಪರಿಷತ್:** ವಿಧಾನ ಪರಿಷತ್‌ನಲ್ಲಿ ಕಲಾಪ ಆರಂಭದ ವೇಳೆಯಲ್ಲಿ ಚರ್ಚೆಯ ವೇಳೆ ಛಲವಾದಿ ನಾರಾಯಣಸ್ವಾಮಿ ಮತ್ತು ಪುಟ್ಟಣ್ಣ ನಡುವೆ ವಾಗ್ವಾದ ನಡೆಯಿತು.

ಈ ವೇಳೆ ಸದನ ನಿಮ್ಮಪ್ಪಂದಲ್ಲ ಎಂದು ಪ್ರತಿಪಕ್ಷ ನಾಯಕ ಛಲವಾದಿ ನಾರಾಯಣ ಸ್ವಾಮಿಗೆ ಪುಟ್ಟಣ್ಣ ಹೇಳುತ್ತಿದ್ದಂತೆ ಪಾಯಿಂಟ್ ಆಫ್ ಆರ್ಡರ್ ಎತ್ತಿದ್ದ ಛಲವಾದಿ, ಸದನ ನೀಡಿದ ಅಧಿಕಾರದಿಂದ ಪ್ರತಿಪಕ್ಷ ನಾಯಕನಾಗಿ ಹಕ್ಕು ಚಲಾಯಿಸಿದ್ದೇನೆ ಎಂದರು. ಸಭಾಪತಿ ಅವರು ಪುಟ್ಟಣ್ಣ ಹೇಳಿಕೆ ಸರಿಯಲ್ಲ ಎಂದು ಅಭಿಪ್ರಾಯ ವ್ಯಕ್ತಪಡಿಸಿ ಕಡತದಿಂದ ಪದ ತೆಗೆಯಲು ಸೂಚಿಸಿದರು. ನಾವು ಕೂರಲ್ಲ, ಥೂ ನಿಮ್ಮ ಜನ್ಮಕ್ಕೆ ಅಂದ್ರು, ಈಗ ಸದನ ನಿಮ್ಮಪ್ಪಂದ ಅಂದಿದ್ದಾರೆ. ಇದು ದುರಹಂಕಾರದ ಪರಮಾವಧಿ ಎಂದು ವಿಪಕ್ಷಗಳು ಆಕ್ರೋಶ ಹೊರ ಹಾಕಿದವು.

ಸದನ ನಡೆಯಲು ನಮ್ಮಿಂದ ಅಡ್ಡಿಯಿಲ್ಲ. ಮೊನ್ನೆ ಥೂ ನಿಮ್ಮ ಜನ್ಮಕ್ಕೆ ಅಂದ್ರು ಸಹಿಸಿಕೊಂಡ್ವಿ. ಇವತ್ತು ನಮ್ಮ ಅಪ್ಪನ ತನಕ ಬಂದಿದ್ದಾರೆ. ನಾಳೆ ಎಲ್ಲಿಗೆ ಬರಬಹುದು? ಕಾರ್ಯದರ್ಶಿಯವರ ಬಳಿ ಬಂದು ಬೆದರಿಕೆ ಹಾಕಿದ್ದಾರೆ ಎಂದು ಛಲವಾದಿ ಆಕ್ಷೇಪಿಸಿದರು. ಇಲ್ಲಿ ಗೂಂಡಾಗಿರಿ ಮಾಡಿದರೆ ಸಹಿಸಿಕೊಳ್ಳಬೇಕಾ? ಎಂದು ಛಲವಾದಿ ಪ್ರಶ್ನೆಗೆ ಉತ್ತರಿಸಿದ ಪುಟ್ಟಣ್ಣ, ನೀವು ಗೂಂಡಾಗಳು, ನೀವು ಭ್ರಷ್ಟಾಚಾರಿಗಳು ಎಂದು ಆರೋಪಿಸಿದರು.

---

ವಿಧಾನ ಪರಿಷತ್‌ನಲ್ಲಿ ಬಿಜೆಪಿ, ಜೆಡಿಎಸ್ ಸದಸ್ಯರಿಂದ ಸಭಾಧ್ಯಕ್ಷರ ಪೀಠದ ಮುಂದೆ ಬಾವಿಗಿಳಿದು ಧರಣಿ

# ಅಂಬೇಡ್ಕರ್ ವಿಚಾರ: ಆಡಳಿತ, ಪ್ರತಿಪಕ್ಷಗಳ ನಡುವೆ ವಾಗ್ವಾದ

**ವಿಧಾನ ಪರಿಷತ್:** ಸಂವಿಧಾನ ಮತ್ತು ಬಿ.ಆರ್. ಅಂಬೇಡ್ಕರ್ ಅವರ ವಿಚಾರದಲ್ಲಿ ಆಡಳಿತ ಪಕ್ಷ ಹಾಗೂ ಪ್ರತಿಪಕ್ಷಗಳ ಸದಸ್ಯರ ನಡುವೆ ಏರಿದ ಧ್ವನಿಯಲ್ಲಿ ವಾದ ವಾಗ್ವಾದ, ಆರೋಪ-ಪ್ರತ್ಯಾರೋಪಗಳಿಂದಾಗಿ ಇಡೀ ಸದನ ಗೊಂದಲದ ಗೂಡಾಗಿ ಕೋಲಾಹಲದ ವಾತಾವರಣ ನಿರ್ಮಾಣವಾಗಿದ್ದರಿಂದ ತೀವ್ರ ಅಸಮಾಧಾನಗೊಂಡ ಸಭಾಪತಿ ಬಸವರಾಜ ಹೊರಟ್ಟಿ ಅವರು ಕಲಾಪವನ್ನು ಮುಂದೂಡಿದ ಪ್ರಸಂಗ ಜರುಗಿತು.

ಆರೋಪ ಪ್ರತ್ಯಾರೋಪ ತಾರಕಕ್ಕೇರಿದ ಸಂದರ್ಭದಲ್ಲೇ ಆಡಳಿತ ಪಕ್ಷದ ಸದಸ್ಯರೊಬ್ಬರು ಆಡಿದ ಮಾತಿನಿಂದ ಕೆರಳಿ ಕೆಂಡವಾದ ಬಿಜೆಪಿ ಹಾಗೂ ಜೆಡಿಎಸ್ ಸದಸ್ಯರು ಸಭಾಧ್ಯಕ್ಷರ ಪೀಠದ ಮುಂದಿನ ಬಾವಿಗಿಳಿದು ಧರಣಿ ನಡೆಸಿ ಸಂಬಂಧಿಸಿದ ಸದಸ್ಯರನ್ನು ಸದನದಿಂದ ಹೊರಹಾಕಬೇಕು ಎಂದು ಪಟ್ಟು ಹಿಡಿದು ಆಗ್ರಹಿಸಿದರು.

2025-26ನೇ ಸಾಲಿನ ಆಯವ್ಯಯ ಅಂದಾಜುಗಳ ಮೇಲಿನ ಮುಂದುವರಿದ ಚರ್ಚೆಯಲ್ಲಿ ಭಾಗವಹಿಸಿದ್ದ ಆಡಳಿತ ಪಕ್ಷದ ಸುಧಾಮ್ ದಾಸ್ ಅವರು ಕೇಂದ್ರ ಸರಕಾರದಿಂದ ಎಸ್ ಸಿ, ಎಸ್ಟಿ ಸಮುದಾಯಗಳಿಗೆ ಅನ್ಯಾಯವಾಗುತ್ತಿದೆ. ಯೋಜನ ಆಯೋಗವಿದ್ದಾಗ ಈ ಸಮುದಾಯಗಳ ಅಭಿವೃದ್ಧಿಗೆ ಇಂತಿಷ್ಟು ಮೀಸಲಿಡಬೇಕು ಎಂದು ಮಾಡಿದ್ದ ಸಲಹೆಗಳನ್ನು ಕೇಂದ್ರ ಸರಕಾರ ಪಾಲಿಸಲೇಬೇಕಾದ ಪರಿಸ್ಥಿತಿ ಇತ್ತು. ಆದರೆ, ಕೇಂದ್ರ ಸರಕಾರದ ಯೋಜನಾ ಆಯೋಗದ ಹೆಸರನ್ನು ನೀತಿ ಆಯೋಗವೆಂದು ಮಾರ್ಪಾಡು ಮಾಡಿದ ನಂತರ ಅದರ ಕಾರ್ಯವೈಖರಿ ಬದಲಾಗಿದೆ. ಪರಿಶಿಷ್ಟ ಸಮುದಾಯಗಳ ಏಳಿಗೆ ವಿಚಾರದಲ್ಲಿ ಆಯೋಗ ಮಾಡುವ ಸಲಹೆಗಳು ಕಡ್ಡಾಯವಾಗಿರುವುದಿಲ್ಲ ಎಂದು ಹೇಳುತ್ತಿದ್ದ ಸಂದರ್ಭದಲ್ಲಿ ಆಡಳಿತ ಮತ್ತು ಪ್ರತಿಪಕ್ಷಗಳ ನಡುವಿನ ಗದ್ದಲಕ್ಕೆ ಕಾರಣವಾಯಿತು.

**ಅಂಬೇಡ್ಕರ್‌ಗೆ ಅಪಪ್ರಚಾರ**

ಚರ್ಚೆ ಅಂಬೇಡ್ಕರ್ ಮತ್ತು ಸಂವಿಧಾನದತ್ತ ತಿರುಗಿ ಆಡಳಿತ ಮತ್ತು ಪ್ರತಿಪಕ್ಷಗಳ ಸದಸ್ಯರು ಪರಸ್ಪರ ವಾಗ್ಯುದ್ಧಕ್ಕೆ ನಿಂತು ನೀವು ಅಂಬೇಡ್ಕರ್ ಅವರಿಗೆ ಮತ್ತು ಸಂವಿಧಾನಕ್ಕೆ ಅಪಚಾರ ಎಸಗಿದ್ದೀರಿ ಎಂದು ಪರಸ್ಪರ ಆರೋಪ ಮತ್ತು ಪ್ರತ್ಯಾರೋಪ ಮಾಡಿದರು. ಇದೇ ರೀತಿಯ ಟೀಕೆ - ಟಿಪ್ಪಣಿ ಸುಮಾರು ಅರ್ಧ ಗಂಟೆ ಕಾಲ ನಡೆಯಿತು. ಒಂದು ಹಂತದಲ್ಲಿ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಮಾತನಾಡಿ, ಸಂವಿಧಾನಕ್ಕೆ ಅಪಚಾರ ಮತ್ತು ಅಂಬೇಡ್ಕರ್ ಅವರಿಗೆ ದ್ರೋಹ ಬಗೆದದ್ದು ಕಾಂಗ್ರೆಸ್ ಎಂದು ಆರೋಪಿಸಿದಾಗ, ಆಡಳಿತ ಪಕ್ಷದ ಸದಸ್ಯರೆಲ್ಲರೂ ತಿರುಗಿ ಬಿದ್ದರು.

ಛಲವಾದಿ ನಾರಾಯಣಸ್ವಾಮಿ ಅವರ ಬೆಂಬಲಕ್ಕೆ ಬಿಜೆಪಿ ಸದಸ್ಯರಾದ ರವಿಕುಮಾರ್,ಡಿ.ಎಸ್.ಅರುಣ್, ನವೀನ್ ಮತ್ತಿತರರು ನಿಂತರು. ಸಭಾನಾಯಕ ಎನ್.ಎಸ್.ಬೋಸರಾಜ್, ಸಚಿವ ಪ್ರಿಯಾಂಕ್ ಖರ್ಗೆ, ಆಡಳಿತ ಪಕ್ಷದ ಸದಸ್ಯರಾದ ಪುಟ್ಟಣ್ಣ, ಡಾ.ಯತೀಂದ್ರ, ಬಿ.ಕೆ. ಹರಿಪ್ರಸಾದ್, ಎಂ.ನಾಗರಾಜ್ ಮೊದಲಾದವರು ಬಿಜೆಪಿ ಸದಸ್ಯರ ಮಾತಿಗೆ ತೀವ್ರ ಆಕ್ಷೇಪ ವ್ಯಕ್ತಪಡಿಸಿ ಟೀಕಾಪ್ರಹಾರ ಮಾಡಿದರು. ಆದ್ದರಿಂದ ಸದನಲ್ಲಿ ಗದ್ದಲ, ಗೊಂದಲ, ಕೋಲಾಹ ವಾತಾವರಣ ಉಂಟಾಗಿ ಯಾರು ಏನು ಹೇಳುತ್ತಿದ್ದಾರೆ ಎಂಬುದು ಕೇಳಿಸಲಿಲ್ಲ, ಪರಿಸ್ಥಿತಿ ಕೈ ಮೀರುತ್ತಿರುವುದನ್ನು ಗಮನಿಸಿದ ಸಭಾಪತಿಯವರು, ಮೌನಕ್ಕೆ ಶರಣಾದರು. ಅಲ್ಲದೆ, ಗದ್ದಲದಲ್ಲಿ ಆಡುವ ಸದಸ್ಯರ ಮಾತುಗಳು ಕಡತಕ್ಕೆ ಹೋಗಬಾರದು ಎಂದು ಸೂಚಿಸಿದರು. ಈ ನಡುವೆ ಆಡಳಿತ ಪಕ್ಷದ ಎಂ.ನಾಗರಾಜ್ ಸಭಾಪತಿ ಪೀಠದ ಮುಂದಿನ ಬಾವಿಗೆ ಬಂದು ಮಾತನಾಡಿದಕ್ಕೆ ಛಲವಾದಿ ನಾರಾಯಣಸ್ವಾಮಿ ಆಕ್ಷೇಪಿಸಿ ಸರಕಾರವೇ ಬಾವಿಗೆ ಬಂದಿದೆ ಎಂದು ಛೇಡಿಸಿದರು.

## ಧರಣಿಯಲ್ಲಿಯೇ ಮುಳುಗಿದ ಕಲಾಪ

ಸುಧಾಮ್ ದಾಸ್ ಅವರಿಗೆ ಮಾತನಾಡಲು ಮತ್ತೊಮ್ಮೆ ಅವಕಾಶ ನೀಡಿದರೂ ಮಾತನಾಡಲು ಆಗಲಿಲ್ಲ. ಪ್ರಿಯಾಂಕ ಖರ್ಗೆ ಅವರಿಗೂ ಮಾತನಾಡಲು ಅವಕಾಶ ಸಿಗಲಿಲ್ಲ. ಒಂದು ಹಂತದಲ್ಲಿ ಪ್ರಿಯಾಂಕ್ ಖರ್ಗೆ ಅವರು ನೀಡಿದರೆನ್ನಲಾದ ಅಂಬೇಡ್ಕರ್ ಬರೆದಿರುವ ಪತ್ರವನ್ನು ವಾಚಿಸಿದರು. ಬಿಜೆಪಿಯ ಸದಸ್ಯ ಸಿ.ಟಿ.ರವಿ ಮತ್ತೊಂದು ಪತ್ರವನ್ನು ಪ್ರದರ್ಶಿಸಿ ವಾಚಿಸಿದರು. ಈ ಸಂದರ್ಭದಲ್ಲಿ ಆಡಳಿತ ಮತ್ತು ಪ್ರತಿ ಪಕ್ಷಗಳ ನಡುವೆ ಗದ್ದಲ ಮುಂದುವರಿದಿರುವಾಗಲೇ ಆಡಳಿತ ಪಕ್ಷದ ಪುಟ್ಟಣ್ಣ ಅವರು ಆಡಿದ ಆಕ್ಷೇಪಾರ್ಹ ಮಾತು ಛಲವಾದಿ ನಾರಾಯಣಸ್ವಾಮಿ ಅವರನ್ನು ಕೆರಳಿಸಿತು. ಪುಟ್ಟಣ್ಣ ಅವರನ್ನು ಸದನದಿಂದ ಹೊರ ಹಾಕಬೇಕು ಎಂದು ಆಗ್ರಹಿಸಿ ಬಾವಿಗಿಂದು ಬಿಜೆಪಿ ಮತ್ತು ಜೆಡಿಎಸ್ ಸದಸ್ಯರೊಂದಿಗೆ ಧರಣಿ ನಡೆಸಿದರು. ಆಗ ಸಭಾಪತಿ ಕಡತ ತರಿಸಿ ಪುಟ್ಟಣ್ಣ ಅವರು ಹೇಳಿರುವ ಮಾತನ್ನು ಕಡತದಿಂದ ತೆಗೆಸಿರುವುದಾಗಿ ಪ್ರಕಟಿಸಿದರು. ಅದಕ್ಕೂ ಒಪ್ಪದೇ ಪ್ರತಿಪಕ್ಷಗಳು ಧರಣಿ ಮುಂದುವರಿಸಿದವು. ಈ ಸಂದರ್ಭದಲ್ಲಿ ಪುಟ್ಟಣ್ಣ ಮಾತನಾಡಿ ನಾನು ಅಸಂಸದೀಯ ಶಬ್ದ ಬಳಸಿಲ್ಲ. ಅಂತಹ ಜಾಯಮಾನ ನನ್ನದಲ್ಲ ಎಂದು ಸ್ಪಷ್ಟನೆ ನೀಡಿದರು. ಇಷ್ಟಾದರೂ ಸದನದಲ್ಲಿ ಪ್ರತಿಪಕ್ಷಗಳು ಘೋಷಣೆ ಕೂಗುತ್ತಾ ಪಟ್ಟು ಧರಣಿ ಮುಂದುವರಿಸಿದರೆ, ಆಡಳಿತ ಪಕ್ಷದ ಸದಸ್ಯರು ಮಾತನಾಡಲು ಮುಂದಾಗುತ್ತಿದ್ದರು. ಇದರಿಂದ ಸದನ ಗೊಂದಲದ ಗೂಡಾದ್ದರಿಂದ ಸಭಾಪತಿ ಸದನದ ಕಾರ್ಯಕಲಾಪವನ್ನು ಕೆಲಕಾಲ ಮುಂದೂಡಿದರು.

---

ಹನಿಟ್ರ್ಯಾಪ್ ಕುರಿತು ಸಿಬಿಐ ತನಿಖೆಗೆ ಆಗ್ರಹ

# ಮುಸ್ಲಿಮರಿಗೆ ಮೀಸಲಾತಿ ವಿರುದ್ಧ ಬಿಜೆಪಿ- ಜೆಡಿಎಸ್ ಜನಾಂದೋಲನ

**ಬೆಂಗಳೂರು:** ಹನಿಟ್ರ್ಯಾಪ್ ಕುರಿತಂತೆ ಹೈಕೋರ್ಟಿನ ಈಗಿನ ನ್ಯಾಯಮೂರ್ತಿ ಗಳು ಅಥವಾ ಸಿಬಿಐ ತನಿಖೆ ನಡೆಸಬೇಕು ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಆಗ್ರಹಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿ, ಸಚಿವರಾದ ರಾಜಣ್ಣ ಅವರು ರಾಜ್ಯ ಹಾಗೂ ದೇಶದ 48ಕ್ಕೂ ಹೆಚ್ಚು ಪ್ರಮುಖರು ಹನಿಟ್ರ್ಯಾಪ್‌ಗೆ ಒಳಗಾದ ಕುರಿತು ತಿಳಿಸಿ ತನಿಖೆ ಆಗಬೇಕೆಂದು ಹೇಳಿಕೆ ಕೊಟ್ಟಿದ್ದಾರೆ. ಇದು ಬಹಳ ಗಂಭೀರ ವಿಚಾರ ಎಂದು ತಿಳಿಸಿದ ಗೃಹ ಸಚಿವರು, ಇದರ ಬಗ್ಗೆ ತನಿಖೆ ಮಾಡಿಸುವುದಾಗಿ ಹೇಳಿದ್ದರು. ಸದನ ಮುಗಿದ ಬಳಿಕ ಹೊರಕ್ಕೆ ಬಂದ ಗೃಹ ಸಚಿ ವರು, ತಮಗೆ ಅಧಿಕೃತವಾಗಿ ಯಾವುದೇ ಅಧಿಕಾರಿಗಳು ಮಾಹಿತಿ ನೀಡಿಲ್ಲ ಎಂದಿದ್ದಾರೆ ಎಂದರು.

ಅಧಿಕಾರಿಗಳು ಮಾಹಿತಿ ಕೊಟ್ಟ ಮೇಲೆ ಅದರ ಕುರಿತು ಆಲೋಚಿಸುವುದಾಗಿ ತಿಳಿಸಿ ದ್ವಂದ್ವ ನೀತಿ ಪ್ರದರ್ಶನ ಮಾಡಿದ್ದಾರೆ. ನಾವು ಸದನದಲ್ಲಿ ಮುಖ್ಯಮಂತ್ರಿಗಳಿಂದ ಉತ್ತರ ಪಡೆಯುವ ಪ್ರಯತ್ನ ಮಾಡಿದ್ದೇವೆ. ಅವರು ಯಾವುದೇ ರೀತಿ ಸರಿಯಾದ ಉತ್ತರ ಕೊಟ್ಟಿಲ್ಲ. ಇದೊಂದು ಗಂಭೀರ ಪ್ರಕರಣ. ಇದು ಸದನದ 224 ಶಾಸಕರ, ರಾಜ್ಯದ ಗೌರವದ ಪ್ರಶ್ನೆ. ಬಿಜೆಪಿ ಹಾಗೂ ಜೆಡಿಎಸ್ ಒಟ್ಟಾಗಿ ಪ್ರತಿಭಟಿಸುವುದಾಗಿ ತಿಳಿಸಿದರು.

ರಾಜ್ಯದಲ್ಲಿ ಅಲ್ಪಸಂಖ್ಯಾತರಿಗೆ ಸರಕಾರಿ ಕಾಮಗಾರಿಗಳಲ್ಲಿ ಶೇ 4 ಮೀಸಲಾತಿ ನೀಡಿದ ಬಗ್ಗೆ ಮುಖ್ಯಮಂತ್ರಿ ಹೇಳಿದ್ದಾರೆ. ಇದರ ವಿರುದ್ಧ ನಾವು ರಾಜ್ಯಾದ್ಯಂತ ಜನಾಂದೋಲನಕ್ಕೆ ಕರೆ ಕೊಡಲಿದ್ದೇವೆ. ಬಿಜೆಪಿ- ಜೆಡಿಎಸ್ ಪಕ್ಷಗಳು ಮುಸಲ್ಮಾನರ ವಿರೋಧಿ ಅಲ್ಲ ಆದರೆ, ಹಿಂದೂಗಳಿಗೆ ಅಪಮಾನ ಮಾಡುವ ರೀತಿಯಲ್ಲಿ ಹಣಕಾಸಿನ ಸಚಿವರಾದ ಮುಖ್ಯಮಂತ್ರಿ ಗಳು ನಡೆದುಕೊಳ್ಳುತ್ತಿ ದ್ದಾರೆ. ಇದನ್ನು ನಾವು ಧಿಕ್ಕರಿಸುತ್ತಿದ್ದೇವೆ. ವಿದೇಶಕ್ಕೆ ವಿದ್ಯಾಭ್ಯಾಸಕ್ಕೆ ಹೋಗುವ ಮುಸಲ್ಮಾನರಿಗೆ ಕೊಡುವ ಮೊತ್ತ 20 ರಿಂದ 30 ಲಕ್ಷಕ್ಕೆ ಏರಿಸಿದ್ದಾರೆ. ಹಿಂದೂಗಳಲ್ಲಿ ಬಡವರಿಲ್ಲವೇ? ಅವರು ಹೊರದೇಶಕ್ಕೆ ವಿದ್ಯಾಭ್ಯಾಸಕ್ಕೆ ಹೋದರೆ ಅವರಿಗೆ ಹಣಕಾಸಿನ ಅವಶ್ಯಕತೆ ಇಲ್ಲವೇ? ಎಂದು ಪ್ರಶ್ನಿಸಿದರು.

---

ಉಭಯ ಸದನದಲ್ಲಿ ಕೆಟಿಟಿಪಿ ಕಾಯಿದೆಯ ತಿದ್ದುಪಡಿಗೆ ಅನುಮೋದನೆ

# ವಿರೋಧದ ನಡುವೆ ಮೀಸಲು ವಿಧೇಯಕಕ್ಕೆ ಅಸ್ತು

**ವಿಧಾನಸಭೆ/ವಿಧಾನಪರಿಷತ್**

ಬಿಜೆಪಿ-ಜೆಡಿಎಸ್‌ನ ತೀವ್ರ ವಿರೋಧದ ಹೊರ ತಾಗಿಯೂ, ಗುತ್ತಿಗೆಯಲ್ಲಿ ಮುಸ್ಲಿಮರಿಗೆ ಮೀಸಲು ನೀಡುವ ವಿಧೇಯಕವನ್ನು ಉಭಯ ಸದನದಲ್ಲಿ ಅನುಮೋದನೆ ಸಿಕ್ಕಿದೆ. ಈ ಮೂಲಕ ಇದೀಗ ವಿಧೇಯಕ ರಾಜಭವನ ತಲುಪಿದೆ. ಈ ನಡುವೆ ಪ್ರತಿಪಕ್ಷ ಬಿಜೆಪಿ ಈ ವಿಧೇಯಕದ ವಿರುದ್ಧ ಸದನದ ಹೊರಗೆ ಹಾಗೂ ನ್ಯಾಯಾಲಯದಲ್ಲಿ ಹೋರಾಟ ಮುಂದುವರಿಸುವುದು ನಿಶ್ಚಿತವಾಗಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬಜೆಟ್ ಘೋಷಿಸಿದ್ದ ಮುಸ್ಲಿಮರಿಗೆ ಗುತ್ತಿಗೆ ಮೀಸಲು ನೀಡುವ ವಿಧೇಯಕವನ್ನು ಕಳೆದ ವಾರ ವಿಧಾನಸಭೆಯನ್ನು ಮಂಡಿಸಲಾಗಿತ್ತು. ಶುಕ್ರವಾರ ಬಿಜೆಪಿಗರು ಬಾವಿಗಿಳಿದು ಪ್ರತಿಭಟನೆ ನಡೆಸುವ ಸಮಯದಲ್ಲಿ, ಈ ವಿಧೇಯಕವನ್ನು ಮಂಡಿಸಿ ಅನುಮೋದನೆ ಪಡೆಯಲಾಯಿತು. ವಿಧಾನಪರಿಷತ್‌ನಲ್ಲಿ ಈ ವಿಧೇಯಕಕ್ಕೆ ಸಂಬಂಧಿಸಿದಂತೆ ಪರ-ವಿರೋಧ ಚರ್ಚೆ ನಡೆದರೂ, ಅಂತಿಮವಾಗಿ ವಿಧೇಯಕಕ್ಕೆ ಅನುಮೋದನೆ ನೀಡಲಾಯಿತು.

ವಿಧಾನಸಭೆಯಲ್ಲಿ 18 ಬಿಜೆಪಿ ಶಾಸಕರ ಅಮಾನತಿನ ಬಳಿಕ ಕಲಾಪ ಪುನಾರಂಭವಾಗುತ್ತಿದ್ದ ಹಾಗೆಯೇ, ಉಳಿದ ಬಿಜೆಪಿ ಸದಸ್ಯರು ಪ್ರತಿಭಟನೆ ಮುಂದುವರಿಸಿದರು. ಸರಕಾರದ ವಿರುದ್ಧ ಧಿಕ್ಕಾರ ಕೂಗಿ ತಮ್ಮ ಆಕ್ರೋಶ ಹೊರಹಾಕಿದರು. ಈ ಮಧ್ಯೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ (ತಿದ್ದುಪಡಿ) ವಿಧೇಯಕ - 2025ನ್ನು ಪರ್ಯಾಲೋಚಿಸಲಾಯಿತು. ಬಿಜೆಪಿ ಸದಸ್ಯರ ಪ್ರತಿಭಟನೆ, ಘೋಷಣೆಗಳ ಮಧ್ಯೆ ಅಲ್ಪಸಂಖ್ಯಾತರಿಗೆ ಗುತ್ತಿಗೆ ಕಾಮಗಾರಿಗಳಲ್ಲಿ ಶೇ.4ರಷ್ಟು ಮೀಸಲು ನೀಡುವ ತಿದ್ದುಪಡಿ ವಿಧೇಯಕವನ್ನು ಅಂಗೀಕರಿಸಲಾಯಿತು.

## ವಿಧೇಯಕದಲ್ಲಿ ಏನಿದೆ?

ಈ ತಿದ್ದುಪಡಿ ವಿಧೇಯಕದಂತೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮದಡಿ ಕಾಮಗಾರಿಗಳಲ್ಲಿ ಎರಡು ಕೋಟಿವರೆಗೆ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗಗಳ ಪ್ರವರ್ಗ-1, 2ಎ ಮತ್ತು 2ಬಿ ಗುತ್ತಿಗೆದಾರರಿಗೆ ಹಾಗೂ ಸರಕಾರದ ವಿವಿಧ ಇಲಾಖೆ, ನಿಗಮ ಹಾಗೂ ಸಂಸ್ಥೆಗಳಲ್ಲಿ ಖರೀದಿಸುವ ಸರಕು ಮತ್ತು ಸೇವೆಗಳಲ್ಲಿ ಒಂದು ಕೋಟಿ ರು. ವರೆಗೆ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗಗಳ ಪ್ರವರ್ಗ-1, 2ಎ ಮತ್ತು 2ಬಿ ಸರಬರಾಜುದಾರರಿಗೆ ಮೀಸಲಾತಿ ಒದಗಿಸುವ ಕುರಿತು ಕೆಟಿಪಿಪಿ ಕಾಯ್ದೆ 1999ಕ್ಕೆ ತಿದ್ದುಪಡಿ ತರಲಾಗಿದೆ. ಅದರಂತೆ 2025-26 ಸಾಲಿನಲ್ಲಿ ಸಿಎಂ ಬಜೆಟ್‌ನಲ್ಲಿ ಘೋಷಿಸಿದಂತೆ ಮುಸ್ಲಿಂರಿಗೆ ಗುತ್ತಿಗೆಯಲ್ಲಿ ಮೀಸಲಾತಿ ನೀಡುವ ಘೋಷಣೆಯನ್ನು ಅನುಷ್ಠಾನಗೊಳಿಸಲು ಅನುವಾಗುವಂತೆ ಕೆಟಿಪಿಪಿ ಕಾಯಿದೆ ತಿದ್ದುಪಡಿ ವಿಧೇಯಕಕ್ಕೆ ಅಧಿವೇಶನದ ಕೊನೆಯ ದಿನ ಅಂಗೀಕಾರ ನೀಡಲಾಯಿತು.

**ವಿಶ್ವವಾಣಿ**

## ಸಂಪಾದಕೀಯ

### ಸದನ ಪರಂಪರೆಗೆ ಕಪ್ಪುಚುಕ್ಕೆ

ದೇಶದ ಸಂಸದೀಯ ವ್ಯವಸ್ಥೆಯಲ್ಲಿ ಕರ್ನಾಟಕಕ್ಕೆ ವಿಶಿಷ್ಟ ಹಾಗೂ ಗೌರವಯುತ ಸ್ಥಾನವಿದೆ. ಆಂಧ್ರಪ್ರದೇಶ, ತಮಿಳುನಾಡು, ಉತ್ತರ ಭಾರತದ ರಾಜ್ಯಗಳಲ್ಲಿನ ಸಂಸದೀಯ ವ್ಯವಸ್ಥೆಗೆ ಹೋಲಿಸಿದರೆ ಕರ್ನಾಟಕದ ಸಂಸದೀಯ ವ್ಯವಸ್ಥೆ ಮೇಲುಸ್ತರದಲ್ಲಿದೆ ಎನ್ನುವುದು ಎಲ್ಲರ ಭಾವನೆಯಾಗಿತ್ತು. ನಾಡು, ನುಡಿ, ಜನರ ವಿಷಯ ಬಂದಾಗ ಅದೆಷ್ಟೋ ಬಾರಿ 'ಪಕ್ಷಾತೀತ' ತೀರ್ಮಾನಗಳು, ಚರ್ಚೆಗಳು ನಡೆದಿರುವ ಇತಿಹಾಸ ಕರ್ನಾಟಕದ ವಿಧಾನಸಭೆಗಿದೆ. ಆದರೆ ಪ್ರಸಕ್ತ ಸಾಲಿನ ಬಜೆಟ್ ಅಧಿವೇಶನದಲ್ಲಿ ನಡೆದ ಒಟ್ಟು ಕಲಾಪವನ್ನು ಪರಿಗಣಿಸಿದರೆ ಜನರ ಸಮಸ್ಯೆಗಿಂತಲೂ ಸವಾಲು-ಪ್ರತಿ ಸವಾಲು, ಗದ್ದಲಗಳಿಗೆ ಹೆಚ್ಚು ಸಮಯ ವ್ಯಯವಾಗಿದೆ. ಆರಂಭದ ಕೆಲ ದಿನ ಬಜೆಟ್ ಮೇಲಿನ ಚರ್ಚೆ ಆರಂಭಿಸಿ ನಾಡಿನ ಜ್ವಲಂತ ಸಮಸ್ಯೆಗಳ ಬಗ್ಗೆ ಮಾತನಾಡಿದ್ದ ನಾಯಕರು ಬಳಿಕ ಸವಾಲು, ರಾಜಕೀಯ ಹೋರಾಟಕ್ಕೆ ಸೀಮಿತಗೊಳಿಸಿಕೊಂಡಿದ್ದು ವಿಪರ್ಯಾಸ. ಈ ಬಾರಿಯ ಅಧಿವೇಶನದಲ್ಲಿ ಸರಕಾರವನ್ನು ಇಕ್ಕಟ್ಟಿಗೆ ಸಿಲುಕಿಸಲು ಪ್ರತಿಪಕ್ಷ ಬಿಜೆಪಿಗಿದ್ದ ಹತ್ತಾರು ವಿಷಯಗಳ 'ಪ್ರಸ್ತಾಪ'ವೂ ಆಗಲಿಲ್ಲ. ಜತೆಗೆ ಕಳೆದ 3 ದಿನಗಳಿಂದ ವಿಧಾನಸಭೆಯ ಕಲಾಪ ಹನಿಟ್ರ್ಯಾಪ್ ವಿಷಯದ ಸುತ್ತಲೇ ಗಿರಕಿ ಹೊಡೆದಿದೆ. ಮೊದಲ ದಿನ ಸುನೀಲ್‌ಕುಮಾರ್ ಸೇರಿ ಕೆಲ ಶಾಸಕರು ವಿಷಯ ಪ್ರಸ್ತಾಪಿಸಿ ಕೈಬಿಟ್ಟರೆ, ಎರಡನೇ ದಿನ ಸಹಕಾರ ಸಚಿವ ರಾಜಣ್ಣ ಅವರೇ, ತಮ್ಮ ಮೇಲಿನ ಹನಿಟ್ರ್ಯಾಪ್ ಯತ್ನಕ್ಕೆ ಸಂಬಂಧಿಸಿ ತನಿಖೆ ನಡೆಸಲು ಆಗ್ರಹಿಸಿದರು. ಇದಕ್ಕೆ ಪೂರಕವಾಗಿ, ಗೃಹ ಸಚಿವ ಪರಮೇಶ್ವರ್ 'ಉನ್ನತ' ಮಟ್ಟದ ತನಿಖೆಗೆ ಭರವಸೆ ನೀಡಿ, ವಿಷಯಕ್ಕೆ ತೆರೆ ಹಾಡುವ ಪ್ರಯತ್ನ ಮಾಡಿದ್ದರು. ಆದರೆ ಶುಕ್ರವಾರ ಈ ವಿಷಯವನ್ನು ಮುಂದಿಟ್ಟುಕೊಂಡು ಬಿಜೆಪಿಗರು ಶುರುಮಾಡಿದ ಹೋರಾಟ-ಹಾರಾಟ ಬಳಿಕ ಬಾವಿಗಿಳಿದು ನಡೆಸಿದ ಪ್ರತಿಭಟನೆ, ಸ್ಪೀಕರ್ ಕುರ್ಚಿಯತ್ತ ಸದಸ್ಯ ನುಗ್ಗಿದ್ದು, ಆಡಳಿತ-ಪ್ರತಿಪಕ್ಷ ಶಾಸಕರ ನಡುವೆ ಕೈಕೈ ಮಿಲಾಯಿಸುವ ಹಂತಕ್ಕೆ ವಿಷಯ ತೆಗೆದುಕೊಂಡು ಹೋಗಿದ್ದು, ಕೊನೆಯಲ್ಲಿ 18 ಶಾಸಕರ ಅಮಾನತು ಕರ್ನಾಟಕ ಸಂಸದೀಯ ವ್ಯವಸ್ಥೆಯಲ್ಲಿಯೇ ಕಪ್ಪು ಚುಕ್ಕಿ ಎನ್ನಲಡ್ಡಿಯಿಲ್ಲ. ಆದರೆ ಈ ಎಲ್ಲದರ ನಡುವೆ ಶಾಸಕರ ವೇತನ ಹೆಚ್ಚಿಸಿಕೊಳ್ಳುವ ವಿಷಯದಲ್ಲಿ ಮಾತ್ರ ಎಲ್ಲರೂ 'ಮೌನ ಒಪ್ಪಿಗೆ' ನೀಡಿದ್ದಾರೆ, ಒಂದೆಡೆ ಜನರ ಕಣ್ಣಿಗೆ ಮಣ್ಣೆರಚುವ ಹೊಂದಾಣಿಕೆ ರಾಜಕೀಯ, ಇನ್ನೊಂದೆಡೆ ಆರ್ಥಿಕ ಸಂಕಷ್ಟದ ನಡುವೆ ಸಂಬಳ,ಭತ್ಯೆ ದುಪ್ಪಟ್ಟು ನಿರ್ಧಾರ ಕರ್ನಾಟಕದ ಮಾದರಿ ಸಂಸದೀಯ ಪರಂಪರೆಗೆ ಕಳಂಕ ತಂದಿದೆ.

## ಸೊಂಪಾದಕೀಯ

### ಹಾಯ್ ಐಪಿಎಲ್...

ಏಪ್ರಿಲ್ ಬಂತು ಅಂದ್ರೆ, ಮಕ್ಕಳಿಗೆ ಪರೀಕ್ಷೆ ಮುಗಿದು ರಜೆ ಶುರುವಾಗೋ ಕಾಲ. ಅದನ್ನು ಬೇಸಗೆ ರಜೆ ಅನ್ನಲಾಗುತ್ತೆ. ಆದರೆ, ಆಗಿನ ಕಾಲದ ಬೇಸಗೆ ರಜೆ, ದಸರಾ ರಜೆಗಳಿಗೆ ಈಗೀಗ ಬೇರೆ ಹೆಸರುಗಳನ್ನಿಡುವ ಪರಿಪಾಠ ಆರಂಭ ಆಗಿದೆ. ಈಗಿನ ಕಾಲದ ಮಕ್ಕಳಿಗೆ ಬೇಸಗೆ ರಜೆ ಐಪಿಎಲ್ ರಜೆ ಆಗಿ ಪರಿಣಮಿಸಿದೆ. ಮಕ್ಕಳು ಈಗ ರಜೆ ಬಂತು ಅಂತ ಅಜ್ಜಿ ಮನೆಗೆ ಹೋಗೋ ಅಭ್ಯಾಸ ಬಿಟ್ಟು ಹೋಗಿ, ಅಜ್ಜಿ ಮನೆಗೆ ಹೋದ್ರೆ ಕರೆಂಟ್ ಇರುತ್ತೋ ಇಲ್ವೋ, ಇಂಟರ್‌ನೆಟ್ ಇರುತ್ತೋ ಇಲ್ವೋ ಅಂತ ಮೊಬೈಲ್‌ಗಳಿಗೆ ಅಡಿಕ್ಟ್ ಆಗಿರುವ ಅವರಿಗೆ ಚಿಂತೆ. ಹಾಗಾಗಿ ಅವರು ದೊಡ್ಡ ಊರುಗಳನ್ನು ಬಿಟ್ಟು ಹಳ್ಳಿ ಕಡೆ ಮುಖ ಮಾಡುತ್ತಿಲ್ಲ. ಈಗ ಅವರ ಹಾಟ್ ಲಿಸ್ಟಿಗೆ ಐಪಿಎಲ್ ಕ್ರಿಕೆಟ್ ಕೂಡಾ ಸೇರಿಕೊಂಡಿದೆ. ಇನ್ನು ದೊಡ್ಡವರ ವಿಷಯಕ್ಕೆ ಬಂದ್ರೆ, ಎಂದಿನಂತೆ ಆರ್‌ಸಿಬಿ ಅಭಿಮಾನಿಗಳು 'ಈ ಸಲ ಕಪ್ ನಮ್ದೇ' ಅನ್ನೋದನ್ನು ಮುಂದುವರಿಸುತ್ತಿದ್ದಾರೆ. ಅದ್ಯಾಕೋ ಆರ್‌ಸಿಬಿಗೆ ಮಾತ್ರ ಕಪ್ ಮುಟ್ಟುವ ಭಾಗ್ಯ ಸಿಕ್ಕಿಲ್ಲ. ಇದು ಕಪ್ಪು ಚುಕ್ಕೆ ಆಗಿಯೇ ಉಳಿದುಕೊಂಡಿದೆ. ಈ ಬ್ಲಾಕ್ ಮಾರ್ಕ್ ಹೋಗಲಾಡಿಸಿ ಲ್ಯಾಂಡ್‌ಮಾರ್ಕ್ ಅನ್ನಿಸೋ ಸಾಧನೆ ಮಾಡಬೇಕು ಅಂತ ಆರ್‌ಸಿಬಿ ಎಷ್ಟೇ ಯತ್ನಿಸಿದರೂ ಅದು ಕಪ್ ಗೆಲ್ಲಲು ಸಹಾಯ ಮಾಡುತ್ತಿಲ್ಲ. ಬಾಯಿಗೆ ಬಂದ ಕಪ್ ಕೈಯಿಗೆ ಬರಲಿಲ್ಲ ಅನ್ನೋ ರೀತಿಯ ಸಂದರ್ಭಗಳೇ ಹೆಚ್ಚಾಗಿವೆ. ಆದರೆ ಅಭಿಮಾನಿಗಳಿಗೆ ಮಾತ್ರ ಭರವಸೆ ಕಮ್ಮಿ ಆಗಿಲ್ಲ. ಕಪ್ ಮೇಲೆ ಕೈ ಇರಿಸುವ ಕಾಲ ಈ ಪಂದ್ಯಾವಳಿಯಲ್ಲಾದ್ರೂ ಬರುತ್ತೆ ಅನ್ನೋ ನಂಬಿಕೆಯಲ್ಲಿ ಅವರು ಈ ಬಾರಿಯ ಐಪಿಎಲ್‌ನಲ್ಲಿ ಇಂದು ಕೋಲ್ಕೊತ್ತಾ ವಿರುದ್ಧದ ಆರಂಭಿಕ ಪಂದ್ಯವನ್ನು ಎದುರು ನೋಡುತ್ತಿದ್ದಾರೆ.

## ಸಂಪಾದಕರ ಸದ್ಯಶೋಧನೆ

### ಆತ್ಮಹತ್ಯೆಗೊಂದು ಕಾಡು

ಜಪಾನಿನಲ್ಲಿ ಆತ್ಮಹತ್ಯೆ ಮಾಡಿಕೊಳ್ಳಲು ಒಂದು ಕಾಡನ್ನು ಬೆಳೆಸಿದ್ದಾರೆ ಅಂದ್ರೆ ನಂಬಬೇಕು. ಇದನ್ನು ಅವರು 'ಅಒಕಿಗಹಾರ ಫಾರೆಸ್ಟ್' ಎಂದು ಕರೆಯುತ್ತಾರೆ. ಹಾಗೆಂದರೆ ಅಕ್ಷರಶಃ 'ಆತ್ಮಹತ್ಯಾ ಕಾಡು' ಎಂದರ್ಥ. ಅಒಕಿಗಹಾರ ಕಾನನವು ಫುಜಿಯ ಪರ್ವತದ ಪಶ್ಚಿಮ ಭಾಗದಲ್ಲಿ ಸುಮಾರು 35 ಚದರ ಕಿ.ಮೀ. ಪ್ರದೇಶದಲ್ಲಿ ವ್ಯಾಪಿಸಿದ್ದು, ಇದರ ಇನ್ನೊಂದು ಹೆಸರು 'ಜುಕೈ'. ಅಂದರೆ ಮರಗಳ ಸಮುದ್ರ. ಇದು ಹೆಚ್ಚಾಗಿ ಲಾವಾ ಭೂಮಿಯ ಮೇಲೆ ಬೆಳೆದಿರುವ ಕಾಡಾಗಿದ್ದು, ಇದನ್ನು ಭೂಮಿಯ ಸೊಗಸು ಮತ್ತು ನೈಸರ್ಗಿಕ ಶಕ್ತಿಯ ಲೀಲೆ ಎಂದು ಪರಿಗಣಿಸಬಹುದು. ಇಲ್ಲಿನ ಮಣ್ಣು ಜ್ವಾಲಾಮುಖಿಯ ಲವಣದಿಂದ ಕೂಡಿರುವುದರಿಂದ, ಮರಳಿನಂತಿದೆ ಮತ್ತು ಅದು ಧ್ವನಿಯನ್ನು ಹೀರಿಕೊಳ್ಳುತ್ತದೆ. ಇದರಿಂದಾಗಿ ಪ್ರತಿಧ್ವನಿಗಳು (Echo) ಹೊಮ್ಮುವುದಿಲ್ಲ. ಈ ಕಾಡು ತುಂಬಾ ನಿಶ್ಶಬ್ದವಾಗಿದೆ. ಇಲ್ಲಿ ಜಿಪಿಎಸ್ ಸಿಗ್ನಲ್ ಸಿಗುವುದಿಲ್ಲ ಮತ್ತು ಒಂದು ಕಡೆಯಿಂದ ಇನ್ನೊಂದು ಕಡೆಗೆ ಹೋಗುವುದು ಕಷ್ಟ. ಜಪಾನಿನಲ್ಲಿ ಆತ್ಮಹತ್ಯೆ ಮಾಡಿಕೊಳ್ಳುವವರ ಸಂಖ್ಯೆ ಹೆಚ್ಚು. ಅಲ್ಲಿನ ಆಧುನಿಕ ಜೀವನಶೈಲಿ, ಕೆಲಸದ ಒತ್ತಡ, ವೈಯಕ್ತಿಕ ಸಂಕಟಗಳು ಮತ್ತು ಹಲವಾರು ಮನೋವೈಜ್ಞಾನಿಕ ಕಾರಣಗಳಿಂದಾಗಿ ಹಲವರು ಆತ್ಮಹತ್ಯೆಗೆ ಶರಣಾಗುವುದು ಸಾಮಾನ್ಯ. ಕಳೆದ ಸಾವಿರ ವರ್ಷಗಳಿಂದಲೂ ಆ ಪ್ರದೇಶ 'ಆತ್ಮಹತ್ಯಾ ಕಾನನ' ಎಂದೇ ಪ್ರಸಿದ್ಧವಾಗಿದೆ. ಈ ಅರಣ್ಯ ತನ್ನ ದಟ್ಟ ಮರಗಳು, ಶಾಂತ ವಾತಾವರಣ ಮತ್ತು ಭೀತಿಗೆ ಹೆಸರುವಾಸಿಯಾಗಿದೆ. ಇದು ದುರದೃಷ್ಟವಶಾತ್ ವಿಶ್ವದ ಆತ್ಮಹತ್ಯೆ ದರ್ಜೆಯಲ್ಲಿ ಪ್ರಖ್ಯಾತ ಸ್ಥಳವಾಗಿ ಪರಿಚಿತವಾಗಿದೆ. 2003ರಲ್ಲಿ, 78 ಜನರು ಈ ಕಾನನದಲ್ಲಿ ಸಾವನ್ನಪ್ಪಿದ್ದರು. ಈ ಸಂಖ್ಯೆ ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತಿದೆ. ಜಪಾನಿನಲ್ಲಿ, 'ಸೇಪೂಕು' ಎಂಬ ಸಮುರೈ ಪಂಗಡ ಆತ್ಮಹತ್ಯೆಯನ್ನು ಗೌರವಯುತ ಅಂತ್ಯ ಎಂದು ಪರಿಗಣಿಸುತ್ತಿತ್ತು. ಸಮಾಜದಲ್ಲಿ ಕನಿಷ್ಠ ಮಟ್ಟದ ಮಾನಹಾನಿ, ವೈಫಲ್ಯ ಅಥವಾ ಅಪಮಾನ ಎದುರಾದರೆ, ಕೆಲವು ಸಮುರೈ ಯೋಧರು ತಮ್ಮ ಶರೀರವನ್ನು ಕತ್ತರಿಸಿಕೊಂಡು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದರು. ಈ ಮನೋಭಾವನೆ ನೂರಾರು ವರ್ಷಗಳಿಂದ ಬೆಳೆದು ಬಂದಿದ್ದು, ಇದು ಇಂದು ಕೂಡ ಕೆಲವರ ಆತ್ಮಹತ್ಯಾ ನಿರ್ಧಾರಗಳಲ್ಲಿ ಪ್ರಭಾವ ಬೀರುತ್ತದೆ. 1960ರ ದಶಕದಲ್ಲಿ, ಸೈಚೋ ಮಾತುಮೊಟೊ ಎಂಬ ಬರಹಗಾರ Tower of Waves ಎಂಬ ಕಾದಂಬರಿಯನ್ನು ಬರೆದ. ಈ ಕಾದಂಬರಿಯಲ್ಲಿ ಹಿರಿಯ ವಯಸ್ಸಿನ ಮಹಿಳೆ ಈ ಕಾಡಿಗೆ ಬಂದು ಆತ್ಮಹತ್ಯೆ ಮಾಡಿಕೊಳ್ಳುವ ಕಥೆ ಇದೆ. ಇದರಿಂದಾಗಿ, ಈ ಕಾಡು ಆತ್ಮಹತ್ಯಾ ಸ್ಥಳವೆಂಬ ನಕಾರಾತ್ಮಕ ಪ್ರಸಿದ್ಧಿಯನ್ನು ಗಳಿಸಿತು. ಆತ್ಮಹತ್ಯೆಗಳ ಹೆಚ್ಚಳವನ್ನು ತಡೆಗಟ್ಟಲು ಜಪಾನ್ ಸರಕಾರ ಮತ್ತು ಸ್ಥಳೀಯ ಅಧಿಕಾರಿಗಳು ಹಲವು ಕ್ರಮಗಳನ್ನು ತೆಗೆದುಕೊಂಡಿದ್ದಾರೆ. ಆತ್ಮಹತ್ಯೆ ತಡೆಯುವ ಫಲಕಗಳನ್ನು (Warning Signs) ಎಲ್ಲೆಡೆ ನೆಡಲಾಗಿದೆ. ಈ ಫಲಕಗಳಲ್ಲಿ ಜೀವನದ ಮೌಲ್ಯ, ಬದುಕಿನ ಮಹತ್ವ ಮತ್ತು ಸಕಾರಾತ್ಮಕ ಸಂದೇಶಗಳನ್ನು ಉಲ್ಲೇಖಿಸಿ ಜನರಿಗೆ ಧೈರ್ಯ ತುಂಬಲು ಪ್ರಯತ್ನಿಸಲಾಗಿದೆ. ಕಾನನದ ಪ್ರಮುಖ ಪ್ರವೇಶ ದಾರಿಗಳಲ್ಲಿ 'ದಯವಿಟ್ಟು ಬದುಕಲು ಪ್ರಯತ್ನಿಸಿ', 'ನಿಮ್ಮ ಕುಟುಂಬ ನಿಮ್ಮನ್ನು ಕಾಯುತ್ತಿದೆ' ಎಂಬ ಜೀವನ ಪ್ರೇರಣೆಯ ಸಂದೇಶಗಳನ್ನು ಬರೆಯಲಾಗಿವೆ. ಇವು ಮಾನಸಿಕ ಸಂಕಟದಲ್ಲಿರುವ ವ್ಯಕ್ತಿಗಳಿಗೆ ಕೊನೆ ಕ್ಷಣದಲ್ಲಿ ಪುನಃ ಯೋಚಿಸಲು ಪ್ರೇರೇಪಿಸುತ್ತವೆ. ಅಷ್ಟೇ ಅಲ್ಲ, ಈ ಪ್ರದೇಶದಲ್ಲಿ ಪೊಲೀಸರು ಮತ್ತು ಸ್ವಯಂಸೇವಕರು ನಿಯಮಿತ ತಪಾಸಣೆ ನಡೆಸುತ್ತಾರೆ. ಆತ್ಮಹತ್ಯೆ ಮಾಡಿಕೊಳ್ಳಲು ಬಂದಿರುವ ವ್ಯಕ್ತಿಗಳನ್ನು ಕಂಡರೆ, ಅವರ ಮನಪರಿವರ್ತನೆಗೆ ಸಹಾಯ ಮಾಡುತ್ತಾರೆ. ಹಲವು ಮಾನಸಿಕ ಆರೋಗ್ಯ ಸೇವೆಗಳು ಆತ್ಮಹತ್ಯೆ ತಡೆಗಟ್ಟಲು ಸಹಾಯ ಮಾಡುವ ಹಾಟ್‌ಲೈನ್‌ಗಳು ಮತ್ತು ಸಮುದಾಯ ಕೇಂದ್ರಗಳನ್ನು ಸ್ಥಾಪಿಸಿವೆ. ಈ ಕಾನನದ ಬಗ್ಗೆ ಹಲವು ಜನಪ್ರಿಯ ನಂಬಿಕೆಗಳು ಮತ್ತು ಭಯಾನಕ ಕಥೆಗಳಿವೆ. ಹಲವರು ಹೇಳುವ ಪ್ರಕಾರ, ಇಲ್ಲಿ ಆತ್ಮಹತ್ಯೆ ಮಾಡಿಕೊಳ್ಳುವವರ ಆತ್ಮಗಳಿಗೆ ನೆಲೆ ಸಿಗುತ್ತವಂತೆ. ಈ ಕಾಡಿನಲ್ಲಿ ಹಾದಿಗಳು ಗೊಂದಲಮಯ. ಅಲ್ಲಿ ಒಳಪ್ರವೇಶಿಸಿದ ಕೆಲವರು ಹೊರಬರಲಾಗದೇ ಕಾಡಿನಲ್ಲಿ ಸಿಕ್ಕಿಹಾಕಿಕೊಂಡಿದ್ದುಂಟು. ಈ ಕಾಡು ಆತ್ಮಹತ್ಯೆಗಳಿಗಾಗಿ ಮಾತ್ರವೇ ಪ್ರಸಿದ್ಧವಲ್ಲ, ಇದು ನಿಸರ್ಗಾಸಕ್ತರಿಗೆ ಅತ್ಯಂತ ಸುಂದರ ಸ್ಥಳವೂ ಹೌದು. ಇದು ಪ್ರಕೃತಿಯ ಸುಂದರ ಮತ್ತು ಪ್ರಶಾಂತ ಪ್ರಣಯಸ್ಥಳವೂ ಹೌದು. ಹಿಮಪಾತದ ವೇಳೆ, ಈ ಕಾಡು ರಮಣೀಯವಾಗಿ ಕಾಣುತ್ತದೆ. ಕೆಲವು ಪ್ರವಾಸಿಗರು ಹೈಕಿಂಗ್, ಫೋಟೋಗ್ರಫಿ ಮತ್ತು ಅರಣ್ಯ ಪರ್ಯಟನೆಗೆ ಈ ಕಾಡಿಗೆ ಭೇಟಿ ಕೊಡುತ್ತಾರೆ.

# ಅಂಬೇಡ್ಕರ್ ಮತ್ತು ಆರೆಸ್ಸೆಸ್: ಸಮಾನ ಚಿಂತನೆಗಳು

**ವೀಕೆಂಡ್ ವಿತ್ ಮೋಹನ್**

ಮೋಹನ್ ವಿಶ್ವ
camohanbn@gmail.com

ರಾಷ್ಟ್ರೀಯ ಸ್ವಯಂಸೇವಕ ಸಂಘದ (ಆರೆಸ್ಸೆಸ್) ಹೆಸರನ್ನು ಮುನ್ನೆಲೆಗೆ ತಂದು ತನ್ನ ಹುಳುಕನ್ನು ಮುಚ್ಚಿಕೊಳ್ಳುವ ಕಾಂಗ್ರೆಸ್ಸಿನ ತಂತ್ರಗಾರಿಕೆ ಇಂದು ನಿನ್ನೆಯದಲ್ಲ. ದಲಿತರ ಮತಬ್ಯಾಂಕನ್ನು ಗಟ್ಟಿಮಾಡಿಕೊಳ್ಳಲು 'ಸಂಘಜೀವಿ'ಗಳ ಮೇಲೆ ಮನಿವಾದಿಗಳೆಂಬ ಆರೋಪ ಹೊರಿಸಿ ನಿರೂಪಣೆ ಮಾಡುವುದು ಕಾಂಗ್ರೆಸ್ಸಿನ ನಿತ್ಯದ ಕೆಲಸ. ದಲಿತರಿಗೆ ಮೀಸಲಿಟ್ಟಿದ್ದ ಹಣವನ್ನು ಬೇರೆ ಯೋಜನೆಗಳಿಗೆ ಬಳಸಿಕೊಂಡ ವಿಷಯಕ್ಕೆ ಉತ್ತರಿಸಲು ಸಾಧ್ಯವಾಗದಿದ್ದಾಗ, ಆರೆಸ್ಸೆಸ್‌ನ ಹೆಸರನ್ನು ಅಡ್ಡ ತಂದು ಚರ್ಚೆಯನ್ನು ಬೇರೆಡೆಗೆ ತಿರುಗಿಸಿದ ಘಟನೆ ಕರ್ನಾಟಕ ವಿಧಾನಸಭೆಯಲ್ಲಿ ನಡೆಯಿತು. ಇನ್ನು ರಾಷ್ಟ್ರೀಯ ಮಟ್ಟಕ್ಕೆ ಬರುವುದಾದರೆ, ಸಂಸತ್ತಿನಲ್ಲೂ ಅನೇಕ ಬಾರಿ ಉತ್ತರಿಸಲಾಗದಂಥ ಪರಿಸ್ಥಿತಿ ಎದುರಾದಾಗ 'ಇಂಡಿಯ' ಒಕ್ಕೂಟದ ಸದಸ್ಯರು ಸಂಘವನ್ನು ಎಳೆತರುವುದು ಸಾಮಾನ್ಯವಾಗಿಬಿಟ್ಟಿದೆ.

ತಮ್ಮನ್ನು 'ದಲಿತ ನಾಯಕ' ಎಂದು ಬಿಂಬಿಸಿಕೊಳ್ಳುವ ಪ್ರಿಯಾಂಕ್ ಖರ್ಗೆಯವರು, ''ಬಿಜೆಪಿ ಶಾಸಕರ ಮಕ್ಕಳು ಸಂಘದ ಶಾಖೆಗೆ ಹೋಗುತ್ತಿದ್ದಾರಾ?'' ಎಂದು ವಿಧಾನಸಭೆಯಲ್ಲಿ ಪ್ರಶ್ನಿಸಿದ್ದರು. ಸಾಮಾಜಿಕ ಜಾಲತಾಣಗಳಲ್ಲಿ ಒಂದಿಲ್ಲೊಂದು ವಿಷಯದಲ್ಲಿ ಸದಾ ಟ್ರೋಲ್ ಆಗುವ ಪ್ರಿಯಾಂಕ್ ಖರ್ಗೆಯವರು ಈ ವಿಷಯದಲ್ಲೂ ಹಿಂದೆ ಬೀಳಲಿಲ್ಲ. ಬಿಜೆಪಿಯ ಶಾಸಕರು ಇಂದಿಗೂ ಸಂಘದ ಶಾಖೆಗೆ ಶಿಸ್ತಾಗಿ ಹೋಗುವ ವಿಷಯವನ್ನು ಪ್ರಿಯಾಂಕ್ ಖರ್ಗೆಯವರು ತಿಳಿದುಕೊಳ್ಳಬೇಕು. ಕೆಲವರಂತೂ, 'ಸಂಘವು ಬ್ರಾಹ್ಮಣರ ಪರ, ಅವರು ಮನುವಾದಿಗಳು' ಎಂಬ ಹಸಿಸುಳ್ಳನ್ನು ಆಗಾಗ ಹೇಳುತ್ತಲೇ ಇರುತ್ತಾರೆ; 'ಸಂಘದವರು ದಲಿತ ವಿರೋಧಿಗಳು' ಎಂಬುದು ಇವರು ದಶಕಗಳಿಂದ ಹೇಳಿಕೊಂಡೇ ಬಂದಿರುವ ಮತ್ತೊಂದು ಸುಳ್ಳು. ದಲಿತ ನಾಯಕ ಬಾಬಾಸಾಹೇಬ್ ಅಂಬೇಡ್ಕರ್ ಅವರ ಮೇಲೆ ಕಾಂಗ್ರೆಸ್ ಪಕ್ಷಕ್ಕೆ ಪ್ರೀತಿ ಇದ್ದಿದ್ದರೆ, 1952ರ ಚುನಾವಣೆಯಲ್ಲಿ ಅವರ ವಿರುದ್ಧ ತಮ್ಮ ಪಕ್ಷದಿಂದ ಅಭ್ಯರ್ಥಿಯನ್ನು ಹಾಕಬಾರದಿತ್ತು. ಆದರೆ ಅವರ ವಿರುದ್ಧ ಕಾಂಗ್ರೆಸ್ ಪಕ್ಷದಿಂದ ಅಭ್ಯರ್ಥಿಯನ್ನು ಕಣಕ್ಕಿಳಿಸಿ, ಚುನಾವಣೆಯಲ್ಲಿ ಅವರನ್ನು ಸೋಲಿಸಿ, ದಲಿತರ ಪರವಿದ್ದ ಗಟ್ಟಿದನಿಯನ್ನು ಕಾಂಗ್ರೆಸ್ ಅಡಗಿಸಿಬಿಟ್ಟಿತು.

ರಾಷ್ಟ್ರೀಯ ಸ್ವಯಂಸೇವಕ ಸಂಘವು ದಶಕಗಳಿಂದ ನಡೆಸಿಕೊಂಡು ಬರುತ್ತಿರುವ ದಲಿತಪರ ಕಾರ್ಯಕ್ರಮಗಳು ಹಾಗೂ ಯೋಜನೆಗಳು ಕಾಂಗ್ರೆಸ್ಸಿನ ಸುಳ್ಳು ನಿರೂಪಣೆಗಳನ್ನು ಬೆತ್ತಲೆ ಮಾಡುತ್ತವೆ. ರಾಷ್ಟ್ರೀಯ ಸ್ವಯಂಸೇವಕ ಸಂಘ ಹಾಗೂ ಬಾಬಾಸಾಹೇಬ್ ಅಂಬೇಡ್ಕರ್‌ರವರ ವಿಚಾರಧಾರೆಗಳು ಸಮಾಜದ ಏಳಿಗೆಯಲ್ಲಿ ಸಮಾನವಾಗಿ ಪ್ರಮುಖ ಪಾತ್ರವನ್ನು ವಹಿಸಿವೆ. ಸಂಘವನ್ನು ಸ್ಥಾಪಿಸಿದ 'ಡಾಕ್ಟರ್‌ಜೀ' ಅವರ ಮೂಲಧ್ಯೇಯವು, ರಾಷ್ಟ್ರ ನಿರ್ಮಾಣದಲ್ಲಿ ಹಿಂದೂಗಳನ್ನು ಒಂದುಗೂಡಿಸುವುದಾಗಿತ್ತು. ಸಮಾಜದಲ್ಲಿ ಸಾಮರಸ್ಯವಿಲ್ಲದೆ ಸಮಾನತೆಯನ್ನು ರೂಪಿಸುವುದು ಸಾಧ್ಯವಿಲ್ಲವೆಂಬುದು ಡಾಕ್ಟರ್ ಜೀ ಮತ್ತು ಅಂಬೇಡ್ಕರ್ ಇಬ್ಬರ ನಿಲುವೂ ಆಗಿತ್ತು. 1947ರ ನವೆಂಬರ್ 15ರಂದು ದೆಹಲಿಯಲ್ಲಿ ಮಾಡಿದ ಭಾಷಣದಲ್ಲಿ ಅಂಬೇಡ್ಕರ್ ಹೇಳಿದ್ದು ಹೀಗೆ: ''ಭಾರತದಲ್ಲಿ ಅಸಂಖ್ಯ ಜಾತಿಗಳಿದ್ದು, ಇದರಿಂದಲೇ ಸಮಾಜದಲ್ಲಿ ಪ್ರತ್ಯೇಕತೆಯ ಭಾವನೆ ಬೆಳೆಯುತ್ತದೆ, ಪರಸ್ಪರ ದ್ವೇಷ, ತಿರಸ್ಕಾರ ತಳವೂರುತ್ತದೆ. ನಾವು ಒಂದು ರಾಷ್ಟ್ರವಾಗಿ ಎದ್ದುನಿಲ್ಲುವುದೇ ಆದಲ್ಲಿ, ನಮ್ಮ ಮಾರ್ಗದಲ್ಲಿರುವ ಅಡೆತಡೆಗಳನ್ನು ಮೊದಲು ನಿವಾರಿಸಬೇಕು. ಒಂದು ರಾಷ್ಟ್ರವಾಗಿ ನಿಂತುಕೊಂಡಲ್ಲಿ ಮಾತ್ರ ಬಂಧುತ್ವದ ಭಾವನೆ ಅರಳುತ್ತದೆ''.

ಅಂಬೇಡ್ಕರ್ ಹಾಗೂ ಡಾಕ್ಟರ್‌ಜೀಯವರ ಕಾರ್ಯಶೈಲಿಗಳು ಭಿನ್ನವಾಗಿ ಕಂಡರೂ, ಇಬ್ಬರ ದಿಕ್ಕೂ ಒಂದೇ ಆಗಿತ್ತೆಂದು ಇದರಿಂದ ಸ್ಪಷ್ಟವಾಗುತ್ತದೆ. ಇಬ್ಬರೂ ಸಮಾಜದಲ್ಲಿ ಸಮಾನತೆಯ ಪರವಾಗಿದ್ದವರು. 1934ರಲ್ಲಿ, ಮಹಾತ್ಮ ಗಾಂಧಿಯವರು ಸಂಘದ ಶಿಬಿರವನ್ನು ಸಂದರ್ಶಿಸಲು ಬಂದಿದ್ದರು. ಶಿಬಿರದಲ್ಲಿ ಪಾಲ್ಗೊಂಡಿದ್ದಂಥ ಕಾರ್ಯಕರ್ತರಿಗೆ ಇತರರ ಜಾತಿಯ ಅರಿವೇ ಇರಲಿಲ್ಲ. ಅಲ್ಲಿ ಬಂದಿದ್ದ ಕಾರ್ಯಕರ್ತರಲ್ಲಿ ಯಾರು ಕೂಡ ಮತ್ತೊಬ್ಬನ ಜಾತಿಯನ್ನು ಕೇಳಿ ತಿಳಿದುಕೊಳ್ಳುವ ಯತ್ನವನ್ನೇ ಮಾಡಲಿಲ್ಲ, ಎಲ್ಲರ ಮನದಲ್ಲೂ ತಾವು ಕೇವಲ ಹಿಂದೂಗಳಷ್ಟೇ ಎಂಬ ಭಾವನೆಯಿತ್ತು. ಶಿಬಿರದಲ್ಲಿ ಎಲ್ಲರೂ ಒಟ್ಟಾಗಿ ಕೂರುವುದು, ಏಳುವುದು, ಊಟ ಮಾಡುವುದು, ಕೆಲಸ ಮಾಡುವುದು ಸಾಗುತ್ತಿತ್ತು. ಇದನ್ನು ಕಂಡು ಗಾಂಧೀಜಿ ಆಶ್ಚರ್ಯಚಕಿತರಾಗಿದ್ದರು. ಹೆಡ್ಗೆವಾರ್‌ರವರು ಅತ್ಯಂತ ಯಶಸ್ವಿಯಾಗಿ ಅಸ್ಪೃಶ್ಯತೆಯ ನಿವಾರಣೆ ಮಾಡಿರುವುದನ್ನು ಮಹಾತ್ಮ ಗಾಂಧಿ ಕೊಂಡಾಡಿದ್ದರು.

ನಾಗಪುರದಲ್ಲಿ ಒಮ್ಮೆ ನಡೆಯಬೇಕಿದ್ದ, ಸಂಘದ ಶಿಕ್ಷವರ್ಗದ ತೃತೀಯ ವರ್ಷದ ಕಾರ್ಯಕ್ರಮಕ್ಕೆ ಯಾರನ್ನು ಆಹ್ವಾನಿಸಬೇಕೆಂದು ಸಂಘದ ಹಿರಿಯ ಕಾರ್ಯಕರ್ತರೊಬ್ಬರು ಕೇಳಿದಾಗ, ಹಲವು ಗಣ್ಯವ್ಯಕ್ತಿಗಳ ಹೆಸರುಗಳು ಸೂಚಿಸಲ್ಪಟ್ಟವು. ಆದರೆ ಗುರೂಜಿ, 'ರೇವರಾಮಜಿ ಕವಾಡೆ'ಯವರನ್ನು ಆಹ್ವಾನಿಸುವಂತೆ ಹೇಳಿದರು. ಈ ಹೆಸರು ಕೇಳುತ್ತಿದ್ದಂತೆ ಅಲ್ಲಿ ನೆರೆದಿದ್ದ ಎಲ್ಲರಿಗೂ ಆಶ್ಚರ್ಯವಾಯಿತು, ಕಾರಣ ಅವರ‍್ಯಾರಿಗೂ 'ಕವಾಡೆ' ಯಾರೆಂದು ಗೊತ್ತಿರಲಿಲ್ಲ. ಬಾಬಾ ಸಾಹೇಬರು ಮತಾಂತರಗೊಂಡ ನಂತರ ಹಲವು ಅನುಯಾಯಿಗಳು ರಾಜಕೀಯಕ್ಕೆ ಹೋದರು; ಆದರೆ ಇಬ್ಬರು ಮಾತ್ರ ಧರ್ಮದ ಬಗ್ಗೆ ಒಲವು ಮೂಡಿಸಿಕೊಂಡಿದ್ದರು. ಆ ಇಬ್ಬರಲ್ಲಿ ಕವಾಡೆ ಸಹ ಒಬ್ಬರು. ರಾಷ್ಟ್ರೀಯ ಸ್ವಯಂಸೇವಕ ಸಂಘ ಹಾಗೂ ಬಾಬಾ ಸಾಹೇಬರ ನಡುವೆ ಬಿರುಕು ಮೂಡಿಸಲು ಕಾಂಗ್ರೆಸ್ಸಿಗರು ದಶಕಗಳಿಂದ ಕುತಂತ್ರ ಮಾಡುತ್ತಲೇ ಬಂದಿದ್ದಾರೆ. ಅಂಬೇಡ್ಕರ್‌ರವರು ಕೆಲವು ಶಾಸ್ತ್ರೀಯ ಕಾರಣಗಳಿಂದಾಗಿ ತಮ್ಮ ದೀಕ್ಷಾ ಸಮಾರಂಭಕ್ಕೆ ನಾಗಪುರವನ್ನು ಆಯ್ಕೆ ಮಾಡಿಕೊಂಡಿದ್ದರು. ಆದರೆ ಕೆಲವು ಪ್ರಗತಿಪರರು, ''ಸಂಘದ ಕೇಂದ್ರವು ನಾಗಪುರದಲ್ಲಿರುವುದರಿಂದ ಅಲ್ಲಿನವರಿಗೆ ಸಂದೇಶ ರವಾನಿಸಲೆಂದು ಅಂಬೇಡ್ಕರ್ ನಾಗಪುರವನ್ನು ಆಯ್ಕೆಮಾಡಿಕೊಂಡಿದ್ದಾರೆ'' ಎಂದು ಸುಳ್ಳು ಸುದ್ದಿ ಹಬ್ಬಿಸಿದರು. ಈ ವಿಷಯ ತಿಳಿದ ಬಾಬಾ ಸಾಹೇಬರು ತಮ್ಮ ಭಾಷಣದ ಆರಂಭದಲ್ಲಿಯೇ, ತಾವು ನಾಗಪುರವನ್ನು ಆಯ್ಕೆಮಾಡಿರುವುದೇಕೆ ಎಂಬುದನ್ನು ಹೇಳಿಬಿಟ್ಟರು. ಮಾತ್ರವಲ್ಲದೆ, ಬೌದ್ಧಮತದ ಹರಡುವಿಕೆಯಲ್ಲಿ ನಾಗಪುರದ ಜನರ ಪ್ರಮುಖ ಪಾತ್ರವಿರುವುದನ್ನು ಉಲ್ಲೇಖ ಮಾಡಿ, ಅದಕ್ಕಾಗಿಯೇ ತಾವು ನಾಗಪುರವನ್ನು ಆಯ್ಕೆಮಾಡಿಕೊಂಡಿದ್ದಾಗಿ ಹೇಳಿದರು. ''ಕೆಲವರು ಇದರ ವಿಚಾರವಾಗಿ ಸುಳ್ಳುಸುದ್ದಿ ಹಬ್ಬಿಸುತ್ತಿರುವುದು ನನ್ನ ಕಿವಿಗೆ ಬಿದ್ದಿದೆ, ಅದೆಲ್ಲವೂ ಸುಳ್ಳು'' ಎಂದು ಹೇಳುವ ಮೂಲಕ ಕಾಂಗ್ರೆಸ್ಸಿಗರಿಗೆ ಮತ್ತು ಎಡಚರರಿಗೆ ಸ್ಪಷ್ಟ ಸಂದೇಶವನ್ನು ತಲುಪಿಸಿದ್ದರು.

ಅಂದು ಜಾತಿ ವ್ಯವಸ್ಥೆಯೆಂಬುದು ಕೇವಲ ನಗರ ಅಥವಾ ಹಳ್ಳಿಗೆ ಸೀಮಿತವಾಗಿರಲಿಲ್ಲ, ಕಾಡುಗಳಲ್ಲಿ ವಾಸವಾಗಿದ್ದಂಥ ಆದಿವಾಸಿಗಳಲ್ಲಿಯೂ ಇತ್ತು. ಬಾಬಾ ಸಾಹೇಬರಿಗೆ ವನವಾಸಿಗಳ ಬಗ್ಗೆ ಅಪಾರ ಕಾಳಜಿಯಿತ್ತು. ಅವರನ್ನು ಮುಖ್ಯವಾಹಿನಿಗೆ ತಂದು ಒಳ್ಳೆಯ ಶಿಕ್ಷಣ ಕೊಡಿಸಿ ಸಮಾಜದಲ್ಲಿ ಉತ್ತಮ ಸ್ಥಾನಮಾನ ಕೊಡಿಸಬೇಕೆಂಬ ಹಂಬಲವಿತ್ತು. ''ಸಾವಿರಾರು ವರ್ಷಗಳಿಂದ ತಮ್ಮದೇ ಆದ ಸಂಸ್ಕೃತಿ, ಪರಂಪರೆಯನ್ನು ಉಳಿಸಿಕೊಂಡು ಬಂದಿರುವ ಆದಿವಾಸಿಗಳು ಹಲವು ರೋಗಗಳಿಂದ ಬಳಲುತ್ತಿದ್ದಾರೆ. ಅವರಿಗೆ ಸರಿಯಾದ ಆಶ್ರಯವಿಲ್ಲ. ಅವರನ್ನು ಸಮೀಪಿಸಿ ಉತ್ತಮ ಬಾಂಧವ್ಯವನ್ನು ಬೆಳೆಸಿಕೊಂಡರೆ ಅವರನ್ನು ರಕ್ಷಿಸಲು ಸಾಧ್ಯ'' ಎಂದು ಬಾಬಾ ಸಾಹೇಬರು ಹೇಳಿದ್ದರು. ವನವಾಸಿಗಳು ಮತ್ತು ಗಿರಿಜನರ ಬಗ್ಗೆ ಬಾಬಾ ಸಾಹೇಬರಂತೆ ಗುರೂಜಿಯವರೂ ಆಲೋಚಿಸುತ್ತಿದ್ದರು. ಸಂಘದ ಪ್ರಮುಖ ಕಾರ್ಯಕರ್ತರಾಗಿದ್ದ ಬಾಳಾಸಾಹೇಬ ದೇಶಪಾಂಡೆಯವರನ್ನು ವನವಾಸಿಗಳ ನಡುವೆ ಕೆಲಸಕ್ಕಾಗಿ ನಿಯುಕ್ತಿಗೊಳಿಸಿದರು. ಬಾಳಾಸಾಹೇಬರು ದೊಡ್ಡದೊಂದು ಯುವಪಡೆಯನ್ನು ಕಟ್ಟಿಕೊಂಡು ಛತ್ತೀಸ್‌ಗಢದಲ್ಲಿ ತಮ್ಮ ಕೆಲಸವನ್ನು ಪ್ರಾರಂಭಿಸಿದ್ದರು. ಈ ತಂಡವು ವನವಾಸಿಗಳ ಶಿಕ್ಷಣದ ರಚನಾತ್ಮಕ ಕೆಲಸವನ್ನು ಕೈಗೆತ್ತಿಕೊಂಡಿತು. ಮತ್ತೊಂದೆಡೆ ವನವಾಸಿಗಳ ಸಮಸ್ಯೆಗಳ ಬಗ್ಗೆ ಆಳವಾದ ಅಧ್ಯಯನವನ್ನು ನಡೆಸಲಾಯಿತು. ವನವಾಸಿಗಳಿಂದ ಉತ್ಪನ್ನಗಳನ್ನು ಕಡಿಮೆ ಬೆಲೆಯಲ್ಲಿ ಖರೀದಿಸಿ ಪೇಟೆಯಲ್ಲಿ ದುಬಾರಿ ಬೆಲೆಗೆ ಮಾರಿ ಹಣವನ್ನು ಮಾಡಿಕೊಳ್ಳುತ್ತಿದ್ದ ವರ್ತಕರ ಬಗ್ಗೆ ಅರಿವು ಮೂಡಿಸಿ ದೊಡ್ಡ ಮಟ್ಟದ ಚಳವಳಿಯನ್ನು ಮಾಡಿಸಲಾಯಿತು. ಈ ಎಲ್ಲಾ ಕೆಲಸಗಳನ್ನು 1977ರಲ್ಲಿ 'ವನವಾಸಿ ಕಲ್ಯಾಣ ಆಶ್ರಮ' ಎಂಬ ಅಖಿಲ ಭಾರತೀಯ ವ್ಯವಸ್ಥೆಗೆ ಒಳಪಡಿಸಲಾಯಿತು.

19ನೇ ಶತಮಾನದಲ್ಲಿ, ಕೇರಳದಲ್ಲಿ ನಡೆಯುತ್ತಿದ್ದಂಥ ಅಸ್ಪೃಶ್ಯತೆಯ ಆಚರಣೆಯು ತುಂಬಾ ದಯನೀಯವಾಗಿತ್ತು. ದಲಿತರು ಉಚ್ಚವರ್ಣೀಯರಿಂದ ಸುಮಾರು 64 ಗಜದಷ್ಟು ದೂರದಲ್ಲಿ ನಿಂತು ಮಾತನಾಡಬೇಕಿತ್ತು. ಇದನ್ನು ಕಂಡ ಸ್ವಾಮಿ ವಿವೇಕಾನಂದರು ಕೇರಳವನ್ನು 'ಹುಚ್ಚಾಸ್ಪತ್ರೆ' ಎಂದು ಕರೆದಿದ್ದರು. ನಂತರ ಕೇರಳದಲ್ಲಿ ಬದಲಾವಣೆಯ ಗಾಳಿ ಬೀಸಿ ಗುರುವಾಯೂರು ದೇಗುಲ ಪ್ರವೇಶಕ್ಕೆ, ತಿರುವಾಂಕೂರು ಮಹಾರಾಜರಿಂದ ಅವಕಾಶ ಸಿಕ್ಕ ಐತಿಹಾಸಿಕ ಘಟನೆ ನಡೆಯಿತು. ಕಳೆದ ದಶಕದಲ್ಲಿ, ಕಂಚಿ ಕಾಮಕೋಟಿ ಶಂಕರಾಚಾರ್ಯ ಶ್ರೀ ಜಯೇಂದ್ರ ಸರಸ್ವತಿಯವರ ಸಮ್ಮುಖದಲ್ಲಿ ಅನ್ಯಜಾತಿಯ 29 ಮಂದಿಗೆ ಪೌರೋಹಿತ್ಯದಲ್ಲಿ ತರಬೇತಿ ನೀಡಿ, ಕೊನೆಯಲ್ಲಿ ಸುಮಾರು 4,000 ಜನರ ಸಮ್ಮುಖದಲ್ಲಿ ರುದ್ರಾಕ್ಷಿ ಮಾಲೆ ಸಮೇತ ಕಂಚಿ ಕಾಮಕೋಟಿ ಪೀಠದ ಅಧಿಕೃತ ಮೊಹರು ಒತ್ತಿದ ಪ್ರಮಾಣ ಪತ್ರವನ್ನೂ ಪ್ರದಾನ ಮಾಡಲಾಯಿತು. ಕೇರಳದಲ್ಲಿ ನಡೆದ ಈ ದೊಡ್ಡ ಪ್ರಯತ್ನದ ಹಿಂದೆ ಇದ್ದುದು ರಾಷ್ಟ್ರೀಯ ಸ್ವಯಂಸೇವಕ ಸಂಘದ ಹಿರಿಯ ಪ್ರಚಾರಕರಾದ ಪಿ.ಮಾಧವನ್.

ರಾಷ್ಟ್ರೀಯ ಸ್ವಯಂಸೇವಕ ಸಂಘದ ಕಾರ್ಯಕರ್ತರು ಇತರರಂತೆ ಪ್ರಚಾರ ಗಿಟ್ಟಿಸದೆ, ತಮ್ಮ ಪಾಡಿಗೆ ತಾವು ಕೆಲಸವನ್ನು ಮಾಡುತ್ತಿರುತ್ತಾರೆ. ಪ್ರಚಾರ ಮಾಡದ ಕಾರಣ, ಸಂಘದ ಹಲವು ಸಾಮಾಜಿಕ ಕಾರ್ಯಗಳು ಜನರಿಗೆ ತಿಳಿಯುವುದಿಲ್ಲ, ಸಮಾಜದಲ್ಲಿದ್ದ ಅಸ್ಪೃಶ್ಯತೆಯ ವಿರುದ್ಧ ಗಟ್ಟಿಯಾಗಿ ನಿಂತಿದ್ದು ರಾಷ್ಟ್ರೀಯ ಸ್ವಯಂಸೇವಕ ಸಂಘ ಹಾಗೂ ಬಾಬಾ ಸಾಹೇಬರು. ಇಬ್ಬರ ಗುರಿ ಒಂದೇ ಆಗಿತ್ತು, ಆದರೆ ಗುರಿಯನ್ನು ಸಾಧಿಸಲು ಬಳಸಿಕೊಂಡಂಥ ಮಾರ್ಗ ಮಾತ್ರ ಭಿನ್ನವಾಗಿತ್ತು. ಇಬ್ಬರಿಗೂ ರಾಜಕೀಯದ ಅರಿವಿಲ್ಲದ ಕಾರಣ ಚುನಾವಣೆಗಳನ್ನು ಎದುರಿಸುವುದು ಕಷ್ಟವಾಗಿತ್ತು. ಬಾಬಾ ಸಾಹೇಬರು ನಂತರ ಷೆಡ್ಯೂಲ್ ಕ್ಯಾಸ್ಟ್ ಪಕ್ಷವನ್ನು ವಿಸರ್ಜಿಸಿ ಎಲ್ಲಾ ಜಾತಿಯವರ ವಿಶ್ವಾಸ ಗಳಿಸಲು 'ರಿಪಬ್ಲಿಕನ್' ಪಕ್ಷವನ್ನು ಕಟ್ಟುವತ್ತ ಯೋಚಿಸಿದ್ದರು.

ಬಾಬಾ ಸಾಹೇಬರ ಅನುಯಾಯಿಗಳು ಹಾಗೂ ರಾಷ್ಟ್ರೀಯ ಸ್ವಯಂಸೇವಕ ಸಂಘದ ಮಧ್ಯೆ ದೊಡ್ಡ ಕಂದಕವನ್ನು ಸೃಷ್ಟಿಸಲು ಕಾಂಗ್ರೆಸ್ಸಿಗರು ಸಂಘದ ಮೇಲೆ ಇಲ್ಲಸಲ್ಲದ ಆರೋಪಗಳನ್ನು ಇಂದಿಗೂ ಮಾಡುತ್ತಿದ್ದಾರೆ. ಸಂಘವೆಂದರೆ ಕೇವಲ ಬ್ರಾಹ್ಮಣರಿಗೆ ಸೇರಿದ್ದೆಂದು ಸುಳ್ಳು ಸುದ್ದಿ ಹರಡಿಸಿ ದಲಿತರನ್ನು ಎತ್ತಿಕಟ್ಟುವ ಕೆಲಸವನ್ನು ಮಾಡುತ್ತಿದ್ದಾರೆ. ಆದರೆ ರಾಷ್ಟ್ರೀಯ ಸ್ವಯಂಸೇವಕ ಸಂಘವು ಆರಂಭವಾದ ದಿನದಿಂದಲೂ ಸಮಾಜದ ಎಲ್ಲಾ ವರ್ಗದ ಜನರನ್ನೂ ಒಟ್ಟಿಗೆ ತೆಗೆದುಕೊಂಡು ಹೋಗುತ್ತಿದೆ.

## ಓದುಗರ ಒಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

### ಸ್ತುತ್ಯರ್ಹ ಕೆಲಸಗಳು

ಪ್ರಕಾಶ್ ಶೇಷರಾಘವಾಚಾರ್ ಅವರ 'ಪ್ರಕಾಶಪಥ' ಅಂಕಣ ಬರಹವು (ಮಾ. 19) 'ಆಮ್ ಆದ್ಮಿ' ಅರವಿಂದ ಕೇಜ್ರಿವಾಲರ ಮುಖವಾಡವನ್ನು ಬಯಲು ಮಾಡಿದೆ ಎನ್ನಬೇಕು. ಲೇಖಕರು ವಿಶ್ಲೇಷಿಸಿದ್ದು ಸರಿಯಾಗೇ ಇದೆ. ಒಂದು ಕಾಲದಲ್ಲಿ ಸರಕಾರಿ ಉನ್ನತ ಹುದ್ದೆಯಲ್ಲಿದ್ದ ಕೇಜ್ರಿವಾಲ್, ಅಣ್ಣಾ ಹಜಾರೆಯವರಂಥ ಹಿರಿಯರಿಗೆ ಹತ್ತಿರವಾಗಿ, ನೆರವು ಪಡೆದು, ಭ್ರಷ್ಟಾಚಾರದ ವಿರುದ್ಧ ದನಿಯೆತ್ತಿದಂತೆ ಮಾಡಿ, ಸಾವಕಾಶವಾಗಿ ಆಮ್ ಆದ್ಮಿ ಪಕ್ಷದ ಮುಖಂಡನಾಗಿ ಮುಂದೆ ದೆಹಲಿಯ ಮುಖ್ಯಮಂತ್ರಿಯೂ ಆದ ಆಸಾಮಿ. ಶ್ರೀಸಾಮಾನ್ಯರ ಮನಸ್ಸಿಗೆ ಹತ್ತಿರವಾಗಿ,

ಅವರ ಅಗತ್ಯಗಳನ್ನು ಚಿಟಿಕೆ ಹೊಡೆಯುವಷ್ಟರಲ್ಲಿ ಪೂರೈಸುವ ವಾಗ್ದಾನ ಮಾಡಿ ಒಂದು ದಶಕಕ್ಕೂ ಹೆಚ್ಚು ಕಾಲ ಮೆರೆದ ಜಾಣನೀತ.

ಆದರೆ ಆರಂಭದಲ್ಲಿ ಸರಳತೆ ಮೆರೆದ ಈತ, ದಿನಗಳೆದಂತೆ ಐಷಾರಾಮಿ ಜೀವನದೆಡೆಗೆ ವಾಲಿದ್ದರ ಜತೆಗೆ, ಕೇಂದ್ರ ಸರಕಾರ ಮತ್ತು ಪ್ರಧಾನಿ ಮೋದಿಯವರನ್ನು ಮನಸೋ ಇಚ್ಛೆ ಟೀಕಿಸಿ, ತನ್ನ ನಿಜರೂಪ ತೋರ್ಪಡಿಸಿದ. ಒಟ್ಟಿನಲ್ಲಿ, ಶ್ರೀಸಾಮಾನ್ಯರ ಬಾಳಿನ ಜತೆಗೆ ಆಟವಾಡಿ, ಆಕಾಶದ ನಕ್ಷತ್ರವನ್ನು ಕೈಗೆ ತಂದುಕೊಡುವ ಹುಸಿಭರವಸೆ ನೀಡಿದ ಈತ, ಅಧಿಕಾರದಲ್ಲಿದ್ದಾಗ ಚೆನ್ನಾಗಿ ಮೇಯ್ದು, ಭ್ರಷ್ಟತೆಯಲ್ಲಿ ಸಿಲುಕಿ ಪತನಗೊಂಡ ರಾಜಕಾರಣಿ ಎನಿಸಿಕೊಂಡ. ಎಲ್ಲಿಯವರೆಗೂ ಮೋಸಹೋಗುವವರು ಇರುವರೋ, ಅಲ್ಲಿಯವರೆಗೆ ಮೋಸ ಮಾಡುವವರೂ ಇದ್ದೇ ಇರುತ್ತಾರೆ ಎಂಬ ಮಾತು ಸುಳ್ಳಲ್ಲ!

ಇನ್ನು, 'ನೂರೆಂಟು ವಿಶ್ವ' ಅಂಕಣದಲ್ಲಿ (ಮಾ. 20) ಬಿಂಬಿತವಾದ, ಮರ-ಪಕ್ಷಿ-ಪ್ರಾಣಿಗಳ ಕುರಿತಾದ ವಿಶ್ವೇಶ್ವರ ಭಟ್ಟರ ಕಾಳಜಿಯ ಕುರಿತು ಒಂದೆರಡು ಮಾತು. ಮನುಕುಲ ಮತ್ತು ಪ್ರಾಣಿ-ಪಕ್ಷಿಗಳ ಒಳಿತಿಗಾಗೇ ನಿಸರ್ಗವು ಬೆಳೆಸಿರುವ ಮರ-ಗಿಡಗಳ ಸಂರಕ್ಷಣೆ ಪ್ರತಿಯೊಬ್ಬರ ಕರ್ತವ್ಯ. ಇದರಲ್ಲಿ ಸರಕಾರ ಮತ್ತು ಪ್ರಜೆ ಎಂಬ ಬೇರೆ ಬೇರೆ ಪಾಲು ಇರಬಾರದು; ಇಬ್ಬರದ್ದೂ ಸಮಭಾವ-ಸಮಪಾಲು ಇರಲೇಬೇಕು. ಜಗತ್ತಿನಲ್ಲಿ ಉಳಿಯಲು-ಬೆಳೆಯಲು ಸರ್ವಜೀವಿಗಳಿಗೂ ಆ ಜಗನ್ನಾಥ ಅವಕಾಶ ಮಾಡಿಕೊಟ್ಟಿರುವಾಗ, ಮನುಷ್ಯ ತನ್ನ ಸ್ವಾರ್ಥವನ್ನಷ್ಟೇ ನೋಡಿ ಬದುಕಬಾರದು; 'ಜಗತ್ತಿನಲ್ಲೇ ಬುದ್ಧಿವಂತ ಪ್ರಾಣಿ' (?!) ಎನಿಸಿಕೊಂಡಿರುವ ಮನುಷ್ಯ ಇತರರಿಗೂ ಒಳಿತು ಬಯಸಬೇಕು. ವಿಶ್ವೇಶ್ವರ ಭಟ್ಟರು ಖ್ಯಾತ ಲೇಖಕ ಎಸ್.ಎಲ್.ಭೈರಪ್ಪನವರ ಮನದಾಸೆಯ ಮೇರೆಗೆ ಮುತುವರ್ಜಿ ವಹಿಸಿ, ಅಂದಿನ ಮುಖ್ಯಮಂತ್ರಿ, ಬಸವರಾಜ ಬೊಮ್ಮಾಯಿಯವರಲ್ಲಿ ಅರಿಕೆ ಮಾಡಿ, ಸಂತೇಶಿವರ ಹಾಗೂ ಸುತ್ತಮುತ್ತಲ ಗ್ರಾಮಗಳಿಗೆ ನೀರಿನ ವ್ಯವಸ್ಥೆ ಮಾಡಿಸಿಕೊಟ್ಟಿದ್ದು, ಹಾಗೆಯೇ ಇನ್ನೊಬ್ಬ ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ ಅವರನ್ನು ಭೇಟಿಮಾಡಿ ದಾಂಡೇಲಿಯ ಸುತ್ತಮುತ್ತ ಹಾರ್ನ್‌ಬಿಲ್ ಪಕ್ಷಿಗಳ ರಕ್ಷಣೆಯ ಸಲುವಾಗಿ ಬಜೆಟ್‌ನಲ್ಲಿ ಹಣ ಬಿಡುಗಡೆ ಮಾಡಿಸಿದ್ದು ಸ್ತುತ್ಯರ್ಹ ಕೆಲಸಗಳು ಎನ್ನಲಡ್ಡಿಯಿಲ್ಲ. ಇವು ನಿಸರ್ಗದ ಕುರಿತಾದ ಅವರ ಕಾಳಜಿಗೆ ದ್ಯೋತಕ. ಈ ಅಳಿಲುಸೇವೆ ಹೀಗೆಯೇ ಮುಂದುವರಿಯಲಿ.

- ಲಕ್ಷ್ಮೀಕಾಂತ ಪಾಟೀಲ, ಮೈಸೂರು

**ಓದುಗರ ಒಣಿಗೆ ಭೇಟಿ ಕೊಡಿ**

ನಿಮ್ಮ ಅಭಿಪ್ರಾಯಗಳನ್ನು vveditoped@gmail.comಗೆ ಮೇಲ್ ಮಾಡಬಹುದು ಅಥವಾ ಕಚೇರಿಯ ವಿಳಾಸಕ್ಕೆ ಕಳುಹಿಸಬಹುದು

# ಮೆರೆಯದಿರು, ಮೈ ಮರೆಯದಿರು..! ಆಟ ಕಲಿಸಿದ ಪಾಠ!!

**ನೈಜ ಕ್ರಿಕೆಟ್ ಪ್ರೇಮಿಗೆ ಐಪಿಎಲ್ ಕೇವಲ ಆಟವಾಗಿ ರುಚಿಸುತ್ತದೆಯೇ ಹೊರತು ಅವನಿಗೆ ಫ್ಯಾನ್ ವಾರ್, ಫ್ರಾಂಚೈಸ್ ವಾರ್ ಇತ್ಯಾದಿಗಳಲ್ಲಿ ಆಸಕ್ತಿ ಇರೋದಿಲ್ಲ. ಆತ ಧೋನಿ, ಕೊಹ್ಲಿ, ಶರ್ಮ, ಪಾಂಡ್ಯ, ರಸೆಲ್, ಬಟ್ಲರ್ ಯಾರೇ ಚೆನ್ನಾಗಿ ಆಡಿದರೂ ಆಸ್ವಾದಿಸ್ತಾನೆ. ಹೊಡಿಬಡಿ ಪಂದ್ಯದಲ್ಲಿ ಬೌಲರ್‌ಗಳು ಮೇಲುಗೈ ಸಾಧಿಸೋದನ್ನು ಎಂಜಾಯ್ ಮಾಡ್ತಾನೆ.**

**ಪದಸಾಗರ**

ನವೀನ್ ಸಾಗರ್
vveditoped@gmail.com

ಬರೋಬ್ಬರಿ 8 ವರ್ಷಗಳ ನಂತರ ವಿಶ್ವವಾಣಿಯಲ್ಲಿ ಮತ್ತೆ ಅಂಕಣ ಬರೆಯುವ ಅವಕಾಶ ನನಗೆ ಒದಗಿ ಬಂದಿದೆ. ಸಂತಸದ ಜತೆಗೆ ಸಣ್ಣ ನರ್ವಸ್ ಭಾವ. ಓದುಗರಿಗೆ ನಾನು ಎಷ್ಟು ವರ್ಷದ ಮೇಲೆ ಬರೀತಾ ಇದೀನಿ ಇತ್ಯಾದಿ ವಿಷಯಗಳು ನಗಣ್ಯ. ಅವರಿಗೆ ಬರಹಗಾರ ಯಾರಾದರೂ ಆಗಲಿ, ಎಷ್ಟು ವರ್ಷದ ನಂತರವಾದರೂ ಬರೆಯಲಿ, ಬರಹ ಓದುವಂತಿರಬೇಕು ಅಷ್ಟೆ. ನಟನೊಬ್ಬ ಮೊದಲ ಬಾರಿಗೆ ತೆರೆ ಮೇಲೆ ಕಾಣಿಸಿಕೊಂಡಾಗ ಅಥವಾ ಬಹುದಿನಗಳ ನಂತರ ತೆರೆ ಮೇಲೆ ಕಂಡಾಗ ಪ್ರೇಕ್ಷಕನಿಗೆ ಒಂದು ಸಣ್ಣ ಎಕ್ಸೈಟ್‌ಮೆಂಟ್ ಮತ್ತು ಅಭಿಮಾನ ಮೂಡೋದು ಹೌದಾದರೂ, ಆತನಿಗೆ ಮುಖ್ಯವಾಗೋದು ನಟನ ಅಭಿನಯ ಮತ್ತು ಇಡಿಯಾಗಿ ಸಿನಿಮಾ ಹೇಗಿದೆ ಅನ್ನೋದು ಮಾತ್ರ. ಕ್ರಿಕೆಟಿಗನೊಬ್ಬ ಅಖಾಡಕ್ಕೆ ಇಳಿದಿದ್ದಾನೆ ಅಂದ್ರೆ ಆತನ ಪ್ರದರ್ಶನ ಮತ್ತು ಗೆಲುವಿಗೆ ಆತ ನೀಡೋ ಕೊಡುಗೆ ಅಷ್ಟೇ ವೀಕ್ಷಕನಿಗೆ ಮುಖ್ಯವಾಗುತ್ತೆಯೇ ಹೊರತು, ಆತ ಡಿಪ್ರೆಶನ್ನಲ್ಲಿದ್ದಾನೆ, ಪ್ರೇಯಸಿ ಕೈಕೊಟ್ಟಿರೋದಕ್ಕೆ ಆತನ ಆಟ ಡಲ್ ಆಗಿದೆ, ಆತ ಇಂಜುರಿಯಿಂದ ಈಗಷ್ಟೇ ಗುಣಮುಖನಾಗಿ ಬಂದಿದ್ದಾನೆ ಇತ್ಯಾದಿಗಳೆಲ್ಲ ಬೇಕಾಗಿಲ್ಲ. ಓದುಗ, ಪ್ರೇಕ್ಷಕ, ಗ್ರಾಹಕ ಇವರೆಲ್ಲ ನಿರೀಕ್ಷಿಸೋದು ತಮ್ಮ ಸಮಯಕ್ಕೆ, ಹಣಕ್ಕೆ ಮತ್ತು ನಿರೀಕ್ಷೆಗೆ ತಕ್ಕ ರಿಟರ್ನ್ಸ್ ಮಾತ್ರ. ಅದು ಸರಿ ಕೂಡ. ಹೀಗಾಗಿ ಬಹುದಿನದ ನಂತರ ಬರೆಯುತ್ತಿರೋ ಮೊದಲ ಅಂಕಣಬರಹ ಎಂಬ ಯಾವ ರಿಯಾಯಿತಿಯನ್ನೂ ನಿರೀಕ್ಷಿಸದೇ ಮೊದಲ ಅಂಕಣವನ್ನು ನಿಮ್ಮ ಮುಂದಿಡುತ್ತಿದ್ದೇನೆ.

ಆದರೆ ಮೊದಲ ಅಂಕಣಕ್ಕೆ ಯಾವ ವಸ್ತು ಆಯ್ದುಕೊಳ್ಳಲಿ ಅಂತ ಬಂದಾಗ ತಲೆಯಲ್ಲಿ ಹರಿದಾಡಿದ್ದು, ರಾಜ್ಯ ರಾಜಕೀಯ, ಅಂತಾರಾಷ್ಟ್ರೀಯ ವಿದ್ಯಮಾನಗಳು, ಸುನಿತಾ ವಿಲಿಯಮ್ಸ್, ಶೇರ್ ಮಾರ್ಕೆಟ್, ಸೌಜನ್ಯ ಹತ್ಯೆ ಕೇಸ್, ಕ್ರಿಕೆಟ್, ಐಪಿಎಲ್, ದರ್ಶನ್, ಯುಟ್ಯೂಬ್ ವೈರಲ್ ಐಟಮ್ಸ್.. ಹೀಗೆ ಸಾಲುಸಾಲು ಕಂಟೆಂಟ್‌ಗಳ ಮೆರವಣಿಗೆ. ಫೇಸ್‌ಬುಕ್‌ನ ಓದುಗರು, ''ಮೊದಲ ಅಂಕಣದಲ್ಲಿ ರಾಜಣ್ಣನಿಗೆ ರುಬ್ಬಿರಿ, ಬಂಡೆಗೆ ಗುದ್ದಿರಿ, ಟಗರನ್ನ ಗುಮ್ಮಿರಿ'' ಅಂತ ಕೇಳಿಕೊಂಡ್ರು..! ಅವ್ರಿಗೆಲ್ಲ ಒಂದು ಭರ್ಜರಿ ಹಾರ್ಡ್ ಹಿಟ್ ಅಂಕಣದ ಮೂಲಕ ಕಂಬ್ಯಾಕ್ ಮಾಡ್ಲಿ.. ಒಂದು ಫೈರ್ ಬ್ರ್ಯಾಂಡ್ ಲೇಖನ ಬರಲಿ, ತಮ್ಮೆಲ್ಲ ಆಕ್ರೋಶಗಳನ್ನು ಪ್ರತಿನಿಧಿಸೋ ಅಂಕಣ ಬರಲಿ ಅನ್ನೋ ಆಸೆ. ಇನ್ನು ಕೆಲವರು, ಭಾವುಕತೆ, ತುಂಟತನ, ಮುಗ್ಧತೆ, ಮಾನವೀಯ ಮೌಲ್ಯಗಳು ತುಂಬಿದ ಎಮೋಷನಲ್ ಅಂಕಣ ಬರಲಿ ಎಂಬ ಅನಿಸಿಕೆ ವ್ಯಕ್ತಪಡಿಸಿದರು.

ಮಲ್ಲೇಶ್ವರದ ಆಶಾ ಫುಡ್ ಕ್ಯಾಂಪ್‌ನಲ್ಲಿ ಉದ್ಯೋಗಿಯಾಗಿರುವ ಸಹೃದಯಿ ಓದುಗಮಿತ್ರ ದೇವರಾಜ್ ನಾಕಿಕೆರೆ ಒಂದು ಮೆಸೇಜ್ ಕಳಿಸಿದ್ದರು- ''ಸರ್, ಮಲ್ಲೇಶ್ವರದ ಕೆಸಿ ಜನರಲ್ ಆಸ್ಪತ್ರೆ ಸಿಗ್ನಲ್‌ನಲ್ಲಿ ನಿಂತಾಗ ಪ್ರತಿ ಸಲ, ಛತ್ರಿ ಮಾರೋ ಹುಡುಗ ಕಾಣ್ತಾನಾ ಅಂತ ಹುಡುಕ್ತೀನಿ ಸರ್. ನೀವು ಬರೆದ ಆ ಬರಹ ಭಯಂಕರ ಕಾಡಿತ್ತು. ಅಂಥವು ಬರೀರಿ ಸರ್. ಮಳೆ ಹುಡುಗ-ಛತ್ರಿ-ಮಲ್ಲೇಶ್ವರಂ ಸಿಗ್ನಲ್! ಕೆಲವು ವಸ್ತುಗಳು ನಮ್ಮ ಜತೆಲೇ ಇದ್ರೂ ಅವು ನಮ್ಮವಾಗೋದಿಲ್ಲ ಅಂತ ಬರೆದಿದ್ರಿ. ಅಂಥ ಬರಹಗಳನ್ನು ಮಿಸ್ ಮಾಡ್ಕೊತಿದೀನಿ. ಪ್ಲೀಸ್ ಬರೀರಿ''.

ಅರೆ.. ಓದುಗರ ನೆನಪಿನ ಶಕ್ತಿ ಎಂಥದ್ದು ಅಲ್ವಾ? ನಿಜ. ವರ್ಷಗಳು ಕಳೆದರೂ ನೆನಪಿರುವಂಥ, ಮನಸೊಳಗೆ ಭದ್ರವಾಗಿ ಜಾಗ ಮಾಡಿಕೊಳ್ಳುವಂಥ ಬರಹ ಬರೀಬೇಕು ಅನಿಸೋದು ಇಂಥ ಪತ್ರಗಳು ಬಂದಾಗಲೇ.

ಹಾಗಾದ್ರೆ, ಇವತ್ತೇನು ಬರೀಲಿ ಅಂತ ಯೋಚಿಸಿದಾಗ ಬೇಡಬೇಡವೆಂದರೂ ಕೈ ಜಗ್ಗಿ ಎಳೆದದ್ದು ನನ್ನ ನೆಚ್ಚಿನ ಕ್ರಿಕೆಟ್.

ಇಂದಿನಿಂದ ಐಪಿಎಲ್ ಶುರುವಾಗ್ತಿದೆ. ನಿನ್ನೆ ತನಕ ಗೆಳೆಯರಿದ್ದವರು ಇವತ್ತಿನಿಂದ ವೈರಿಗಳಾಗಿಬಿಡ್ತಾರೆ. ನಿನ್ನೆಯ ತನಕ ಬದ್ಧದ್ವೇಷಿಗಳ ಥರ ಇದ್ದವರು ಇಂದಿನಿಂದ ಆಪ್ತಮಿತ್ರರಾಗಿಬಿಡ್ತಾರೆ. ಬಹಳ ಹಿಂದೆ ''ಡಿವೈಡೆಡ್ ಬೈ ನೇಷನ್ಸ್ ಯುನೈಟೆಡ್ ಬೈ ಕ್ರಿಕೆಟ್'' ಅಂತ ಕಿಂಗ್ ಫಿಷರ್ ಒಂದು ಜಾಹೀರಾತು ಮಾಡಿತ್ತು. ಆಟ ಎಲ್ಲರನ್ನೂ ಒಂದುಗೂಡಿಸುತ್ತದೆ ಅನ್ನೋ ಪರಿಕಲ್ಪನೆಯಲ್ಲಿ ಎಲ್ಲ ದೇಶದ ಒಬ್ಬೊಬ್ಬ ಕ್ರಿಕೆಟಿಗನನ್ನು ಸೇರಿಸಿಕೊಂಡು ಅವರನ್ನು ಗೆಳೆಯರಂತೆ ತೋರಿಸುವ ಜಾಹೀರಾತು ಅದು. ಮದ್ಯಪಾನದ ಜಾಹೀರಾತೇ ಆದರೂ ಅದರಲ್ಲೊಂದು ಮೌಲ್ಯವಿತ್ತು. ಇಂದು ಐಪಿಎಲ್ ಅದೇ ರೀತಿ ಅನಿಸುತ್ತದೆ. ಡಿವೈಡೆಡ್ ಬೈ ನೇಷನ್ಸ್, ಯುನೈಟೆಡ್ ಬೈ ಐಪಿಎಲ್ ಅನಿಸುತ್ತದೆ. ಜಸ್ಟ್ ಒಂದ್ ತಿಂಗಳ ಹಿಂದೆ ತಮ್ಮ ತಮ್ಮ ದೇಶಗಳನ್ನು ಪ್ರತಿನಿಧಿಸುತ್ತಾ ಇದ್ದ ವಿದೇಶಿ ಆಟಗಾರರು, ಇವತ್ತು ಭಾರತದ ಲೀಗ್‌ನಲ್ಲಿ ಬೆರೆತು ಹೋಗುತ್ತಾರೆ. ಲಿವಿಂಗ್ ಸ್ಟೋನ್, ಸಾಲ್ಟ್, ಮ್ಯಾಕ್ಸ್ ವೆಲ್ ಇವರೆಲ್ಲ ಇಷ್ಟು ದಿನ ಪರಕೀಯರು. ಇಂದಿನಿಂದ ನಮ್ಮವರು. ಆದರೆ ದುರಂತ ನೋಡಿ, ಇಷ್ಟು ದಿನ ನಮ್ಮವರೇ ಆಗಿದ್ದ ರೋಹಿತ್ ಶರ್ಮ, ಹಾರ್ದಿಕ್ ಪಾಂಡ್ಯ, ಜಡೇಜ ಇವರೆಲ್ಲ ಕರ್ನಾಟಕದ ಪಾಲಿಗೆ ಶತ್ರುಗಳಾಗಿಬಿಡ್ತಾರೆ. ಧೋನಿ ಒಬ್ಬ ಪಾಕಿಸ್ತಾನಿ ಕ್ರಿಕೆಟಿಗನಿಗಿಂತ ಹೆಚ್ಚು ವೈರತ್ವಕ್ಕೆ ಗುರಿಯಾಗಿಬಿಡ್ತಾನೆ. ಕೊಹ್ಲಿ ಅಭಿಮಾನಿಗಳಿಗೂ ರೋಹಿತ್ ಅಭಿಮಾನಿಗಳಿಗೂ ಸೋಷಿಯಲ್ ಮೀಡಿಯಾ ವಾರ್ ಶುರುವಾಗುತ್ತದೆ. ಐಪಿಎಲ್ ದೇಶದೇಶಗಳನ್ನು ಒಂದಾಗಿಸುತ್ತದೆ. ಆದರೆ ದೇಶದ ಒಳಗಿನವರ ನಡುವೆಯೇ ಕಂದಕ ಸೃಷ್ಟಿಸುತ್ತದೆ. ಅಫ್‌ಕೋರ್ಸ್ ಇದು ತಾತ್ಕಾಲಿಕವೇ ಅಂದುಕೊಂಡರೂ ಎಷ್ಟೊಂದು ಮನಸುಗಳು ಕಹಿಯಾಗುತ್ತವೆ. ಎಷ್ಟೊಂದು ಸ್ನೇಹಗಳು ಶಿಥಿಲಗೊಳ್ಳುತ್ತವೆ. ಎಷ್ಟೊಂದು ಮಂದಿಯ ಅಂತರಂಗ ಇಷ್ಟು ಕುರೂಪವಾ ಎಂದು ಅಸಹ್ಯಪಡುವಂತೆ ಮಾಡುತ್ತದೆ. ಎಷ್ಟೊಂದು ಜನರ ಬಯ್ಗುಳದ ಪದಭಂಡಾರದ ಪರಿಚಯವಾಗುತ್ತದೆ. ಆದರೂ ಐಪಿಎಲ್ ಒಂದು ಸಮ್ಮೋಹಿನಿಯೇ. ಪ್ರತಿದಿನ ಬಿಗ್ ಬಾಸ್ ಎಂಬ ಕಾರ್ಯಕ್ರಮವನ್ನು, ಬಯ್ತಾ, ಟೀಕಿಸ್ತಾ ಇದ್ದು, ಅದು ಶುರು ಆಗ್ತಾ ಇದ್ದ ಹಾಗೇ ಅದಕ್ಕೇ ಅಂಟಿ ಕೂರೋ ಆಡಿಯೆನ್ಸ್ ಥರ ಐಪಿಎಲ್‌ಗೆ ಅಡಿಕ್ಟ್ ಆಗೋ ಕೋಟ್ಯಂತರ ಮಂದಿ ಇದ್ದಾರೆ. ಕ್ರಿಕೆಟ್ಟೇ ಗೊತ್ತಿಲ್ಲದವರಿಗೂ ಐಪಿಎಲ್ ನೋಡ್ತೀನಿ ಅನ್ನೋದು ಒಂದು ಫ್ಯಾಶನ್. ಬೆಟ್ಟಿಂಗ್‌ಗೆ, ಸ್ಪಿಟ್ಟಿಂಗ್‌ಗೆ ಎಲ್ಲದಕ್ಕೂ ಐಪಿಎಲ್ ಒಂದು ಮೂಲ.

ಆದರೆ ನೈಜ ಕ್ರಿಕೆಟ್ ಪ್ರೇಮಿಗೆ ಐಪಿಎಲ್ ಕೇವಲ ಆಟವಾಗಿ ರುಚಿಸುತ್ತದೆಯೇ ಹೊರತು ಅವನಿಗೆ ಫ್ಯಾನ್ ವಾರ್, ಫ್ರಾಂಚೈಸ್ ವಾರ್ ಇತ್ಯಾದಿಗಳಲ್ಲಿ ಆಸಕ್ತಿ ಇರೋದಿಲ್ಲ. ಆತ ಧೋನಿ, ಕೊಹ್ಲಿ, ಶರ್ಮ, ಪಾಂಡ್ಯ, ರಸೆಲ್, ಬಟ್ಲರ್ ಯಾರೇ ಚೆನ್ನಾಗಿ ಆಡಿದರೂ ಆಸ್ವಾದಿಸ್ತಾನೆ. ಹೊಡಿಬಡಿ ಪಂದ್ಯದಲ್ಲಿ ಬೌಲರ್‌ಗಳು ಮೇಲುಗೈ ಸಾಧಿಸೋದನ್ನು ಎಂಜಾಯ್ ಮಾಡ್ತಾನೆ. ಕಷ್ಟದ ಪಿಚ್ಚಲ್ಲಿ ಬ್ಯಾಟರ್ ಒಬ್ಬ ರೌದ್ರಾವತಾರ ತಾಳೋದನ್ನು ನಿರೀಕ್ಷಿಸ್ತಾನೆ. ಕ್ಲೋಸ್ ಫಿನಿಶ್ ಮ್ಯಾಚ್‌ಗಳ ನಿರೀಕ್ಷೆಯಲ್ಲಿರ್ತಾನೆ. ಅಂಥ ಕ್ರಿಕೆಟ್ ಪ್ರೇಮಿಗೆ, ಐಪಿಎಲ್ ಮಾತ್ರವಲ್ಲ ಟೆಸ್ಟ್ ಪಂದ್ಯ, ರಣಜಿ ಪಂದ್ಯ, ಕ್ಲಬ್ ಲೆವೆಲ್ ಪಂದ್ಯಗಳು ಕೂಡ ಕ್ರಿಕೆಟ್ ಕಾರಣಕ್ಕೆ ಅಂಕಿ ಅಂಶಗಳ ಕಾರಣಕ್ಕೆ ಆಸಕ್ತಿ ಹುಟ್ಟಿಸುತ್ತವೆ. ಕ್ರಿಕೆಟನ್ನ ಆತ ಒಂದು ಟೆಕ್ಸ್ಟ್ ಬುಕ್‌ನಂತೆ, ಕಥೆ ಪುಸ್ತಕದಂತೆ

ನೋಡುತ್ತಾನೆ. ಅದರಲ್ಲಿ ಆತನಿಗೆ ಒಂದು ನೀತಿಪಾಠ ಸಿಗುತ್ತದೆ. ಅದರಲ್ಲಿ ಆತನಿಗೆ ಯಾವುದೋ ಫಿಲಾಸಫಿ ಹೊಳೆಯುತ್ತದೆ. ಅಂಥದ್ದೊಂದು ಕ್ರಿಕೆಟ್ ಕಥೆಯೊಂದಿಗೆ ಅಂಕಣ ಮುಗಿಸುತ್ತೇನೆ.

ಅದು 1990. ನಾನೀಗ ಹೇಳ್ತಾ ಇರೋದು ಯಾವುದೋ ಅನಧಿಕೃತ ಲೋಕಲ್ ಪಂದ್ಯದ ಕಥೆ ಅಲ್ಲ. ಅದು ಫಸ್ಟ್ ಕ್ಲಾಸ್ ಕ್ರಿಕೆಟ್ ಪಂದ್ಯ. ನ್ಯೂಜಿಲೆಂಡಿನ ಎರಡು ಪ್ರಬಲ ತಂಡಗಳ ನಡುವಿನ ಲೀಗ್ ಪಂದ್ಯ. ನಮ್ಮಲ್ಲಿ ರಣಜಿ ಟ್ರೋಫಿ ನಡೆಯೋ ಹಾಗೆ ನ್ಯೂಜಿಲೆಂಡಲ್ಲಿ ಶೆಲ್ ಟ್ರೋಫಿ ಎಂಬ ಪಂದ್ಯಾವಳಿ. ವೆಲ್ಲಿಂಗ್ಟನ್ ಮತ್ತು ಕ್ಯಾಂಟರ್‌ಬರಿ ಎಂಬ 2 ತಂಡಗಳ ನಡುವೆ ನಡೆದ 3 ದಿನಗಳ ಪಂದ್ಯ ಅದು.

ವೆಲ್ಲಿಂಗ್ಟನ್ ಮೊದಲ ಇನ್ನಿಂಗ್ಸಿನಲ್ಲಿ 202 ರನ್ ಹೊಡೆದು ಆಲೌಟ್ ಆಗುತ್ತದೆ. ಪ್ರತಿಯಾಗಿ ಕ್ಯಾಂಟರ್‌ಬರಿ ತಂಡ 7 ವಿಕೆಟ್‌ಗೆ 221 ರನ್ ಗಳಿಸಿ ಡಿಕ್ಲೇರ್ ಮಾಡುತ್ತದೆ. ಅಂದ್ರೆ 19 ರನ್‌ಗಳ ಮುನ್ನಡೆಯೊಂದಿಗೆ ಮತ್ತೆ ವೆಲ್ಲಿಂಗ್ಟನ್ ತಂಡಕ್ಕೆ ಆಡೋ ಅವಕಾಶ ನೀಡುತ್ತದೆ. ಆಗ ವೆಲ್ಲಿಂಗ್ಟನ್ ಎರಡನೇ ಇನ್ನಿಂಗ್ಸಲ್ಲಿ 309 ರನ್ ಹೊಡೆದು ಡಿಕ್ಲೇರ್ ಮಾಡುತ್ತದೆ. ಕ್ಯಾಂಟರ್‌ಬರಿ ತಂಡಕ್ಕೆ ಗೆಲ್ಲಲು 291 ರನ್‌ಗಳ ಗುರಿ ನೀಡಲಾಗುತ್ತೆ.

ಈ ಗುರಿ ಬೆನ್ನಟ್ಟುವ ಕ್ಯಾಂಟರ್‌ಬರಿ ತಂಡ ಕೇವಲ 108 ರನ್‌ಗಳಿಗೆ 8 ವಿಕೆಟ್ ಕಳೆದುಕೊಂಡು ಸೋಲಿನ ದವಡೆಗೆ ಸಿಲುಕಿಬಿಡುತ್ತೆ. ಈ ಹಂತದಲ್ಲಿ ವೆಲ್ಲಿಂಗ್ಟನ್‌ಗೆ ಗೆಲ್ಲೋಕೆ ಕೇವಲ 2 ವಿಕೆಟ್ ತೆಗೆದರೆ ಸಾಕು. ಆದರೆ ಕ್ಯಾಂಟರ್‌ಬರಿಗೆ ಉಳಿದಿರೋ 2 ವಿಕೆಟ್‌ಗಳಲ್ಲಿ 188 ರನ್ ಹೊಡೀಬೇಕು ಅಥವಾ ಸೋಲು ತಪ್ಪಿಸಿಕೊಳ್ಳೋಕೆ ಇನ್ನು ಉಳಿದಿರೋ ಅರ್ಧ ದಿನ ರಕ್ಷಣೆಯ ಆಟದ ಮೊರೆಹೋಗಬೇಕು. ಅಸಾಧ್ಯದ ಮಾತಲ್ವಾ? ಒಂಬತ್ತನೇ ವಿಕೆಟ್‌ಗೆ ಕ್ಯಾಂಟರ್‌ಬರಿ ತಂಡ ಹಾಗೂ ಹೀಗೂ 88 ರನ್ ಕಲೆಹಾಕಿ ಪಂದ್ಯ ಉಳಿಸಿಕೊಳ್ಳೋಕೆ ಹರಸಾಹಸ ಪಡ್ತಾ ಇರುತ್ತೆ.

ಇಂಥ ಹೊತ್ತಲ್ಲಿ ಬೌಲಿಂಗ್ ತಂಡದ ನಾಯಕ, ವೆಲ್ಲಿಂಗ್ಟನ್ ತಂಡದ ಕಪ್ತಾನ, ಆಕ್ರಮಣಕಾರಿ ಬೌಲರ್‌ಗೆ ಬೌಲಿಂಗ್ ಕೊಟ್ಟು ಎದುರಾಳಿ ತಂಡವನ್ನು ಆಲೌಟ್ ಮಾಡೋ ಬದಲು ಅಥವಾ ಟೈಟ್ ಓವರ್ ಹಾಕಿಸಿ ಪಂದ್ಯ ಮುಗಿಸೋ ಬದಲು, ಇನ್ನೇನು ಗೆದ್ದೇಬಿಟ್ವಿ ಬಿಡು ಅಂತ ಒಬ್ಬ ಪಾರ್ಟ್‌ಟೈಮ್ ಬೌಲರ್‌ಗೆ ಒಂದು ಓವರ್ ಬೌಲಿಂಗ್ ಮಾಡು ಅಂತ ಕೊಟ್ಟುಬಿಡ್ತಾನೆ. ಆತನ ಹೆಸರು ಬರ್ಟ್ ವ್ಯಾನ್ಸ್. ಅಪರೂಪಕ್ಕೆ ಬೌಲಿಂಗ್ ಮಾಡುವ ಆಟಗಾರ. ಆತ ಬೌಲಿಂಗಿಗೆ ಬಂದಾಗ ಕ್ಯಾಂಟರ್‌ಬರಿ ತಂಡಕ್ಕೆ ಇನ್ನು 2 ಓವರ್‌ಗಳಲ್ಲಿ 96 ರನ್ ಬೇಕು. 12 ಎಸೆತಗಳಲ್ಲಿ ತೊಂಬತ್ತಾರರ ಗುರಿ.

ಎಲ್ಲಾ ಚೆಂಡುಗಳನ್ನೂ ಸಿಕ್ಸರ್‌ಗೆ ಅಟ್ಟಿದರೂ, ವೈಡು-ನೋಬಾಲ್ ಅಂತ 10 ರನ್ ಎಕ್ಸ್‌ಟ್ರಾ ಕೊಟ್ಟರೂ ಎದುರಾಳಿಗೆ ಗುರಿ ಮುಟ್ಟೋಕಾಗಲ್ಲ ಅಂತ ಕಪ್ತಾನ ಬಹಳ ಹಗುರವಾಗಿ ತಗೊಳ್ತಾನೆ. ಆದರೆ ಅವತ್ತು ಬರ್ಟ್ ವ್ಯಾನ್ಸ್‌ನ ಗ್ರಹಚಾರವೋ ಏನೋ... ಆತ ಎಸೆದದ್ದೆಲ್ಲ ನೋಬಾಲ್ ಆಗ್ತವೆ.. ವೈಡ್ ಹೋಗ್ತವೆ.. ಅವೆರಡರ ಜತೆ ಮುಟ್ಟಿದ್ದೆಲ್ಲ ಬೌಂಡರಿ, ಸಿಕ್ಸರ್. ಮೊದಲ 16 ಎಸೆತಗಳಲ್ಲಿ ಆತ ಒಂದೇಒಂದು ಕ್ರಮಬದ್ಧ ಎಸೆತ ಎಸೆಯೋದಿಲ್ಲ. ಆತನ ಒಂದೇ ಓವರ್‌ನಲ್ಲಿ ಎದುರಾಳಿ ತಂಡ 77 ರನ್ ಗಳಿಸಿಬಿಡುತ್ತೆ. ಆತ ಓವರ್ ಮುಗಿಸೋಕೆ ಎಸೆದ ಒಟ್ಟು ಎಸೆತ ಇಪ್ಪತ್ತೆರಡು! ಅಂಪೈರ್‌ಗಳು, ಸ್ಕೋರರ್‌ಗಳು ಲೆಕ್ಕ ತಪ್ಪಿಬಿಡ್ತಾರೆ. ಏನು ನಡೀತಾ ಇದೆ ಗ್ರೌಂಡಲ್ಲಿ ಅಂತಾನೇ ಗೊತ್ತಾಗದ ಸ್ಥಿತಿ. ಕೊನೆಯ ಓವರ್‌ನಲ್ಲಿ ಕ್ಯಾಂಟರ್‌ಬರಿಗೆ 18 ರನ್‌ಗಳ ಅಗತ್ಯ! ಅಲ್ಲಿಯೂ ಒಂದು ಟ್ವಿಸ್ಟ್! 17 ರನ್ ಮಾತ್ರ ಗಳಿಸೋ ಕ್ಯಾಂಟರ್‌ಬರಿ ಈ ಪಂದ್ಯವನ್ನು ಟೈ ಮಾಡಿಕೊಂಡು ಸೋಲಿನಿಂದ ಪಾರಾಗುತ್ತೆ. ಗೆಲುವಿನಿಂದ ವಂಚಿತವಾಗುತ್ತೆ. ಭಾರಿ ಅಂತರದ ಗೆಲುವು ಗಳಿಸಬೇಕಿದ್ದ ವೆಲಿಂಗ್ಟನ್ 'ಸದ್ಯ ಸೋಲಲಿಲ್ವಲ್ಲ' ಅಂತ ನಿಟ್ಟುಸಿರುಬಿಡುತ್ತೆ.

ಚುನಾವಣೆಯಲ್ಲಿ, ಆಟಗಳಲ್ಲಿ, ಬದುಕಿನಲ್ಲಿ ಅಂತಿಮ ಕ್ಷಣದ ತನಕ ಫಲಿತಾಂಶ ಹೇಳಲಾಗುವುದಿಲ್ಲ. ಕೊನೆಯ ಕ್ಷಣದ ತನಕ ಯಾವುದನ್ನೂ ಹಗುರವಾಗಿ ತೆಗೆದುಕೊಳ್ಳುವಂತೆಯೇ ಇಲ್ಲ. ಮೆರೆದರೆ ಮೈಮರೆತರೆ ಗೆಲುವು ಸೋಲಾಗಿ ಬದಲಾಗಬಹುದು. ಹೋರಾಟ, ಆತ್ಮವಿಶ್ವಾಸ ಜಾರಿಯಲ್ಲಿಟ್ಟರೆ ಸೋಲೂ ಗೆಲುವಾಗಿ ಬದಲಾಗಬಹುದು. ಇದು ಆಟ ಕಲಿಸುವ ಪಾಠಗಳ ಸೊಗಸು.

## ಭಟ್ಟರ್ ಸ್ಕಾಚ್

- **ಸತೀಶ ರಾಜಾಪುರ, ಬೆಂಗಳೂರು**
ಭಟ್ರೇ, ಸ್ಪೀಕರ್ ಖಾದರ್ ಅವರು ತುಳು ಭಾಷೆಯಲ್ಲಿ ಮಾತಾಡ್ತಾರಲ್ವ?
– **ಅದು ನಮ್ಮ ಭಾಷೆಯೇ ಅಲ್ಲವೇ?!**

- **ವಿನೋದ್ ಸುಂಕದ, ಬೆಳಗಾವಿ**
ಭಟ್ರೇ, ಪ್ರತಿಪಕ್ಷ ನಾಯಕ ಅಶೋಕ್ ಅವರನ್ನ 'ಸಾಮ್ರಾಟ ಅಶೋಕ್' ಎಂದೂ ಕರೆಯುತ್ತಾರಾ?
– **ಅವರ ಪಕ್ಷದವರೇ ಅವರನ್ನು 'ಅಡ್ಜಸ್ಟ್‌ಮೆಂಟ್ ಅಶೋಕ್' ಎಂದು ಕರೆಯುತ್ತಾರಲ್ಲ!**

- **ಎ.ಬಿ.ಉಮರ್ಜಿ, ಮುದ್ದೇಬಿಹಾಳ**
ಭಟ್ರೇ, ಎಲ್ಲ ಪಕ್ಷದ ನಾಯಕರೂ ಹನಿಟ್ರ್ಯಾಪ್‌ಗೆ ಒಳಗಾಗಿದ್ದಾರಲ್ವಾ?
– **ಈ ವಿಷಯದಲ್ಲಿ ಸರ್ವಪಕ್ಷ ಸಭೆ ಮಾಡಿದಂತಿದೆ!**

- **ಎಲ್.ವಿ.ಸತೀಶ, ಮೈಸೂರು**
ಭಟ್ರೇ, ನೀವು ಮುಂದಿನ ಸಲ ದುಬೈಗೆ ಹೋದಾಗ ಬರುವಾಗ ಚಿನ್ನ ತರುತ್ತೀರಾ?
– **ಅಡ್ಡದೊಳಗೆ ನನಗೆ ರನ್ಯಾ ರಾವ್ ಪರಿಚಯ ಮಾಡಿಕೊಡಿ!**

- **ಮಹಾನಂದ ಪಾಟೀಲ, (ಇಮೇಲ್ ಮೂಲಕ)**
ಭಟ್ರೇ, ದೇವನೂರು ಮಹಾದೇವ ಅವರೂ ತಮ್ಮ ಊರಿಗೆ ನೀರು ತರಲು ಹೋರಾಡುತ್ತಿದ್ದಾರಂತೆ?
– **ಸದ್ಯ ನಿಮ್ಮ ಯೋಗ್ಯತೆಗೆ ಬೇಡ ಕೊಡ್ಲಿ ಸಾಕು ಅಂದ್ರಂತೆ ಗ್ರಾಮಸ್ಥರು!**

- **ಬಿ.ವಿ.ಚಾಳೇಕಾಯಿ, ಕಲಬುರ್ಗಿ**
ಭಟ್ರೇ, ರಾಧಾ ಹಿರೇಗೌಡರ್ ಅಂದ್ರೆ ನಿಮಗೆ ಏನು ನೆನಪಾಗುತ್ತೆ?
– 'ಚಹಾ ಜೊತಾ ಸುದ್ದಿ ನೋಡ!'

- **ಶಿವಲಿಂಗಪ್ಪ ಸಿಂಗಶೆಟ್ಟಿ, ಕಲಬುರ್ಗಿ**
ಭಟ್ರೇ, ಪ್ರದೀಪ್ ಈಶ್ವರ್ ಏನೇ ಮಾಡಿದರೂ ನೀವು ಸಮರ್ಥನೆ ಮಾಡ್ತೀರಲ್ವ?
– **ಅವರು ಏನೇನೋ ಮಾಡುವುದಿಲ್ಲ ಎಂಬ ಅತಿಯಾದ ವಿಶ್ವಾಸ!**

- **ಕೇಶವ ಸೂಡ, ಬೀದರ್**
ಭಟ್ರೇ, ಕಂಡಾಗಲೆಲ್ಲ 'ರಾತ್ರಿಯಾಯ್ತು ಮಲಗೋಣ' ಅಂತ ಹಾಡ್ತಾರಲ್ಲ?
– **ಸದ್ಯ 'ಹೊಡಿ ಮಗ.. ಹೊಡಿ ಮಗ' ಹಾಡಲಿಲ್ಲವಲ್ಲ!**

- **ರಮೇಶ ಗೌಡ, ಮಳವಳ್ಳಿ**
ಭಟ್ರೇ, ಕರೆಕ್ಟ್ ಟೈಮ್‌ನಲ್ಲಿ ಪ್ರತಿಪಕ್ಷ ನಾಯಕ ಅಶೋಕ್ ಕೈಕೊಟ್ಟಾರಲ್ವ?
– **ಅಡ್ಜಸ್ಟ್‌ಮೆಂಟ್ ಮಾಡಿಕೊಂಡಿದ್ದಕ್ಕೆ ಅಷ್ಟೂ ಮಾಡದಿದ್ದರೆ?!**

- **ಪ್ರವೀಣ ಮಲಬಳ್ಳಿ, ಧಾರವಾಡ**
ಭಟ್ರೇ, ಕನ್ನಡ ಸಾಹಿತ್ಯ ಇತ್ತೀಚಿನ ದಿನಗಳಲ್ಲಿ ಬಲು ಸುಂದರ ಮತ್ತು ಸುದೃಢ ಆಗಿ ಅನ್ನಿಸುತ್ತಿದೆಯಲ್ವ?
– **ವೀರಕಪುತ್ರ ಶ್ರೀನಿವಾಸ ಎಂಟ್ರಿ ಕೊಟ್ಟ ನಂತರ ಹಾಗೆ ಅನಿಸಿದ್ದು ಕಾಕತಾಳೀಯ ಅಲ್ಲ!**

# ದಶವಿಧ ಪಾಪಗಳು ತರದಿರಲಿ ಸ್ವಾಸ್ಥ್ಯಕ್ಕೆ ಧಕ್ಕೆ!

**ಸ್ವಾಸ್ಥ್ಯವೆಂಬ ಸ್ವಾತಂತ್ರ್ಯ**
**ಡಾ.ಸಾಧನಶ್ರೀ**
vveditoped@gmail.com

ನಮ್ಮ ಪೂರ್ವಜರು 'ಅಹಿಂಸಾ ಪರಮೋ ಧರ್ಮಃ', 'ಸತ್ಯಂ ವದ ಧರ್ಮಂ ಚರ', 'ಪರೋಪಕಾರಾರ್ಥಮಿದಂ ಶರೀರಮ್' ಎಂಬ ಮಹಾವಾಕ್ಯಗಳನ್ನು ನುಡಿದು, ಸದಾ ಸತ್ಕರ್ಮವನ್ನೇ ಮಾಡು ಎಂದು ವಿಧವಿಧವಾಗಿ ಸಾರಿ ಹೇಳಿದರು. ಯೋಗ ವಿಜ್ಞಾನವು ಸಹ 'ಅಹಿಂಸಾ ಸತ್ಯಂ ಅಸ್ತೇಯ ಬ್ರಹ್ಮಚರ್ಯಾ ಅಪರಿಗ್ರಹ' ಎಂದು ಬೋಧಿಸಿದೆ!

ಪಾಶ್ಚಾತ್ಯ ವಿಶ್ವವಿದ್ಯಾಲಯವೊಂದು ಇತ್ತೀಚೆಗೆ ಒಂದು ವಿಶಿಷ್ಟವಾದ ಸಂಶೋಧನೆಯನ್ನು ನಡೆಸಿತು. ನಾವು ದಿನನಿತ್ಯವೂ ಒಳ್ಳೆಯ ಚಿಂತನೆಗಳನ್ನು ಮತ್ತು ಸತ್ಕರ್ಮಗಳನ್ನು ಮಾಡುವುದರಿಂದ ನಮ್ಮ ಶರೀರ-ಮನಸ್ಸುಗಳ ಮೇಲೆ ಆಗುವ ಪರಿಣಾಮಗಳನ್ನು ಅದು ಅಧ್ಯಯನ ಮಾಡಿತು. ಆ ಸಂಶೋಧನೆಯ ಕೆಲವು ವಿಷಯಗಳನ್ನು ನಿಮ್ಮ ಜತೆ ಹಂಚಿಕೊಳ್ಳಲು ಇಷ್ಟಪಡುತ್ತೇನೆ. ಅದರ ಪ್ರಕಾರ, ಸದಾ ಒಳ್ಳೆಯ ಕರ್ಮಗಳಲ್ಲಿ ತೊಡಗುವುದರಿಂದ ಆರೋಗ್ಯದ ಮೇಲೆ ಆಗುವ ಪ್ರಭಾವಗಳು ಹೀಗಿವೆ:

- ಒಳ್ಳೆಯ ಕೆಲಸಗಳು ದೇಹದಲ್ಲಿರುವ ಸ್ಟ್ರೆಸ್ ಹಾರ್ಮೋನ್- ಕಾರ್ಟಿಸಾಲ್ ಅನ್ನು ಕಡಿಮೆ ಮಾಡಿ ಒತ್ತಡ ಮತ್ತು ಆತಂಕವನ್ನು ನಿವಾರಿಸುತ್ತವೆ.
- 'ಹ್ಯಾಪಿ ಹಾರ್ಮೋನ್' ಎಂದೇ ಕರೆಯಲ್ಪಡುವ ಎಂಡಾರ್ಫಿನ್ ಅನ್ನು ದೇಹದಲ್ಲಿ ಸ್ರವಿಸಿ ನಮ್ಮ ಮಾನಸಿಕ ಸ್ಥಿತಿಯನ್ನು ಉತ್ತಮಗೊಳಿಸುವುದರ ಜತೆಗೆ ಮುದವನ್ನು ನೀಡುತ್ತವೆ.
- ಒಳ್ಳೆಯ ಕೆಲಸಗಳು, ಸ್ನೇಹಿತರು ಮತ್ತು ಕುಟುಂಬದ ಸದಸ್ಯರೊಂದಿಗಿನ ನಮ್ಮ ಬಾಂಧವ್ಯವನ್ನು ಹೆಚ್ಚಿಸಿ ಒಂಟಿತನವನ್ನು ಹೋಗಲಾಡಿಸುತ್ತವೆ.
- ಜೀವನದಲ್ಲಿ ಆತ್ಮವಿಶ್ವಾಸವನ್ನು ಹೆಚ್ಚಿಸಿ ಯಾವುದೇ ಪರಿಸ್ಥಿತಿಯನ್ನು ನಿಭಾಯಿಸುವ ಶಕ್ತಿಯನ್ನು ನೀಡುತ್ತವೆ.
- ಉತ್ತಮ ಚಿಂತನೆಗಳು ರಕ್ತದ ಒತ್ತಡವನ್ನು ಕಡಿಮೆ ಮಾಡಿ ಹೃದಯದ ಆರೋಗ್ಯವನ್ನು ಹೆಚ್ಚಿಸುತ್ತವೆ.
- ರೋಗ ನಿರೋಧಕ ಶಕ್ತಿಯನ್ನು ಉತ್ತಮಗೊಳಿಸಿ ಕಾಯಿಲೆಗಳನ್ನು ಎದುರಿಸುವ ಸಾಮರ್ಥ್ಯವನ್ನು ನೀಡುತ್ತವೆ.
- ದೇಹದಲ್ಲಿನ ಉರಿಯೂತವನ್ನು (ಅಂದರೆ ಇನ್‌ಫ್ಲಮೇಶನ್ ಅನ್ನು) ತಗ್ಗಿಸಿ ದೀರ್ಘಕಾಲೀನ ವ್ಯಾಧಿಗಳನ್ನು ತಡೆಗಟ್ಟುವುದರ ಜತೆಗೆ ಸ್ಥೂಲಕಾಯತೆ (ಒಬೆಸಿಟಿ) ಮತ್ತು ಕ್ಯಾನ್ಸರ್‌ಗಳನ್ನು ನಿವಾರಿಸುತ್ತವೆ.
- ಸತ್ಕರ್ಮವನ್ನು ಮಾಡುವುದರಿಂದ ಆರೋಗ್ಯದಲ್ಲಿ ಸುಧಾರಣೆ ಆಗುವುದರ ಜತೆಗೆ ನಮ್ಮ ಆಯುಷ್ಯವು ವೃದ್ಧಿಸುತ್ತದೆ ಎಂಬುದನ್ನು ಆ ಸಂಶೋಧನೆಯು ಸಾಬೀತುಮಾಡಿದೆ.

ಸ್ನೇಹಿತರೆ, ಮತ್ತೊಮ್ಮೆ ನಿಮಗೆ ನೆನಪಿಸಲು ಇಷ್ಟಪಡುತ್ತೇನೆ- ಮೇಲೆ ಹೇಳಿದ ಲಾಭಗಳು ಯಾವುದೋ ಔಷಧಿ ಅಥವಾ ಮಾತ್ರೆಯದ್ದಲ್ಲ! ಬದಲಿಗೆ, ಸತ್ ಕರ್ಮಗಳನ್ನು ಮಾಡುವುದರಿಂದ ನಮಗೆ ಸಿಗುವ 'ಲಾಭ'ಗಳು ಎನ್ನುತ್ತಾರೆ ಪಾಶ್ಚಿಮಾತ್ಯ ವಿಜ್ಞಾನಿಗಳು.

ಆಯುರ್ವೇದವು ಆಯುವಿನ ಜ್ಞಾನ. 'ಆಯು' ಎಂದರೆ ಶರೀರ-ಇಂದ್ರಿಯ-ಮನಸ್ಸು-ಆತ್ಮಗಳ ಸಂಯೋಗ. 'ಆಯು'ವು ಈ ನಾಲ್ಕು ಪಟುಗಳ ಒಂದು ಸಾಮರಸ್ಯದ ತಂತು. ಈ ತಂಡದ ನಡುವೆ ಸತತವಾದ ವ್ಯವಹಾರ ನಡೆಯುತ್ತಿರುತ್ತದೆ. ಅಂತೆಯೇ, ಒಂದರ ಪ್ರಭಾವ ಇನ್ನೊಂದರ ಮೇಲೆ ಸದಾ ಆಗುತ್ತಲೇ ಇರುತ್ತದೆ. ಉದಾಹರಣೆಗೆ- ಇಂದ್ರಿಯಗಳ ಅತಿಯೋಗದಿಂದ ಮನಸ್ಸಿನ ಮೇಲೆ ಪರಿಣಾಮವಾಗಬಹುದು. ಮನಸ್ಸಿನ ವಿಲಕ್ಷಣದಿಂದ ಶಾರೀರಿಕ ತೊಂದರೆಗಳು ಕಾಣಿಸಿಕೊಳ್ಳಬಹುದು. ಶಾರೀರಿಕ ದೋಷಗಳಿಂದ ಮನಸ್ಸು ಮತ್ತು ಇಂದ್ರಿಯ- ಎರಡರ ಮೇಲೂ ಪ್ರಭಾವ ಆಗಬಹುದು. ಆದ್ದರಿಂದ, ಸ್ವಾಸ್ಥ್ಯವನ್ನು ಕಾಪಾಡಿಕೊಳ್ಳಬೇಕಾದರೆ ಈ ನಾಲ್ಕೂ ಪಟುಗಳನ್ನು ಅರ್ಥ ಮಾಡಿಕೊಂಡು, ಅವರ ನಡುವಿನ ಸಾಮರಸ್ಯವನ್ನು ಸದಾ ಸಂತುಲನದಲ್ಲಿ ಕಾಯ್ದಿರಿಸಿಕೊಳ್ಳುವುದು ಅತ್ಯವಶ್ಯಕ ಎಂದು ಆಯುರ್ವೇದವು ಹೇಳಿದೆ. ಹಾಗಾಗಿ, ಆಯುರ್ವೇದದ ಚಿಕಿತ್ಸೆ ಎಂದಿಗೂ ಕೇವಲ ಶರೀರಕ್ಕಷ್ಟೇ ಅಲ್ಲದೆ ನಮ್ಮ ಜೀವದ ಎಲ್ಲಾ ಆಯಾಮಗಳಿಗೂ ಅನ್ವಯವಾಗುತ್ತದೆ. ಆಯುರ್ವೇದದ ಔಷಧಿಗಳಾಗಿರಬಹುದು, ಚಿಕಿತ್ಸೆಗಳಾಗಿರಬಹುದು ಅಥವಾ ಉಪದೇಶಗಳಾಗಿರಬಹುದು- ಈ ನಾಲ್ಕನ್ನೂ ಸಮಾವಸ್ಥೆಗೆ ತರುವ ಉದ್ದೇಶದಿಂದಲೇ ಅವನ್ನು ನೀಡಲಾಗುತ್ತದೆಯೇ ಹೊರತು, ಒಂದಕ್ಕೆ ಮಾತ್ರ ಗಮನಕೊಟ್ಟು ಬೇರೆಯೆಲ್ಲಾ ಅಂಶಗಳನ್ನು ಕಡೆಗಣಿಸುವ ಮಾರ್ಗವನ್ನು ಆಯುರ್ವೇದ ಎಂದಿಗೂ ಒಪ್ಪುವುದಿಲ್ಲ. ಪ್ರತಿದಿನವೂ ಉತ್ತಮ ಆಹಾರವನ್ನು ತೆಗೆದುಕೊಂಡು, ಸಕಾಲದಲ್ಲಿ ನಿದ್ರೆ ಮಾಡುವುದು ಎಷ್ಟು ಅವಶ್ಯಕವೋ ನಮ್ಮ ಮಾನಸಿಕ ಸ್ವಚ್ಛತೆಯೂ ಅಷ್ಟೇ ಅನಿವಾರ್ಯ. ಸದಾ ಧರ್ಮದ ಪಥದಲ್ಲಿ ಮತ್ತು ಸತ್ಕರ್ಮದ ಮಾರ್ಗದಲ್ಲಿ ನಡೆದಾಗ ಮಾತ್ರ ಸ್ವಾಸ್ಥ್ಯದ ಸಂಪಾದನೆ ಸಾಧ್ಯ ಎಂಬುದು ಆಯುರ್ವೇದದ ಸಿದ್ಧಾಂತ. ಈ ನಿಟ್ಟಿನಲ್ಲಿ ಆಯುರ್ವೇದವು ದಿನಚರ್ಯೆಯ ಅಧ್ಯಾಯದಲ್ಲಿಯೇ 'ದಶವಿಧ ಪಾಪಕರ್ಮ'ಗಳ ಬಗ್ಗೆ ಸವಿಸ್ತಾರವಾಗಿ ಹೇಳಿದೆ. ಅಂದರೆ, ನಮ್ಮ ದೈನಂದಿನ ಚಟುವಟಿಕೆಗಳ ಒಂದು ಭಾಗ ಈ ದಶವಿಧಪಾಪಕರ್ಮಗಳಲ್ಲಿ ತೊಡಗದೆ ಇರುವುದು. ಪ್ರತಿ ನಿತ್ಯವೂ, ಪ್ರತಿ ನಿಮಿಷವೂ ಈ 10 ರೀತಿಯ ಪಾಪ ಕರ್ಮಗಳನ್ನು ನಾವು ನಿವಾರಿಸಿದಾಗ ಆರೋಗ್ಯದ ಮುಂದುವರಿದ ಸ್ಥಿತಿಯಾದ 'ಸ್ವಾಸ್ಥ್ಯ'ವನ್ನು ಅನುಭವಿಸಲು ಸಾಧ್ಯ ಎಂದು ಹೇಳಿದೆ. ಹಾಗಾದರೆ, ಈ ದಶವಿಧ ಪಾಪ ಕರ್ಮಗಳು ಯಾವುವು ಅಂತ ನೋಡೋಣ ಬನ್ನಿ.

ನಮ್ಮ ಯಾವ ಚಟುವಟಿಕೆಗಳು ದೋಷಗಳ ಸಂಚಯಕ್ಕೆ ಕಾರಣವಾಗುತ್ತವೆಯೋ ಅದನ್ನೇ 'ಪಾಪ'ವೆಂದು ಕರೆಯಬಹುದು. ಈ ದೋಷಗಳ ಸಂಚಯವೇ ಕ್ರಮೇಣ ಬೆಳೆದು ಬೇರೆ ಬೇರೆ ಸ್ತರಗಳಲ್ಲಿ ರೋಗವನ್ನು, ದುಃಖವನ್ನು ಮತ್ತು ಅಹಿತವನ್ನು ಉಂಟುಮಾಡುತ್ತದೆ. ಅಂಥ ದಶವಿಧ ಪಾಪಕರ್ಮಗಳೆಂದರೆ: 'ಹಿಂಸಾಸ್ತೆಯಾನ್ಯಥಾ ಕಾಮಂ ಪೈಶುನ್ಯಂ ಪರುಷಾನೃತೆ ॥ ಸಂಭಿನ್ನಾ ಲಾಪಂ ವ್ಯಾಪಾದಮಭಿಧ್ಯಾಂ ದೃಗ್ವಿಪರ್ಯಯಮ್ । ಪಾಪಂ ಕರ್ಮೇತಿ ದಶಧಾ ಕಾಯವಾಙ್ಮೌನಸೈಸ್ತ್ಯಜೇತ್ ॥ (ಅಷ್ಟಾಂಗ ಹೃದಯಮ್- ಸೂತ್ರಸ್ಥಾನಮ್ - 2/21). ಈ ಪಾಪ ಕರ್ಮಗಳನ್ನು ಮೂರು ವಿಧವಾಗಿ ವಿಂಗಡಿಸಬಹುದು. ಅವೆಂದರೆ, ಶಾರೀರಿಕ ಪಾಪಕರ್ಮಗಳು, ವಾಚಿಕ ಪಾಪಕರ್ಮಗಳು ಮತ್ತು ಮಾನಸಿಕ ಪಾಪಕರ್ಮಗಳು.

**ಶಾರೀರಿಕ ಪಾಪಕರ್ಮಗಳು:** ನಮ್ಮ ದೇಹದ ಅಥವಾ ಶರೀರದ ಮೂಲಕ ಮಾಡುವ ಪಾಪಗಳು. ಇವು ನಮ್ಮ ಆರೋಗ್ಯವನ್ನು ಕೆಡಿಸುವುದರ ಜತೆಗೆ ಬೇರೆಯವರ ಜೀವನದಲ್ಲಿಯೂ ನೋವು ಮತ್ತು ದುಃಖವನ್ನು ಉಂಟುಮಾಡುತ್ತವೆ.

1. ಹಿಂಸಾ: ಶರೀರದ ಮೂಲಕ ಮಾಡುವ ವಿವಿಧ ರೀತಿಯ ಹಿಂಸೆಗಳು- ಹೊಡೆಯುವುದು, ತಳ್ಳುವುದು, ಚುಚ್ಚುವುದು, ಪರಚುವುದು, ಬೇರೆ ಬೇರೆ ರೀತಿಯ ಆಯುಧಗಳಿಂದ ನೋವು ಮಾಡುವುದು ಇತ್ಯಾದಿ. ಸ್ವಾಸ್ಥ್ಯಕ್ಕಾಗಲೀ, ಯೋಗ ಮಾರ್ಗದಲ್ಲಿ ಮುಂದುವರಿಯಲಾಗಲೀ ಅಥವಾ ಆತ್ಮ ವಿಕಸನಕ್ಕಾಗಲೀ- ಅಹಿಂಸೆಯನ್ನು ಪಾಲಿಸುವುದೇ ಮೊಟ್ಟ ಮೊದಲ ಮಜಲು. ಮನುಷ್ಯರೊಡನೆ ಅಷ್ಟೇ ಅಲ್ಲದೆ ಸೃಷ್ಟಿಯ ಎಲ್ಲ ಜೀವಿಗಳ ಜತೆಯೂ ಅಹಿಂಸೆಯ ನಡುವಳಿಕೆ ಸದಾ ಶ್ರೇಷ್ಠ. ಪ್ರಾಣಿಗಳನ್ನು ಪ್ರೀತಿಸುವುದರಿಂದ, ಅವುಗಳಿಗೆ ಆಹಾರವನ್ನಿತ್ತು ಕಾಪಾಡುವುದರಿಂದ ನಮ್ಮ ಆರೋಗ್ಯ ಯಾವ ರೀತಿ ಸುಧಾರಿಸುತ್ತದೆ ಎಂಬ ಸ್ವಾರಸ್ಯಕರವಾದ ವಿಷಯವನ್ನು ಆಯುರ್ವೇದವು ಹಲವು ಉದಾಹರಣೆಗಳೊಂದಿಗೆ ವಿವರಿಸಿದೆ. ನಮ್ಮ ಚಾಪಲ್ಯಕ್ಕೆ/ಸ್ವಾರ್ಥಕ್ಕೆ ಬೇರೆ ಜೀವಿಗಳನ್ನು ಹಿಂಸಿಸುವುದರಿಂದ ನಾವು ಎಂದಿಗೂ ಸುಖವಾಗಿ ಇರಲು ಸಾಧ್ಯವಿಲ್ಲ. ಇಂದೋ ನಾಳೆಯೋ ಆ ಹಿಂಸೆ ನಮ್ಮ ಜೀವನದಲ್ಲಿ ಹಿಂತಿರುಗಿ ಬಂದೇ ಬರುತ್ತದೆ.

2. ಸ್ತೇಯಾ: ಹೀಗೆಂದರೆ ಕಳ್ಳತನವನ್ನು ಮಾಡುವುದು. ಇದು ಯಾವ ಹಂತದಲ್ಲಾದರೂ ಇರಬಹುದು. ನಮ್ಮ ಮನೆಯಲ್ಲಿಯೇ ನಮ್ಮ ತಂದೆ ತಾಯಿಯ ಜೇಬಿನಿಂದ ಕದ್ದ ಹಣವಿರಬಹುದು ಅಥವಾ ಸರಕಾರದ ತೆರಿಗೆಯನ್ನು ಭರಿಸದೆ ಮಾಡುವ ಕಳ್ಳತನವಿರಬಹುದು. ಯಾವುದೋ ಅಂಗಡಿಗೆ ಹೋದಾಗ ಮಾಲೀಕನಿಗೆ ಗೊತ್ತಿಲ್ಲದೆಯೇ ಎರಡು ಸಾಮಾನುಗಳನ್ನು ಹೆಚ್ಚಾಗಿ ತಂದ ಕಳ್ಳತನವಿರಬಹುದು ಅಥವಾ ಹೋಟೆಲುಗಳಿಗೆ ಹೋದಾಗ ಅಲ್ಲಿಂದ ಅವರಿಗೆ ಗೊತ್ತಿಲ್ಲದೆ ತಂದ ವಸ್ತುಗಳಿರಬಹುದು. ಕಳ್ಳತನ ಕಳ್ಳತನವೇ, ಅದು ಚಿಕ್ಕದಾಗಿರಲಿ ಅಥವಾ ದೊಡ್ಡದಾಗಿರಲಿ. ಸ್ನೇಹಿತರೆ, ನೆನಪಿಡಿ- ಕಳ್ಳತನದಿಂದ ಸಂಚಯವಾದ ಪಾಪವು ಒಂದು ತಲೆಮಾರಿನಿಂದ ಇನ್ನೊಂದು ತಲೆಮಾರಿಗೆ ದಾಟುವ ಸಾಧ್ಯತೆ ಇದೆ. ನಾವು ಮಾಡಿದ ತಪ್ಪಿನಿಂದ ನಮ್ಮ ಮಕ್ಕಳು ದುಃಖ ಪಡುವಂತೆ ಆಗದಿರಲಿ.

3. ಅನ್ಯಥಾ ಕಾಮ: ನಿಷಿದ್ಧವಾದ ಕಾಮ ಸೇವನೆ. ಬೇರೆಯವರಿಗೆ ಸೇರಿದ ಪುರುಷನ ಅಥವಾ ಸ್ತ್ರೀಯ ಜತೆಗಿನ ಅನೈತಿಕ ಸಂಬಂಧ. ಧರ್ಮದ ವಿರುದ್ಧವಾದಂಥ ಶಾರೀರಿಕ ಸಂಭೋಗವನ್ನು ಅನ್ಯಥಾ ಕಾಮ ಎಂದು ಕರೆಯಬಹುದು. ಈ ವಿಷಯವನ್ನು ಇಂದಿನ ಎಷ್ಟೋ ಸಂಸಾರಗಳಲ್ಲಿ ಕಾಣಬಹುದು. ಮದುವೆಯಂಥ ದೈವೀಕ ಚೌಕಟ್ಟನ್ನು ನಾವು ಕಡೆಗಣಿಸಿ ಪರಸ್ತ್ರೀ ಅಥವಾ ಪರಪುರುಷನ ಮೇಲಿನ ವ್ಯಾಮೋಹದಲ್ಲಿ ಬೀಳುವುದು ಅತ್ಯಂತ ಅಹಿತಕರ ಎಂಬುದನ್ನು ನಾವೆಲ್ಲರೂ ಮನದಟ್ಟು ಮಾಡಿಕೊಳ್ಳಬೇಕಾದ ಪರಿಸ್ಥಿತಿಯಿದೆ.

ಮೇಲೆ ಹೇಳಿದ್ದು ಮೂರು ಶಾರೀರಿಕ ಪಾಪಕರ್ಮಗಳಾದರೆ, ಈಗ ವಾಚಿಕ ಪಾಪಕರ್ಮಗಳ ಬಗ್ಗೆ ಕೊಂಚ ತಿಳಿಯೋಣ. ಇವು ನಮ್ಮ ಮಾತುಗಳ ಮೂಲಕ ಅಥವಾ ಶಬ್ದಗಳ ಮೂಲಕ ಮಾಡುವ ಪಾಪಗಳು.

4. ಪೈಶುನ್ಯ: ಒಬ್ಬ ವ್ಯಕ್ತಿಯ ಹಿಂದೆ ಅವನ ಬಗ್ಗೆ ಕೆಟ್ಟದಾಗಿ ಮಾತನಾಡುವುದು ಅಥವಾ ಅವನ ಬಗ್ಗೆ ಸುಳ್ಳು ವಿಷಯವನ್ನು ಹರಡುವುದು. ವಾಸ್ತವದ ವಿರುದ್ಧವಾಗಿ ಮಾತನಾಡಿ ಮತ್ತೊಬ್ಬರ ಚಾರಿತ್ರ್ಯ ಹರಣ ಮಾಡುವುದು ಪೈಶುನ್ಯ. ಈ ಪಾಪವನ್ನು ನಾವು ಈಗಿನ ಬಹುತೇಕ ಧಾರಾವಾಹಿಗಳಲ್ಲೂ ಸಿನಿಮಾಗಳಲ್ಲೂ ಯಥೇಚ್ಛವಾಗಿ ಕಾಣುತ್ತಿದ್ದೇವೆ. ರಾಜಕಾರಣದಲ್ಲಂತೂ ಕೇಳುವುದೇ ಬೇಡ. ಬಹುತೇಕ ರಾಜಕಾರಣಿಗಳು ಈ ಪೈಶುನ್ಯವೆಂಬ ಪಾಪವನ್ನು ತಮ್ಮ ಜೀವನದ ಉದ್ದಕ್ಕೂ ಮಾಡಿಕೊಂಡು ಬರುತ್ತಾರೆ. ಯಾವುದಾದರೂ ವ್ಯಕ್ತಿಯ ಮೇಲೆ ನಮಗೆ ಸ್ವಲ್ಪ ಬೇಜಾರು ಅಥವಾ ಸಿಟ್ಟು ಬಂದರೆ ನಾವು ತಕ್ಷಣವೇ ಮಾಡುವುದು ಈ ಪೈಶುನ್ಯದ ಪಾಪಕರ್ಮವನ್ನು. ಆದರೆ, ಜೋಕೆ! ಮುಂದೊಂದು ದಿನ ಇದು ನಮಗೆ ಗಂಡಾಂತರವಾಗಬಹುದು!

5.ಪರುಷ: ಪರುಷ ಎಂದರೆ ಮೃದುವಲ್ಲದ, ಕಠೋರವಾದ ಮಾತುಗಳು. ಬೇರೆಯವರ ಮನಸ್ಸನ್ನು ಚುಚ್ಚಿ, ನೋವು ಮಾಡುವಂಥ ಮಾತುಗಳನ್ನು ಪರುಷ ವಚನ ಎಂದು ಹೇಳಬಹುದು. 'ಹಿತಮ್ ಬ್ರೂಯಾತ್' ಎಂಬುದು ಆಯುರ್ವೇದದ ಮತ್ತೊಂದು ವಾಕ್ಯ- ಎಂದರೆ, ಯಾವಾಗಲೂ ಹಿತವಾದ ಮಾತನ್ನೇ ಆಡತಕ್ಕದ್ದು. ವಿಷಯ ಎಂಥದ್ದೇ ಇರಲಿ, ಅದರಿಂದ ನಮಗೆ ಎಷ್ಟೇ ಅಸಮಾಧಾನವಿರಲಿ, ಅದನ್ನು ವ್ಯಕ್ತಪಡಿಸುವಾಗ ಬೇರೆಯವರಿಗೆ ನೋವನ್ನು ತರದ ರೀತಿಯಲ್ಲಿ ಮಾತನಾಡುವ ಪ್ರಯತ್ನವು ಸದಾ ನಮ್ಮದಾಗಿರಲಿ.

6.ಅನೃತ: ಅಂದರೆ ಸುಳ್ಳು ಮಾತು. ವಾಸ್ತವಕ್ಕೆ ದೂರವಾದ, ನಾವೇ ಸಂಯೋಜಿಸಿರುವ, ವಸ್ತುಸ್ಥಿತಿಗೆ ವಿರುದ್ಧವಾಗಿರುವ ಮಾತುಗಳು ಅಸತ್ಯದ ಮಾತುಗಳು. ಸುಳ್ಳು ಹೇಳುವುದು ಎಷ್ಟು ದೊಡ್ಡ ಪಾಪ ಕರ್ಮವೆಂದು ನಮ್ಮೆಲ್ಲರಿಗೂ ಚೆನ್ನಾಗಿ ಅರಿವಿದೆ ಎಂದು ಭಾವಿಸುತ್ತೇನೆ.

7.ಸಂಭಿನ್ನಾಲಾಪ: ಅಸಂಬದ್ಧವಾದ/ನಮಗೆ ಸಂಬಂಧಪಡದ ವಿಷಯಗಳನ್ನು, ಅದನ್ನು ಸಂಪೂರ್ಣವಾಗಿ ತಿಳಿದುಕೊಳ್ಳದೆ ಮಾತನಾಡುವುದು. 'ಗಾಸಿಪ್'ಗಳು ಬಹಳ ಜನಕ್ಕೆ ಬಹಳ ಪ್ರಿಯವಾದ ಕೆಲಸ. ಫೋನ್/ಮೆಸೇಜ್/ಪಾರ್ಟಿಗಳಲ್ಲಿ ಬಹಳಷ್ಟು ಮಂದಿ ಮಾಡುವ ಪಾಪವೆಂದರೆ ಸಂಭಿನ್ನಾಲಾಪ!

ಇವುಗಳು ವಾಚಿಕ ಪಾಪಕರ್ಮಗಳಾದರೆ, ಕೊನೆಯದಾದ ಮಾನಸಿಕ ಪಾಪ ಕರ್ಮಗಳ ಬಗ್ಗೆ ಕೊಂಚ ಗಮನಹರಿಸೋಣ. ಇವು ನಮ್ಮ ಮಾನಸಿಕ ಯೋಚನೆಗಳ ಮೂಲಕ ಮಾಡುವ ಪಾಪಗಳು.

8.ವ್ಯಾಪಾದ: ಹೀಗೆಂದರೆ ಕೆಟ್ಟ ಉದ್ದೇಶಗಳಿರುವ ಯೋಚನೆಗಳು. ಬೇರೆಯವರಿಗೆ ಉಪಘಾತವನ್ನು ಉಂಟುಮಾಡುವ ಯೋಚನೆಗಳನ್ನು ವ್ಯಾಪಾದ ಎನ್ನಬಹುದು. ಬೇರೆಯವರನ್ನು ಮನಸ್ಸಿನಲ್ಲಿಯೇ ಶಪಿಸಿ, ಅವರಿಗೆ ಹಾನಿ ಉಂಟಾಗಲಿ ಎಂದು ಬಯಸುವುದು ವ್ಯಾಪಾದ. ಪರೀಕ್ಷೆಗಳಲ್ಲಿ ಫಸ್ಟ್ ರ್‍ಯಾಂಕ್ ಬರುವುದಕ್ಕಾಗಲೀ, ಸ್ಪರ್ಧೆಗಳಲ್ಲಿ ಬಹುಮಾನ ಪಡೆಯುವುದಕ್ಕಾಗಲೀ, ನಮ್ಮ ಕೆಲಸದಲ್ಲಿ 'ಶಭಾಷ್' ಎನಿಸಿಕೊಳ್ಳುವುದಕ್ಕಾಗಲೀ, ಮನಸ್ಸಿನಲ್ಲಿಯೇ ನಮ್ಮ ಪ್ರತಿಸ್ಪರ್ಧಿಗೆ ತೊಂದರೆ ಉಂಟಾಗಲಿ ಎಂದು ಭಾವಿಸಿಕೊಳ್ಳುವ ಪಾಪವನ್ನು ನಾವೆಂದಿಗೂ ಮಾಡುವುದು ಬೇಡ.

9. ಅಭಿಧ್ಯಾ: ಹೀಗೆಂದರೆ ಪರಗುಣ ಅಸಹಿಷ್ಣುತೆ. ಬೇರೆಯವರ ಒಳ್ಳೆಯತನವನ್ನು, ಉತ್ತಮ ಸ್ಥಿತಿಯನ್ನು ಕಂಡು ಅಸೂಯೆ ಪಡುವುದು. ಬೇರೆಯವರ ಏಳಿಗೆಯನ್ನು ಸಹಿಸದೆ ಇರುವುದು ಮತ್ತು ಅದನ್ನು ನೋಡಿ ಸದಾ ಹೊಟ್ಟೆಕಿಚ್ಚು ಪಡುವುದು ಅಭಿಧ್ಯಾ.

10. ದೃಗ್ವಿಪರ್ಯಯ: ಹೀಗೆಂದರೆ, ನಮ್ಮ ಪೂರ್ವಜರು ತಮ್ಮ ಧ್ಯಾನಸ್ಥ ಸ್ಥಿತಿಯಲ್ಲಿ ರಜ-ತಮಸುಗಳಿಂದ ನಿರ್ಮುಕ್ತರಾದ ಸ್ಥಿತಿಯಲ್ಲಿ ಕಂಡ ಸತ್ಯವನ್ನು ಶಾಸ್ತ್ರಗಳಲ್ಲಿ ತೆರೆದಿಟ್ಟಿದ್ದಾರೆ. ಇಂಥ ಸಾರ್ವಕಾಲಿಕ ಸತ್ಯವನ್ನು ಒಪ್ಪಿಕೊಳ್ಳದೆ, ಅದರ ಬಗ್ಗೆ ಸಂಶಯಪಟ್ಟು ಅದನ್ನು ಪಾಲಿಸದೆ ಇರುವುದು ಒಂದು ಪಾಪಕರ್ಮವೇ. ಅನುಭವ ಮತ್ತು ವಿವೇಚನೆಯ ಸಮ್ಮಿಶ್ರಣ ನಮ್ಮ ಶಾಸ್ತ್ರಜ್ಞಾನ. ಅದನ್ನು ತಿರಸ್ಕರಿಸಿ ನಾವೆಂದೂ ಸುಖವಾಗಿರಲು ಸಾಧ್ಯವಿಲ್ಲ ಎಂಬುದನ್ನು ನಾವು ಎಷ್ಟು ಬೇಗ ಅರಿತುಕೊಂಡರೆ ಅಷ್ಟು ಬೇಗ ಸ್ವಾಸ್ಥ್ಯವನ್ನು ಪಡೆಯಬಹುದು.

ಸ್ನೇಹಿತರೇ, ಇದನ್ನೇ ಅಲ್ಲವೇ ನಮ್ಮ ಬಸವಣ್ಣನವರೂ ಹೇಳಿದ್ದು- ''ಕಳಬೇಡ ಕೊಲಬೇಡ ಹುಸಿಯ ನುಡಿಯಲು ಬೇಡ, ಮುನಿಯಬೇಡ ಅನ್ಯರಿಗೆ ಅಸಹ್ಯಪಡಬೇಡ, ತನ್ನ ಬಣ್ಣಿಸಬೇಡ ಇದಿರ ಹಳಿಯಲು ಬೇಡ, ಇದೇ ಅಂತರಂಗಶುದ್ಧಿ ಇದೇ ಬಹಿರಂಗಶುದ್ಧಿ ಇದೇ ನಮ್ಮ ಕೂಡಲ ಸಂಗಮದೇವರನೊಲಿಸುವ ಪರಿ'' ಅಂತ?

# ಕರುನಾಡ ರಾಜಕೀಯದಲ್ಲಿ ಮಧುಜಾಲದ ಕರಾಳ ಅಧ್ಯಾಯ

**ಕ್ರಿಯಾಲೋಪ**
**ಮರಿಲಿಂಗಗೌಡ ಮಾಲಿ ಪಾಟೀಲ್**
vveditoped@gmail.com

ಮಧುವನ ಕರೆದರೆ.. ತನುಮನ ಸೆಳೆದರೆ, ಶರಣಾಗು ನೀನು ಆದರೆ'- ಇದು ಕನ್ನಡ ಚಲನಚಿತ್ರ ಗೀತೆಯೊಂದರ ಸಾಲು. 'ಮಧುಜಾಲ' (ಹನಿಟ್ರ್ಯಾಪ್) ಕರೆದರೆ? ಅನುಮಾನವೇ ಇಲ್ಲ, ಆಗಲೂ ತನುಮನ ಸೆಳೆಯುತ್ತದೆ. ಪತಂಗವೊಂದು ಬೆಂಕಿಗೆ ತಾನಾಗೇ ಧುಮುಕಿ ಸುಟ್ಟು ಬೂದಿಯಾಗುವಂತೆ, ಪುರುಷಜೀವವು ಮಧುಜಾಲದ ಆಕರ್ಷಣೆಗೆ ಸಿಲುಕಿ ತನ್ನ ಬದುಕನ್ನು ನಾಶಪಡಿಸಿಕೊಳ್ಳುತ್ತದೆ. ಮಧುಜಾಲಕ್ಕೆ ನಿಲುಕುವುದರ ಪರಿಣಾಮ ಸ್ಪಷ್ಟಗೋಚರವಾಗಿದ್ದರೂ, ಆ ಜಾಲದ ಸೆಳೆತದ ಮುಂದೆ ಸಂಭವನೀಯ ಅಪಾಯವು ನಗಣ್ಯವೆನಿಸುತ್ತದೆ. ಪುರುಷ ತನ್ನ ನಿಯಂತ್ರಣವನ್ನು ಕಳೆದುಕೊಳ್ಳುತ್ತಾನೆ.

ಇಂಥ ಮಧುಜಾಲವು ಗೂಢಚರ್ಯೆಯ ವಲಯದಲ್ಲಿ ಹೆಚ್ಚು ಬಳಕೆಯಲ್ಲಿತ್ತು. ಮಿಲಿಟರಿ ರಹಸ್ಯಗಳನ್ನು ಅರಿಯಲು ಹೆಣ್ಣನ್ನು ಅಸ್ತ್ರವಾಗಿ ಬಳಸಿ, ಆಯಕಟ್ಟಿನ ಸ್ಥಾನದಲ್ಲಿರುವ ಅಧಿಕಾರಿಗಳನ್ನು ಖೆಡ್ಡಾಗೆ ಕೆಡವಲಾಗುತ್ತಿತ್ತು. ಮಧುಜಾಲಕ್ಕೆ ಸಿಲುಕಿದ ಪರಿಣಾಮವಾಗಿ ಅನೇಕ ಅಧಿಕಾರಿಗಳ ತಲೆದಂಡವೂ ಆಗಿತ್ತು. ಯುದ್ಧದಲ್ಲಿ ಸೈನ್ಯವೊಂದು ಜಯಿಸಿದೆ ಅಂದರೆ, ಆ ಗೆಲುವಿನ ಹಿಂದೆ ನಡೆದಿರಬಹುದಾದ ಮಧುಜಾಲದ ಬಗ್ಗೆಯೂ ಚರ್ಚೆಯಾಗುತ್ತಿತ್ತು. ಇಂಥ ಮಧುಜಾಲ ಎಂಬ ಕೊಳಕು, ಕರ್ನಾಟಕದ ರಾಜಕೀಯ ಪಡಸಾಲೆಯಲ್ಲಿ ಗುಲ್ಲೆಬ್ಬಿಸತೊಡಗಿದೆ. ರಾಜಕೀಯದ ಹೋರಾಟ ಎಂದರೆ ಅದು ಸಾವು-ಬದುಕಿನ ಹೋರಾಟವೇನೂ ಅಲ್ಲ. ರಾಜಕೀಯದ ಗೆಲುವುಗಳು ಜನರ ಆಶೀರ್ವಾದದಿಂದ ಸಿದ್ಧಿಸುವಂಥ ಸೌಭಾಗ್ಯಗಳು. ಆದರೆ ರಾಜಕೀಯ ವಿರೋಧಿಗಳನ್ನು ಹಣಿಯುವ ಯತ್ನವಾಗಿ, ತಂತ್ರವಾಗಿ 'ಮಧುಜಾಲ' ಕರ್ನಾಟಕದ ರಾಜಕೀಯ ವಲಯದೊಳಗೆ ಎಡಗಾಲಿಟ್ಟು ಬಂದಿದೆಯೆಂದರೆ, ನಮ್ಮ ರಾಜಕಾರಣದಲ್ಲಿ ನೈತಿಕತೆಯ ಅಧಃಪತನವಾಗಿದೆ ಎಂದೇ ಅರ್ಥ!

ಕರ್ನಾಟಕದ ರಾಜಕಾರಣವು ಹಲವಾರು ಪ್ರಾತಃಸ್ಮರಣೀಯ ಹೆಸರುಗಳನ್ನು ಒಳಗೊಂಡ ಒಂದು ವ್ಯವಸ್ಥೆ ಮತ್ತು ಪರಂಪರೆ. ಹಲವು ರಾಜಕೀಯ ನಾಯಕರನ್ನು ಬೆಳೆಸಿ ಪ್ರಸಿದ್ಧರನ್ನಾಗಿಸಿದ ಇತಿಹಾಸ ನಮ್ಮ ರಾಜ್ಯದ್ದು. ಪ್ರಾಮಾಣಿಕತೆಯೇ ಉಸಿರಾಗಿರುವ, ಜನರ ಬಗೆಗಿನ ಕಾಳಜಿಯೇ ರಾಜಕೀಯ ಎಂದು ಪರಿಭಾವಿಸಿರುವ ರಾಜಕಾರಣಿಗಳು ಈಗಲೂ ಇದ್ದಾರೆ. ಹಿಂದೆಲ್ಲಾ ರಾಜಕೀಯದಲ್ಲಿ ಪಕ್ಷವು ಪರಿಗಣನೆಗೆ ಬಂದರೂ, ವೈಯಕ್ತಿಕ ವಿಷಯಗಳಲ್ಲಿ ರಾಜಕೀಯ ದೂರವೇ ಇರುತ್ತಿತ್ತು. ಒಂದು ಪಕ್ಷದ ನಾಯಕರ ಮನೆತನವು, ಮತ್ತೊಂದು ಪಕ್ಷದ ನಾಯಕರ ಮನೆತನದೊಂದಿಗೆ ವೈವಾಹಿಕ ಸಂಬಂಧವನ್ನು ಬೆಳೆಸುತ್ತಿತ್ತು. ವೈಯಕ್ತಿಕ ಜಿದ್ದು, ದ್ವೇಷಗಳು ರಾಜಕೀಯದ ಅಂಗಳಕ್ಕೆ ಕಾಲಿಡುತ್ತಿರಲಿಲ್ಲ. ಹೀಗಾಗಿ ಕರ್ನಾಟಕದ ರಾಜಕೀಯ ಸಜ್ಜಿಕೆಯು ಒಂದು ಸುಸಂಸ್ಕೃತ ಸಮರಕ್ಕೆ ವೇದಿಕೆಯಾಗಿರುತ್ತಿತ್ತು. ರಾಜಕೀಯದಲ್ಲಿ ಎದುರಾಳಿಗಳನ್ನು ಹಣಿಯಲು ಚುನಾವಣೆವರೆಗೂ ಕಾಯುವ ಸಭ್ಯತೆ ಅಲ್ಲಿ ಕಾಣಬರುತಿತ್ತು. ಆದರೆ ಇಂದು?

ರಾಜಕೀಯ ನಾಯಕರಿಗೆ ಅವರ ಕ್ಷೇತ್ರವೇ ದೇವಾಲಯ. ಕ್ಷೇತ್ರದ ಜನರಿಗೆ ಒಳ್ಳೆಯದನ್ನು ಮಾಡುವ ಮೂಲಕ ರಾಜಕೀಯದಲ್ಲಿ ಮೇಲುಗೈ ಸಾಧಿಸುವುದು ಸಾಧ್ಯ. ಕೆಲವು ವರ್ಷಗಳ ಹಿಂದೆ ಉತ್ತರಕರ್ನಾಟಕ ಭಾಗವು ಅತಿವೃಷ್ಟಿಯ ಅನಾಹುತದಿಂದ ತತ್ತರಿಸಿದಾಗ ಮತದಾರರೊಬ್ಬರು, ''ಇಂಥ ನೈಸರ್ಗಿಕ ಪ್ರಕೋಪಗಳು ರಾಜಕಾರಣಿಗಳಿಗೆ ಬ್ಲೆಸ್ಸಿಂಗ್ ಇನ್ ಡಿಸ್‌ಗೈಸ್ (ರೂಪಾಂತರಿ ಆಶೀರ್ವಾದ) ಅಲ್ಲವೇ?'' ಎಂದಿದ್ದರು. ಅಂದರೆ, ನೈಸರ್ಗಿಕ ಪ್ರಕೋಪಗಳಿಂದಾಗಿ ಜನರು ತೊಂದರೆಗೊಳಗಾಗಬಾರದು ನಿಜ; ಆದರೆ ಅದಕ್ಕೆ ಬಲಿಪಶುಗಳಾದವರಿಗೆ ಒಳ್ಳೆಯ ಪರಿಹಾರ ನೀಡಿ ಹೊಸ ಬದುಕನ್ನು ಕಟ್ಟಿಕೊಟ್ಟರೆ, ಅಂಥ ನಾಯಕರನ್ನು ಸಂತ್ರಸ್ತರು, ಅಂದರೆ ಆ ಕ್ಷೇತ್ರದ ಮತದಾರರು, ಜೀವನಪೂರ್ತಿ ಮರೆಯುವುದಿಲ್ಲ ಎನ್ನುವುದು ಆ ಮತದಾರರ ವಾದದ ಸಾರಾಂಶವಾಗಿತ್ತು. ಆದರೆ ರಾಜಕಾರಣಿಗಳು ಇಂಥ ಅವಕಾಶಗಳನ್ನು ಬಳಸಿಕೊಳ್ಳುತ್ತಾರಾ? ಎಂಬುದು ಇಂದಿಗೂ ಚರ್ಚಾಸ್ಪದ ವಿಷಯ. ಯಾಕೆಂದರೆ, ನೈಸರ್ಗಿಕ ಪ್ರಕೋಪಕ್ಕೆ ಸಿಲುಕಿದವರಿಗೆ ಹೊಸ ಬದುಕನ್ನು ಕೊಟ್ಟಿಕೊಟ್ಟವರ ಉದಾಹರಣೆಗಳು ಕಮ್ಮಿ. ಆದರೂ, ಜನಪರ ಕಾಳಜಿಯಿರುವ ಕೆಲವು ನಾಯಕರಾದರೂ ಇದ್ದಾರೆ, ರಾಜಕೀಯಕ್ಕೆ ಪ್ರವೇಶಿಸಲು ಬಯಸುವ ಯುವಜನರಿಗೆ ಮಾದರಿಯಾಗಬಲ್ಲ ಇಂಥವರ ಸಂಖ್ಯೆ ಹೆಚ್ಚಬೇಕು ಎಂಬುದು ಜನರ ಸಹಜ ಆಶಯ.

ಆದರೆ ಇಂಥ ಆಶೋತ್ತರಕ್ಕೆ ಕೊಳ್ಳಿಯಿಡುವಂಥ ಸಂಸ್ಕೃತಿ ಬೆಳೆಯಲಾರಂಭಿಸಿದೆ. ಕೆಲವು ವರ್ಷಗಳಿಂದೀಚೆಗೆ ಹೆಣ್ಣನ್ನು ಸರಕಿನಂತೆ ಕಾಣುವ ಪದ್ಧತಿ ಬೆಳೆಯುತ್ತಾ, ರಾಜಕೀಯವು ತಲುಪಿರುವ ಅಧಃಪತನಕ್ಕೆ ಅದು ಕನ್ನಡಿ ಹಿಡಿಯಲಾರಂಭಿಸಿದೆ. 'ಸರಕು' ಎಂದರೆ ಮನಸ್ಸಿಲ್ಲದ, ವ್ಯಕ್ತಿತ್ವವಿಲ್ಲದ ಒಂದು ವಸ್ತು. ಹೆಣ್ಣನ್ನು 'ವಸ್ತು' ಎಂದು ಪರಿಭಾವಿಸುವ ಕೆಲ ನಿರ್ಲಜ್ಜ ಮತ್ತು ಅಹಂಕಾರಿ ಪುರುಷರು, ಹೆಣ್ಣನ್ನು ಬಳಸಿಕೊಳ್ಳುತ್ತಿರುವ ಪರಿಯನ್ನು ಕಂಡು ರಾಜ್ಯ ರಾಜಕೀಯವು ದಂಗುಬಡಿದಿದೆ. ಇದರ ಪರಮಾವಧಿ ಎನ್ನುವಂತೆ 'ಮಧುಜಾಲ'ವು ಕರ್ನಾಟಕ ರಾಜಕೀಯದಲ್ಲಿ ತನ್ನ ಕರಾಳಹಸ್ತವನ್ನು ಚಾಚತೊಡಗಿದೆ.

'ಹೆಣ್ಣು ಮಾಯೆ, ಹೆಣ್ಣಿಗೆ ಮರುಳಾಗದವರು ಯಾರೂ ಇಲ್ಲ' ಎಂಬಂಥ ಸವಕಲು ವಾಕ್ಯಗಳು ಹಾಸುಹೊಕ್ಕಾಗಿರುವಂತೆಯೇ, ಜನನಾಯಕರೆನಿಸಿಕೊಂಡವರು ಹೆಣ್ಣೆಂಬ ಮೋಹಪಾಶಕ್ಕೆ ಸಿಲುಕಬಾರದು ಎಂಬ ಸಾಮಾಜಿಕ ಪ್ರಜ್ಞೆಯೂ ಢಾಳಾಗಿಯೇ ಇದೆ. ಈ ಕಾರಣಕ್ಕಾಗಿಯೇ, 'ಹೆಣ್ಣಿನ ವಿಷಯಕ್ಕೆ ತಳಕು ಹಾಕಿಕೊಂಡು ಕೆಟ್ಟ ಸುದ್ದಿಗಳು ಹಬ್ಬಿದರೆ ರಾಜಕೀಯ ಸಮಾಧಿ ಆದಂತೆ' ಎಂಬ ಎಚ್ಚರಿಕೆ ಉಳ್ಳವರು ತಮ್ಮ ಚಾಪಲ್ಯಕ್ಕೆ ಒಂದೊಮ್ಮೆ ಕಡಿವಾಣ ಹಾಕಲಾಗದಿದ್ದರೂ, ಅದಕ್ಕೆ ಸಂಬಂಧಿಸಿದಂಥ ವಿಷಯಗಳು ರಹಸ್ಯವಾಗಿ ಇರುವಂತೆ ನಿರ್ವಹಿಸುತ್ತಾರೆ. ಆದರೆ ಇಂಥದೊಂದು ದೌರ್ಬಲ್ಯ ಇರುವುದರ ಅರಿವಿರುವವರು ಅವರನ್ನು ಮಧುಜಾಲಕ್ಕೆ ಕೆಡವಿ ರಾಜಕೀಯವಾಗಿ ಮುಗಿಸುವ, ತನ್ಮೂಲಕ ತಮ್ಮ ರಾಜಕೀಯದ ಭವಿಷ್ಯವನ್ನು ಸುಗಮವಾಗಿಸಿಕೊಳ್ಳುವ ಕಸರತ್ತಿಗೆ ಮುಂದಾಗುತ್ತಾರೆ.

ಮೊದಲೆಲ್ಲಾ, ಮಧುಜಾಲದಲ್ಲಿ ಸಿಲುಕಿಸಲು ಒಂದಷ್ಟು ಸಿದ್ಧತೆಗಳಾದರೂ ಬೇಕಿತ್ತು. ಆದರೆ, ತಂತ್ರಜ್ಞಾನದ ಬೆಳವಣಿಗೆ ಪರಾಕಾಷ್ಠೆ ತಲುಪಿರುವ ಇಂದಿನ ದಿನಗಳಲ್ಲಿ ಎಲ್ಲರ ಕೈಗಳಲ್ಲೂ ಕ್ಯಾಮರಾಗಳಿವೆ. ಒಬ್ಬ ಕಾಲು ಜಾರಿದರೆ ಸಾಕು, ಅದನ್ನು ತನ್ನ ಕ್ಯಾಮರಾದಲ್ಲಿ ಸೆರೆಹಿಡಿಯುವ ವ್ಯಕ್ತಿಯು, ಹಾಗೆ ಕಾಲುಜಾರಿದಾತನನ್ನು ಬ್ಲ್ಯಾಕ್‌ಮೇಲ್ ಮಾಡಲು ಆರಂಭಿಸುತ್ತಾನೆ. ಇಂದು ಪರಿಚಯ ಬೆಳೆಸಿಕೊಳ್ಳಲು ಮಾಧ್ಯಮಗಳು ಬೇಕಾದಷ್ಟಿವೆ, ಏಕಾಂತಕ್ಕೂ ಸಾಕಷ್ಟು ಅವಕಾಶಗಳಿವೆ. ಕಮಿಟ್ ಆದದ್ದು ಕ್ಯಾಮರಾದಲ್ಲಿ ಸೆರೆಯಾದರೆ ಸಾಕು ಎಂಬ ಪರಿಸ್ಥಿತಿ ಇರುವಾಗ, ಮಧುಜಾಲಕ್ಕೆ ಕೆಡವೋದೂ ಅತ್ಯಂತ ಸುಲಭ.

ಮಧುಜಾಲ ಎಂದರೆ ಅದೊಂದು ಗುಪ್ತ ಕಾರ್ಯಾಚರಣೆ. ಹೆಣ್ಣು ಇಲ್ಲಿ ಪ್ರಧಾನ ಅಸ್ತ್ರ. ಮಿಕವನ್ನು ಮೊದಲೇ ಗುರುತಿಸಿ, ಹೆಣ್ಣು ಆತನಿಗೆ ಪರಿಚಯವಾಗುವಂತೆ ಮಾಡಿ, ರೊಮ್ಯಾಂಟಿಕ್ ಮಾತುಗಳಿಂದ, ಅನಿವಾರ್ಯವಾದರೆ ಲೈಂಗಿಕ ಸಂಬಂಧವನ್ನು ಬೆಳೆಸಿ ಆತನಿಂದ ಮಾಹಿತಿ ಪಡೆಯುವುದೇ ಮಧುಜಾಲ. ಹೆಣ್ಣಿನ ಮೋಹಕ್ಕೆ ವಶವಾದ ಗಂಡು ಆಕೆಯ ಮೆಚ್ಚುಗೆ ಗಳಿಸಲು, ತಾನು ರಹಸ್ಯವಾಗಿ ಇರಿಸಬೇಕಾದ ಮಾಹಿತಿಗಳನ್ನು ಆಕೆಗೆ ತಿಳಿಸುತ್ತಾನೆ. ಪಾಕಿಸ್ತಾನದ ಗೂಢಚಾರಿಣಿ ಎಂದು ಶಂಕಿಸಲಾದ ಮಹಿಳೆಗೆ ಮಾಹಿತಿ ಸೋರಿಕೆ ಮಾಡಿದ್ದಾನೆ ಎಂಬ ಆರೋಪದ ಮೇರೆಗೆ ಕಾನ್ಪುರದ ಆರ್ಡನೆನ್ಸ್ ಫ್ಯಾಕ್ಟರಿಯ ಕುಮಾರ್ ವಿಕಾಸ್ ಎಂಬ ಉದ್ಯೋಗಿಯನ್ನು ಉತ್ತರ ಪ್ರದೇಶದ ಭಯೋತ್ಪಾದನೆ ನಿಗ್ರಹದಳವು ಬಂಧಿಸಿರುವುದು ಇದಕ್ಕೆ ತಾಜಾ ಉದಾಹರಣೆ. ಈತನೊಂದಿಗೆ ಗೂಢಚಾರಿಣಿಯೊಬ್ಬಳು ಸ್ನೇಹ ಬೆಳೆಸಿದಳು; ನೇಹಾ ಶರ್ಮ ಎಂಬ ಹೆಸರಿನಲ್ಲಿ ಪರಿಚಿತಳಾದ ಆಕೆಗೆ ಸೇನಾ ಶಸ್ತ್ರಾಸ್ತ್ರ ಉತ್ಪಾದನೆ, ಮಷಿನ್ ಲೇಔಟ್, ಪ್ರೊಡಕ್ಷನ್ ಚಾರ್ಟ್, ಉದ್ಯೋಗಿಗಳ ಹಾಜರಾತಿ ಪಟ್ಟಿ ಇತ್ಯಾದಿ ವಿಷಯಗಳಿಗೆ ಸಂಬಂಧಿಸಿದ ರಹಸ್ಯ ಮಾಹಿತಿಗಳನ್ನು ವಾಟ್ಸ್ಯಾಪ್ ಮೂಲಕ ಹಂಚಿಕೊಂಡಿದ್ದ ಆರೋಪದ ಮೇಲೆ ವಿಕಾಸ್‌ನನ್ನು ಬಂಧಿಸಿದ ಎಟಿಎಸ್ ತನಿಖೆ ಆರಂಭಿಸಿದೆ.

'ಮಾತಾಹರಿ' ಎಂಬ ಮಾಯಾಂಗನೆಯ ಪ್ರಸ್ತಾಪ ಇಲ್ಲದಿದ್ದರೆ ಮಧುಜಾಲದ ಬಗೆಗಿನ ಯಾವುದೇ ಲೇಖನ ಅಪೂರ್ಣ ಎಂದೇ ಅರ್ಥ. ಮಾರ್ಗರೇಟಾ ಗೀಟ್ರೂಡಾ ಎಂಬಾಕೆ 1876ರಲ್ಲಿ ನೆದರ್ಲ್ಯಾಂಡ್‌ನಲ್ಲಿ ಜನಿಸಿದಳು. ಶ್ರೀಮಂತ ವ್ಯಾಪಾರಿಯೊಬ್ಬನ ಮಗಳಾಗಿದ್ದ ಈಕೆ ಸೇನಾಧಿಕಾರಿಯೊಬ್ಬನನ್ನು ಮದುವೆಯಾದಳು. ದಂಪತಿಗೆ ಇಬ್ಬರು ಮಕ್ಕಳು ಜನಿಸಿದರೂ, ಆ ಪೈಕಿ ಒಂದು ಮಗು ಜನನದ ಕೆಲ ಹೊತ್ತಿನಲ್ಲೇ ಅಸುನೀಗಿತು. ನಂತರ ಅವರ ದಾಂಪತ್ಯದಲ್ಲಿ ವಿರಸ ಕಾಣಿಸಿಕೊಂಡಿತು, 1902ರಲ್ಲಿ ವಿಚ್ಛೇದನವೂ ಆಯಿತು. ಬಳಿಕ ಪ್ಯಾರಿಸ್‌ಗೆ ವಲಸೆ ಬಂದ ಮಾರ್ಗರೇಟಾ ಗೀಟ್ರೂಡಾ, ನರ್ತಕಿಯಾಗಿ ಬದುಕು ಕಂಡುಕೊಂಡಳು. ಆಗ ಈಕೆಗೆ ಮಾತಾಹರಿ (ಬೆಳಗಿನ ಕಣ್ಣು) ಎಂಬ ಹೆಸರು ಬಂತು.

1905ರ ಬಳಿಕ ಈಕೆ ಯುರೋಪ್‌ನ ಸಾಂಸ್ಕೃತಿಕ ವಲಯದಲ್ಲಿ ಹೆಸರಾದಳು. ಒಂದು ದಶಕದ ಕಾಲ ನರ್ತಕಿಯಾಗಿ ಬದುಕು ಸವೆಸಿದ ಈಕೆ ಹಲವರ ಆಕರ್ಷಣೆಯ ಕೇಂದ್ರಬಿಂದುವಾದಳು. ಹಲವು ಭಾಷೆಗಳನ್ನು ಸುಲಲಿತವಾಗಿ ಮಾತಾಡಬಲ್ಲ ಸಾಮರ್ಥ್ಯವಿದ್ದ ಈಕೆ ಓರ್ವ ವೇಶ್ಯೆಯೂ ಆಗಿದ್ದಳು. ಮೊದಲನೆಯ ಮಹಾಯುದ್ಧದ ಸಮಯದಲ್ಲಿ ಈಕೆ ಬೇಹುಗಾರಿಕೆ ಮಾಡುತ್ತಿದ್ದಾಳೆ ಎಂಬ ಅನುಮಾನ ಹಲವರಿಗೆ ಬಂದಿತ್ತು. ಜರ್ಮನಿ ಮಿಲಿಟರಿಯ ಮೇಜರ್‌ಗಳಲ್ಲಿ ಒಬ್ಬನಾಗಿದ್ದ ಅರ್ನಾಲ್ಡ್ ಕಲ್ಲೆ ಎಂಬಾತ ಈಕೆಯ ಪ್ರಿಯತಮರಲ್ಲಿ ಒಬ್ಬನಾಗಿದ್ದ. ಒಂದು ಹಂತದಲ್ಲಿ ಆತನಿಗೂ ಮಾತಾಹರಿಯ ಬಗ್ಗೆ ಕಿರಿಕಿರಿ ಎನ್ನಿಸಿ ಈಕೆಯನ್ನು ನಿವಾರಿಸಿಕೊಳ್ಳಲು ಯತ್ನಿಸಿದ್ದ.

ಮಾತಾಹರಿಯನ್ನು ಪ್ಯಾರಿಸ್‌ನ ಒಂದು ಐಷಾರಾಮಿ ಹೋಟೆಲ್‌ನಲ್ಲಿ 1917ರಲ್ಲಿ ಬಂಧಿಸಲಾಯಿತು. ಈಕೆಯ ಪ್ರಿಯತಮ ಅರ್ನಾಲ್ಡ್ ಕಲ್ಲೆ ಈಕೆಯ ಬಂಧನಕ್ಕೆ ಮಾಹಿತಿದಾರ ಎನ್ನಲಾಗುತ್ತಿದೆ. 50 ಸಾವಿರ ಫ್ರೆಂಚ್ ಸೈನಿಕರ ಸಾವಿಗೆ ಈಕೆ ಕಾರಣ ಎಂದು ಆರೋಪಿಸಲಾಗಿತ್ತು. ಈ ಸಾವುಗಳಿಗೆ ಈಕೆ ಹೇಗೆ ಕಾರಣ ಎಂಬ ಬಗ್ಗೆ ನಿರ್ದಿಷ್ಟ ಪುರಾವೆಗಳು ಹಾಗೂ ಫ್ರೆಂಚ್ ಸೈನ್ಯದ ಯಾವುದೇ ಮಾಹಿತಿಯನ್ನು ಸೋರಿಕೆ ಮಾಡಿದ ಬಗ್ಗೆ ಸಾಕ್ಷ್ಯಗಳು ಇಲ್ಲದಿದ್ದರೂ, ಫ್ರೆಂಚ್ ಸರಕಾರ ಈಕೆಯ ಮೇಲೆ ಬೇಹುಗಾರಿಕೆಯ ಆರೋಪ ಹೊರಿಸಿ, ದಾರುಣ ಜೈಲುವಾಸಕ್ಕೆ ಈಡುಮಾಡಿತು ಮತ್ತು ಅಂತಿಮವಾಗಿ ಮರಣದಂಡನೆ ವಿಧಿಸಿತು.

ಮಾತಾಹರಿಯ ಮೂಲಕ ಆರಂಭವಾದ ಮಧುಜಾಲದ ಬೇಹುಗಾರಿಕೆ ಮುಂದೆ ಬಹಳಷ್ಟು ಪ್ರಕರಣಗಳಿಗೆ ನಾಂದಿ ಹಾಡಿತು. ಇಂದಿಗೂ ಮಧುಜಾಲದ ಹಲವಾರು ಪ್ರಕರಣಗಳು ಸುದ್ದಿಯಾಗುತ್ತಿವೆ. ಹೆಣ್ಣಿನ ಬಗೆಗಿನ ಪುರುಷನ ದೌರ್ಬಲ್ಯವೇ ಮಧುಜಾಲದ ಅಡಿಪಾಯ. ಭಾರತದ ಇತಿಹಾಸದಲ್ಲಿ ಪ್ರಚಂಡ ಬುದ್ಧಿವಂತನೆಂದು ಹೆಸರಾದ ಚಾಣಕ್ಯನು, ಮೌರ್ಯ ಸಾಮ್ರಾಜ್ಯದ ಸ್ಥಾಪನೆಗೆ ವಿಷಕನ್ಯೆಯರನ್ನು ಬಳಸಿದ್ದನ್ನು ಮಧುಜಾಲಕ್ಕೆ ಸಮಾನಾಂತರವಾಗಿ ಉದಾಹರಿಸಬಹುದು.

ಮಿಲಿಟರಿ ಗೂಢಚರ್ಯೆಯಲ್ಲಿ ಮಧುಜಾಲವು ಸ್ವಾಭಾವಿಕವೇ ಆಗಿರಬಹುದು; ಆದರೆ ರಾಜಕೀಯಕ್ಕೆ ಇದರ ಪ್ರವೇಶವಾಗುವುದನ್ನು ಖಂಡಿತ ಒಪ್ಪಲಾಗದು. ರಾಜಕಾರಣ ಹೊಲಸೆದ್ದಿದೆ ಎಂಬ ಆರೋಪ ಈಗಾಗಲೇ ಕೇಳಿಬರುತ್ತಿದೆ. ಅದನ್ನು ಶುದ್ಧೀಕರಿಸುವ ಪ್ರಯತ್ನ ಮಾಡಬೇಕೇ ಹೊರತು, ಅದನ್ನು ಇನ್ನಷ್ಟು ಅಧಃಪತನಕ್ಕೆ ದೂಡುವುದು ಸರ್ವಥಾ ಸರಿಯಲ್ಲ. ಸಜ್ಜನರು ರಾಜಕೀಯವನ್ನು ಪ್ರವೇಶಿಸಬೇಕಿರುವುದು ಅಪೇಕ್ಷಣೀಯ. ಮಧುಜಾಲಕ್ಕೆ ಮುಂದಾಗುವವರನ್ನು/ಒಳಗಾಗುವವರನ್ನು ಅವರೆಷ್ಟೇ ಪ್ರಭಾವಿಯಾಗಿದ್ದರೂ ಮುಲಾಜು ನೋಡದೆ ಉಚ್ಚಾಟಿಸಬೇಕು. ಈ ಪಿಡುಗು ರಾಜಕೀಯ ಕ್ಷೇತ್ರದಲ್ಲಿ ಹಾಗೂ ಸಾರ್ವಜನಿಕ ಜೀವನದಲ್ಲಿ ಮುಂದೆಂದೂ ತಲೆಯೆತ್ತದಂತೆ ನೋಡಿಕೊಳ್ಳಬೇಕಿರುವುದು ಎಲ್ಲರ ಜವಾಬ್ದಾರಿ.

**(ಲೇಖಕರು ಸಾಮಾಜಿಕ ಕಾರ್ಯಕರ್ತರು)**

## ಜಲಜಾಗೃತಿ

**ಮಿರ್ಲೆ ಚಂದ್ರಶೇಖರ**

# ನೀರನ್ನು ಸಂರಕ್ಷಿಸೋಣ...

ವರ್ಷದ ಎಲ್ಲಾ ದಿನಗಳಲ್ಲೂ ನೀರು ಬೇಕೇ ಬೇಕು; ನೀರು ಮತ್ತು ವಿದ್ಯುತ್ ಒಂದು ದಿನದ ಮಟ್ಟಿಗೆ ಪೂರೈಕೆಯಾಗಲಿಲ್ಲವೆಂದರೆ, ಆ ದಿನವೆಲ್ಲಾ ಏನನ್ನೋ ಕಳೆದುಕೊಂಡಂತಾಗುವುದು. ಐದಾರು ದಶಕಗಳ ಹಿಂದೆ ಇವೆರಡರ ಸೌಲಭ್ಯ ಎಲ್ಲಿತ್ತು? ನಗರಗಳಲ್ಲಿ ಮಾತ್ರ ತಕ್ಕಮಟ್ಟಿಗೆ ಇತ್ತು! ಗ್ರಾಮೀಣ ಭಾಗದಲ್ಲಿ ನೀರಿಗಾಗಿ ಕೆರೆಕಟ್ಟೆಗಳು ಮತ್ತು ತೆರೆದ ಬಾವಿಗಳನ್ನು ಆಶ್ರಯಿಸಿದರೆ, ಬೆಳಕಿಗೆ ಸೀಮೆಎಣ್ಣೆ ದೀಪಗಳೇ ಗತಿ. ಕಾಲ ಕಳೆದಂತೆ, ತಂತ್ರಜ್ಞಾನದ ಅಭಿವೃದ್ಧಿಯಿಂದಾಗಿ ಕಾಸು ಕೊಟ್ಟರೆ ಎಲ್ಲವೂ ಮನೆಯ ಬಳಿಗೇ ಬರತೊಡಗಿದವು. ಆದರೆ, ಹೀಗೆ ಕಾಸು ಕೊಟ್ಟು ಕೊಳ್ಳಲು ಎಲ್ಲರಿಗೂ ಸಾಧ್ಯವೇ? ನೈಸರ್ಗಿಕ ಸಂಪನ್ಮೂಲಗಳ ಕೊರತೆಯಾಗದಂತೆ ಜನರಿಗೆ ಸಮೃದ್ಧವಾಗಿ ಸಿಗಬೇಕೆಂದರೆ ಅವುಗಳ ಸಂರಕ್ಷಣೆಯಾಗಬೇಕು.

ಹಸಿವು, ಆರೋಗ್ಯ, ಶಿಕ್ಷಣ, ಲಿಂಗ ಸಮಾನತೆ, ಜೀವನೋಪಾಯ, ಸುಸ್ಥಿರತೆ ಮತ್ತು ಪರಿಸರಕ್ಕೆ ಸಂಬಂಧಿಸಿದಂತೆ ನೀರು ಪ್ರಮುಖ ಸ್ಥಾನವನ್ನು ಪಡೆಯುತ್ತದೆ. ಕಾರಣ, ನೀರಿಲ್ಲದೆ ಇವುಗಳಲ್ಲಿ ಯಾವುದನ್ನೂ ಸರಿದೂಗಿಸಲಾಗದು. ವಾತಾವರಣ, ಸಮಾಜ ಮತ್ತು ಪರಿಸರಕ್ಕೆ ನಿರ್ಣಾಯಕ ಕೊಂಡಿಯಾಗಿ ನೀರು ಕಾರ್ಯನಿರ್ವಹಿಸುವುದರಿಂದ ಅದಕ್ಕೆ ಧರ್ಮಾತೀತವಾಗಿ, ಭೌಗೋಳಿಕ ಪರಿಮಿತಿಯಿಲ್ಲದೆ ಒತ್ತುಕೊಡಲೇಬೇಕಿದೆ. ಆ ನಿಟ್ಟಿನಲ್ಲಿ ಪ್ರಾರಂಭವಾಗಿರುವುದೇ ವಿಶ್ವ ಜಲದಿನದ ಆಚರಣೆ. ನೀರಿನ ನಿರ್ವಹಣೆ ಸಮರ್ಪಕವಾಗಿಲ್ಲದಿದ್ದಲ್ಲಿ, ಜನಗಳ ನಡುವೆ, ಊರು-ರಾಜ್ಯ-ದೇಶಗಳ ನಡುವೆ ನೀರಿನ ಬಿಕ್ಕಟ್ಟು ಉಲ್ಬಣಗೊಳ್ಳುವ ಸಾಧ್ಯತೆಗಳಿವೆ.

**ಇಂದು ವಿಶ್ವ ಜಲದಿನ**

ಶುದ್ಧನೀರಿನ ಕೊರತೆ ಜಾಗತಿಕ ಬಿಕ್ಕಟ್ಟಾಗಿ ಜನಜೀವನದ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತಿದೆ. 270 ಕೋಟಿ ಜನರು ವರ್ಷದಲ್ಲಿ ಒಂದು ತಿಂಗಳಾದರೂ ನೀರಿನ ಕೊರತೆಯನ್ನು ಅನುಭವಿಸುತ್ತಾರೆ. ಹೀಗಾಗಿ, ನೀರಿನ ಕೊರತೆಯನ್ನು ನೀಗಿ ಬಿಕ್ಕಟ್ಟನ್ನು ನಿಭಾಯಿಸಲು ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸುವ ಹಾಗೂ ಪ್ರೇರಣೆ ನೀಡುವ ಉದ್ದೇಶದಿಂದ ಪ್ರಾರಂಭವಾಗಿರುವಂಥದ್ದು 'ವಿಶ್ವ ಜಲದಿನ'. 2030ರ ವರ್ಷದ ವೇಳೆಗೆ ಸಮಸ್ತರಿಗೂ 'ನೀರು ಮತ್ತು ನೈರ್ಮಲ್ಯ'ವನ್ನು ಒದಗಿಸುವ ಗುರಿಯ ಸಾಧನೆಯೇ ವಿಶ್ವ ಜಲದಿನದ ಪ್ರಮುಖ ಅಂಶವಾಗಿದೆ. ಪ್ರತಿ ವರ್ಷದ ಮಾರ್ಚ್ 22ರಂದು ಆಚರಿಸಲಾಗುವ ಈ ದಿನದಂದು, ಒಂದೊಂದು ಧ್ಯೇಯವನ್ನು ಮುನ್ನೆಲೆಗೆ ತಂದು ಅದರ ಬಗ್ಗೆ ಜನರಲ್ಲಿ ಅರಿವು ಮೂಡಿಸಲಾಗುತ್ತದೆ.

'ಹಿಮನದಿ ಸಂರಕ್ಷಣೆ' ಎಂಬುದು 2025ರ ವಿಶ್ವ ಜಲದಿನದ ಧ್ಯೇಯವಾಗಿದೆ. ಹಿಮನದಿಯ ಸಂರಕ್ಷಣೆಯು ಜೀವಸಂಕುಲಕ್ಕೆ ಅಗತ್ಯ ಎಂಬುದನ್ನು ಜನರಿಗೆ ಮನದಟ್ಟು ಮಾಡಿಕೊಡಬೇಕಾಗಿದೆ. ಕರಗಿದ ಹಿಮಗಡ್ಡೆಯಿಂದ ಸಿಗುವ ನೀರು ಕುಡಿಯುವುದಕ್ಕೆ, ಕೃಷಿ, ಕೈಗಾರಿಕೆ, ಇಂಧನ ಉತ್ಪಾದನೆ ಮತ್ತು ಆರೋಗ್ಯಕರ ವ್ಯವಸ್ಥೆಗಳಿಗೆ ಉಪಯುಕ್ತವಾದರೂ, ಅತಿಯಾದ ಕರಗುವಿಕೆಯು ಅನಾಹುತಗಳನ್ನು ಸೃಷ್ಟಿಸಿಬಿಡುತ್ತದೆ. ವರದಿಗಳು ಹೇಳುವ ಪ್ರಕಾರ, ಪ್ರಸ್ತುತ ಹಿಮನದಿಗಳು ವೇಗವಾಗಿ ಕರಗುತ್ತಿವೆ, ಹವಾಮಾನ ಬದಲಾವಣೆಯಿಂದಾಗಿ ಭೂಮಿಯು ಬಿಸಿಯಾಗತೊಡಗಿದೆ. ಈ ವೈಪರೀತ್ಯವು ನೀರಿನ ಚಕ್ರವನ್ನು ಅನಿಶ್ಚಿತತೆಯ ಕಡೆಗೆ ಕೊಂಡೊಯ್ಯುತ್ತಿದೆ. ಪರಿಣಾಮವಾಗಿ ಪ್ರವಾಹಗಳು, ಬರ ಪರಿಸ್ಥಿತಿ, ಭೂಕುಸಿತಗಳು ಮತ್ತು ಸಮುದ್ರಮಟ್ಟದಲ್ಲಿ ಏರಿಕೆ ಕಂಡುಬರುತ್ತಿವೆ, ಈ ಸ್ಥಿತಿಯು ಪರಿಸರದ ಸುವ್ಯವಸ್ಥೆಗೆ ಮಾರಕವಾಗುತ್ತಿದೆ. ಜೀವಿಗಳು ಬದುಕುಳಿಯಲು ಹಿಮನದಿಗಳ ಸಂರಕ್ಷಣೆಯ ಅಗತ್ಯವಿದೆ. ಅವು ಕರಗುವುದರಿಂದ ಭೂಮಿಯ ಚಿತ್ರಣವೇ ಬದಲಾಗುವುದು, ಮುಂದುವರಿದರೆ ಸಾಗರದ ವ್ಯಾಪ್ತಿ ಹೆಚ್ಚಾಗಿ ಭೂಪ್ರದೇಶವು ಕಡಿಮೆಯಾಗಿ, ನಕಾಶೆಗಳನ್ನು ಹೊಸದಾಗಿ ಬರೆಯಬೇಕಾಗಬಹುದು. ನೀರು ಹಾಗೂ ಜಲಮೂಲಗಳ ಸಂರಕ್ಷಣೆಯಲ್ಲಿ ವಿಫಲವಾದರೆ, 'ನೀರಿನ ಕಾರಣಕ್ಕಾಗಿಯೇ ಮೂರನೇ ಮಹಾಯುದ್ಧ ನಡೆಯುತ್ತದೆ' ಎಂಬ ಚಿಂತಕರ ನುಡಿ ನಿಜವಾಗಬಹುದು.

ಆದ್ದರಿಂದ, ಹಿಮನದಿಗಳ ಸಂರಕ್ಷಣೆಯಲ್ಲಿ ದೊಡ್ಡ ಮಟ್ಟದಲ್ಲಿ ತೊಡಗಿಸಿಕೊಳ್ಳುವುದು ಮತ್ತು ಸೂಕ್ಷ್ಮಾತಿಸೂಕ್ಷ್ಮ ಮಟ್ಟದಲ್ಲೂ ಕೈಜೋಡಿಸುವುದು ನಮ್ಮ ಜವಾಬ್ದಾರಿಯಾಗಬೇಕು. ನೀರಿನ ಉಳಿತಾಯ ಹಾಗೂ ಸಂರಕ್ಷಣೆಯನ್ನು ಎಲ್ಲೆಲ್ಲಿ ಹೇಗೆಲ್ಲಾ ಮಾಡಬಹುದೋ ಆ ದಿಕ್ಕಿನಲ್ಲಿ ಕಾರ್ಯೋನ್ಮುಖರಾಗಬೇಕಾದ್ದು ನಮ್ಮ ಕರ್ತವ್ಯ. ಹೊಸ ವರ್ಷ ಬಂತೆಂದರೆ ಒಂದಿಷ್ಟು ಸಂಕಲ್ಪಗಳನ್ನು ಮಾಡುವಂತೆ, ಮಾರ್ಚ್ 22ರ ವಿಶ್ವ ಜಲದಿನದಂದು ನೀರಿನ ಸದ್ಬಳಕೆ ಮತ್ತು ಸಂರಕ್ಷಣೆಯ ನಿಟ್ಟಿನಲ್ಲಿ ಸಂಕಲ್ಪಿಸುವ ಮನಸ್ಥಿತಿ ನಮ್ಮದಾಗಬೇಕು. ಮೇಲ್ನೋಟಕ್ಕೆ ಇದು ಸಣ್ಣ ಸಂಕಲ್ಪ ಎನಿಸಿದರೂ, ಆಳಕ್ಕಿಳಿದು ನೋಡಿದಾಗ ಅದರ ಅಗಾಧತೆಯ ಅರಿವಾಗುತ್ತದೆ.

ಇತ್ತೀಚಿನ ಮನೆಗಳಲ್ಲಿ ಕನಿಷ್ಠವೆಂದರೂ 10 ನಲ್ಲಿಗಳಿರುತ್ತವೆ. ಒಂದು ನಲ್ಲಿಯಲ್ಲಿ ಸೆಕೆಂಡಿಗೆ ಒಂದು ಹನಿಯಂತೆ ತೊಟ್ಟಿಕ್ಕಿದರೂ ದಿನಕ್ಕೆ 4-5 ಲೀಟರ್ ನೀರು ಅಪವ್ಯಯವಾಗುತ್ತದೆ. ಇನ್ನು ಬೀದಿನಲ್ಲಿಗಳನ್ನು ಸರಿಯಾಗಿ ನಿಲ್ಲಿಸದಿದ್ದರೆ ಇದಕ್ಕಿಂತಲೂ ಹೆಚ್ಚು ನೀರು ಪೋಲಾಗುತ್ತದೆ. ನೀರು ಗಣನೀಯ ಪ್ರಮಾಣದಲ್ಲಿ ಬಳಕೆಯಾಗುವ ಸ್ಥಳಗಳ ಪೈಕಿ ಮನೆಯ ಶೌಚಾಲಯವೂ ಒಂದು. ಒಂದು ಬಾರಿ ಫ್ಲಷ್ ಮಾಡಿದರೆ ಕನಿಷ್ಠ 4 ಲೀಟರ್ ನೀರು ಖರ್ಚಾಗುತ್ತದೆ; ದಿನದಲ್ಲಿ ವ್ಯಕ್ತಿಯೊಬ್ಬ 4-5 ಬಾರಿ ಫ್ಲಷ್ ಮಾಡಿದರೆ ಹಾಗೂ ಮನೆಯಲ್ಲಿ ಒಂದಕ್ಕಿಂತ ಹೆಚ್ಚು ಸದಸ್ಯರಿದ್ದರೆ ಇದರ ಪ್ರಮಾಣವನ್ನು ನೀವೇ ಊಹಿಸಿ (ಹಾಗೆಂದ ಮಾತ್ರಕ್ಕೆ ಫ್ಲಷ್ ಮಾಡಬಾರದು ಎಂದಲ್ಲ, ಅಪವ್ಯಯವಾಗಬಾರದು, ಅಷ್ಟೇ!).

ವಾಷ್ ಬೇಸಿನ್‌ನ ನಲ್ಲಿಯಲ್ಲಿ ನೀರು ಹರಿಯುವಂತೆ ಬಿಟ್ಟುಕೊಂಡೇ ಹಲ್ಲುಜ್ಜುವುದು ಕೆಲವರ ಅಭ್ಯಾಸ. ಮತ್ತೆ ಕೆಲವರು, ಪಾತ್ರೆಗಳನ್ನು ತೊಳೆಯುವಾಗ ಕಾಲಹರಣ ಮಾಡುವುದರ ಜತೆಗೆ ನೀರು ಜೋರಾಗಿ ಸುರಿಯುವಂತೆ ನಲ್ಲಿಯನ್ನು ತಿರುಗಿಸಿಕೊಂಡು ತೊಳೆಯುವುದಿದೆ. ಕಾರನ್ನು ತೊಳೆಯುವ ನೆಪದಲ್ಲಿ ನೂರಾರು ಲೀಟರ್ ನೀರನ್ನು ಕೆಲವರು ಬಳಸುವುದಿದೆ. ಇವೆಲ್ಲವೂ ಅಪವ್ಯಯದ ನಿದರ್ಶನಗಳೇ. ಹೇಳುತ್ತ ಹೋದರೆ ಇಂಥ ಸಾಕಷ್ಟು ಉದಾಹರಣೆಗಳನ್ನು ಕೊಡಬಹುದು. ಹೀಗೆ ಒಂದೊಂದು ಬಾಬತ್ತಿನಲ್ಲೂ ನೀರಿನ ಅಪವ್ಯಯವನ್ನು ತಡೆದರೆ, ಗಣನೀಯ ಪ್ರಮಾಣದಲ್ಲಿ ನೀರಿನ ಸಂರಕ್ಷಣೆಯನ್ನು ಸಾಕಾರಗೊಳಿಸಬಹುದು.

ಬೆಂಗಳೂರು ನೀರು ಸರಬರಾಜು ಮಂಡಳಿಯ ವ್ಯವಸ್ಥೆಯಲ್ಲಿ ದಶಕಗಳ ಹಿಂದೆ ಆಗುತ್ತಿದ್ದ ನೀರಿನ ನಷ್ಟ ಸುಮಾರು ಶೇ.51ರಷ್ಟು; ಆದರೆ ಮಂಡಳಿಯ ಸಿಬ್ಬಂದಿಯ ಪರಿಶ್ರಮ ಹಾಗೂ ಆಧುನಿಕ ತಂತ್ರಜ್ಞಾನವನ್ನು ಅಳವಡಿಸಿಕೊಂಡ ಫಲವಾಗಿ ಈ ಪ್ರಮಾಣವು ಈಗ ಶೇ.26.50ರ ಮಟ್ಟಕ್ಕೆ ಇಳಿದಿದೆ. ಇದು ನಿಜಕ್ಕೂ ಶ್ಲಾಘನೀಯ ಅಂಶ. ಮಿಕ್ಕ ಸಜ್ಜಿಕೆಗಳಿಗೆ ಹೋಲಿಸಿದಾಗ, ಜಲಾಶಯಗಳ ವ್ಯಾಪ್ತಿಯಲ್ಲಿ ಆಗುವ ನೀರಿನ ಅಪವ್ಯಯ ಹೆಚ್ಚು ಎನ್ನಬೇಕು; ಅಣೆಕಟ್ಟೆಯ ಗೇಟ್‌ನಿಂದ ಕಾಲುವೆಯ ಕೊನೆಭಾಗದವರೆಗೂ ನೀರನ್ನು ಹರಿಸಿ ಅಚ್ಚುಕಟ್ಟು ಪ್ರದೇಶಗಳಿಗೆ ಹಾಯಿಸುವಷ್ಟರಲ್ಲಿ ಶೇ.25ರಷ್ಟು ನೀರು ಅಪವ್ಯಯವಾಗುತ್ತದೆ; ಇನ್ನು ರೈತರು ತಮ್ಮ ಜಮೀನುಗಳಿಗೆ ಅಗತ್ಯಕ್ಕಿಂತಲೂ ಹೆಚ್ಚು ನೀರನ್ನು ಹಾಯಿಸಿಕೊಳ್ಳುವುದರಿಂದ ನೀರು ವ್ಯರ್ಥವಾಗಿ ಹಳ್ಳ ಸೇರುವುದಲ್ಲದೆ, ಭೂಮಿಯ ಫಲವತ್ತತೆಯೂ ಕಡಿಮೆಯಾಗುತ್ತದೆ. ವೈಜ್ಞಾನಿಕ ಬೆಳೆ ಪದ್ಧತಿಯನ್ನು ಅಳವಡಿಸಿಕೊಂಡು ಸಮರ್ಥವಾಗಿ ನೀರು ನಿರ್ವಹಣೆ ಮಾಡಿದರೆ, ಶೇ.40ರವರೆಗೆ ನೀರನ್ನು ಉಳಿಸಬಹುದು.

ಮುಂಜಾನೆ ಹಾಸಿಗೆಯಿಂದ ಎದ್ದು ರಾತ್ರಿ ಮಲಗುವವರೆಗೂ ನಮಗೆ ನೀರಿನ ಅವಶ್ಯಕತೆಯಿದೆ. ಅಂದಮೇಲೆ, ಅದರ ಸಂರಕ್ಷಣೆಯ ಹೊಣೆಯೂ ನಮ್ಮದೇ. ಆದ್ದರಿಂದ, ಎಲ್ಲೆಲ್ಲಿ ಸಾಧ್ಯವೋ ಅಲ್ಲೆಲ್ಲಾ ಅದನ್ನು ಉಳಿಸೋಣ. ಮಲಿನಗೊಳ್ಳದ ಹಾಗೆ ಜಲಮೂಲಗಳನ್ನು ಸಂರಕ್ಷಿಸೋಣ. ನೀರು ಭೂಮಿಯ ಪಾಲಿಗೆ ರಕ್ತವಿದ್ದಂತೆ. ಮನುಷ್ಯರಲ್ಲಿ ರಕ್ತವು ಮಲಿನಗೊಂಡರೆ ಅಥವಾ ರಕ್ತದ ಕೊರತೆಯಾದರೆ ಮನುಷ್ಯ ರೋಗಪೀಡಿತನಾಗುವುದಿಲ್ಲವೇ? ಹಾಗೆಯೇ ನೀರಿಗೂ ಭೂಮಿಗೂ 'ರಕ್ತಸಂಬಂಧ'ವಿದೆ ಎಂಬುದನ್ನು ಮರೆಯದಿರೋಣ!

**(ಲೇಖಕರು ಹವ್ಯಾಸಿ ಬರಹಗಾರರು)**

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:10, Issue: 67

## ಸಮಾಚಾರ ಸಣ್ಣದಲ್ಲ

### ನಕ್ಸಲರ ಶಿಬಿರದಿಂದ ನಗದು, ಸ್ಫೋಟಕ ವಶ

**ಗರಿಯಾಬಂದ್:** ಛತ್ತೀಸಗಢದ ಗರಿಯಾಬಂದ್ ಜಿಲ್ಲೆಯ ಮಾವೋವಾದಿಗಳ ಅಡಗುತಾಣದಿಂದ ಭದ್ರತಾ ಪಡೆಗಳು 8 ಲಕ್ಷ ರು. ನಗದು ಮತ್ತು ಸ್ಫೋಟಕಗಳನ್ನು ವಶಪಡಿಸಿಕೊಂಡಿವೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ಶುಕ್ರವಾರ ತಿಳಿಸಿದ್ದಾರೆ. ಮೈನ್‌ಪುರ ಪೊಲೀಸ್ ಠಾಣೆ ವ್ಯಾಪ್ತಿಯ ಪಂಡ್ರಿಪಾನಿ ಗ್ರಾಮದ ಬಳಿಯ ಅರಣ್ಯ ಪ್ರದೇಶದಲ್ಲಿ ಗುರುವಾರ ಈ ಹಣವನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಗರಿಯಾಬಂದ್ ಪೊಲೀಸ್ ವರಿಷ್ಠಾಧಿಕಾರಿ ನಿಖಿಲ್ ರಾಖೇಚಾ ತಿಳಿಸಿದ್ದಾರೆ. ಈ ಪ್ರದೇಶದಲ್ಲಿ ನಕ್ಸಲರ ಶಿಬಿರ ಇರುವ ಬಗ್ಗೆ ಲಭ್ಯವಾದ ಮಾಹಿತಿ ಆಧಾರದ ಮೇಲೆ ಪ್ರಾರಂಭಿಸಲಾದ ಕಾರ್ಯಾಚರಣೆಯಲ್ಲಿ ವಿಶೇಷ ಕಾರ್ಯಪಡೆ , ಕೇಂದ್ರೀಯ ಮೀಸಲು ಪೊಲೀಸ್ ಸಿಬ್ಬಂದಿ ಪಾಲ್ಗೊಂಡಿದ್ದರು ಎಂದು ಹೇಳಿದರು.

### ಭಾರತದಲ್ಲಿ ಸುಂಕ ಹೆಚ್ಚು: ಟ್ರಂಪ್

**ವಾಷಿಂಗ್ಟನ್:** ನಮಗೆ ಭಾರತದೊಂದಿಗೆ ಉತ್ತಮ ಬಾಂಧವ್ಯ ಇದೆ, ಆದರೆ ಆ ದೇಶದೊಂದಿಗೆ ಅವರಿಗೆ ಇರುವ ಏಕೈಕ ಸಮಸ್ಯೆ ಎಂದರೆ 'ವಿಶ್ವದ ಅತಿ ಹೆಚ್ಚು ಸುಂಕ ವಿಧಿಸುವ ರಾಷ್ಟ್ರವಾಗಿರುವುದು ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಹೇಳಿದ್ದಾರೆ. ಅಮೆರಿಕದ ವೆಬ್‌ಸೈಟ್ ನ್ಯೂಸ್‌ಗೆ ನೀಡಿದ ಸಂದರ್ಶನದಲ್ಲಿ, ಟ್ರಂಪ್ ಅವರು ಭಾರತದೊಂದಿಗಿನ ಅಮೆರಿಕದ ಸಂಬಂಧದ ಕುರಿತು ಮಾತನಾಡಿದ್ದಾರೆ ಪ್ರಧಾನಿ ಮೋದಿ ಜೊತೆಗಿನ ಇತ್ತೀಚಿನ ಭೇಟಿ ಉಲ್ಲೇಖಿಸಿ ಮಾತನಾಡಿರುವ ಅವರು, ಭಾರತ ಗಣನೀಯವಾಗಿ ಸುಂಕ ತಗ್ಗಿಸ ಲಿದೆ ಎಂದು ಭಾವಿಸುತ್ತೇನೆ. ಆದರೆ ಏಪ್ರಿಲ್ 2ರಿಂದ ಜಾರಿಗೆ ಬರುವಂತೆ ಭಾರತ ವಿಧಿಸುವಷ್ಟೇ ಸುಂಕ ವನ್ನು ನಾವೂ ವಿಧಿಸಲಿದ್ದೇವೆ ಎಂದು ತಿಳಿಸಿದರು.

### ಬೆಂಕಿ ಹಚ್ಚಿ ಪ್ರತೀಕಾರ ನಾಲ್ವರ ಸಜೀವ ದಹನ

**ಪುಣೆ:** ವೇತನ ಕಡಿತಗೊಳಿಸಿದ್ದಕ್ಕೆ ಅಸಮಾಧಾನಗೊಂಡಿದ್ದ ಚಾಲಕನೊಬ್ಬ ತಾನು ಕೆಲಸ ಮಾಡುತ್ತಿದ್ದ ಖಾಸಗಿ ಸಂಸ್ಥೆಯ ಮಿನಿಬಸ್‌ಗೆ ಬೆಂಕಿ ಹಚ್ಚಿ ನಾಲ್ವರು ಉದ್ಯೋಗಿಗಳನ್ನು ಕೊಂದಿರುವ ಘಟನೆ ಪುಣೆ ಬಳಿ ನಡೆದಿದೆ. ಬೆಂಕಿ ಆಕಸ್ಮಿಕವಲ್ಲ, ವಿಧ್ವಂಸಕ ಕೃತ್ಯ ಎಂದು ತನಿಖೆಯಿಂದ ತಿಳಿದುಬಂದಿದೆ. ಚಾಲಕ ಕೆಲ ಸಿಬ್ಬಂದಿಯೊಂದಿಗೆ ಜಗಳವಾಡಿ, ಕೃತ್ಯವೆಸಗಿದ್ದಾನೆ ಎಂದು ಪಿಂಪ್ರಿ ಚಿಂಚ್‌ವಾಡ್ ನ ಉಪ ಪೊಲೀಸ್ ಆಯುಕ್ತ ವಿಶಾಲ್ ಗಾಯಕ್‌ವಾಡ್ ತಿಳಿಸಿದ್ದಾರೆ. ಕೆಲವು ಉದ್ಯೋಗಿಗಳೊಂದಿಗೆ ಜಗಳ ಮಾಡಿಕೊಂಡಿದ್ದ ಚಾಲಕ ಜನಾರ್ಧನ್ ಹಂಬರ್ಡೇಕರ್, ಸಂಬಳ ಕಡಿತದ ಕಾರಣ ಸಂಸ್ಥೆಯ ವಿರುದ್ಧವೂ ಅಸಮಾಧಾನಗೊಂಡಿದ್ದ ಎನ್ನಲಾಗಿದೆ.

### ಎಎಪಿ ದೆಹಲಿ ಘಟಕ ಅಧ್ಯಕ್ಷರಾಗಿ ಸೌರಭ್

**ದೆಹಲಿ:** ಕಳೆದ ತಿಂಗಳು ನಡೆದ ದೆಹಲಿ ಚುನಾವಣೆಯಲ್ಲಿ ಸೋಲು ಕಂಡ ಆಮ್ ಆದ್ಮಿ ಪಕ್ಷ (ಎಎಪಿ) ಇದೀಗ ಪಕ್ಷ ಸಂಘಟನೆಗೆ ಒತ್ತು ನೀಡಲು ಮುಂದಾಗಿದ್ದು, ರಾಜ್ಯಗಳ ಉಸ್ತುವಾರಿ ಹೊಣೆಯನ್ನು ಹಲವು ನಾಯಕರಿಗೆ ಹಂಚಿದೆ. ಕ್ಷೇತ್ರ ಗೆಲ್ಲುವಲ್ಲಿ ವಿಫಲರಾದ ಎಎಪಿ ಪ್ರಮುಖ ನಾಯಕರಿಗೆ ಇದೀಗ ಪಕ್ಷದ ಬಲಗೊಳಿಸುವ ಹೊಸ ಜವಾಬ್ದಾರಿ ನೀಡುವ ಮೂಲಕ ಸಕ್ರಿಯರನ್ನಾಗಿಸಿದೆ. ದೆಹಲಿ ಘಟಕದ ನೂತನ ಅಧ್ಯಕ್ಷರಾಗಿ ಮಾಜಿ ಸಚಿವ ಸೌರಭ್ ಭಾರದ್ವಾಜ್ ನೇಮಕವಾಗಿದ್ದು, ಹಿರಿಯ ನಾಯಕ ಮನೀಶ್ ಸಿಡೋಡಿಯಾಗೆ ಪಂಜಾಬ್‌ನ ಉಸ್ತುವಾರಿ ನೀಡಲಾಗಿದೆ. ಗೋಪಾಲ್ ರಾಯ್ ಅವರನ್ನು ಹುದ್ದೆಯಿಂದ ಕೆಳಗಿಳಿಸಿ ಭಾರದ್ವಾಜ್‌ಗೆ ಸ್ಥಾನ ನೀಡಲಾಗಿದೆ. ಇನ್ನು ಇಡೀ ದೇಶದಲ್ಲಿ ಎಎಪಿ ಸರಕಾರ ಅಸ್ತಿತ್ವದಲ್ಲಿರುವ ಏಕೈಕ ರಾಜ್ಯವಾಗಿರುವ ಪಂಜಾಬ್ ರಾಜ್ಯದ ಎಎಪಿ ಉಸ್ತುವಾರಿ ಹೊಣೆಯನ್ನು ಸಿಸೋಡಿಯಾಗೆ ವಹಿಸಲಾಗಿದೆ. ಎಎಪಿ ಮುಖ್ಯಸ್ಥ ಅರವಿಂದ್ ಕೇಜ್ರಿವಾಲ್ ನಿವಾಸದಲ್ಲಿ ಸಾಗಿದ ಎಎಪಿಯ ರಾಜಕೀಯ ವಿಚಾರಗಳ ಸಮಿತಿ (ಪಿಎಸಿ)ಯಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದೆ.

1600 ವಿಮಾನಗಳ ಹಾರಾಟದಲ್ಲಿ ವ್ಯತ್ಯಯ, 24 ಗಂಟೆ ಹೀತ್ರೂ ಏರ್‌ಪೋರ್ಟ್ ಬಂದ್

# ಲಂಡನ್ ವಿಮಾನ ನಿಲ್ದಾಣದಲ್ಲಿ ಬೆಂಕಿ

**ಲಂಡನ್:** ಇಲ್ಲಿನ ಹೀತ್ರೂ ವಿಮಾನ ನಿಲ್ದಾಣದಲ್ಲಿ ಶುಕ್ರವಾರದಂದು ಬೆಂಕಿ ಆಕಸ್ಮಿಕ ಸಂಭವಿಸಿದ್ದು, ಆ ವಿಮಾನ ನಿಲ್ದಾಣದ ಮೂಲಕ ಪ್ರಯಾಣಿಸಬೇಕಿದ್ದ 24 ವಿಮಾನಗಳನ್ನು ಬೇರೆ ವಿಮಾನ ನಿಲ್ದಾಣದಿಂದ ಪ್ರಯಾಣ ಬೆಳೆಸಲು ಅನುವು ಮಾಡಿಕೊಡಲಾಗಿದೆ. ಆ ನಿಲ್ದಾಣಕ್ಕೆ ಬೇರೆಡೆಯಿಂದ ಬರಬೇಕಿದ್ದ ವಿಮಾನಗಳಿಗೆ ಬೇರೆ ವಿಮಾನ ನಿಲ್ದಾಣಗಳಲ್ಲಿ ಇಳಿಸುವಂತೆ ಸೂಚಿಸಲಾಗಿದೆ.

ದಿನಕ್ಕೆ ಸುಮಾರು 1,600 ವಿಮಾನಗಳು ಹೀತ್ರೂ ವಿಮಾನ ನಿಲ್ದಾಣದ ಮೂಲಕ ಓಡಾಡುತ್ತವೆ. ಇದೀಗ ಆ ವಿಮಾನ ನಿಲ್ದಾಣವನ್ನು 24 ಗಂಟೆಗಳವರೆಗೆ ಮುಚ್ಚಲ್ಪಟ್ಟಿರುವುದರಿಂದ 2.50 ಲಕ್ಷ ಜನರಿಗೆ ತೊಂದರೆಯಾಗಿದೆ ಎಂದು ಅಂದಾಜಿಸಲಾಗಿದೆ.

ಭಾರತೀಯ ಕಾಲಮಾನದ ಪ್ರಕಾರ, ಶುಕ್ರವಾರದಂದು ಬೆಳಗ್ಗೆ 5 ಗಂಟೆಗೆ ವಿಮಾನ ನಿಲ್ದಾಣದ ಸಬ್ ಪವರ್‌ಸ್ಟೇಷನ್‌ನಲ್ಲಿ ಬೆಂಕಿ ಕಾಣಿಸಿಕೊಂಡಿತು, ಕೂಡಲೇ ಏರ್‌ಪೋರ್ಟ್ ಸಿಬ್ಬಂದಿಯು ಅಗ್ನಿಶಾಮಕ ದಳಕ್ಕೆ ಹಾಗೂ ಪೊಲೀಸರಿಗೆ ಸುದ್ದಿ ಮುಟ್ಟಿಸಿದರು. ಸ್ಥಳಕ್ಕೆ ಆಗಮಿಸಿದ ಅಗ್ನಿಶಾಮಕ ದಳದ ಸಿಬ್ಬಂದಿ ಬೆಂಕಿ ಆರಿಸಲು ನಿರತರಾದರು. ವಿಮಾನ ನಿಲ್ದಾಣದ ಆಡಳಿತ ಮಂಡಳಿಯು ಬೆಳಗ್ಗೆ 7.30ರಿಂದ ವಿಮಾನ ನಿಲ್ದಾಣವನ್ನು ಮುಚ್ಚುವ ತೀರ್ಮಾನ ಕೈಗೊಂಡಿತು. ವಿಮಾನ ನಿಲ್ದಾಣದ ಸಬ್ ಪವರ್‌ಸ್ಟೇಷನ್‌ನಲ್ಲಿ ಕಾಣಿಸಿಕೊಂಡಿರುವ ಬೆಂಕಿಯಿಂದಾಗಿ, ಹೀತ್ರೂ ವಿಮಾನ ನಿಲ್ದಾಣವನ್ನು ಶುಕ್ರವಾರ ಬೆಳಗಿನ ಜಾವದವರೆಗೆ ಮುಚ್ಚಿದ ಕಾರಣಕ್ಕೆ ಅಲ್ಲಿಯವರೆಗೆ ಆ ವಿಮಾನ ನಿಲ್ದಾಣದಲ್ಲಿ ಯಾವುದೇ ವಿಮಾನಗಳ ಸಂಚಾರ ಇರಲಿಲ್ಲ.

**ಲಂಡನ್‌ನಲ್ಲೇ ನಿಂತ ಶಾಲಾ ಮಕ್ಕಳು:** ಹೀತ್ರೂ ವಿಮಾನ ನಿಲ್ದಾಣದಿಂದ ವಿಮಾನ ಸಂಚಾರ ರದ್ದಾಗಿರುವ ಹಿನ್ನೆಲೆಯಲ್ಲಿ ರಿಯೋನಾದಿಂದ ಬಂದಿದ್ದ ಶಾಲಾ ಮಕ್ಕಳ ತಂಡವೊಂದು ಲಂಡನ್‌ನಲ್ಲೇ ಉಳಿಯುವಂತಾಯಿತು. ಆ ಮಕ್ಕಳು ವಾರದ ಹಿಂದೆ ತಮ್ಮ ಶಿಕ್ಷಕರೊಡನೆ ಲಂಡನ್ ಹಾಗೂ ಇಟಲಿ ಪ್ರವಾಸ ಕೈಗೊಂಡಿದ್ದರು. ಆ ಪ್ರವಾಸ ಮುಗಿಸಿ ಹೀತ್ರೂ ವಿಮಾನ ನಿಲ್ದಾಣಕ್ಕೆ ಬಂದು ಅಲ್ಲಿಂದ ರಿಯೋನಾಕ್ಕೆ ಪ್ರಯಾಣಿಸಬೇಕಿತ್ತು. ಆದರೆ ಹೀತ್ರೂ ವಿಮಾನ ರದ್ದಾಗಿದ್ದು ಅವರಿಗೆ ಬದಲಿ ಸಂಚಾರ ವ್ಯವಸ್ಥೆ ಆಗದಿರುವುದರಿಂದ ಆ ಮಕ್ಕಳು ಲಂಡನ್‌ನಲ್ಲೇ ಉಳಿಯುವಂತಾಗಿದೆ.

### ಏರ್ ಇಂಡಿಯಾ: ಮೂರು ವಿಮಾನಗಳು ರದ್ದು

ಹೀತ್ರೂ ವಿಮಾನ ನಿಲ್ದಾಣದ ಸಬ್ ಪವರ್‌ಸ್ಟೇಷನ್ ನಲ್ಲಿ ಬೆಂಕಿ ಕಾಣಿಸಿಕೊಂಡ ಹಿನ್ನೆಲೆಯಲ್ಲಿ ಹಾಗೂ ಅದರ ಬೆನ್ನಲ್ಲೇ ವಿಮಾನ ನಿಲ್ದಾಣದ ಕಾರ್ಯಾಚರಣೆಯನ್ನು 24 ಗಂಟೆಗಳ ಕಾಲ ಬಂದ್ ಮಾಡಿರುವ ಹಿನ್ನೆಲೆಯಲ್ಲಿ ಆ ವಿಮಾನ ನಿಲ್ದಾಣಕ್ಕೆ ಮಾ. 21ರಂದು ಪ್ರಯಾಣ ಬೆಳೆಸಬೇಕಿದ್ದ ತನ್ನ ಮೂರು ವಿಮಾನಗಳನ್ನು ಏರ್ ಇಂಡಿಯಾ ಸಂಸ್ಥೆ ರದ್ದುಗೊಳಿಸಿದೆ. ಎಐ129 ಸಂಖ್ಯೆಯ ವಿಮಾನ ಮುಂಬೈನಿಂದ ಹೊರಟು ಮಾ. 21ರಂದು ಹೀತ್ರೂ ವಿಮಾನ ನಿಲ್ದಾಣದಲ್ಲಿ ಇಳಿಯಬೇಕಾಗಿದ್ದು, ಆ ವಿಮಾನ ರದ್ದಾಗಿದೆ. ಎಐ161 ವಿಮಾನವು ದೆಹಲಿಯಿಂದ ಹೀತ್ರೂಗೆ ಹೋಗಬೇಕಿದ್ದು, ಅದು ಹೀತ್ರೂ ವಿಮಾನ ನಿಲ್ದಾಣದಲ್ಲಿ ಇಳಿಯುವುದನ್ನು ರದ್ದುಗೊಳಿಸಿ ಅದನ್ನು ಫ್ರಾಂಕ್‌ಫರ್ಟ್‌ನಲ್ಲಿ ಇಳಿಸಲು ನಿರ್ಧರಿಸಲಾಯಿತು. ಮಾ. 21ರಂದು ಬೆಳಗ್ಗೆ ಹೀತ್ರೂ ವಿಮಾನ ನಿಲ್ದಾಣಕ್ಕೆ ತಲುಪಬೇಕಿದ್ದ ಬೇರೊಂದು ವಿಮಾನವನ್ನು ಏರ್ ಇಂಡಿಯಾ ರದ್ದುಗೊಳಿಸಿದೆ. ಅಷ್ಟೇ ಅಲ್ಲದೆ, ಆ ನಿಲ್ದಾಣದಿಂದ ಭಾರತದ ಕಡೆಗೆ ಹಾಗೂ ವಿಶ್ವದ ಇತರ ನಗರಗಳ ಕಡೆಗೆ ಹೋಗಬೇಕಿದ್ದ ವಿಮಾನಗಳ ಸಂಚಾರ ವನ್ನೂ ಸಹ ಏರ್ ಇಂಡಿಯಾ ರದ್ದುಗೊಳಿಸಿದೆ.

## ಚಾರ್‌ಧಾಮ್: ನೋಂದಣಿ ದಾಖಲೆ

**ಡೆಹ್ರಾಡೂನ್(ಉತ್ತರಾಖಂಡ):** ಪವಿತ್ರ ಚಾರ್‌ಧಾಮ್ ಯಾತ್ರೆಗೆ ಆನ್‌ಲೈನ್ ನೋಂದಣಿ ಆರಂಭವಾಗಿದ್ದು, ಒಂದೇ ದಿನ ದಾಖಲೆ ಮಟ್ಟದ ನೋಂದಣಿ ನಡೆದಿದೆ. ಉತ್ತರಾಖಂಡದ ಯಮುನೋತ್ರಿ, ಗಂಗೋತ್ರಿ, ಕೇದಾರನಾಥ ಹಾಗೂ ಬದರಿನಾಥಗಳನ್ನು ಒಟ್ಟಾಗಿ ಚಾರ್ ಧಾಮ್ ಯಾತ್ರೆ ಎಂದು ಕರೆಯಲಾಗುತ್ತದೆ. ಹಿಂದೂಗಳ ಪವಿತ್ರ ಯಾತ್ರೆಗಳಲ್ಲಿ ಇದು ಪ್ರಮುಖವಾಗಿದೆ.

ವರ್ಷದಲ್ಲಿ ಎರಡು ಬಾರಿ ಮಾತ್ರ ಈ ಯಾತ್ರೆಯನ್ನು ನಡೆಸಲಾಗುತ್ತದೆ. ಈ ಬಾರಿಯ ಬೇಸಿಗೆಯ ಯಾತ್ರೆ ಏಪ್ರಿಲ್ 30ರಿಂದ ಪ್ರಾರಂಭವಾಗಲಿದ್ದು, ಮಾರ್ಚ್ 20ರಿಂದ ಆನ್‌ಲೈನ್ ನೋಂದಣಿ ನಡೆಯುತ್ತಿದೆ. ಮೊದಲ ದಿನವೇ 1,65,292 ಭಕ್ತರು ಹೆಸರು ನೋಂದಾಯಿಸುವ ಮೂಲಕ ಕಳೆದ ವರ್ಷದ ದಾಖಲೆ ಮುರಿದಿದ್ದಾರೆ. ಬೆಳಗ್ಗೆ 7ರಿಂದ ಸಂಜೆ 5ರವರೆಗೆ ನೋಂದಣಿ ನಡೆಯುತ್ತಿದೆ. ಕಳೆದ ವರ್ಷ ಮೊದಲ ದಿನ 1.50 ಲಕ್ಷ ನೋಂದಣಿಯಾಗಿತ್ತು. ನಾಲ್ಕು ಧಾಮದಲ್ಲಿ ಅತಿ ಹೆಚ್ಚು ಭಕ್ತರು ಕೇದಾರ್‌ನಾಥ್‌ಗೆ ನೋಂದಣಿ ಮಾಡಿದ್ದಾರೆ. 1,63,125 ಭಕ್ತರು ವೆಬ್ ಪೋರ್ಟಲ್ ಮೂಲಕ ನೋಂದಣಿ ಮಾಡಿದ್ದಾರೆ. ಮೊಬೈಲ್ ಆ್ಯಪ್ ಮೂಲಕ 3,167 ಮಂದಿ ನೋಂದಣಿ ಮಾಡಿದ್ದಾರೆ. ಭಕ್ತರು ತಮ್ಮ ವಾಹನದ ನೋಂದಣಿ ನಡೆಸುವುದು ಕಡ್ಡಾಯವಾಗಿದ್ದು, 1,750 ಖಾಸಗಿ ವಾಹನಗಳನ್ನು ನೋಂದಾಯಿಸಲಾಗಿದೆ. ನೋಂದಣಿ ಪ್ರಕ್ರಿಯೆ ಸುಲಭಗೊಳಿಸಲು ಇದೇ ಮೊದಲ ಬಾರಿಗೆ ಆಧಾರ್ ಆಧಾರಿತ ದೃಢೀಕರಣವನ್ನು ಪರಿಚಯಿಸಲಾಗಿದೆ.

ದೇಶದ ಪಾಲಿಗೆ ಇದು ಹೆಮ್ಮೆಯ ಕ್ಷಣ ಎಂದ ಮೋದಿ

# ಸಾವಿರ ಮೆಟ್ರಿಕ್ ಟನ್ ದಾಟಿದ ದೇಶದ ಕಲ್ಲಿದ್ದಲು ಉತ್ಪಾದನೆ

**ದೆಹಲಿ:** ಭಾರತವು ಪ್ರಸ್ತುತ ಆರ್ಥಿಕ ವರ್ಷದಲ್ಲಿ ಶತ ಕೋಟಿ ಟನ್ ಕಲ್ಲಿದ್ದಲು ಉತ್ಪಾದನೆಯನ್ನು ದಾಟಿದ್ದು, ನಿಜಕ್ಕೂ ಹೆಮ್ಮೆಯ ಕ್ಷಣ ಎಂದು ಪ್ರಧಾನಿ ಮೋದಿ ತಿಳಿಸಿದ್ದಾರೆ.

ಈ ಸಂಬಂಧ ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಪೋಸ್ಟ್ ಹಂಚಿಕೊಂಡಿರುವ ಅವರು, ಶತಕೋಟಿ ಟನ್ ಕಲ್ಲಿದ್ದಲು ಉತ್ಪಾದನೆಯ ಮಹತ್ವದ ಮೈಲಿಗಲ್ಲನ್ನು ದಾಟಿರುವುದು ಇಂಧನ ಕ್ಷೇತ್ರದಲ್ಲಿ ನಾವು ಹೊಂದಿರುವ ಬದ್ಧತೆಯನ್ನು ತೋರಿಸುತ್ತದೆ, ಈ ಮೂಲಕ ಆರ್ಥಿಕ ಅಭಿವೃದ್ಧಿ ಜತೆಗೆ ಸ್ವಾವಲಂಬನೆಯ ಭಾರತ ನಿರ್ಮಾಣದ ಮಹತ್ವಾಕಾಂಕ್ಷೆಯ ಪ್ರತೀಕವಾಗಿದೆ ಎಂದು ಹೇಳಿದ್ದಾರೆ. ಈ ಸಾಧನೆಯ ಮೂಲಕ ಭಾರತವು ಎಲ್ಲಾ ಕ್ಷೇತ್ರಗಳಲ್ಲಿ ಪ್ರಗತಿ ಸಾಧಿಸಲು ಅವಿರತವಾಗಿ ಶ್ರಮಿಸುತ್ತದೆ. ಈ ನಿಟ್ಟಿನಲ್ಲಿ ತನ್ನ ಬದ್ಧತೆಯನ್ನು ಪ್ರದರ್ಶಿಸುತ್ತದೆ ಎಂದು ಮೋದಿ ಸಾಮಾಜಿಕ ಜಾಲತಾಣದಲ್ಲಿ ಹೆಮ್ಮೆ ಪಟ್ಟಿದ್ದಾರೆ. ಚೀನಾ 4,362 ಮೆಟ್ರಿಕ್ ಟನ್‌ಗಳೊಂದಿಗೆ ಅಗ್ರಗಣ್ಯ ಕಲ್ಲಿದ್ದಲು ಉತ್ಪಾದಕ ದೇಶವಾಗಿದೆ. ಭಾರತ ಎರಡನೇ ಸ್ಥಾನದಲ್ಲಿದ್ದರೆ, ಅಮೆರಿಕ 781 ಮೆಟ್ರಿಕ್ ಟನ್ ಕಲ್ಲಿದ್ದಲು ಉತ್ಪಾದಿಸುತ್ತದೆ. ಇಂಡೋನೇಷ್ಯಾ ಮತ್ತು ಆಸ್ಟ್ರೇಲಿಯಾ ದೇಶಗಳು ಟಾಪ್ ಐದರಲ್ಲಿರುವ ಇತರ ಎರಡು ದೇಶಗಳಾಗಿವೆ. ಭಾರತ 1,000 ಮೆಟ್ರಿಕ್ ಟನ್ ಅಥವಾ ಒಂದು ಬಿಲಿಯನ್ ಟನ್ ಕಲ್ಲಿದ್ದಲು ಉತ್ಪಾದನೆಯ ಮೈಲಿಗಲ್ಲು ಮುಟ್ಟಿದ ಸಂಗತಿಯನ್ನು ಕೇಂದ್ರ ಕಲ್ಲಿದ್ದಲು ಮತ್ತು ಗಣಿಗಳ ಸಚಿವ ಜಿ. ಕಿಶನ್ ರೆಡ್ಡಿ ತಮ್ಮ ಎಕ್ಸ್‌ನಲ್ಲಿ ಪ್ರಕಟಿಸಿದ್ದಾರೆ. ನರೇಂದ್ರ ಮೋದಿ ನೇತೃತ್ವದಲ್ಲಿ ಭಾರತವು ಜಾಗತಿಕ ವಿದ್ಯುತ್ ಕ್ಷೇತ್ರದಲ್ಲಿ ಮುಂಚೂಣಿಗೆ ಬರುತ್ತಿದೆ ಎಂದು ಹೇಳಿದ್ದಾರೆ. ಸಚಿವರು ಕಲ್ಲಿದ್ದಲು ವಲಯದ ಕಾರ್ಮಿಕರಿಗೂ ಈ ಸಂದರ್ಭದಲ್ಲಿ ಅಭಿನಂದನೆ ಹೇಳಿದ್ದಾರೆ.

### ಶೇ. 75ರಷ್ಟು ವಿದ್ಯುತ್‌ಗೆ ಕಲ್ಲಿದ್ದಲು ಶಕ್ತಿ

ಭಾರತದಲ್ಲಿ ವಿದ್ಯುತ್ ಬೇಡಿಕೆ ಪೂರೈಸಲು ವಿವಿಧ ಶಕ್ತಿ ಮೂಲಗಳನ್ನು ಬಳಸಲಾಗುತ್ತಿದೆ. ಜಲವಿದ್ಯುತ್, ಸೌರಶಕ್ತಿ, ವಾಯುಶಕ್ತಿಯ ಬಳಕೆ ಇದ್ದರೂ ಕಲ್ಲಿದ್ದಲು ಆಧಾರಿತ ವಿದ್ಯುತ್ ಉತ್ಪಾದನೆ ಈಗಲೂ ಪ್ರಮುಖ ಶಕ್ತಿ ಮೂಲವಾಗಿದೆ. ಭಾರತದಲ್ಲಿ ಜಾರ್ಖಂಡ್‌ನಲ್ಲಿ ಅತಿಹೆಚ್ಚು ಕಲ್ಲಿದ್ದಲು ಗಣಿಗಾರಿಕೆ ನಡೆಯುತ್ತದೆ. ಒಡಿಶಾ, ಛತ್ತೀಸ್‌ಗಢ್, ಮಧ್ಯಪ್ರದೇಶ, ಮಹಾರಾಷ್ಟ್ರ, ಪಶ್ಚಿಮ ಬಂಗಾಳ ರಾಜ್ಯಗಳಲ್ಲೂ ಕಲ್ಲಿದ್ದಲು ನಿಕ್ಷೇಪಗಳಿವೆ. ದಕ್ಷಿಣ ಭಾರತದಲ್ಲಿ ತೆಲಂಗಾಣ ರಾಜ್ಯದಲ್ಲಿ ಮಾತ್ರವೇ ಕಲ್ಲಿದ್ದಲು ಗಣಿಗಾರಿಕೆ ನಡೆಯುತ್ತಿದೆ.

## ರೇಪ್: ಹೈಕೋರ್ಟ್ ವ್ಯಾಖ್ಯಾನಕ್ಕೆ ಆಕ್ಷೇಪ

**ದೆಹಲಿ:** ಸ್ತನಗಳನ್ನು ಹಿಡಿಯುವುದು ಅಥವಾ ಪ್ಯಾಂಟ್ ಎಳೆಯುವಂತಹ ಕೃತ್ಯಗಳು ಅತ್ಯಾಚಾರ ಅಥವಾ ಅತ್ಯಾಚಾರದ ಪ್ರಯತ್ನವಲ್ಲ, ಬದಲಿಗೆ ತೀವ್ರ ಲೈಂಗಿಕ ದೌರ್ಜನ್ಯದ ಕಡಿಮೆ ಆರೋಪದ ಅಡಿಯಲ್ಲಿ ಬರುತ್ತವೆ ಎಂಬ ಅಲಹಾಬಾದ್ ಹೈಕೋರ್ಟ್ ತೀರ್ಪಿನ ಬಗ್ಗೆ ಕೇಂದ್ರ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಅನ್ನಪೂರ್ಣಾದೇವಿ ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಅಲಹಾಬಾದ್ ಹೈಕೋರ್ಟ್ ನೀಡಿರುವ ತೀರ್ಪಿನಲ್ಲಿ ಸುಪ್ರೀಂ ಕೋರ್ಟ್ ಮಧ್ಯಪ್ರವೇಶಿಸಬೇಕು ಎಂದು ಕೇಂದ್ರ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಆಗ್ರಹಿಸಿದ್ದಾರೆ. ಲೋಕಸಭೆಯ ಹೊರಗೆ ಸುದ್ದಿಗಾರರೊಂದಿಗೆ ಮಾತನಾಡಿದ ಅನ್ನಪೂರ್ಣಾ ದೇವಿ, ತೀರ್ಪಿನೊಂದಿಗೆ ಸಂಪೂರ್ಣವಾಗಿ ಭಿನ್ನಾಭಿಪ್ರಾಯ ಹೊಂದಿದ್ದೇನೆ ಮತ್ತು ಸುಪ್ರೀಂ ಕೋರ್ಟ್ ಈ ವಿಷಯವನ್ನು ಗಮನದಲ್ಲಿಟ್ಟುಕೊಳ್ಳಬೇಕೆಂದು ನ್ಯಾಯಾಲಯಕ್ಕೆ ಮನವಿ ಮಾಡಿದ್ದಾರೆ. ನಾನು ಈ ನಿರ್ಧಾರವನ್ನು ಸಂಪೂರ್ಣವಾಗಿ ವಿರೋಧಿಸುತ್ತೇನೆ ಮತ್ತು ಸುಪ್ರೀಂ ಕೋರ್ಟ್ ಇದನ್ನು ಗಂಭೀರವಾಗಿ ಗಮನಿಸಬೇಕು. ಅಂತಹ ತೀರ್ಪುಗಳಿಗೆ ನಾಗರಿಕ ಸಮಾಜದಲ್ಲಿ ಯಾವುದೇ ಸ್ಥಾನವಿಲ್ಲ ಎಂದು ಅವರು ತಿಳಿಸಿದರು. ತೀರ್ಪಿನ ವ್ಯಾಪಕ ಪರಿಣಾಮಗಳ ಬಗ್ಗೆಯೂ ಸಚಿವರು ಕಳವಳ ವ್ಯಕ್ತಪಡಿಸಿದ್ದು ಇದು ಸಮಾಜಕ್ಕೆ ತಪ್ಪು ಸಂದೇಶ ವನ್ನು ಕಳುಹಿಸಬಹುದು ಎಂದು ಎಚ್ಚರಿಸಿದರು. ಇದು ಸಮಾಜದ ಮೇಲೆ ಇಂತಹ ತೀರ್ಪುಗಳು ನಕಾರಾತ್ಮಕ ಪರಿಣಾಮ ಬೀರುತ್ತದೆ ಮತ್ತು ನಾವು ಈ ವಿಷಯವನ್ನು ಮತ್ತಷ್ಟು ಚರ್ಚಿಸುತ್ತೇವೆ ಎಂದು ಅವರು ಹೇಳಿದರು.

## ಜಡ್ಜ್ ಮನೆ ಬೆಂಕಿ ಶಮನದ ವೇಳೆ 15 ಕೋಟಿ ನಗದು ಪತ್ತೆ

**ದೆಹಲಿ:** ದೆಹಲಿ ಹೈಕೋರ್ಟ್ ನ್ಯಾಯಮೂರ್ತಿ ಯಶವಂತ್ ವರ್ಮಾ ಅವರ ಮನೆಯಲ್ಲಿ ಸುಮಾರು 15 ಕೋಟಿ ರು. ನಗದು ಹಣ ಪತ್ತೆಯಾದ ಬೆನ್ನಿಗೇ ಅವರನ್ನು ಸುಪ್ರೀಂ ಕೋರ್ಟ್ ಕೊಲಿಜಿಯಂ ಸಲಹೆ ಮೇರೆಗೆ ಅವರನ್ನು ಅಲಹಾಬಾದ್ ಹೈಕೋರ್ಟ್‌ಗೆ ವರ್ಗಾವಣೆ ಮಾಡಲಾಗಿದೆ.

ಮಾರ್ಚ್ 14 ರಂದು ಶರ್ಮಾ ಮನೆಯಲ್ಲಿ ಇಲ್ಲದಿದ್ದಾಗ ಅವರ ಅಧಿಕೃತ ನಿವಾಸದಲ್ಲಿ ಬೆಂಕಿ ಕಾಣಿಸಿಕೊಂಡಿತ್ತು. ಕುಟುಂಬ ಸದಸ್ಯರು ಅಗ್ನಿಶಾಮಕ ದಳ ಮತ್ತು ಪೊಲೀಸರಿಗೆ ಮಾಹಿತಿ ನೀಡಿದ್ದರು. ಬೆಂಕಿಯನ್ನು ನಂದಿಸಿದ ನಂತರ, ಅಗ್ನಿಶಾಮಕ ದಳದ ಸಿಬ್ಬಂದಿ ಬಂಗಲೆಯ ವಿವಿಧ ಕೊಠಡಿಗಳಲ್ಲಿ ಅಪಾರ ಪ್ರಮಾಣದ ನಗದು ಹಣವನ್ನು ಪತ್ತೆ ಮಾಡಿ ದ್ದಾರೆ. ಇದರ ಬೆನ್ನಲ್ಲೇ ಅವರನ್ನು ವರ್ಗಾವಣೆ ಮಾಡಲಾಗಿದೆ. ಆದರೆ ನ್ಯಾಯಮೂರ್ತಿ ಯಶವಂತ್ ವರ್ಮಾ ವರ್ಗಾವಣೆಗೂ ಅವರ ನಿವಾಸದಲ್ಲಿ ಇತ್ತೀಚೆಗೆ ಭಾರಿ ಪ್ರಮಾಣದ ನಗದು ಪತ್ತೆಯಾಗಿರುವುದಕ್ಕೂ ಯಾವುದೇ ಸಂಬಂಧವಿಲ್ಲ ಎಂದು

ಸುಪ್ರೀಂ ಕೋರ್ಟ್ ಶುಕ್ರವಾರ ಸ್ಪಷ್ಟಪಡಿಸಿದೆ. ಅವರ ಮೇಲಿನ ಆರೋಪಗಳ ಸಂಬಂಧ ದೆಹಲಿ ಹೈಕೋರ್ಟ್ ನ ಮುಖ್ಯ ನ್ಯಾಯಮೂರ್ತಿಗಳು ಆಂತರಿಕ ವಿಚಾರಣಾ ಪ್ರಕ್ರಿಯೆಯನ್ನು ಪ್ರಾರಂಭಿಸಿ ದ್ದಾರೆ ಎಂದು ಸುಪ್ರೀಂ ಕೋರ್ಟ್ ತಿಳಿಸಿದೆ. ಇದೇ ವೇಳೆ 15 ಕೋಟಿ ನಗದು ಪತ್ತೆಯಾದ ಬೆನ್ನಲ್ಲೇ ಯಶವಂತ್ ವರ್ಮಾ ಅವರನ್ನು ದೆಹಲಿ ಹೈಕೋರ್ಟ್ ನಿಂದ ಅಲಹಾಬಾದ್ ಹೈಕೋರ್ಟ್‌ಗೆ ವರ್ಗಾವಣೆ ಮಾಡಿದ್ದಕ್ಕೆ ಅಲಹಾಬಾದ್ ಹೈಕೋರ್ಟ್ ಬಾರ್ ಅಸೋಸಿಯೇಷನ್ ತೀವ್ರ ಅಸಮಾಧಾನ ವ್ಯಕ್ತಪಡಿಸಿದೆ. ನಾವು ಕಸದ ಬುಟ್ಟಿಯಲ್ಲ ಮತ್ತು ಯಾವುದೇ ಸಂದರ್ಭದಲ್ಲೂ ಭ್ರಷ್ಟಾಚಾರವನ್ನು ಸಹಿಸುವುದಿಲ್ಲ ಎಂದು ಸಂಘವು ಭಾರತದ ಮುಖ್ಯ ನ್ಯಾಯಮೂರ್ತಿ ಸಂಜೀವ್ ಖನ್ನಾ ಅವರಿಗೆ ಪತ್ರ ಬರೆದಿದೆ. ಶರ್ಮಾ ಅಲಹಾಬಾದ್ ಹೈಕೋರ್ಟ್ ಈ ಹಿಂದೆ ಅಕ್ಟೋಬರ್ 2021ರ ವರೆಗೆ ಸೇವೆ ಸಲ್ಲಿಸಿದ್ದರು.

## ಭಯೋತ್ಪಾದಕ ಘಟನೆ ಇಳಿಮುಖ: ಅಮಿತ್ ಶಾ

**ದೆಹಲಿ:** ಪ್ರಧಾನಿ ನರೇಂದ್ರ ಮೋದಿ ಭಯೋತ್ಪಾದನೆ ಮತ್ತು ಅಪರಾಧಗಳ ಬಗ್ಗೆ ಶೂನ್ಯ ಸಹಿಷ್ಣುತೆ ನೀತಿಯನ್ನು ತಂದಿದ್ದಾರೆ. ಕಳೆದ ಕೆಲವು ವರ್ಷಗಳಲ್ಲಿ ಬಿಜೆಪಿ ನೇತೃತ್ವದ ಕೇಂದ್ರ ಸರಕಾರದಲ್ಲಿ



ಭಯೋತ್ಪಾದಕ ಘಟನೆಗಳು ಗಮನಾರ್ಹ ಇಳಿಕೆ ದರವನ್ನು ಕಂಡಿವೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಶುಕ್ರವಾರ ರಾಜ್ಯಸಭೆಗೆ ತಿಳಿಸಿದರು. 'ಸಂವಿಧಾನವು ಕಾನೂನು ಮತ್ತು ಸುವ್ಯವಸ್ಥೆಯ ಜವಾಬ್ದಾರಿಯನ್ನು ರಾಜ್ಯಗಳಿಗೆ ನೀಡಿದೆ. ಗಡಿ ಭದ್ರತೆ ಮತ್ತು ಆಂತರಿಕ ಭದ್ರತೆ ಗೃಹ ಸಚಿವಾಲಯದ ಅಡಿಯಲ್ಲಿ ಬರುತ್ತದೆ. ಇದರಲ್ಲಿ ಯಾವುದೇ ಬದಲಾವಣೆಗಳನ್ನು ಮಾಡುವ ಅಗತ್ಯವಿಲ್ಲ. ಆದರೆ ಕಾನೂನು ಮತ್ತು ಸುವ್ಯವಸ್ಥೆಯನ್ನು ರಾಜ್ಯಗಳು ನೋಡಿಕೊಳ್ಳುವಾಗ, 76 ವರ್ಷಗಳ ನಂತರ ಹಲವಾರು ರೀತಿಯ ಅಪರಾಧಗಳು ರಾಜ್ಯ ಗಡಿಗಳಿಗೆ ಸೀಮಿತವಾ ಗಿರದೆ, ದೇಶದ ಹೊರಗಿನಿಂದಲೂ ಹಲವಾರು ಅಪರಾಧಗಳು ನಡೆಯುತ್ತವೆ. ಆದ್ದರಿಂದ ಇದನ್ನೆಲ್ಲಾ ಗಮನದಲ್ಲಿಟ್ಟುಕೊಂಡು ಗೃಹ ಸಚಿವಾಲಯದಲ್ಲಿ ಬದಲಾವಣೆಗಳನ್ನು ಮಾಡುವುದು ಅತ್ಯಗತ್ಯವಾಗುತ್ತದೆ. 10 ವರ್ಷಗಳಲ್ಲಿ ಪ್ರಧಾನಿ ಮೋದಿ ರಾಷ್ಟ್ರೀಯ ಭದ್ರತೆಯನ್ನು ಖಚಿತಪಡಿಸಿಕೊಳ್ಳಲು ಗೃಹ ಸಚಿವಾಲಯಕ್ಕೆ ದೀರ್ಘಕಾಲದಿಂದ ಬಾಕಿ ಉಳಿದಿರುವ ಬದಲಾವಣೆಗಳನ್ನು ಮಾಡಿದ್ದಾರೆ ಎಂದು ಹೇಳಿದರು.

## ಪಾಕ್: ಮತ್ತೆ ರಕ್ತಪಾತ 10 ಬಲೂಚಿಗಳ ಹತ್ಯೆ

**ಇಸ್ಲಾಮಾಬಾದ್:** ಪಾಕಿಸ್ತಾನದ ಖೈಬರ್ ಫಖ್ತುಂಖ್ವಾದಲ್ಲಿ ನಡೆದ ಎನ್‌ಕೌಂಟರ್‌ನಲ್ಲಿ ಪಾಕಿಸ್ತಾನದ ಸೇನಾ ನಾಯಕ ಹಸ್ನೈನ್ ಅಖ್ತರ್ ಸಾವನ್ನಪ್ಪಿದ್ದು, 10 ಬಲೂಚಿಗಳು ಕೂಡ ಹತರಾಗಿದ್ದಾರೆ ಎಂದು ಪಾಕಿಸ್ತಾನ ಸೇನೆ ಹೇಳಿದೆ. ಗುಪ್ತಚರ ಮಾಹಿತಿಯ ಆಧಾರದ ಮೇಲೆ ದಕ್ಷಿಣ ವಜೀರಿಸ್ತಾನದ ಗಡಿಯಲ್ಲಿರುವ ಡೇರಾ ಇಸ್ಮಾಯಿಲ್ ಖಾನ್ ಜಿಲ್ಲೆಯ ಕರ್ರಿ ಮಲಾಂಗ್ ಪ್ರದೇಶದಲ್ಲಿ ಈ ಕಾರ್ಯಾಚರಣೆ ನಡೆಸಲಾಗಿದೆ ಎಂದು ಹೇಳಲಾಗುತ್ತಿದೆ. ಪಾಕಿಸ್ತಾನ ಸೇನೆಯ ಪ್ರಕಾರ, ಕಾರ್ಯಾಚರಣೆಯಲ್ಲಿ ಇನ್ನೂ ಮೂವರು ಸೈನಿಕರು ಗಾಯಗೊಂಡಿದ್ದಾರೆ. ಪಾಕಿಸ್ತಾನ ಸರಣಿ ಭಯೋತ್ಪಾದಕ ದಾಳಿ ಎದುರಿಸುತ್ತಿದೆ. ಇತ್ತೀಚೆಗೆ ಪಾಕಿಸ್ತಾನದ ಕ್ವೆಟ್ಟಾದಲ್ಲಿ ನಡೆದ ರೈಲು ಅಪಹರಣ ಘಟನೆಯು ಕೋಲಾಹಲವನ್ನು ಸೃಷ್ಟಿಸಿತ್ತು. ಇದರಲ್ಲಿ ಬಲೂಚಿಸ್ತಾನ್ ಲಿಬರೇಶನ್ ಆರ್ಮಿ (ಬಿಎಲ್‌ಎ) 400ಕ್ಕೂ ಹೆಚ್ಚು ಪಾಕಿಸ್ತಾನಿ ಪ್ರಯಾಣಿಕರು ಸೇರಿದಂತೆ ಇಡೀ ರೈಲನ್ನು ಅಪಹರಿಸಿತ್ತು. ಘಟನೆಯ ಬಗ್ಗೆ ಬಿಎಲ್‌ಎ ಮತ್ತು ಪಾಕಿಸ್ತಾನ ಸೇನೆಯಿಂದ ವಿಭಿನ್ನ ಹೇಳಿಕೆಗಳು ಬಂದಿದ್ದವು. ಪಾಕಿಸ್ತಾನ ಸೇನೆ ಯು 33 ಭಯೋತ್ಪಾದಕರನ್ನು ಕೊಂದು ಬಹುತೇಕ ಎಲ್ಲಾ ಒತ್ತೆ ಯಾಳುಗಳನ್ನು ರಕ್ಷಿಸಿದೆ ಎಂದು ಹೇಳಿತ್ತು. ಕೆಲವೇ ಒತ್ತೆಯಾ ಳುಗಳು ಮಾತ್ರ ಕೊಲ್ಲಲ್ಪಟ್ಟರು. 214 ಒತ್ತೆಯಾಳುಗಳೊಂದಿಗೆ ಹಲವಾರು ಪಾಕಿಸ್ತಾನಿ ಸೈನಿಕರನ್ನು ಕೊಂದಿರುವುದಾಗಿ ಬಿಎಲ್‌ಎ ಹೇಳಿಕೊಂಡಿದೆ.

## ರಶೀದ್ ಎಂಜಿನಿಯರ್ ಜಾಮೀನು ವಜಾ

**ದೆಹಲಿ:** ಭಯೋತ್ಪಾದನೆಗೆ ಹಣಕಾಸು ನೆರವು ನೀಡಿದ ಪ್ರಕರಣದಲ್ಲಿ ಜಮ್ಮು ಮತ್ತು ಕಾಶ್ಮೀರದ ಬಾರಾಮುಲ್ಲಾದ ಲೋಕಸಭಾ ಸಂಸದ ಎಂಜಿನಿಯರ್ ರಶೀದ್ ಸಲ್ಲಿಸಿದ್ದ ಜಾಮೀನು ಅರ್ಜಿ

ಯನ್ನು ದೆಹಲಿ ನ್ಯಾಯಾಲಯ ಶುಕ್ರವಾರ ವಜಾಗೊಳಿಸಿದೆ ಎಂದು ಹೆಚ್ಚುವರಿ ಸೆಷನ್ಸ್ ನ್ಯಾಯಾಧೀಶ ಚಂದರ್ ಜಿತ್ ಸಿಂಗ್ ಅವರು ಮಾಧ್ಯಮಗಳಿಗೆ ತಿಳಿಸಿದ್ದಾರೆ. ಎಂಜಿನಿಯರ್ ರಶೀದ್ ಎಂದೇ ಜನಪ್ರಿಯನಾಗಿ ಕರೆಯಲ್ಪಡುವ ರಶೀದ್, 2017ರ ಭಯೋತ್ಪಾದನೆಗೆ ಹಣಕಾಸು ನೆರವು ಪ್ರಕರಣದಲ್ಲಿ 2019ರಿಂದ ತಿಹಾರ್ ಜೈಲಿನಲ್ಲಿದ್ದಾನೆ. 2017ರಲ್ಲಿ ಭಯೋತ್ಪಾದಕ ಸಂಘಟನೆಗಳಿಗೆ ಹಣಕಾಸಿನ ನೆರವು ನೀಡಿದ ಆರೋಪದ ಮೇಲೆ ಎನ್‌ಐಎ ಶೇಖ್ ಅಬ್ದುಲ್ ರಶೀದ್ ವಿರುದ್ಧ ಯುಎಪಿಎ ಕಾಯಿದೆ ಅಡಿ ಪ್ರಕರಣ ದಾಖಲಿಸಿತ್ತು. 2019ರಲ್ಲಿ ಎನ್‌ಐಎ ಆತನನ್ನು ಬಂಧಿಸಿತ್ತು. ಜನವರಿ 22ರಂದು, ರಶೀದ್ ತನ್ನ ಜಾಮೀನು ಅರ್ಜಿಯ ತೀರ್ಪು ಕೋರಿ ದೆಹಲಿ ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದ್ದ. 2024ರ ಲೋಕಸಭೆ ಚುನಾವಣೆಯಲ್ಲಿ ಸ್ವತಂತ್ರ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದ ರಶೀದ್ ಪ್ರಮುಖ ನ್ಯಾಷನಲ್ ಕಾನ್ಫರೆನ್ಸ್ ನಾಯಕ ಮತ್ತು ಜಮ್ಮು ಮತ್ತು ಕಾಶ್ಮೀರದ ಮಾಜಿ ಮುಖ್ಯಮಂತ್ರಿ ಒಮರ್ ಅಬ್ದುಲ್ಲಾ ಅವರನ್ನು ಬಾರಾಮುಲ್ಲಾ ಕ್ಷೇತ್ರದಿಂದ ಸೋಲಿಸುವ ಮೂಲಕ ಸುದ್ದಿಯಾಗಿದ್ದ

## ಅಮೃತಪಾಲ್ ಸಹಚರರ ಬಂಧನ

**ಚಂಡೀಗಢ:** ಜೈಲಿನಲ್ಲಿರುವ ವಾರಿಸ್ ಪಂಜಾಬ್ ದೇ ಸಂಘಟನೆಯ ಮುಖ್ಯಸ್ಥ ಅಮೃತಪಾಲ್ ಸಿಂಗ್‌ನ ಏಳು ಸಹಚರರನ್ನು ಶುಕ್ರವಾರ ಅಮೃತಸರದ ಅಜ್ನಾಲಾದ ನ್ಯಾಯಾಲಯದ ಮುಂದೆ ಹಾಜರುಪಡಿಸಲಾಯಿತು, ನ್ಯಾಯಾಲಯವು ಅವರನ್ನು ಮಾರ್ಚ್ 25ರವರೆಗೆ ಪೊಲೀಸ್ ಕಸ್ಟಡಿಗೆ ನೀಡಿದೆ. ಈ ಏಳು ಜನರನ್ನು ಈ ಹಿಂದೆ ಅಸ್ಸಾಂನ ದಿಬ್ರುಗಢ ಕೇಂದ್ರ ಕಾರಾಗೃಹದಿಂದ ಬಿಡುಗಡೆ ಮಾಡಲಾ ಗಿತ್ತು. ಆದರೆ ಪಂಜಾಬ್ ಪೊಲೀಸರು ಬೇರೊಂದು ಪ್ರಕರಣದಲ್ಲಿ ಅವರನ್ನು ಬಂಧಿಸಿದ್ದರು. ಬಂಧಿತ ಏಳು ಜನರನ್ನು ಬಿಗಿ ಭದ್ರತೆಯಲ್ಲಿ ಅಜ್ನಾಲಾ ನ್ಯಾಯಾಲಯದ ಮುಂದೆ ಹಾಜರುಪಡಿಸಲಾಯಿತು ಎಂದು ಅಧಿಕಾರಿಗಳು ತಿಳಿಸಿದ್ದಾರೆ. 2023ರಲ್ಲಿ ಅಮೃತಸರದ ಹೊರವಲಯದಲ್ಲಿರುವ ಪೊಲೀಸ್ ಠಾಣೆಯ ಮೇಲೆ ನಡೆದ ದಾಳಿಗೆ ಸಂಬಂಧಿಸಿದಂತೆ ಪಂಜಾಬ್ ಪೊಲೀಸರು ಅವರನ್ನು ಮತ್ತೆ ಬಂಧಿಸಿದ್ದಾರೆ. ದಿಬ್ರುಗಢ ಸೆಂಟ್ರಲ್ ಜೈಲಿನಿಂದ ಕಾನೂನುಬದ್ಧ ವರ್ಗಾವಣೆ ಪ್ರಕ್ರಿಯೆ ಪೂರ್ಣಗೊಂಡ ನಂತರ ಬಂಧಿತರನ್ನು ಅಜ್ನಾ ನ್ಯಾಯಾಲಯಕ್ಕೆ ಕರೆತರಲಾಗಿದೆ. ಅಮೃತ್‌ಪಾಲ್ ಸಿಂಗ್ ಖಲಿಸ್ತಾನಿ ನಾಯಕ ಹಾಗೂ ವಾರಿಸ್ ಪಂಜಾಬ್ ದೇ ಮುಖ್ಯಸ್ಥನಾಗಿದ್ದು, ಸದ್ಯ ಈತ ಜೈಲಿನಲ್ಲಿದ್ದಾನೆ.

**ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ**

ಟಿ.ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು– 560 020

ಬೆಂಅಪ್ರಾ/ನಯೋಸ/CLU-409/3420/2024-25 ದಿನಾಂಕ: 21/03/2025

**ಪ್ರಕಟಣೆ**

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14–ಎ ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ವ್ಯವಸಾಯ ವಲಯದಿಂದ ವಸತಿ ವಲಯಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ರವರು ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

| ಕ್ರ ಸಂ | ಅರ್ಜಿದಾರರ ಹೆಸರು | ತಾಲ್ಲೂಕು | ಹೋಬಳಿ | ಗ್ರಾಮದ ವಿವರ | ಸರ್ವೆ ನಂ. | ವಿಸ್ತೀರ್ಣ ಎ–ಗು | ಪರಿಷ್ಕೃತ ಮಹಾಯೋಜನೆ–2015 ಪ್ರಕಾರ ಭೂಉಪಯೋಗ | ಬದಲಾವಣೆ ಕೋರಿರುವ ಭೂಉಪಯೋಗ |
|---|---|---|---|---|---|---|---|---|
| 1 | ಶ್ರೀ.ನಾಗರಾಜ ಕೆ.ಎಂ ಬಿನ್ ಲೇಟ್ ಮುನಿಸ್ವಾಮಪ್ಪ | ಆನೇಕಲ್ | ಜಿಗಣಿ | ಎಸ್.ಬಿಂಗೀಪುರ | 234/4<br>234/5<br>234/7<br>234/8<br>234/9 | 0–08<br>1–17<br>0–12<br>0–20<br>0–11 | ವ್ಯವಸಾಯ ವಲಯ | ವಸತಿ |
| | | | | | ಒಟ್ಟು | 2–28 | | |

**ಷರಾ:** ಅರ್ಜಿದಾರರು ಪ್ರಶ್ನಿತ ಜಮೀನುಗಳನ್ನು ವ್ಯವಸಾಯಕ್ಕೆ ಬಳಸಲು ಸಾಧ್ಯವಾಗುತ್ತಿರುವುದಿಲ್ಲ. ಜಮೀನಿನ ಸುತ್ತಮುತ್ತ ವಾಸದ ಉದ್ದೇಶಕ್ಕೆ ಬೇಡಿಕೆ ಇದ್ದು, ಪ್ರಶ್ನಿತ ಜಮೀನಿನಲ್ಲಿ ಯೋಜನಾಬದ್ಧ ಬೆಳವಣಿಗೆಗಳನ್ನು ಅಭಿವೃದ್ಧಿಪಡಿಸುವುದರಿಂದ ಸುತ್ತಮುತ್ತಲಿನ ನಿವಾಸಿಗಳಿಗೆ ಉದ್ಯೋಗ ಅವಕಾಶ ಕಲ್ಪಿಸಿದಂತಾಗುತ್ತದೆ. ವಿನ್ಯಾಸದ ಅಭಿವೃದ್ಧಿಯಿಂದ ಸುತ್ತಮುತ್ತಲಿನ ಪ್ರದೇಶದ ಅಭಿವೃದ್ಧಿಗೆ ಸಹಕಾರಿಯಾಗಲಿದೆ. ಯೋಜನಾ ಬದ್ಧವಾದ ವಿನ್ಯಾಸ ರಚನೆಯಿಂದ ಉತ್ತಮ ರಸ್ತೆಗಳು, ನಾಗರೀಕ ಸೌಲಭ್ಯ ಜಾಗಗಳು, ಉದ್ಯಾನವನಗಳು, ಸಾರ್ವಜನಿಕರ ಉಪಯೋಗಕ್ಕೆ ಲಭ್ಯವಾಗುತ್ತದೆ ಎಂಬ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ ಸದರಿ ಜಮೀನುಗಳನ್ನು 'ವ್ಯವಸಾಯ ವಲಯ' ದಿಂದ 'ವಸತಿ ವಲಯ' ಕ್ಕೆ ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/– ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು.

**ನಗರಸಭಾ ಕಾರ್ಯಾಲಯ, ಚಳ್ಳಕೆರೆ.**(ಚಿತ್ರದುರ್ಗ ಜಿಲ್ಲೆ)

ಫೋ ನಂ. 08195–250094 ka.challakere.cmc@gmail.com

ಸಂಖ್ಯೆ: ಚ.ನ/ತಾಂತ್ರಿಕ/ಕೆ.ಅ.ಶು/ಟೆಂಡರ್/ಸಿ.ಆರ್03/2024–25 ದಿ:21/03/2025

**ಟೆಂಡರ್ ಪ್ರಕಟಣೆ**

ಚಳ್ಳಕೆರೆ ನಗರಸಭೆ ಕೆರೆ ಅಭಿವೃದ್ಧಿ ಶುಲ್ಕಅನುದಾನದಡಿಯಲ್ಲಿ ಮಂಜೂರಾಗಿರುವ ಕೆಳಕಂಡ ಕಾಮಗಾರಿಯನ್ನು ನಿರ್ವಹಿಸುವುದಕ್ಕೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮ 1999 ಮತ್ತು ನಿಯಮಾವಳಿ–2000, ಹಾಗೂ ಆರ್ಥಿಕ ಇಲಾಖೆಯ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್KW-4ರಂತೆ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತರಾದ ಅರ್ಹ ಗುತ್ತಿಗೆ/ಅಧಿಕೃತ ಏಜೆನ್ಸಿದಾರರಿಂದ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ (http://kppp.karnataka.gov.in) ನಲ್ಲಿ ಐಟಂವಾರು ಟೆಂಡರ್‌ಗಳನ್ನು ಆಹ್ವಾನಿಸಲಾಗಿರುತ್ತದೆ ಹಾಗೂ ದಿನಾಂಕ:11/04/2025 ರ ಸಂಜೆ 5:00 ಗಂಟೆವರೆಗೆ ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ (http://kppp.karnataka.gov.in) ನಲ್ಲಿ ಟೆಂಡರ್‌ಗಳನ್ನು ಡೌನ್‌ಲೋಡ್ ಮಾಡಿಕೊಂಡು ಅಪ್‌ಲೋಡ್ ಮಾಡಬಹುದಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಈ ಕೆಳಕಂಡ ವೆಬ್‌ಸೈಟ್‌ನಲ್ಲಿ ವೀಕ್ಷಿಸಬಹುದಾಗಿರುತ್ತದೆ. www.challakerecity.mrc.gov.in ಮತ್ತು http://kppp.karnataka.gov.in ಹಾಗೂ ಕಛೇರಿಯ ಸೂಚನಾ ಫಲಕದಲ್ಲಿ ಹಾಕಲಾಗಿರುರುತ್ತದೆ. ಮತ್ತು ಹೆಚ್ಚಿನ ಮಾಹಿತಿಗಾಗಿ ಕಛೇರಿ ವೇಳೆಯಲ್ಲಿ ತಾಂತ್ರಿಕ ಶಾಖೆಯಲ್ಲಿ ಪಡೆಯಬಹುದು.

ಚಳ್ಳಕೆರೆ ನಗರಸಭೆ ಕೆರೆ ಅಭಿವೃದ್ಧಿ ಶುಲ್ಕ ಅನುದಾನದಡಿಯಲ್ಲಿ (ರೂ. 250.00 ಲಕ್ಷಗಳು) ಕಾಮಗಾರಿಯ ಹೆಸರು:– ಚಳ್ಳಕೆರೆ ನಗರದ ಸೂಜಿಮಲ್ಲೇಶ್ವರ ನಗರದಿಂದ ಕಾಟಪ್ಪನಹಟ್ಟಿವರೆಗೆ ರಾಜಕಾಲುವೆ ಅಭಿವೃದ್ಧಿ ಕಾಮಗಾರಿ. INDENT NO: DMA/2024-25/OW/WORK_INDENT 37218.

ಅಂದಾಜು ಮೊತ್ತ (ರೂ ಲಕ್ಷಗಳಲ್ಲಿ):– 250.00

ಟೆಂಡರ್‌ಗಿಟ್ಟ ಮೊತ್ತ ಜಿ.ಎಸ್.ಟಿ ಹೊರತುಪಡಿಸಿ (ರೂ ಗಳಲ್ಲಿ):–2,07,35,367.00

ಇ.ಎಂ.ಡಿ. (ರೂ ಗಳಲ್ಲಿ):– 3,11,031.00. ನಿಗಧಿ ಪಡಿಸಿದ ಕಾಲಾವಧಿ:– 11 ತಿಂಗಳು

ಗುತ್ತಿಗೆದಾರರ ದರ್ಜೆ:– 2ನೇ ದರ್ಜೆ ಸಿವಿಲ್ ಗುತ್ತಿಗೆದಾರರು ಮತ್ತು ಮೇಲ್ಪಟ್ಟು

RO.No.738:DIPR/CTA/KSMCA/2024-25

ಸಹಿ/– **ಪೌರಾಯುಕ್ತರು,** ನಗರಸಭೆ, ಚಳ್ಳಕೆರೆ

## ತಿರುಮಲದಲ್ಲಿ ಹಿಂದೂಗಳಿಗೆ ಮಾತ್ರ ಉದ್ಯೋಗ: ಅನ್ಯಧರ್ಮೀಯರ ವರ್ಗ

**ತಿರುಮಲ(ಆಂಧ್ರ ಪ್ರದೇಶ):** ತಿರುಮಲ ದೇವಸ್ಥಾನದಲ್ಲಿ ಹಿಂದೂಗಳಿಗೆ ಮಾತ್ರ ಉದ್ಯೋಗ ನೀಡಬೇಕು ಎಂದು ಆಂಧ್ರಪ್ರದೇಶದ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು



ಶುಕ್ರವಾರ ಹೇಳಿದ್ದಾರೆ. ತಿರುಮಲ ದೇವಸ್ಥಾನದಲ್ಲಿ ಕೆಲಸಕ್ಕೆ ಹಿಂದೂಗಳನ್ನು ಮಾತ್ರ ನೇಮಿಸಬೇಕು. ಪ್ರಸ್ತುತ ಅಲ್ಲಿ ಕೆಲಸ ಮಾಡುತ್ತಿರುವ ಇತರ ಧರ್ಮೀಯರನ್ನು ಅವರ ಭಾವನೆಗಳಿಗೆ ಧಕ್ಕೆಯಾಗದಂತೆ ಅವರನ್ನು ಇತರ ಸ್ಥಳಗಳಿಗೆ ಸ್ಥಳಾಂತರಿಸಲಾಗುವುದು ಎಂದು ಆಂಧ್ರ ಸಿಎಂ ಹೇಳಿದರು.

ದೇಶದ ಎಲ್ಲಾ ರಾಜ್ಯಗಳ ರಾಜಧಾನಿಗಳಲ್ಲಿ ವೆಂಕಟೇಶ್ವರ ಸ್ವಾಮಿ ದೇವಾಲಯಗಳನ್ನು ನಿರ್ಮಿಸುವ ಯೋಜನೆಯನ್ನು ಅವರು ಇದೇ ಸಂದರ್ಭದಲ್ಲಿ ಘೋಷಿಸಿದರು. ಇದಲ್ಲದೆ, ವಿಶ್ವಾದ್ಯಂತದ ವೆಂಕಟೇಶ್ವರ ದೇವರ ಆಸ್ತಿಗಳನ್ನು ರಕ್ಷಿಸಲು ಪವಿತ್ರ ದಾರ ಕಟ್ಟಿಕೊಂಡಿರುವುದಾಗಿ ಅವರು ತಿಳಿಸಿದರು. ವಿದೇಶಗಳಲ್ಲಿಯೂ ವೆಂಕಟೇಶ್ವರನ ದೇವಾಲಯಗಳು ಸ್ಥಾಪನೆಯಾಗಬೇಕೆಂಬುದು ಅನೇಕ ಭಕ್ತರ ಅಭಿಲಾಷೆಯಾಗಿದೆ ಎಂದು ಅವರು ಹೇಳಿದರು. ತಿರುಮಲದ ಏಳು ಬೆಟ್ಟಗಳ ಪ್ರದೇಶದ ಬಳಿ ವಾಣಿಜ್ಯ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಮಾತನಾಡಿದ ನಾಯ್ಡು, ಬೆಟ್ಟಕ್ಕೆ

ಹೊಂದಿಕೊಂಡಿರುವ ಪ್ರದೇಶದಲ್ಲಿ ಈ ಹಿಂದೆ ಮುಮ್ತಾಜ್ ಹೋಟೆಲ್ ಆರಂಭಿಸಲು ಅನುಮತಿ ನೀಡಲಾಗಿತ್ತು. ಆದರೆ 35.32 ಎಕರೆ ಭೂಮಿಯಲ್ಲಿ ಯೋಜಿಸಲಾಗಿದ್ದ, ಹೋಟೆಲ್‌ಗೆ ನೀಡಲಾಗಿದ್ದ ಅನುಮತಿಯನ್ನು ರದ್ದುಗೊಳಿಸಲು ಸರಕಾರ ಈಗ ನಿರ್ಧರಿಸಿದೆ. ಈ ಹೋಟೆಲ್ ಶಾಕಾಹಾರಿ ಆಹಾರವನ್ನು ಮಾತ್ರ ನೀಡಲು ಉದ್ದೇಶಿಸಿದ್ದರೂ, ಈ ಪ್ರದೇಶದಲ್ಲಿ ಯಾವುದೇ ಖಾಸಗಿ ವ್ಯಕ್ತಿಗಳಿಗೆ ವಾಣಿಜ್ಯ ಚಟುವಟಿಕೆ ಯ ಅವಕಾಶ ನೀಡಲಾಗುವುದಿಲ್ಲ. ಏಳು ಬೆಟ್ಟಗಳ ಬಳಿ ಯಾವುದೇ ವಾಣಿಜ್ಯೀಕರಣ ಇರಬಾರದು ಎಂದು ಹೇಳಿದರು. ಭಗವಾನ್ ವೆಂಕಟೇಶ್ವರನ ಮೇಲೆ ತಮಗಿರುವ ಭಕ್ತಿಯನ್ನು ವ್ಯಕ್ತಪಡಿಸಿದ ಅವರು, ಭಗವಂತನ ಅಪಾರ ಶಕ್ತಿಯಿಂದಾಗಿ ಅನೇಕ ದಾಳಿಗಳಿಂದ ಬದುಕುಳಿದಿದ್ದೇನೆ ಎಂದು ಹೇಳಿದರು.

## ಸಮಾಚಾರ ಸಣ್ಣದಲ್ಲ

### ರಾಹುಲ್ ಸಂವಾದ

**ದೆಹಲಿ:** ರಾಷ್ಟ್ರಮಟ್ಟದಲ್ಲಿ ಹಳೆಯ ಪಕ್ಷವನ್ನು ಪುನರುಜ್ಜೀವನಗೊಳಿಸಲು ಕಾಂಗ್ರೆಸ್‌ನ ವಾಸ್ತವತೆಯ ಬಗ್ಗೆ ತಿಳಿದುಕೊಳ್ಳಲು ಕಾಂಗ್ರೆಸ್ ನಾಯಕ ಹಾಗೂ ಸಂಸದ ರಾಹುಲ್ ಗಾಂಧಿ ನೇರವಾಗಿ ಜಿಲ್ಲಾ ಘಟಕಗಳ ಮುಖ್ಯಸ್ಥರಿಂದ ಮಾಹಿತಿ ಸಂಗ್ರಹಿಸಲು ನಿರ್ಧರಿಸಿದ್ದಾರೆ. ಮಾರ್ಚ್ 27, 28 ಮತ್ತು ಏಪ್ರಿಲ್ 3 ರಂದು ದೇಶದ 750 ಕ್ಕೂ ಹೆಚ್ಚು ಜಿಲ್ಲಾ ಘಟಕದ ಮುಖ್ಯಸ್ಥರ ಜೊತೆಗೆ ರಾಹುಲ್ ಗಾಂಧಿ ಮಾತನಾಡಲಿದ್ದಾರೆ. ಸುಮಾರು 250 ಜನರ ಬ್ಯಾಚ್‌ಗಳಲ್ಲಿ ನಡೆಯಲಿರುವ ಸಂವಾದಕ್ಕೂ ಮುನ್ನ, ವಿವಿಧ ರಾಜ್ಯ ಘಟಕಗಳು ಜಿಲ್ಲಾ ಮಟ್ಟದಲ್ಲಿ ಖಾಲಿ ಇರುವ ಹುದ್ದೆಗಳನ್ನು ಸಕ್ರಿಯವಾಗಿ ಭರ್ತಿ ಮಾಡುತ್ತಿವೆ.

### ಕೋಮು ಗಲಭೆ ಹೆಚ್ಚಳ ಸಂಜಯ್ ಸಿಂಗ್ ಆರೋಪ

**ದೆಹಲಿ:** 2019 ಮತ್ತು 2024ರ ನಡುವೆ ದೇಶದಲ್ಲಿ ಕೋಮು ಗಲಭೆ ಪ್ರಕರಣಗಳು ಶೇ. 94ರಷ್ಟು ಹೆಚ್ಚಳವಾಗಿದೆ ಎಂದು ಸಂಸದ ಸಂಜಯ್ ಸಿಂಗ್ ಶುಕ್ರವಾರ ರಾಜ್ಯಸಭೆಯಲ್ಲಿ ಹೇಳಿದರು. ಆಡಳಿತಾರೂಢ ಪಕ್ಷದ ನಾಯಕರ ಪ್ರಚೋದನಾಕಾರಿ ಮತ್ತು ದ್ವೇಷಪೂರಿತ ಹೇಳಿಕೆಗಳಿಗೆ ಇದಕ್ಕೆ ಕಾರಣ ಎಂದು ಬಿಜೆಪಿ ವಿರುದ್ಧ ವಾಗ್ದಾಳಿ ನಡೆಸಿದರು. ಗೃಹ ಸಚಿವಾಲಯದ ಕಾರ್ಯ ಕುರಿತ ಚರ್ಚೆಯಲ್ಲಿ ಪಾಲ್ಗೊಂಡು ಮಾತನಾಡಿದ ಸಂಜಯ್ ಸಿಂಗ್, ಇಡೀ ಜಗತ್ತು ವಿಶ್ವವನ್ನು ಅನ್ವೇಷಿಸಲು ಮತ್ತು ಹೊಸ ತಂತ್ರಜ್ಞಾನವನ್ನು ವಿಸ್ತರಿಸಲು ಶ್ರಮಿಸುತ್ತಿರುವಾಗ ಬಿಜೆಪಿ ನಾಯಕರು, ಸಮಾಧಿಗಳನ್ನು ಅಗೆದು, ಮಸೀದಿಗಳ ಕೆಳಗೆ ದೇವಾಲಯಗಳನ್ನು ಹುಡುಕುತ್ತಿದ್ದಾರೆ. ಇಡೀ ಜಗತ್ತು ಅಭಿವೃದ್ಧಿಯತ್ತ ಸಾಗುತ್ತಿರುವಾಗ, ಬಿಜೆಪಿ ದೇಶದಲ್ಲಿ ದ್ವೇಷವನ್ನು ಹರಡುತ್ತಿದೆ. ಸರ್ಕಾರದಿಂದ ರಕ್ಷಿಸಲ್ಪಟ್ಟ ಮೊಘಲ್ ಯುಗದ ನಿವೇಶನಗಳನ್ನು ಹಾನಿಗೊಳಿಸಲಾಗುತ್ತಿದೆ ಎಂದು ಜನರು ಹೇಳುತ್ತಿದ್ದಾರೆ ಎಂದು ಹೇಳಿದರು.

### 70 ಮೊಬೈಲ್ ವಶ

**ಬೆಂಗಳೂರು:** ಮೊಬೈಲ್‌ಗಳನ್ನು ಕಳವು ಮಾಡುತ್ತಿದ್ದ ಕಳ್ಳರ ಗ್ಯಾಂಗ್ ಅನ್ನು ಬೇಧಿಸಿರುವ ಆರ್‌ಎಂಸಿ ಯಾರ್ಡ್ ಪೊಲೀಸರು 43 ಲಕ್ಷ ಮೌಲ್ಯದ ವಿವಿಧ ಕಂಪನಿಯ 70 ಮೊಬೈಲ್‌ಗಳನ್ನು ಜಪ್ತಿ ಮಾಡಿದ್ದಾರೆ. ಗ್ಯಾಂಗ್‌ನಲ್ಲಿದ್ದ ಕೇರಳ ರಾಜ್ಯದ ಶಬೀನ್ ಸುಹೇರ್ (33) ಮೊಹಮ್ಮದ್ ಮಿದ್ಲಾಜ್ (27), ಶಂಶೀರ್ ಬೇಗ್ (32)ಶಿವಮೊಗ್ಗದ ಉದುಮನ್ ಫೈಜರ್ (49) ಬಂಧಿತ ಆರೋಪಿಗಳಾಗಿದ್ದು, ತಲೆಮರೆಸಿಕೊಂಡಿರುವ ತಮಿಳುನಾಡು ಮೂಲದ ಮತ್ತೊಬ್ಬ ಆರೋಪಿ ಶ್ರೀನಿವಾಸ್ ಬಂಧನಕ್ಕೆ ತೀವ್ರ ಶೋಧ ಕೈಗೊಳ್ಳಲಾಗಿದೆ ಎಂದು ನಗರ ಪೊಲೀಸ್ ಆಯುಕ್ತ ದಯಾನಂದ ಅವರು ಸುದ್ದಿಗೋಷ್ಠಿಯಲ್ಲಿ ತಿಳಿಸಿದ್ದಾರೆ.

### ಅರಮನೆ ಮೈದಾನ ಸ್ವಾಧೀನ ತಿದ್ದುಪಡಿ ಮಸೂದೆ ಅಂಗೀಕಾರ

**ಬೆಂಗಳೂರು:** ಬೆಂಗಳೂರು ಅರಮನೆ ಮೈದಾನ ಪ್ರದೇಶದ 472 ಎಕರೆ 16 ಗುಂಟೆ ಜಮೀನು ಬಳಕೆ ಮತ್ತು ನಿಯಂತ್ರಣ ಅಧಿಕಾರವನ್ನು ರಾಜ್ಯ ಸರಕಾರ ತನ್ನ ಬಳಿಯೇ ಇಟ್ಟುಕೊಳ್ಳುವ ಉದ್ದೇಶದ ಬೆಂಗಳೂರು ಅರಮನೆ (ಭೂ ಬಳಕೆ ಮತ್ತು ನಿಯಂತ್ರಣ) ವಿಧೇಯಕ 2025ಕ್ಕೆ ವಿಧಾನಸಭೆ ಹಾಗೂ ವಿಧಾನ ಪರಿಷತ್ತಿನಲ್ಲಿ ಶುಕ್ರವಾರ ಅಂಗೀಕಾರ ದೊರೆಯಿತು. ಬೆಂಗಳೂರು ಅರಮನೆ ಮೈದಾನದ 15.39 ಎಕರೆ ಭೂಮಿಯಲ್ಲಿ ರಸ್ತೆ ಅಗಲೀಕರಣ ಕಾಮಗಾರಿ ನಡೆಸಲು ಮೈಸೂರು ರಾಜಮನೆತನದ ವಾರಸುದಾರರಿಗೆ 3 ಸಾವಿರ ಕೋಟಿಗೂ ಹೆಚ್ಚಿನ ಮೊತ್ತದ ವರ್ಗಾಯಿಸಬಹುದಾದ ಅಭಿವೃದ್ಧಿ ಹಕ್ಕು (ಟಿಡಿಆರ್) ನೀಡುವಂತೆ ಸುಪ್ರೀಂ ಕೋರ್ಟ್ ಆದೇಶಿಸಿತ್ತು. ಆದರೆ, ಅಷ್ಟು ಮೌಲ್ಯದ ಟಿಡಿಆರ್ ನೀಡಲು ಜನವರಿ 24 ರಂದು ನಡೆದ ಸಚಿವ ಸಂಪುಟ ಸಭೆ ಯಲ್ಲಿ ನಿರಾಕರಿಸಲಾಗಿತ್ತು. ತದನಂತರ ಜನವರಿ 29 ರಂದು ಸರ್ಕಾರ ಸುಗ್ರೀವಾಜ್ಞೆ ಹೊರಡಿಸಿತ್ತು. ಬೆಂಗಳೂರು ಅರಮನೆ ಮೈದಾನಕ್ಕೆ ಟಿಡಿಆರ್ ನೀಡುವುದು ರಾಜ್ಯದ ಹಿತದೃಷ್ಟಿಗೆ ವಿರುದ್ಧವಾಗಿದೆ ಎಂದು ರಾಜ್ಯ ಸರಕಾರ ಹೇಳಿದೆ. ಬೆಂಗಳೂರು ಅರಮನೆ ಮೈದಾನದ 1217.41 ಚದರ ಮೀಟರ್ ಪ್ರದೇಶದಲ್ಲಿ 15.39 ಎಕರೆ ಭೂಮಿಯಲ್ಲಿ ರಸ್ತೆ ಅಗಲೀಕರಣ ಕಾಮಗಾರಿ ನಡೆಸಲು ಬಳಸಲು ಉದ್ದೇಶಿಸಲಾಗಿದೆ. ಬೆಂಗಳೂರು ಅರಮನೆ (ಸ್ವಾಧೀನ ಮತ್ತು ವರ್ಗಾವಣೆ) ಕಾಯ್ದೆ 1996 ರ ಅನುಸಾರವಾಗಿ ಸರ್ಕಾರವು ಹೊಂದಿರುವ ಭೂಮಿಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆಯ ಸೆಕ್ಷನ್ 14 ಬಿ ಅಡಿಯಲ್ಲಿ ಯಾವುದೇ ಟಿಡಿಆರ್ ಅನ್ವಯಿಸುವುದಿಲ್ಲ ಎಂದು ಸರಕಾರ ಹೇಳಿದೆ.

---

ನಿಂಬೆ ಹಣ್ಣಿನ ಬೆಲೆ 10 ರು. ತನಕ ಏರಿಕೆ, ಟೊಮೇಟೊ ಬೆಲೆ 10 ರು.ಗೆ ಇಳಿಕೆ, ಬೆಲೆ ವೈಪರೀತ್ಯ: ಬೆಳೆಗಾರ ಕಂಗಾಲು

# 1 ನಿಂಬೆ ಹಣ್ಣು ಬೆಲೆಗೆ 1 ಕೆಜಿ ಟೊಮೇಟೊ!

ಹೂವಪ್ಪ ಈ ಹೆಚ್. ಬೆಂಗಳೂರು



ಈ ಬೇಸಿಗೆಯಲ್ಲಿ ಹೊರ ಹೋಗಿ ಬಂದರೆ ಸಾಕು ಪುಲ್ ಸುಸ್ತು. ಮನೆಗೆ ಬಂದರೆ ಕೂಡಲೆ ತಣ್ಣಗೆ ನಿಂಬೆ ಹಣ್ಣಿನ ಶರಬತ್ತು ಕುಡಿಯಬೇಕು ಎನಿಸುತ್ತದೆ. ಮನೆಗೆ ಬಂದ ಅತಿಥಿಗಳು ಕೂಡಾ ಕಾಫಿ, ಟೀ ಬದಲಿಗೆ ನಿಂಬೆಹಣ್ಣು ಪಾನೀಯ ಎಂದರೆ ಮನೆಯವರು ಹಿಂದೆ ಮುಂದೆ ನೋಡುವ ಪರಿಸ್ಥಿತಿ ಎದುರಾಗಿದೆ. ಈ ನಡುವೆ ಗ್ರಾಹಕರಿಗೆ ಖುಷಿಯ ಸಂಗತಿ ಎಂದರೆ ಟೊಮೇಟೊ ಧಾರಣೆ ಕಿಲೋಗೆ 10 ರು.ಗಳಿಗೆ ಇಳಿದಿದೆ. ಬೆಲೆ ವ್ಯತ್ಯಾಸದಿಂದ ನೊಂಬೆ ಬೆಳೆಗಾರರು ಖುಷಿಯಾಗಿದ್ದರೆ, ಟೊಮೇಟೊ ಬೆಳೆಗಾರರು ಕಣ್ಣೀರಿಡುವಂತಾಗಿದೆ.

ಮಾರುಕಟ್ಟೆಯಲ್ಲಿ ನಿಂಬೆ ಹಣ್ಣಿನ ಬೆಲೆ ಬಾರೀ ಏರಿಕೆ ಕಂಡಿದೆ. ತಿಂಗಳ ಹಿಂದೆ 10 ರು.ಗಳಿಗೆ 3ರಿಂದ 4 ನಿಂಬೆ ಸಿಗುತ್ತಿತ್ತು. ದೊಡ್ಡ ನಿಂಬೆ ಒಂದಕ್ಕೆ 10 ರು. ತೆರಬೇಕಾಗಿದೆ. ಸಣ್ಣ ಗಾತ್ರದ ಒಂದು ನಿಂಬೆ ಹಣ್ಣು 6 ರೂ. ಮಾಧ್ಯಮ ದಪ್ಪ ಗಾತ್ರದ ನಿಂಬೆಗೆ 7ರಿಂದ 8 ರು.ಗೆ ಮಾರಾಟವಾಗುತ್ತಿದೆ. ಕೆಜಿ ಗೆ ಈ ಹಿಂದೆ 180–200 ಇದ್ದ ಬೆಲೆ ಈಗ 300–320 ರೂ ಆಗಿದೆ. ಇದರಿಂದ ಜ್ಯೂಸ್ ಅಂಗಡಿಗಳಲ್ಲೂ ನಿಂಬೆಹಣ್ಣಿನ ಶರಬತ್, ನಿಂಬು ಸೋಡಾ ಬೆಲೆಯಲ್ಲೂ ವ್ಯತ್ಯಾಸ ಆಗಿದೆ. ಹಲವು ತಂಪುಪಾನೀಯ ಮಳಿಗೆಗಳಲ್ಲಿ ನಿಂಬೆ ಪಾನೀಯಗಳ ಬೆಲೆಯನ್ನು 25ರ ಬದಲಾಗಿ 30ಕ್ಕೆ ಏರಿಕೆ ಮಾಡಲಾಗಿದೆ. ಇದೇ ರೀತಿ ಕರ್ಜೂಬ ಹಣ್ಣಿನ ಬೆಲೆ ಕೆಜಿಗೆ 30–40 ರೂ, ಗಳಿಗೆ ಏರಿಕೆ ಆಗಿದೆ.

**ಸಗಟು ದರ:** ನಿಂಬೆಗೆ ಮಾರುಕಟ್ಟೆಯಲ್ಲೇ ಪ್ರತಿ ಚೀಲಕ್ಕೆ ಸಗಟು ಬೆಲೆ 6,500–7,000 ರೂ. ನಿಗದಿಯಾಗಿದೆ. ಪ್ರತಿ ಚೀಲದಲ್ಲಿ ಸರಾಸರಿ 1,200 ರಿಂದ 1,500 ನಿಂಬೆಹಣ್ಣುಗಳಿರುತ್ತವೆ. ಗಾತ್ರಕ್ಕೆ ತಕ್ಕಂತೆ ಅವುಗಳನ್ನು ಪ್ರತ್ಯೇಕಿಸಿ ಬೇರೆ ಬೇರೆ ದರಕ್ಕೆ ಮಾರಾಟ ಮಾಡಿದರೆ ಮಾತ್ರ ತಕ್ಕಮಟ್ಟಿಗಿನ ಲಾಭ ಗಳಿಸಬಹುದು ಎನ್ನುತ್ತಾರೆ ವ್ಯಾಪಾರಿ ಎಪಿಎಂಸಿ ವ್ಯಾಪಾರಿ ಹುಸೇನ್ . ಪ್ರತಿ ಬೇಸಿಗೆಯಲ್ಲಿ ನಿಂಬೆಹಣ್ಣಿನ ದರ ಏರಿಕೆಯಾಗುವುದು ಸಹಜ. ಆದರೆ ಈ ಬಾರಿ ನಿಗದಿತ ಅವಧಿಗೂ ಮುನ್ನವೇ ದರದಲ್ಲಿ ಏರಿಕೆ ಕಂಡುಬಂದಿದೆ. ಸಗಟು ಮಾರುಕಟ್ಟೆಯಲ್ಲೇ ದರ ಏರಿಕೆಯಾಗಿದ್ದರಿಂದ ಚಿಲ್ಲರೆ ಮಾರಾಟದಲ್ಲಿ ದರ ಹೆಚ್ಚಳವಾಗಿದೆ.

**ಏರಿಕೆಗೆ ಕಾರಣ:** ರಾಜ್ಯಾದ್ಯಾಂತ ಜನವರಿ ಮತ್ತು ಫೆಬ್ರವರಿ ತಿಂಗಳಲ್ಲಿ ಬಿದ್ದ ಅಕಾಲಿಕ ಮಳೆಯಿಂದ ನಿಂಬೆ ಹಣ್ಣಿನ ಫಸಲಿನಲ್ಲಿ ಶೇ.40 ರಷ್ಟು ಕುಸಿತವಾಗಿದೆ. ಇದು ಸಹ ಬೆಲೆ ಏರಿಕೆಗೆ ಪ್ರಮುಖ ಕಾರಣ. ರಾಜ್ಯದಲ್ಲಿ ಸುಮಾರು 21 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ನಿಂಬೆ ಬೆಳೆಯುತ್ತಿದ್ದು, ವಿಜಯಪುರ ಜಿಲ್ಲೆಯಲ್ಲಿ ಶೇ.75 ರಷ್ಟು ನಿಂಬೆ ಬೆಳೆಯುವ ರೈತರಿದ್ದಾರೆ. ಆದರೆ, ಹೂವು ಬಿಡುವ ತಿಂಗಳಾದ ಜನವರಿ ಮತ್ತು ಫೆಬ್ರವರಿ ತಿಂಗಳಲ್ಲಿ ಅಕಾಲಿಕ ಮಳೆ ಬಿದ್ದಿದೆ. ಇದೇ ಕಾರಣದಿಂದ ನಿಂಬೆ ಹೂವು ಶೇ.50 ರಷ್ಟು ಉದುರಿ ಹೋಗಿದೆ. ಅಲ್ಲದೆ, 100 ಹಣ್ಣು ಸಿಗುವ ಮರದಲ್ಲಿ ಕೇವಲ 50–60 ಹಣ್ಣು ಮಾತ್ರ ಸಿಗುತ್ತಿದೆ. ಇದು ಬೇಡಿಕೆ ಹೆಚ್ಚಾಗ್ಗಲು ಕಾರಣವಾಗಿದೆ. ಆಂಧ್ರ ಮತ್ತು ತೆಲಂಗಾಣ ರಾಜ್ಯಗಳಿಂದಲೂ ಬೆಂಗಳೂರು ನಗರಕ್ಕೆ ನಿಂಬೆ ಹಣ್ಣು ಪೂರೈಕೆಯಾಗುತ್ತಿದೆ. ಆದರೆ ಈಗ ಬೇಡಿಕೆ ಹೆಚ್ಚು ಬಂದಿರುವ ಕೊಲ್ಲಿ ರಾಷ್ಟ್ರಗಳಿಗೆ ಮಾರಾಟ ಮಾಡಲಾಗುತ್ತಿರುವುದರಿಂದ ನಗರಕ್ಕೆ ಸಾಕಷ್ಟು ನಿಂಬೆಹಣ್ಣು ಪೂರೈಕೆಯಾಗುತ್ತಿಲ್ಲ. ಇದು ಕೂಡಾ ಬೆಲೆ ಏರಿಕೆಗೆ ಕಾರಣ ಎಂದು ವಿವರಿಸುತ್ತಾರೆ ಮಾರುಕಟ್ಟೆ ವರ್ತಕರು.

> **ಬಾಂಗ್ಲಾ, ಮಹಾರಾಷ್ಟ್ರ, ಗುಜರಾತ್, ತಮಿಳುನಾಡು, ಕೇರಳಕ್ಕೆ ಟೊಮೇಟೊ ಸಾಗಣೆಯಾಗುವುದು ತುಂಬಾ ಕಡಿಮೆಯಾಗಿದೆ. ಇದು ಬೆಳೆ ಪಾತಾಳಕ್ಕೆ ಕುಸಿಯಲು ಪ್ರಮುಖ ಕಾರಣ ಎನ್ನುತ್ತಾರೆ.**
> **ವೀರೇಶ್ ಎಂ.ಎಸ್.** ಕೋಲಾರ ಎಪಿಎಂಸಿ ಟೊಮೇಟೊ ವ್ಯಾಪಾರಿ

#### ಕೆಂಪು ಚೆಲುವೆ ಧಾರಣೆ ದಿಢೀರ್ ಕುಸಿತ

**ಬೆಂಗಳೂರು:** ಮಾರುಕಟ್ಟೆಯಲ್ಲಿ ಕೆಂಪು ಚೆಲುವೆ ಟೊಮೆಟೊ ಬೆಲೆ ಪಾತಾಳಕ್ಕೆ ಇಳಿದಿದೆ. ಬೆಂಗಳೂರಿನ ತರಕಾರಿ ಅಂಗಡಿಗಳಲ್ಲಿ ಪ್ರತಿ ಕೆಜಿಗೆ 10 ರು.ಗೆ ಟೊಮೇಟೊ ಮಾರಾಟ ವಾಗುತ್ತಿದೆ. ಈ ಬಾರಿ ಉತ್ತಮ ಬೆಲೆ ಸಿಗುವ ಕನಸಿನಲ್ಲಿ ಹೆಚ್ಚಿನ ಟೊಮೆಟೊ ಬೆಳೆದ ರೈತರು ತಲೆ ಮೇಲೆ ಕೈಹೊತ್ತು ಕುಳಿತಿದ್ದಾರೆ. ಆದರೆ ಶುಭ ಸಮಾರಂಭಗಳು, ಮದುವೆ ಸೀಸನ್ ನಡುವೆಯೂ ಟೊಮೆಟೊ ಧಾರಣೆ ಕುಸಿದಿರುವುದರಿಂದ ಜನಸಾಮಾನ್ಯರು ಖುಷಿ ಪಡುತ್ತಿದ್ದಾರೆ.

ಬೆಂಗಳೂರಿಗೆ ಹೊಂದಿಕೊಂಡಿರುವ ಕೋಲಾರ ಮತ್ತು ಚಿಕ್ಕಬಳ್ಳಾಪುರದಲ್ಲಿ ಟೊಮೇಟೊ ಹೆಚ್ಚು ಬೆಳೆಯಲಾ ಗುತ್ತಿದೆ. ದಾವಣಗೆರೆ, ರಾಣೆಬೆನ್ನೂರು ಸೇರಿದಂತೆ ಅನೇಕ ಜಿಲ್ಲೆಗಳಲ್ಲಿ ಟೊಮೆಟೊ ಉತ್ತಮ ಫಸಲು ಬಂದಿದೆ. ಆದರೆ ಈ ಹಿಂದೆ ಟೊಮೇಟೊ 15 ಕೆಜಿ ಬಾಕ್ಸ್‌ಗೆ ಕನಿಷ್ಠ ಬೆಲೆ 200–300 ರು. ಇತ್ತು. ಇದೀಗ 50–120 ರು.ಗೆ ಕುಸಿದಿದೆ. ಅಧಿಕ ಇಳುವರಿ, ಮಹಾರಾಷ್ಟ್ರ, ಗುಜರಾತ್, ತಮಿಳುನಾಡು, ಕೇರಳಕ್ಕೆ ಟೊಮೇಟೊ ಸಾಗಣೆ ಕಡಿಮೆಯಾಗಿರುವುದೂ ಧಾರಣೆ ಕುಸಿತಕ್ಕೆ ಪ್ರಮುಖ ಕಾರಣ ಎನ್ನಲಾಗಿದೆ. ಈ ಮಧ್ಯೆ ಚಾಮರಾಜನಗರ ಮೊದಲಾದ ಜಿಲ್ಲೆಗಳಲ್ಲಿ ಟೊಮೇಟೊಗೆ ಹೂಜಿ ನೊಣ ಮತ್ತು ನುಸಿ ಪೀಡೆ ಭಾದಿಸತೊಡಗಿದೆ. ಇದರಿಂದ ಹಣ್ಣಿನ ಗುಣಮಟ್ಟ ಕಡಿಮೆಯಾಗಿದ್ದು, ಬೇಗ ಹಾಳಾಗುತ್ತಿದೆ. ಬೆಲೆ ಇಲ್ಲದೆ ಇರುವ ಕಾರಣಕ್ಕೆ ಇಲ್ಲಿನ ರೈತರು ಕೊಯ್ಲು ಮಾಡುವುದನ್ನೇ ಬಿಟ್ಟಿದ್ದಾರೆ.

---

## ಕೊಬ್ಬರಿ ಬೆಲೆ 3 ದಿನದಲ್ಲಿ ಕ್ವಿಂಟಲ್ ಗೆ 2 ಸಾವಿರ ಏರಿಕೆ

**ಬೆಂಗಳೂರು:** ಯುಗಾದಿ ಹಬ್ಬ ಸಮೀಪಿಸುತ್ತಿರುವಂತೆಯೇ ಕೊಬ್ಬರಿ ಧಾರಣೆ ಒಮ್ಮಿಂದೊಮ್ಮೆಗೆ ಏರಿಕೆ ಕಂಡಿದೆ. ಆರು ತಿಂಗಳ ಹಿಂದೆ ಕ್ವಿಂಟಲ್‌ಗೆ ಸಾವಿರ ರು. ಇಳಿಕೆಯಾಗಿ 14 ಸಾವಿರದ ಆಸುಪಾಸಿನಲ್ಲೇ ಇತ್ತು. ಕಳೆದ ಕೆಲ ದಿನಗಳಿಂದ ನಿಧಾನವಾಗಿ 15 ಸಾವಿರ ಆಗಿತ್ತು. ಈಗ 17,100 ರೂ.ಗೆ ಮಾರಾಟವಾಗಿದೆ. ಚಿಲ್ಲರೆ ದರ ಕೊಬ್ಬರಿ ಕೆ.ಜಿ.ಗೆ 270 ರೂ. ಏರಿಕೆಯಾಗಿದೆ.

ಬೇಡಿಕೆಯಷ್ಟು ಕೊಬ್ಬರಿ ಮಾರುಕಟ್ಟೆಗೆ ಬಾರದಿರುವುದು ಹಾಗೂ ಯುಗಾದಿ ಹಬ್ಬದ ಬೇಡಿಕೆ ದಿಢೀರ್ ಹೆಚ್ಚಳಕ್ಕೆ ಕಾರಣವಾಗಿದೆ. ಶುಕ್ರವಾರ ಅಂದಾಜು 2,397 ಕ್ವಿಂಟಲ್ (5,577 ಚೀಲ) ಆವಕವಾಗಿದ್ದು, ಮೂರು ದಿನಗಳ ಅಂತರದಲ್ಲಿ ಕ್ವಿಂಟಲ್‌ಗೆ 2 ಸಾವಿರ ದರ ಹೆಚ್ಚಳವಾಗಿದೆ. ಬೆಳೆಗಾರರ ಮೊಗದಲ್ಲಿ ಮಂದಹಾಸ ಮೂಡಿಸಿದೆ. ಆದರೆ ಗ್ರಾಹಕರಿಗೆ ಬೆಲೆ ಏರಿಕೆ ಬಿಸಿ ತಟ್ಟುತ್ತಿದೆ.

ಜಿಲ್ಲೆಯ ಅರಸೀಕೆರೆ, ಚನ್ನರಾಯಪಟ್ಟಣ, ಬೇಲೂರು, ಹಾಸನ ತಾಲೂಕಿನ ಅಂದಾಜು 1.18 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ತೆಂಗು ಬೆಳೆ ಬೆಳೆಯಲಾಗುತ್ತಿದೆ. ಇಲ್ಲಿನ ಎಳನೀರು, ತೆಂಗು ಹಾಗೂ ಕೊಬ್ಬರಿಗೆ ದೂರದ ಮುಂಬಯಿ, ಹೊಸದಿಲ್ಲಿ ಸೇರಿದಂತೆ ದೇಶದ ನಾನಾ ಭಾಗದಲ್ಲಿ ಬೇಡಿಕೆ ಇದೆ. ಹೀಗಾಗಿ ಉತ್ತಮ ಬೆಲೆ ಬಂದಿರುವುದು ಬೆಳೆಗಾರರಲ್ಲಿ ಹರ್ಷ ತಂದಿದೆ.

---

## ರನ್ಯಾ ಕಂಪನಿಗಳ ಬೆನ್ನುಬಿದ್ದ ತನಿಖಾ ಸಂಸ್ಥೆಗಳು

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ನಟಿ ರನ್ಯಾ ರಾವ್ ವಿರುದ್ಧ ಚಿನ್ನದ ಕಳ್ಳಸಾಗಣೆ ಆರೋಪದ ಮೇಲೆ ತನಿಖೆ ನಡೆಸಲಾಗುತ್ತಿದ್ದು, ಅಧಿಕಾರಿಗಳು ಅವರ ಜತೆ ನಂಟು ಹೊಂದಿರುವ ಮೂರು ಕಂಪನಿಗಳ ಮೇಲೆ ಕಣ್ಣಿಟ್ಟಿದ್ದಾರೆ.

14 ಕೆ.ಜಿ.ಗೂ ಹೆಚ್ಚು ಚಿನ್ನ ಪತ್ತೆಯಾದ ನಂತರ ರನ್ಯಾಳನ್ನು ಬಂಧಿಸಲಾ ಗಿದ್ದು, ದುಬೈಗೆ ಆಕೆಯ ಆಗಾಗ್ಗೆ ಭೇಟಿ ನೀಡುತ್ತಿರುವುದು ಅನುಮಾನಗ ಳನ್ನು ಹುಟ್ಟುಹಾಕಿದೆ. ತನಿಖಾಧಿಕಾರಿಗಳು ಆಕೆಯ ಹಣಕಾಸಿನ ವಹಿವಾಟುಗಳು ಮತ್ತು ಹವಾಲಾ ಜಾಲದೊಂದಿಗಿನ ಸಂಭಾವ್ಯ ಸಂಪರ್ಕ ಗಳನ್ನು ಸಹ ಪರಿಶೀಲಿಸುತ್ತಿದ್ದಾರೆ, ಇದರಲ್ಲಿ ಆಕೆಯ ಕುಟುಂಬ ಸದಸ್ಯರು ಸಹ ನಿರ್ದೇಶಕರಾಗಿದ್ದಾರೆ.

ಕನ್ನಡ ನಟಿ ರನ್ಯಾ ರಾವ್ ಅವರ ಚಿನ್ನದ ಕಳ್ಳಸಾಗಣೆ ಪ್ರಕರಣವು ಅವರ ವ್ಯವಹಾರ ಚಟುವಟಿಕೆಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಲು ಕಾರಣವಾಗಿದೆ. ರನ್ಯಾ ಅವರೊಂದಿಗೆ ಸಂಪರ್ಕ ಹೊಂದಿರುವ ಮೂರು ಕಂಪನಿಗಳನ್ನು ಅಧಿಕಾರಿಗಳು ಪತ್ತೆ ಹಚ್ಚಿದ್ದಾರೆ, ಇವುಗಳನ್ನು ಈಗ ಕಂದಾಯ ಗುಪ್ತಚರ ನಿರ್ದೇಶನಾಲಯ (ಡಿಆರ್‌ಐ) ಮತ್ತು ಜಾರಿ ನಿರ್ದೇಶನಾಲಯ (ಇ.ಡಿ) ತನಿಖೆ ನಡೆಸುತ್ತಿವೆ.

ಈ ಮೂರು ಕಂಪನಿಗಳು ಬೆಂಗಳೂರಿನಲ್ಲಿ ಒಂದೇ ವಿಳಾಸದಲ್ಲಿ ನೋಂದಾಯಿಸಲ್ಪಟ್ಟಿದ್ದು, ಪ್ರತಿಯೊಂದೂ 10 ಲಕ್ಷ ರು.ಗಳ ಅಧಿಕೃತ ಬಂಡವಾಳ ಹೊಂದಿದೆ. ತನಿಖಾ ಸಂಸ್ಥೆಗಳು ಈ ಕಂಪನಿಗಳು ಹಣ ವರ್ಗಾವಣೆ ಮತ್ತು ಹಣಕಾಸು ಚಟುವಟಿಕೆಗಳನ್ನು ಮರೆ ಮಾಚಲು ನಕಲಿ ವ್ಯವಹಾರಗಳಾಗಿರಬಹುದು ಎಂದು ಶಂಕಿಸಲಾಗಿದೆ. ಚಿನ್ನದ ಕಳ್ಳಸಾಗಣೆ ಜಾಲಕ್ಕೆ ಯಾವುದೇ ಸಂಪರ್ಕಗಳನ್ನು ಕಂಡುಹಿಡಿಯಲು ಡಿಆರ್‌ಐ ಮತ್ತು ಇಡಿ ಕಂಪನಿಗಳ ವರದಿಗಳು, ಬ್ಯಾಲೆನ್ಸ್ ಶೀಟ್‌ಗಳು ಮತ್ತು ಬ್ಯಾಂಕ್ ಸ್ಟೇಟ್‌ಮೆಂಟ್‌ಗಳನ್ನು ಪರಿಶೀಲಿಸಲಿವೆ. 2020 ರ ನಂತರ ಕಂಪನಿಗಳು ನೋಂದಾಯಿಸ ಲ್ಪಟ್ಟಿವೆಯೇ ಎಂದು ತನಿಖೆ ಪರಿಶೀಲಿಸುತ್ತಿದೆ.

**ರನ್ಯಾ, ಹವಾಲಾ ಮೂಲಕ ಹಣ ಪಾವತಿ?**

ರನ್ಯಾ ರಾವ್ ಚಿನ್ನದ ಕಳ್ಳಸಾಗಣೆ ಪ್ರಕರಣದಲ್ಲಿ ಡಿಆರ್‌ಐ ಮತ್ತು ಜಾರಿ ನಿರ್ದೇಶನಾಲಯ (ಇಡಿ) ನಡೆಸುವ ತನಿಖೆಯ ಕೇಂದ್ರ ಬಿಂದು. ಕಳ್ಳಸಾಗಣೆ ಮಾಡಿದ ಚಿನ್ನಕ್ಕೆ ಪಾವತಿ ವಿಧಾನಗಳು. ಕಳ್ಳಸಾಗಣೆ ಮಾಡಿದ ಚಿನ್ನದ ಹಣ ಹವಾಲಾ ಮೂಲಕ ಪಾವತಿಸಲಾಗಿದೆ ಎಂಬ ಅನುಮಾನವಿದೆ. ಇದು ಅಕ್ರಮ ನಗದು ವರ್ಗಾವಣೆ. ಭಾರತದಲ್ಲಿ ಹವಾಲಾ ವಹಿವಾಟುಗಳು ಹಣ ವರ್ಗಾವಣೆ ತಡೆ ಕಾಯ್ದೆ (ಪಿಎಂಎಲ್‌ಎ) ಮತ್ತು ವಿದೇಶಿ ವಿನಿಮಯ ನಿರ್ವಹಣಾ ಕಾಯ್ದೆ (ಎಫ್‌ಇಎಂಎ) ಅಡಿಯಲ್ಲಿ ಕಾನೂನುಬಾಹಿರವಾಗಿದೆ.

#### ದುಬೈನಲ್ಲಿ 'ವೀರಾ ಡೈಮಂಡ್ಸ್' ಹೊಂದಿದ್ದ ರನ್ಯಾ

**ಚಿನ್ನ ಕಳ್ಳಸಾಗಣೆ ಕೇಸ್ ನಲ್ಲಿ ಸಿಕ್ಕಿಹಾಕಿಕೊಂಡು ಬಂಧನವಾಗಿ ತನಿಖೆ ಎದುರಿಸುತ್ತಿರುವ ಸ್ಯಾಂಡಲ್ವುಡ್ ನಟಿ ಹರ್ಷವರ್ಧಿನಿ ರನ್ಯಾ ಅಲಿಯಾಸ್ ರನ್ಯಾ ರಾವ್ ಈ ವರ್ಷದ ಜನವರಿಯಲ್ಲಿ ತನ್ನ ಪಾಸ್‌ಪೋರ್ಟ್ ಅನ್ನು ನವೀಕರಿಸಿದ ನಂತರ ಮಾರ್ಚ್ 3ರಂದು ಬಂಧನವಾಗುವ ಮೊದಲು ಹದಿನೈದು ದಿನಗಳಲ್ಲಿ ಎರಡು ಬಾರಿ ವಿದೇಶಕ್ಕೆ ಹೋಗಿ ಬಂದಿದ್ದರು. ಗುಪ್ತಚರ ನಿರ್ದೇಶನಾಲಯದ ತಪಾಸಣೆಯಿಂದ ತಪ್ಪಿಸಿಕೊಂಡಿದ್ದರು. ಅವರ ಕೊನೆಯ ನಾಲ್ಕು ಭೇಟಿಗಳು ಮಾರ್ಚ್ 3ಕ್ಕೆ ಮೊದಲು 24 ರಿಂದ 48 ಗಂಟೆಗಳ ನಡುವೆ ನಡೆದಿವೆ. ಆಗಾಗ್ಗೆ ವಿಮಾನದಲ್ಲಿ ದೇಶ ವಿದೇಶಗಳಿಗೆ ಪ್ರಯಾಣ ಮಾಡುತ್ತಿದ್ದ ರನ್ಯಾ, ಕಳೆದ ವರ್ಷದಲ್ಲಿ 25 ಬಾರಿ ಮತ್ತು ಬಂಧನಕ್ಕೆ ಮುಂಚಿನ ಹದಿನೈದು ದಿನಗಳಲ್ಲಿ ನಾಲ್ಕು ಬಾರಿ ದುಬೈ ಮತ್ತು ಇತರ ಕೆಲವು ದೇಶಗಳಿಗೆ ಭೇಟಿ ನೀಡಿದ್ದರು. ಅವರು ಯುನೈಟೆಡ್ ಅರಬ್ ಎಮಿರೇಟ್ಸ್ ನಿವಾಸಿ ಗುರುತಿನ ಚೀಟಿಯನ್ನು ಹೊಂದಿದ್ದಾರೆ ಮತ್ತು ದುಬೈನಲ್ಲಿ 'ವೀರಾ ಡೈಮಂಡ್ಸ್' ಎಂಬ ಕಂಪನಿಯನ್ನು ಹೊಂದಿದ್ದಾರೆಂದು ತಿಳಿದುಬಂದಿದೆ.**

#### ಮೂರು ಕಂಪನಿಗಳು

- **ರನ್ಯಾ ರಾವ್ ಫೋಟೋಗ್ರಫಿ ಪ್ರೈವೇಟ್ ಲಿಮಿಟೆಡ್: ರನ್ಯಾ ತಾನು ವನ್ಯಜೀವಿ ಛಾಯಾಗ್ರಾಹಕ ಎಂದು ಹೇಳಿಕೊಂಡು ವ್ಯವಹಾರ ನಡೆಸುತ್ತಿದ್ದ ಸಂಸ್ಥೆ**
- **2021ರಲ್ಲಿ ಸ್ಥಾಪನೆಯಾದ ಬಿರಸ್ ಗ್ರೀನ್ಸ್ ಪ್ರೈವೇಟ್ ಲಿಮಿಟೆಡ್: ಕೃಷಿಯ ಮೇಲೆ, ವಿಶೇಷವಾಗಿ ಧಾನ್ಯ ಕೃಷಿಯ ಮೇಲೆ ಕೇಂದ್ರೀಕರಿಸಿರುವ ಕಂಪನಿ**
- **ಕ್ಸಿರೋಡಾ ಇಂಡಿಯಾ ಪ್ರೈವೇಟ್ ಲಿಮಿಟೆಡ್: ಉಕ್ಕಿನ ಉತ್ಪನ್ನಗಳನ್ನು ತಯಾರಿಸಲು 2022ರಲ್ಲಿ ಸ್ಥಾಪನೆಯಾದ ಸಂಸ್ಥೆ**

---

ಕಾವೇರಿ ನದಿ ಮಲೀನತೆ, ನದಿ ಪಾತ್ರಗಳ ಒತ್ತುವರಿ ತಡೆಯಲು ತಂಡ ರಚನೆಗೆ ಕ್ರಮ

## ನೀರಿನ ಸದ್ಬಳಕೆ ಅಭಿಯಾನ

**ಮಡಿಕೇರಿ:** ಕಾವೇರಿ ನದಿ ಮಲೀನತೆ ಹಾಗೂ ನದಿ ಪಾತ್ರಗಳ ಒತ್ತುವರಿ ತಡೆಯಲು ತಂಡ ರಚನೆಗೆ ಕ್ರಮವಹಿಸಲಾಗುವುದು ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ಅವರು ಹೇಳಿದರು.

ಭಾಗಮಂಡಲ ಹೆಲಿಪ್ಯಾಡ್‌ನಲ್ಲಿ ಶಿವಕುಮಾರ್ ಅವರು ಮಾಧ್ಯಮಗಳಿಗೆ ಶುಕ್ರವಾರ ಪ್ರತಿಕ್ರಿಯೆ ನೀಡಿದರು.

ಕಾವೇರಿ ನದಿ ಮಲೀನತೆ ಹಾಗೂ ಒತ್ತುವರಿ ಬಗ್ಗೆ ಕೇಳಿದಾಗ, ಈ ನೆಲ,ಜಲ, ಇತಿಹಾಸ, ಪರಂಪರೆ ಉಳಿಸಲು ಏನು ಬೇಕೋ ಅದೆಲ್ಲವನ್ನು ನಾವು ಮಾಡುತ್ತೇವೆ ಎಂದು ಹೇಳಿದರು.

**ನೀರಿನ ಸದ್ಬಳಕೆ ಅಭಿಯಾನ:** ವಿಶ್ವ ಜಲದಿನದ ಅಂಗವಾಗಿ ಒಂದು ಒಂದು ವಾರಗಳ ಕಾಲ ಜಲ ಸಂರಕ್ಷಣೆ ಅಭಿಯಾನ ನಡೆಯಲಿದೆ. ನೀರಿನ ದುರ್ಬಳಕೆ ತಡೆಗಟ್ಟಿ, ಸದ್ಬಳಕೆ ಮಾಡುವಂತೆ ಜಾಗೃತಿ ಮೂಡಿಸುವುದೇ ಕಾವೇರಿ ಆರತಿ ಉದ್ದೇಶ. ಕಳೆದ ವರ್ಷ ಉತ್ತಮ ಮಳೆಯಾದಂತೆ ಈ ವರ್ಷವೂ ಉತ್ತಮವಾಗಿ ಮಳೆಯಾಗಿ ಜನರ ಬದುಕು ಹಸನಾಗಲಿ ಎಂದು ತಲಕಾವೇರಿಯಲ್ಲಿ ಪೂಜೆ ಸಲ್ಲಿಸುತ್ತಿದ್ದೇನೆ ಎಂದರು.

ಆಡಳಿತ ಪಕ್ಷಕ್ಕೆ ಇಬ್ಬರು ಶಾಸಕರನ್ನು ಕೊಟ್ಟಿರುವ ಕೊಡಗಿನ ಮಹಾಜನತೆಗೆ ಸಾಷ್ಟಾಂಗ ನಮಸ್ಕಾರಗಳು. ಕೊಡಗಿನಿಂದ ಹರಿಯುವ ಕಾವೇರಿ ನೀರು ಬೆಂಗಳೂರಿನ ಜನರ ಬದುಕಿನಲ್ಲಿ ಸಂತೋಷ ಉಂಟು ಮಾಡಿದೆ. ದಕ್ಷಿಣ ಭಾರತದ ಜೀವನದಿ ಆದ ಕಾರಣ ಮೊದಲ ಪೂಜೆ ತಲಕಾವೇರಿಯಲ್ಲಿ ಸಲ್ಲಬೇಕು. ಆದ್ದರಿಂದ ಇಲ್ಲಿಂದ ನೀರನ್ನು ತೆಗೆದುಕೊಂಡು ಹೋಗಿ ಕಾವೇರಿ ಆರತಿ ಮಾಡಲಾಗುತ್ತಿದೆ ಎಂದು ತಿಳಿಸಿದರು.

**ಬೆಂಗಳೂರಿನ ಸ್ಯಾಂಕಿ ಕೆರೆಯ ಕಾವೇರಿ ಆರತಿ ಕಾರ್ಯಕ್ರಮಕ್ಕೆ ಕಾವೇರಿಯಿಂದ ನೀರು ತರುವ ಮುನ್ನ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಕೊಡಗಿನ ತಲಕಾವೇರಿಯಲ್ಲಿ ಪವಿತ್ರ ಸ್ನಾನ ಮಾಡಿದರು.**

> **ರಾಜ್ಯದ ಹಿತಕ್ಕೆ ಒಳ್ಳೆ ಕೆಲಸಕ್ಕೆ ಏನಿದ್ದರೂ ನಾವು ಬೆಂಬಲ ನೀಡುತ್ತೇವೆ. ಯಾವ ಗಲಾಟೆಗಳನ್ನೂ ಮಾಡದೆ ಯಾವ ಬಂದ್ ಕೂಡ ಮಾಡದೇ ದಯವಿಟ್ಟು ಎಲ್ಲರೂ ಶಾಂತರೀತಿಯಿಂದ ಇರಬೇಕು ಎಂದು ಮನವಿ ಮಾಡುತ್ತೇನೆ.**
> **ಡಿ.ಕೆ.ಶಿವಕುಮಾರ್,** ಡಿಸಿಎಂ

#### ಹನಿಟ್ರ್ಯಾಪ್ ಪ್ರಕರಣ ಶೀಘ್ರ ತನಿಖೆಯಾಗಲಿ

**ಹಿಟ್ ಅಂಡ್ ರನ್ ರೀತಿ ಹನಿಟ್ರ್ಯಾಪ್ ಪ್ರಕರಣವೂ ಆಗಿದೆ. ನಾನು ಈ ಬಗ್ಗೆ ಗುರುವಾರವೇ ಪೊಲೀಸರಿಗೆ ದೂರು ನೀಡಲಿ ಎಂದು ಸಲಹೆ ನೀಡಿದ್ದೆ. ಇದರ ಬಗ್ಗೆ ಕ್ರಮ ತೆಗೆದುಕೊಳ್ಳಲು ತಡ ಮಾಡಬಾರದು. ಶೀಘ್ರ ತನಿಖೆಯಾಗಬೇಕು ಎಂದು ನಾನೂ ಒತ್ತಾಯ ಮಾಡುತ್ತಿದ್ದೇನೆ ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ಅವರು ಹೇಳಿದರು. ಸುದ್ದಿಗಾರರೊಂದಿಗೆ ಮಾತನಾಡಿ, 48 ಶಾಸಕರು ಹನಿಟ್ರ್ಯಾಪ್ ಗೆ ಒಳಗಾಗಿದ್ದಾರೆ. ಸರಕಾರದಲ್ಲಿ ಸಚಿವರಿಗೆ ರಕ್ಷಣೆ ಇಲ್ಲವೇ ಎಂದು ಕೇಳಿದಾಗ, ಯಾರು ಹೇಳಿದ್ದು ರಕ್ಷಣೆಯಿಲ್ಲವೆಂದು? ಸುಮ್ಮನೆ ಹನಿಟ್ರ್ಯಾಪ್ ಮಾಡುವವರು ನಿಮ್ಮ ಬಳಿ ಬರುತ್ತಾರೆಯೇ? ನೀವು ಹಲೋ ಎಂದರೆ ಅವರು ಹಲೋ ಎನ್ನುತ್ತಾರೆ.**

---

ಅಂಬಿಯ ಮೆಚ್ಚಿನ ನಿರ್ದೇಶಕ | ಚಿತ್ರರಂಗದ ಕಲಾವಿದರು, ಗಣ್ಯರಿಂದ ಸಂತಾಪ

## ಖ್ಯಾತ ನಿರ್ದೇಶಕ ಎ.ಟಿ ರಘು ನಿಧನ

**ಬೆಂಗಳೂರು:** ಕನ್ನಡದ ಖ್ಯಾತ ನಿರ್ದೇಶಕ ಎ.ಟಿ.ರಘು(76) ನಿಧನರಾಗಿದ್ದಾರೆ. ಹಲವು ವರ್ಷಗಳಿಂದ ವಯೋಸಹಜ ಅನಾರೋಗ್ಯದಿಂದ ಬಳಲುತ್ತಿದ್ದ ರಘು ಅವರು ಬೆಂಗಳೂರಿನ ಆರ್.ಟಿ ನಗರದಲ್ಲಿರುವ ತಮ್ಮ ನಿವಾಸದಲ್ಲಿ ಕೊನೆಯುಸಿರೆಳೆದಿದ್ದಾರೆ. ರಘು ಅವರ ನಿಧನಕ್ಕೆ ಕನ್ನಡ ಚಿತ್ರರಂಗದ ಕಲಾವಿದರು, ನಿರ್ದೇಶಕರು, ನಿರ್ಮಾಪಕರು, ಗಣ್ಯರು ಸಂತಾಪ ಸೂಚಿಸಿದ್ದಾರೆ.

ಕೊಡಗಿನವರಾದ ರಘು ಅವರು ಕನ್ನಡ ಚಿತ್ರರಂಗದಲ್ಲಿ ಬರಹಗಾರರಾಗಿ, ಸಹಾಯಕ ನಿರ್ದೇಶಕರಾಗಿ, ನಿರ್ಮಾಪಕರಾಗಿಯೂ ಗುರುತಿಸಿಕೊಂಡಿದ್ದಾರೆ. ನಿರ್ಮಾಪಕ ಹಾಗೂ ನಿರ್ದೇಶಕರ ವಿಠಲಾಚಾರ್ಯ ಅವರ ಮಾರ್ಗದರ್ಶನದಲ್ಲಿ ಚಿತ್ರರಂಗ ಪ್ರವೇಶಿಸಿದ ರಘು, ವೈ.ಆರ್.ಸ್ವಾಮಿ ಅವರ ಜತೆಗೆ ಸಹಾಯಕ ನಿರ್ದೇಕರಾಗಿ ಕಾರ್ಯನಿರ್ವಹಿಸಿದರು. 1980ರಲ್ಲಿ ತೆರೆಗೆ ಬಂದ ನ್ಯಾಯ ನೀತಿ ಧರ್ಮ ಚಿತ್ರವನ್ನು ನಿರ್ದೇಶಿಸುವ ಮೂಲಕ ಸ್ವಂತಂತ್ರ್ಯ ನಿರ್ದೇಶಕರಾಗಿ ಗುರುತಿಸಿಕೊಂಡರು. ಅಂಬರೀಶ್ ಹಾಗೂ ಆರತಿ ಪ್ರಮುಖ ಪಾತ್ರದಲ್ಲಿ ನಟಿಸಿದ್ದ ಈ ಚಿತ್ರ ಯಶಸ್ಸು ಪಡೆಯಿತು.

ಆ ಬಳಿಕ ಶಂಕರ್ ಸುಂದರ್, ಆಶಾ ಚಿತ್ರಗಳನ್ನು ನಿರ್ದೇಶಿಸಿದರು. ಕನ್ನಡದಲ್ಲಿ ಹಿಟ್ ಆದ ಆಶಾ ಹಿಂದಿಗೂ ರಿಮೇಕ್ ಆಯಿತು. ಮೇರಿ ಅದಾಲತ್ ಶೀರ್ಷಿಕೆಯಲ್ಲಿ ಚಿತ್ರ ಮೂಡಿಬಂದ ಈ ಚಿತ್ರವನ್ನು ರಘು ಅವರೇ ನಿರ್ದೇಶಿಸಿದರು. ಇದರಲ್ಲಿ ಸೂಪರ್ ಸ್ಟಾರ್ ರಜನಿಕಾಂತ್ ನಾಯಕರಾಗಿ ನಟಿಸಿದ್ದರು. ಹಿಂದಿ ಮಾತ್ರವಲ್ಲ ಮಲೆಯಾಳಂನ ಕಟ್ಟು ರಾಣಿ ಚಿತ್ರವನ್ನು ನಿರ್ದೇಶಿಸಿದ ರಘು ಮಾಲಿವುಡ್‌ನಲ್ಲಿಯೂ ಪ್ರಸಿದ್ಧಿ ಪಡೆದರು. ಹಾಗಾಗಿ ಅಂದೇ ರಘು ಅವರಿಗೆ ಕನ್ನಡ ಸೇರಿದಂತೆ ಹಲವು ಭಾಷೆಗಳಲ್ಲಿ ಬೇಡಿಕೆಯಿತ್ತು.

**ಅಂಬಿಯ ಮೆಚ್ಚಿನ ನಿರ್ದೇಶಕ**

ಸುಮಾರು ಐವತ್ತಕ್ಕೂ ಹೆಚ್ಚು ಚಿತ್ರಗಳನ್ನು ನಿರ್ದೇಶಿಸಿರುವ ಎ.ಟಿ.ರಘು ಕನ್ನಡ ಚಿತ್ರರಂಗದಲ್ಲಿ ತಮ್ಮದೇ ಆದ ಛಾಪು ಮೂಡಿಸಿದ್ದರು. ಅಂಬರೀಶ್ ಅಭಿಯದ ಇಪ್ಪತ್ತೇಳು ಸಿನಿಮಾಗಳನ್ನು ನಿರ್ದೇಶಿಸಿರುವ ಖ್ಯಾತಿ ರಘು ಅವರಿಗೆ ಸಲ್ಲುತ್ತದೆ. ರಘು ಅವರ ಚೊಚ್ಚಲ ನಿರ್ದೇಶನದ ಚಿತ್ರ ನ್ಯಾಯ ನೀತಿ ಧರ್ಮ ಚಿತ್ರದಲ್ಲಿಯೂ ಅಂಬರೀಶ್ ಅವರೇ ನಾಯಕರಾಗಿ ನಟಿಸಿದ್ದರು. ಅವಳ ನೆರಳು, ಮಂಡ್ಯದ ಗಂಡು, ಮೈಸೂರು ಜಾಣ, ಮಿಡಿದ ಹೃದಯ ಸಿನಿಮಾಗಳು ಭರ್ಜರಿ ಯಶಸ್ಸು ಪಡೆದವು. ಟೈಗರ್ ಪ್ರಭಾಕರ್ ಅಭಿನಯದ ಕಾಡಿನ ರಾಜ, ಜೈಲರ್ ಜಗನ್ನಾಥ್, ಪುಟ್ಟ ಹೆಂಡ್ತಿ ಚಿತ್ರಗಳನ್ನು ರಘು ನಿರ್ದೇಶಿಸಿ ಮೇರು ನಿರ್ದೇಶಕರಾಗಿ ಗುರುತಿಸಿಕೊಂಡರು. ಮಂಡ್ಯದ ಗಂಡು ಮತ್ತು ಬೇಟೆಗಾರ ಚಿತ್ರಗ ಳಿಗೆ ರಘು ಅವರೇ ಬಂಡವಾಳ ಹೂಡಿದ್ದರು. ಸಿನಿಮಾ ಮಾತ್ರವಲ್ಲ ಐನ್‌ಮನೆ, ಪೊಂ ಬೊಳ್ಚ, ತಾಮನೆ, ಜಮ್ಮ ಭೂಮಿ ಮತ್ತು ನಂಗ ಕೊಡವ ಧಾರಾವಾಹಿಗಳನ್ನು ನಿರ್ದೇಶಿಸಿದ್ದಾರೆ. ದೂರದರ್ಶನದಲ್ಲಿ ಪ್ರಸಾರವಾಗುತ್ತಿದ್ದ ಧಾರಾವಾಹಿಗಳು ಪ್ರೇಕ್ಷಕರ ಮೆಚ್ಚುಗೆ ಪಡೆದಿದ್ದವು.



#### ಪ್ರಶಸ್ತಿಗಳು

**ಪುಟ್ಟಣ್ಣ ಕಣಗಾಲ್, ಕನ್ನಡ ರಾಜ್ಯೋತ್ಸವ ಪ್ರಶಸ್ತಿ , ಕೊಡವ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಮುಂತಾದ ಪ್ರಶಸ್ತಿಗಳು ರಘು ಅವರಿಗೆ ಸಂದಿವೆ.**



#### ಸಿನಿಮಾಗಳು

- ನ್ಯಾಯ ನೀತಿ ಧರ್ಮ
- ಆಶಾ • ಮಂಡ್ಯದ ಗಂಡು
- ಆಪತ್ಬಾಂದವ • ನ್ಯಾಯಕ್ಕಾಗಿ ನಾನು
- ಜೈಲರ್ ಜಗನ್ನಾಥ್
- ಮಿಡಿದ ಹೃದಯಗಳು
- ಕಾಡಿನ ರಾಜ • ಪಟ್ಟ ಹೆಂಡ್ತಿ
- ಗೂಂಡಾಗುರು

---

# ಮರಾಠಿ ಪುಂಡರ ಪುಂಡಾಟ ಖಂಡಿಸಿ ಇಂದು ಕರ್ನಾಟಕ ಬಂದ್

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಗಡಿ ಜಿಲ್ಲೆ ಬೆಳಗಾವಿಯಲ್ಲಿ ಆಗಾಗ ತಗಾದೆ ತೆಗೆಯುತ್ತಿರುವ ಮರಾಠಿ ಸಂಘಟನೆಗಳ ವಿರುದ್ಧ ಇಂದು (ಶನಿವಾರ) ಕರ್ನಾಟಕ ಬಂದ್ ಮಾಡುವ ಮೂಲಕ ಎಚ್ಚರಿಕೆ ನೀಡಲು ಕನ್ನಡ ಪರ ಸಂಘಟನೆಗಳು ಸಜ್ಜಾಗಿವೆ.

ಶನಿವಾರ ಬೆಳಗ್ಗೆ 6ರಿಂದ ಸಂಜೆ 6 ಗಂಟೆಯವರೆಗೆ ರಾಜ್ಯಾದ್ಯಂತ ಬಂದ್ ನಡೆ ಸಲಿವೆ. ಈ ಬಂದ್‌ಗೆ ಬೆಂಬಲ ನೀಡುವಂತೆ ಕನ್ನಡ ಪರ ಹೋರಾಟಗಾರ ವಾಟಾಳ್ ನಾಗರಾಜ್ ಮನವಿ ಮಾಡಿದ್ದು, ಬೆಂಗಳೂರು ಸೇರಿದಂತೆ ರಾಜ್ಯದ ಹಲವು ಜಿಲ್ಲೆಗಳಿಗೆ ಬಂದ್ ಬಿಸಿ ತಟ್ಟುವುದು ಖಚಿತವಾಗಿದೆ. ಬಂದ್ ಸಂದರ್ಭದಲ್ಲಿ ಸಾರಿಗೆ ಸೇವೆಗಳಾದ ಬಸ್, ಆಟೋ, ಮತ್ತಿತರ ವಾಹನಗಳ ಸಂಚಾರ ನಡೆಸ ದಂತೆ ಕನ್ನಡಪರ ಸಂಘಟನೆಗಳು ಕರೆ ನೀಡಿವೆ.

ಬಂದ್‌ಗೆ ಬೆಂಬಲ ನೀಡಿರುವ ಸಂಘಟನೆಗಳು: ಬಂದ್‌ಗೆ ಕರ್ನಾಟಕ ರಕ್ಷಣಾ ವೇದಿಕೆಯ ಶಿವರಾಮೇಗೌಡ ಬಣ ಬೆಂಬಲ ಸೂಚಿಸಿದೆ. ಹೋಟೇಲ್ ಮಾಲೀಕರ ಸಂಘ ನೈತಿಕ ಬೆಂಬಲ ಮಾತ್ರ ಘೋಷಿಸಿದೆ. ಕರ್ನಾಟಕ ಸಾರಿಗೆ ನೌಕರರ ಒಕ್ಕೂಟ ಬಂದ್‌ಗೆ ಬೆಂಬಲ ನೀಡುವ ಭರವಸೆ ನೀಡಿದೆ. ಕೆಎಸ್‌ಆರ್‌ಟಿಸಿ, ಬಿಎಂಟಿಸಿ ನೌಕರರ ಸಂಘದಿಂದ ಕೂಡ ಬೆಂಬಲ ವ್ಯಕ್ತವಾಗಿದೆ.

ಉಳಿದಂತೆ ಓಲಾ, ಉಬರ್ ಅಸೋಸಿಯೇಷನ್, ಎಪಿಎಂಸಿ ಸೇರಿ ಕೆಲ ಸಂಘಟನೆಗಳು ಬಂದ್‌ಗೆ ಬೆಂಬಲ ನೀಡಲು ಸಜ್ಜಾಗಿವೆ.

**ಬೇಡಿಕೆಗಳು:** ಪ್ರತಿಭಟನಾಕಾರರು ಹಲವು ಬೇಡಿಕೆಗಳನ್ನು ಮುಂದಿಟ್ಟಿದ್ದು, ಅದರಲ್ಲಿ ಉತ್ತರ ಕರ್ನಾಟಕ ಮತ್ತು ರಾಜ್ಯದ ಗಡಿ ಪ್ರದೇಶಗಳ ಒಟ್ಟಾರೆ ಅಭಿವೃದ್ಧಿಯೂ ಒಂದಾಗಿದೆ. ಅಲ್ಲದೆ, ಬೆಳಗಾವಿಯನ್ನು ರಕ್ಷಿಸಲು ಕಠಿಣ ಕ್ರಮ ವಹಿಸಬೇಕು. ಕರ್ನಾಟಕ ವಿರೋಧಿ ಚಟುವಟಿಕೆ ಹಿನ್ನೆಲೆಯಲ್ಲಿ ಮಹಾರಾಷ್ಟ್ರ ಏಕೀಕರಣ ಸಮಿತಿ (ಎಂಇಎಸ್) ಮೇಲೆ ನಿಷೇಧ ಹೇರಬೇಕು. ಕನ್ನಡ ಹಿತಾಸಕ್ತಿಗಳ ವಿರುದ್ಧ ಹಿಂಸಾಚಾರದಲ್ಲಿ ಭಾಗಿಯಾಗಿರುವ ಎಂಇಎಸ್ ಮತ್ತು ಶಿವಸೇನಾ ಕಾರ್ಯಕರ್ತರನ್ನು ಗಡೀಪಾರು ಮಾಡಬೇಕು. ಕನ್ನಡದ ಕಂಡಕ್ಟರ್ ಮೇಲೆ ದಾಳಿ ಮಾಡಿದವರಿಗೆ ಕಠಿಣ ಶಿಕ್ಷೆ ವಿಧಿಸಬೇಕು ಹಾಗೂ ಕರ್ನಾಟಕದಿಂದ ಸಂಭಾಜಿಯ ಪ್ರತಿಮೆಯನ್ನು ತೆಗೆದುಹಾಕಬೇಕು ಎಂಬುದು ಅವರ ಆಗ್ರಹವಾಗಿದೆ.

**17 ಜಿಲ್ಲೆಗಳಲ್ಲಿ ಬಂದ್‌ಗೆ ಬೆಂಬಲ ನಿರಾಕರಣೆ:** ಇನ್ನೂ ಎಂಇಎಸ್ ಪುಂಡಾಟ ಖಂಡಿಸಿ ಕರೆ ನೀಡಿರುವ ಬಂದ್‌ಗೆ 17 ಜಿಲ್ಲೆಗಳು ಬೆಂಬಲ ನೀಡಿಲ್ಲ. 11 ಜಿಲ್ಲೆಗಳಲ್ಲಿ ಮಿಶ್ರಪ್ರತಿಕ್ರಿಯೆ ವ್ಯಕ್ತವಾಗಿದೆ. 2 ಜಿಲ್ಲೆಗಳು ಮಾತ್ರ ಸಂಪೂರ್ಣ ಬೆಂಬಲ ನೀಡಿವೆ. ಕರ್ನಾಟಕ ಬಂದ್‌ಗೆ ಬೆಳಗಾವಿ, ಮಂಡ್ಯದಲ್ಲಿ ಮಾತ್ರ ಸಂಪೂರ್ಣ ಬೆಂಬಲ ವ್ಯಕ್ತವಾಗಿದೆ. ಉಳಿದಂತೆ ಬಾಗಲಕೋಟೆ, ಚಾಮರಾಜನಗರ, ಚಿಕ್ಕಮಗಳೂರು, ಚಿತ್ರದುರ್ಗ, ದಾವಣಗೆರೆ, ಧಾರವಾಡ, ಗದಗ, ಕೋಲಾರ, ಕೊಪ್ಪಳ, ರಾಯಚೂರು, ರಾಮನಗರ, ಉಡುಪಿ, ಯಾದಗಿರಿ ಜಿಲ್ಲೆಗಳಲ್ಲಿ ಮಿಶ್ರ ಪ್ರತಿಕ್ರಿಯೆ ವ್ಯಕ್ತವಾಗಿದೆ.

> **ಬಂದ್ ಮಾಡುವುದು ಖಚಿತ. ಯಾವುದೇ ಕಾರಣಕ್ಕೂ ಹಿಂದೆ ಸರಿಯುವ ಮಾತಿಲ್ಲ. ಕನ್ನಡದ ಚಾಲಕ, ಕಂಡಕ್ಟರ್‌ಗಳ ಮೇಲೆ ಹಲ್ಲೆಯಾಗಿದೆ. ಆದ್ದರಿಂದ ಚಾಲಕರು ಬೆಂಬಲಿಸಬೇಕು. ಬಂದ್‌ಗೆ ಕರ್ನಾಟಕ ರಕ್ಷಣಾ ವೇದಿಕೆಯ ಪ್ರವೀಣ್ ಶೆಟ್ಟಿ ಬಣ, ರಾಜ್ಯ ಆಟೋ ಯೂನಿಯನ್, ಲಾರಿ ಮಾಲೀಕರ ಸಂಘ, ಆಟೋ ಚಾಲಕರ ಸಂಘಗಳು ಸೇರಿದಂತೆ ಹಲವು ಸಂಘಟನೆಗಳು ಸಂಪೂರ್ಣ ಬೆಂಬಲ ಘೋಷಿಸಿವೆ.**
> **-ವಾಟಾಳ್ ನಾಗರಾಜ್,** ಕನ್ನಡ ಹೋರಾಟಗಾರ

#### ಸಾರಿಗೆ ಸಂಘಟನೆಗಳಿಗೆ ಪೊಲೀಸ್ ನೋಟಿಸ್

**ಮರಾಠಿ ಸಂಘಟನೆಗಳ ಪುಂಡಾಟದ ವಿರುದ್ಧ ಧ್ವನಿ ಎತ್ತಲು ಮುಂದಾಗಿರುವ ಕನ್ನಡಪರ ಸಂಘಟನೆಗಳು ಇಂದು ಕರ್ನಾಟಕ ಬಂದ್‌ಗೆ ಕರೆ ಕೊಟ್ಟಿದೆ. ಖಾಸಗಿ ಸಾರಿಗೆ ಸಂಘಟನೆಗಳು ಕೂಡ ಈಗಾಗಲೇ ಬೆಂಬಲ ಘೋಷಿಸಿವೆ. ಹೀಗಿರುವಾಗಲೇ ಬಂದ್ ಮಾಡದಂತೆ ಖಾಸಗಿ ಸಾರಿಗೆ ಸಂಘಟನೆಗಳ ಒಕ್ಕೂಟದ ಅಧ್ಯಕ್ಷರಿಗೆ ಪೊಲೀಸ್ ಆಯುಕ್ತ ದಯಾನಂದ ಅವರು ನೋಟಿಸ್ ಜಾರಿ ಮಾಡಿದ್ದಾರೆ.**

**ನೋಟಿಸ್‌ನಲ್ಲಿ ಏನಿದೆ?: ಮಾ. 22ರಂದು ಕನ್ನಡ ಪರ ಸಂಘಟನೆಗಳು ಮತ್ತು ರಾಜ್ಯದ ವಿವಿಧ ಸಂಘಟನೆಗಳ ವತಿಯಿಂದ ಮರಾಠಿಗರ ಪುಂಡಾಟಿಕೆ, ಎಂಇಎಸ್ ನಿಷೇಧ, ಕಳಸಾ ಬಂಡೂರಿ ಮಹದಾಯಿ ಯೋಜನೆ ಆರಂಭ, ಕಲ್ಯಾಣ ಕರ್ನಾಟಕ ಅಭಿವೃದ್ಧಿಯಾಗಬೇಕು ಮತ್ತು ಕಂಡಕ್ಟರ್ ಮೇಲೆ ಮರಾಠಿಗರ ದಾಳಿ ಸಮಗ್ರ ತನಿಖೆ ಆಗಬೇಕೆಂದು ಒತ್ತಾಯಿಸಿ ಕರ್ನಾಟಕ ಬಂದ್ ಕರೆಕೊಟ್ಟಿರುವ ಹಿನ್ನೆಲೆಯಲ್ಲಿ ಪ್ರತಿಭಟನೆ, ಮುಷ್ಕರ ಮತ್ತು ಮೆರವಣಿಗೆಯನ್ನು ಹಮ್ಮಿಕೊಂಡಿರುವ ವಿಚಾರ ತಿಳಿದುಬಂದಿದ್ದು, ಅದರ ಭಾಗವಾಗಿ ತಾವುಗಳು ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಯಕರ್ತರನ್ನು ಸೇರಿಸಿಕೊಂಡು ಪುರಭವನ ಮುಂಭಾಗದಿಂದ ಸ್ವಾತಂತ್ರ್ಯ ಉದ್ಯಾನದವರೆಗೆ ಮೆರವಣಿಗೆಯನ್ನು ಹಮ್ಮಿಕೊಂಡಿರುವುದಾಗಿ ತಿಳಿದುಬಂದಿದೆ. ಬೆಂಗಳೂರು ನಗರದ ಸ್ವಾತಂತ್ರ್ಯ ಉದ್ಯಾನ ಹೊರತುಪಡಿಸಿ, ಉಳಿದ ಕಡೆಗಳಲ್ಲಿ ಸಾರ್ವಜನಿಕರ ಸಂಚಾರ ಹಾಗೂ ನೆಮ್ಮದಿ ಭಂಗವಾಗುವಂತೆ ಪ್ರತಿಭಟನೆ, ಮುಷ್ಕರ ಮತ್ತು ಮೆರವಣಿಗೆಗಳನ್ನು ಮಾಡುವಂತಿಲ್ಲ. ಈ ಕುರಿತು ಹೈಕೋರ್ಟ್ ಡಬ್ಲ್ಯೂ.ಪಿ. ಸಂಖ್ಯೆ 5781/2021 (ಜಿಎಂ- ಆರ್‌ಇಎಸ್ -ಪಿಐಎಲ್), ಆದೇಶ ಮಾಡಿದೆ. ನ್ಯಾಯಾಲಯದ ಆದೇಶವನ್ನು ಪಾಲನೆ ಮಾಡಬೇಕು. ಪ್ರತಿಭಟನೆಯಾಗಲಿ, ಮುಷ್ಕರವಾಗಲಿ ಮತ್ತು ಮೆರವಣಿಗೆಯಾಗಲಿ ಮಾಡುವಂತಿಲ್ಲ. ಒಂದು ವೇಳೆ ಮಾನ್ಯ ನ್ಯಾಯಾಲಯದ ಆದೇಶವನ್ನು ಉಲ್ಲಂಘಿಸಿದಲ್ಲಿ ತಮ್ಮ ವಿರುದ್ಧ ಕಾನೂನು ರೀತಿ ಕ್ರಮ ಜರುಗಿಸಲಾಗುವುದು ಎಂದು ನೋಟಿಸ್ ಜಾರಿ ಮಾಡಲಾಗಿದೆ.**

#### ಏನಿರುತ್ತೆ?

- ಹಾಲು, ದಿನಪತ್ರಿಕೆ,ಮೆಡಿಕಲ್
- ವೈದ್ಯಕೀಯ ಸೇವೆ
- ಮೆಟ್ರೋ ಸಂಚಾರ, ಬಿಎಂಟಿಸಿ, ಕೆಎಸ್‌ಆರ್‌ಟಿ, ರೈಲು
- ಶಾಲಾ ವಾಹನದ ವ್ಯವಸ್ಥೆ, ಖಾಸಗಿ ಬಸ್
- ಆ್ಯಂಬುಲೆನ್ಸ್
- ತರಕಾರಿ,ಹೂ, ಹಣ್ಣುಗಳು, ಸೂಪರ್ ಮಾರ್ಕೆಟ್
- ಹೋಟೆಲ್‌ಗಳು

#### ಏನಿರಲ್ಲ?

- ಮಧ್ಯಾಹ್ನ ತನಕ ಥಿಯೇಟರ್‌ಗಳು ಬಂದ್
- ಓಲಾ-ಊಬರ್ ಸೇವೆಯಲ್ಲಿ ವ್ಯತ್ಯಯ
- 35% ಆಟೋ ಸೇವೆಯಲ್ಲಿ ತುಸು ವ್ಯತ್ಯಯ
- ಗೂಡ್ಸ್ ವಾಹನಗಳ ಸೇವೆಯಲ್ಲಿ ವ್ಯತ್ಯಯ

# ಆರಾಮ

ವಿಶ್ವವಾಣಿ
@vishwavaninews
ಬೆಂಗಳೂರು
22-03-2025
ಶನಿವಾರ

# ಹುಲಿಗಳು ನೀರು ಕುಡಿಯುತ್ತಿದ್ದ ಕೆರೆ!

ನಮ್ಮ ರಾಜ್ಯವನ್ನು ಕೆರೆಗಳ ನಾಡು ಎನ್ನುವುದುಂಟು. ಹೊಯ್ಸಳ ಅರಸರ ಕಾಲದಿಂದಲೂ ಕೆರೆಗಳನ್ನು ಕಟ್ಟುವುದು ನಮ್ಮನಾಳಿದವರ ಪ್ರಮುಖ ಕಾರ್ಯ ಎನಿಸಿತ್ತು. ಕಡಿಮೆ ಮಳೆ ಬೀಳುವ ಉತ್ತರ ಕರ್ನಾಟಕದಲ್ಲಿ ಕೆರೆಗಳ ಮಹತ್ವ ಅಧಿಕ. ವಿಶ್ವ ಜಲ ದಿನದಂದು (ಮಾರ್ಚ್ 22) ಅಂತಹ ಒಂದು ಕೆರೆಯ ಕುರಿತಾದ ಪ್ರಾತಿನಿಧಿಕ ಬರಹ ಇಲ್ಲಿದೆ.

• ಡಾ.ಸಿದ್ದಲಿಂಗಪ್ಪ ಕೊಟ್ನೆಕಲ್

ವಿಶ್ವ ಜಲ ದಿನ

ಕ್ರಿ.ಶ. 1411ರ ವಿಜಯನಗರದ ಪ್ರೌಢದೇವರಾಯನ ಮಂತ್ರಿ ಲಕ್ಷ್ಮೀಧರಮಾತ್ಯನ ಶಾಸನದಲ್ಲಿ ಕೆರೆಗಳ ಕುರಿತು ವಿಶೇಷವಾಗಿ ಬರೆಯಲಾಗಿದೆ. ಅಂದರೆ 'ಕೆರೆಯನ್ನುಕಟ್ಟಿಸು, ಬಾವಿಯನ್ನುತೋಡಿಸು, ದೇವಾಲಯಗಳನ್ನು ನಿರ್ಮಿಸು, ಬಂಧನದಲ್ಲಿದ್ದಅನಾಥರನ್ನು ಬಿಡಿಸು, ಸ್ನೇಹಿತರಿಗೆ ಸಹಾಯಮಾಡು, ನಂಬಿದವರಿಗೆ ಆಶ್ರಯದಾತನಾಗು, ಸತ್ಪುಷರನ್ನು ರಕ್ಷಿಸು' ಎಂದು ತನ್ನ ತಾಯಿ ಹಾಲುಣಿಸುತ್ತಾ ಮಗನಿಗೆ ಕಿವಿಯಲ್ಲಿ ಹೇಳಿದ್ದನ್ನು ಪ್ರಸ್ತುತ ಶಾಸನದಲ್ಲಿ ಉಲ್ಲೇಖಿಸಲಾಗಿದೆ.

ಕೊಪ್ಪಳ ನಗರದ ದಕ್ಷಿಣ ಭಾಗದಲ್ಲಿ ಈಗಲೂ ನೀರಿನಿಂದ ತುಂಬಿರುವ, ಸುಂದರ ದೃಶ್ಯಾವಳಿ ಹೊಂದಿರುವ ಹುಲಿಕೆರೆಯ ಬಗ್ಗೆ ಹೆಚ್ಚಿನ ಅಧ್ಯಯನ ನಡೆದಿಲ್ಲ. ಹಿಂದೆ ನೀರಿನ ಸಂಗ್ರಹಣೆ ಮತ್ತು ಸರಬರಾಜುವ್ಯವಸ್ಥೆ ಸವಾಲಾಗಿದ್ದ ಕಾಲದಲ್ಲಿ ಕೊಪ್ಪಳದ ಜನರಿಗೆ ನೀರುಣಿಸಿದ ಹುಲಿಕೆರೆ ಇಂದಿಗೂ ಜನರನ್ನು ಕೈಬೀಸಿ ಕರೆಯುತ್ತಿದೆ. ವೀರನಗೌಡ ಡಿ.ಎಸ್.ಪಾಟೀಲ ಮೆಣಸಗಿಯವರ 'ಸಾಲಾರಜಂಗ ಬಹದ್ದೂರ ಇವರ ಜೀವನ ಚರಿತ್ರೆ' ಎಂಬ ಕೃತಿಯಲ್ಲಿ ಅದರ ನಿರ್ಮಾಣದ ಬಗ್ಗೆ ಉಲ್ಲೇಖವಿದೆ. ಸಾಲರಜಂಗ ಬಹದ್ದೂರ ಎಂಬ ಮೀರತುರಾಬ ಅಲೀಖಾನ ಬಹದ್ದೂರರವರು (1829–1883) ಕೊಪ್ಪಳದ ಜಾಗೀರದಾರನಾಗಿದ್ದನು. ಇವನ ತರುವಾಯ ಇವನ ಹಿರಿಯ ಮಗ ನವಾಬ ಮೀರಲಾಯಕ ಅಲೀಖಾನ (1882ರಲ್ಲಿ ಜನನ)ನ ಕಾಲದಲ್ಲಿ ನರಸಿಂಗರಾಯರು ತಾಲೂಕುದಾರರಾಗಿದ್ದರು. ಇವರ ಅವಧಿಯಲ್ಲೇ ಕೊಪ್ಪಳದ ನಕಾಶೆ ಸಿದ್ಧಪಡಿಸಿ ಕೊಪ್ಪಳವು ನಗರವಾಗಿ ಕಾಣುವಂತೆ ಮಾಡಿದರು. ಅನೇಕ ಕಛೇರಿಗಳನ್ನು ನಿರ್ಮಿಸಿದರು. ಜನರ ಉಪಯೋಗಕ್ಕಾಗಿ, ಹುಲಿಕೆರೆಯನ್ನೂ ಕಟ್ಟಿ ಎಲ್ಲರಿಗೂ ನೀರಿನ ಸೌಕರ್ಯ ಒದಗಿಸಿದರು.

ಹಲವು ಭಾಗಗಳಲ್ಲಿ ಬೆಟ್ಟಗಳಿರುವ ಸಹಜ ಜಾಗದಲ್ಲಿ ಈ ಕೆರೆ ಇದೆ. ಆ ಕೆರೆಯ ನೀರು ಹರಿದು ಹೋಗುವುದಿಲ್ಲ. ಹಿರಿಯರ ಅಭಿಪ್ರಾಯದಂತೆ, ಹಿಂದೆ ಈ ಕೆರೆಗೆ ಹುಲಿಗಳು ನೀರು ಕುಡಿಯಲು ಬರುತ್ತಿದ್ದವು. ಅದಕ್ಕಾಗಿ ಇದನ್ನು ಹುಲಿಕೆರೆ ಎಂದು ಕರೆದರು. ಆದರೆ ಇಂದು ಕೊಪ್ಪಳ ಪರಿಸರದಲ್ಲಿ ಹುಲಿಗಳ ವಾಸ ಹೆಚ್ಚಾಗಿ ಕಂಡುಬರುವುದಿಲ್ಲ. ಕರಡಿ, ಚಿರತೆ, ಮಂಗ್ಯ ಮತ್ತು ಇತರೆ ಪ್ರಾಣಿ ಸಂಕುಲಗಳು ಇಲ್ಲಿ ವಾಸಿಸುತ್ತವೆ. ಹಿಂದೆ ಇಲ್ಲಿ ಹುಲಿಗಳಿದ್ದರಬಹುದು.

ಈ ಹುಲಿಕೆರೆಯು ಸುತ್ತಲೂ ಗುಡ್ಡಗಳಿಂದ ಆವೃತಗೊಂಡಿದೆ. ಒಂದು ಭಾಗದಲ್ಲಿ ಮಳೆಮಲ್ಲೇಶ್ವರ ಬೆಟ್ಟದ ಸಾಲಿನಿಂದ ಸುತ್ತುವರೆದಿದೆ.

## ಒಂದು ನೂರು ಎಕರೆ!

ಈ ಕೆರೆಯು ಸುಮಾರು ಒಂದು ನೂರು ಎಕರೆಯ ಜಾಗದಲ್ಲಿ ವಿಸ್ತಾರವಾಗಿ ಹರಡಿಕೊಂಡಿದೆ. ಪಕ್ಷಿ ಶಾಸ್ತ್ರಜ್ಞರಾದ ಸಮದ್ ಕೊಟ್ಟೂರುರವರ ಅಭಿಪ್ರಾಯದಂತೆ ಈ ಹುಲಿಕೆರೆಯು ಹಲವು ಹಕ್ಕಿಗಳಿಗೆ ಆಶ್ರಯ ನೀಡಿದೆ. ಗುಬ್ಬಿ, ಕಾಗೆ, ಗೀಜಗ, ಗೊರವಂಕ, ಕೌಜುಗ, ಮೈನಾ, ನೊಣಹಿಡುಕ, ಸಿಪಿಲೆ, ಬೆಳವ, ಪಾರಿವಾಳ, ಬುರ್ಲಿ, ಕಳ್ಳುವಳಕ, ಬೆಳ್ಳಕ್ಕಿ, ಚುಕ್ಕೆಬಾತುಕೋಳಿ, ಭಕಪಕ್ಷಿ, ಹುಂಡುಕೋಳಿ ಮುಂತಾದ ಸ್ಥಳೀಯ ಪಕ್ಷಿಗಳು ಈ ಹುಲಿಕೆರೆಗೆ ಬರುತ್ತವೆ.ಅಲ್ಲದೇ ಚಳಿಗಾಲದಲ್ಲಿ ಮರುಳ ಪೀಪಿ, ಕಲ್ಲುಚಟುವ, ಸೂಜಿಬಾತು ಮುಂತಾದ ಪಕ್ಷಿಗಳು ವಲಸೆ ಬರುತ್ತವೆ ಎಂದು ಸಮದ್‌ರವರು ಮಾಹಿತಿ ನೀಡುತ್ತಾರೆ.

> ಕೊಪ್ಪಳದಲ್ಲಿರುವ ಈ ಕೆರೆಗೆ ಹುಲಿಕೆರೆ ಎಂಬ ಹೆಸರು ಯಾಕೆ ಬಂತು ಎನ್ನುವುದನ್ನು ತಿಳಿದುಕೊಂಡಾಗ ರೋಚಕ ಮಾಹಿತಿಯನ್ನು ಸ್ಥಳೀಯ ಹಿರಿಯರು ಹೇಳುತ್ತಾರೆ. ಹಿಂದೆ ಈ ಕೆರೆಗೆ ಹುಲಿಗಳು ನೀರುಕುಡಿಯಲು ಬರುತ್ತಿದ್ದವು ಎಂಬ ನಂಬಿಕೆ ಇದೆ.

ಜಿಲ್ಲಾ ಪಂಚಾಯತಿ ಹಣಕಾಸು ಅಧಿಕಾರಿ ಹಾಗೂ ಹವ್ಯಾಸಿ ಫೋಟೋಗ್ರಾಫರ್ ಅಮೀನ್ ಅತ್ತಾರ್‌ರವರು ಕೊಪ್ಪಳ ಹುಲಿಕೆರೆಗೆ ಬರುವ ಹಲವು ಸ್ವದೇಶಿ ಮತ್ತು ವಿದೇಶಿ ಪಕ್ಷಿಗಳ ಅಧ್ಯಯನ ಮತ್ತು ಫೋಟೋಗ್ರಾಫಿ ಮಾಡಿದ್ದಾರೆ.

ಇಂಡಿಯನ್ ಈಗಲ್ ವೊಲ, ಸೈಬಿರಿಯನ್ ಸ್ಟೋನ್ ಚಾಟ್, ಪೈಡ್ ಕಿಂಗಫಿಶರ್, ವೈಟ್ ಥ್ರೋಟೆಡ್ ಕಿಂಗ್‌ಪಿಶರ್, ನದಿ ರೀವ, ಸ್ಪಾಟ್ ಬೆಲಿಡ್‌ಡಕ್, ಬಿಳಿ ಸಿಪಿಲೆ, ಹಳದಿ ಸಿಪಿಲೆ ಮುಂತಾದ ಸ್ವದೇಶಿ ಪಕ್ಷಿಗಳು ಈ ಕೆರೆಗೆಬರುತ್ತವೆ ಎಂದಿದ್ದಾರೆ. ಅವು ವಿಶೇಷವಾಗಿ ಚಳಿಗಾಲದಲ್ಲಿ ಬರುತ್ತವೆ. ಇವುಗಳ ಜೊತೆಗೆ ಉತ್ತರ ಭಾರತದಿಂದಲೂ ಸಹ ಕೆಲ ಪಕ್ಷಿಗಳೂ ಈ ಕೆರೆಗೆ ಬರುತ್ತವೆ. ಬ್ರಾಂಜ್ ವಿಂಗ್ಡ್ ಜಕಾನ ಎಂಬ ಪಕ್ಷಿಯು ಜೂನ್ ದಿಂದ ಸೆಪ್ಟಂಬರ್ ಅವಧಿಯಲ್ಲಿ ಇಲ್ಲಿ ಕಾಣಿಸಿಕೊಳ್ಳುತ್ತದೆ. ವಿದೇಶದಿಂದಲೂ ಕೆಲ ಪಕ್ಷಿಗಳು ಆಗಮಿಸುತ್ತವೆ ಎಂದು ಅಮೀನ್‌ರವರು ಅಭಿಪ್ರಾಯ ಪಡುತ್ತಾರೆ.

ಒಟ್ಟಿನಲ್ಲಿ ಕೊಪ್ಪಳದ ಈ ಹುಲಿಕೆರೆಯು ವಿವಿಧ ಜಾತಿ ಪಕ್ಷಿಗಳಿಗೆ ಆಶ್ರಯ ನೀಡುತ್ತಿದೆ. ಅದನ್ನು ಇಂದು ಪೂರ್ಣಪ್ರಮಾಣದಲ್ಲಿ ರಕ್ಷಿಸಬೇಕಿದೆ. ಇದರ ಚರಿತ್ರೆಯನ್ನು ಮತ್ತು ನೀರಿನ ಮಹತ್ವವನ್ನು ಇಂದಿನ ಪೀಳಿಗೆಗೆ ತಿಳಿಹೇಳುವುದು ಬಹಳ ಮುಖ್ಯವಾಗಿದೆ. ಈ ಪುರಾತನ ಕೆರೆಯನ್ನು ರಕ್ಷಿಸುವುದು ಸ್ಥಳೀಯರ ಜವಾಬ್ದಾರಿ ಮಾತ್ರವಲ್ಲ, ಸರಕಾರದ ಇಲಾಖೆಗಳು ಇಲ್ಲಿನ ಪರಿಸರವನ್ನು ರಕ್ಷಿಸಲು ಸೂಕ್ತ ಕಾರ್ಯಸೂಚಿಯನ್ನು ರೂಪಿಸಬೇಕಿದೆ.

ಉತ್ತರ ಕನ್ನಡ ಜಿಲ್ಲೆಯಲ್ಲಿ ಕಾಣಬರುವ ಸುಗ್ಗಿ ಕುಣಿತವು ನಿಜಕ್ಕೂ ವರ್ಣರಂಜಿತ ಜನಪದ ಆಚರಣೆ. ಹೋಳಿ ಹಬ್ಬದ ಸಮಯದಲ್ಲಿ ಕಾಣಸಿಗುವ ಈ ಕುಣಿತವು, ನಮ್ಮ ನಾಡಿನ ಶ್ರೀಮಂತ ಪರಂಪರೆಯ ಭಾಗ ಎನಿಸಿದೆ.

# ಉತ್ತರ ಕನ್ನಡದ ಸುಗ್ಗಿ ಕುಣಿತ

• ಸುರೇಂದ್ರ ಪೈ, ಭಟ್ಕಳ

ಹೋಳಿ ಹುಣ್ಣಿಮೆ ಮೊನ್ನೆ ತಾನೇ ಮುಗಿದಿದೆ. ಕಾರವಾರ, ಅಂಕೋಲಾ, ಹೊನ್ನಾವರ, ಭಟ್ಕಳದ ಭಾಗದಲ್ಲಿ ಹಾಲಕ್ಕಿ ಸಮುದಾಯದವರು ತಲೆತಲಾಂತರದಿಂದಲೂ ನಡೆಸಿಕೊಂಡು ಬರುತ್ತಿರುವ ಸುಗ್ಗಿ ಕುಣಿತ'ವು ಜಾನಪದ ಕಲಾ ಪ್ರಕಾರಗಳಲ್ಲಿ ಒಂದು. ಹೋಳಿ ಹಬ್ಬದ ಸಮಯದಲ್ಲಿ ಉತ್ತರಕನ್ನಡದಹಾಲಕ್ಕಿ ಒಕ್ಕಲಿಗ, ಗುನಗಿ, ಹಳ್ಳೇರ, ಮುಕ್ರಿ, ಕೋಮಾರ ಪಂತ ಸಮುದಾಯದ ಜನರ ಸುಗ್ಗಿ ಕುಣಿತ ನೃತ್ಯ ಮನಸೆಳೆಯುತ್ತಿದೆ. ತಲೆಗೆ ಬಣ್ಣ ಬಣ್ಣದ ಗರಿಗಳ ತುರಾಯಿ ಕಟ್ಟಿಕೊಂಡು, ಸಾಂಪ್ರದಾಯಿಕ ಹಾಡುಗಳಿಗೆ ಗುಮಟೆ ಪಾಂಗ್, ಕಂಸಾಳೆ, ನಗಾರಿ, ಜಾಗಟೆ ಸದ್ದಿಗೆ ಕಲಾವಿದರು 'ಚೋಹೋಚೋ...ಸೋಹೋಚೋ...' ಎಂಬ ಕೂಗು ಹಾಕುತ್ತಾ ಮನೆಯಿಂದ ಮನೆಗೆ ಹೆಜ್ಜೆ ಹಾಕುತ್ತಾ, ಸುಗ್ಗಿ ಕುಣಿತವನ್ನು ಪ್ರದರ್ಶನ ಮಾಡುತ್ತಾರೆ.

ಸುಗ್ಗಿ ಕುಣಿತವು ಕೇವಲ ಮನರಂಜನಾ ಉದ್ದೇಶಗಳಿಗಾಗಿ ಮಾತ್ರವಲ್ಲದೆ, ಸಾಂಸ್ಕೃತಿಕ ಅಭಿವ್ಯಕ್ತಿ ಮತ್ತು ಸಮೃದ್ಧವಾದ ಫಸಲಿಗಾಗಿ ದೇವತೆಗೆ ಕೃತಜ್ಞತೆ ಮತ್ತು ಕೃತಜ್ಞತೆಯನ್ನು ವ್ಯಕ್ತಪಡಿಸುವ ಒಂದು ಮಾರ್ಗವಾಗಿದೆ. ಹೋಳಿ ಹಬ್ಬ ಸಮೀಪಿಸಿದ ತಕ್ಷಣ, ಸುಗ್ಗಿಯ ಕಾಲ ಮತ್ತು ಆಚರಣೆಗಳು ಪ್ರಾರಂಭವಾಗುತ್ತವೆ. ಮನೆಯಿಂದ ಮನೆಗೆ ಹೋಗಿ ಪ್ರದರ್ಶನ ನೀಡುವುದರಿಂದ ಜನರು ಎದುರಿಸುತ್ತಿರುವ ಸಮಸ್ಯೆಗಳು ಪರಿಹಾರವಾಗುತ್ತವೆ ಎಂದು ಅವರು ನಂಬುತ್ತಾರೆ.

ಸುಗ್ಗಿ ಕುಣಿತವು ಕರ್ನಾಟಕದ ಸಾಂಸ್ಕೃತಿಕ ಪರಂಪರೆಯ ಪ್ರಮುಖ ಭಾಗವಾಗಿದ್ದು ರಾಜ್ಯದ ಶ್ರೀಮಂತ ಸಾಂಸ್ಕೃತಿಕ ವೈವಿಧ್ಯತೆ ಮತ್ತು ಪರಂಪರೆಯ ಸಂಕೇತವಾಗಿದೆ. ಬಣ್ಣ ಬಣ್ಣದ ಬಟ್ಟೆ ಧರಿಸಿ, ಗುಮಟೆ ಹಿಡಿದು ಹಾಡುವ ಸುಗ್ಗಿ ಕುಣಿತವು, ಹೋಳಿ ಹಬ್ಬದ ಸಮಯದಲ್ಲೇ ನಡೆಯುವುದು ವಿಶೇಷ. ಇದೇ ಸಮಯದಲ್ಲಿ ಇತರ ಕೆಲವು ಪಂಗಡದವರು ಹೋಳಿ ಕುಣಿತವನ್ನು ನಡೆಸುವುದನ್ನು ಇಲ್ಲಿ ಸ್ಮರಿಸಬಹುದು.

## ಚಿತ್ತವಿಹಾರ

# ಮನವೆಂಬ ಚಿತ್ರಗುಪ್ತ

• ಮಾಯಾ ಬಾಲಚಂದ್ರ

''ನಮ್ಮ ಕಣ್ಣುಗಳು ಶುಭಕರವಾದ ದೃಶ್ಯಗಳನ್ನು ನೋಡುವಂತಾಗಲಿ, ನಮ್ಮ ಕಿವಿಗಳು ಮಂಗಳಕರವಾದ ಶಬ್ದಗಳನ್ನು ಕೇಳುವಂತಾಗಲಿ'' ಎಂದು ಪ್ರಾರ್ಥಿಸಿದ ನಮ್ಮ ಪೂರ್ವಜರ ಪ್ರಾರ್ಥನೆ ಅತ್ಯಂತ ಅರ್ಥಪೂರ್ಣ. ನಮ್ಮ ಮನಸ್ಸು ಅತ್ಯಂತ ಸಮರ್ಥ ಬಿಂಬ ಗ್ರಾಹಿ. ನಮ್ಮ ಚಿಂತನೆಗಳು ಯೋಚನೆಗಳು ನಮ್ಮ ಮನಃಪಟಲದಲ್ಲಿ ಮೂಡುವುದು ಚಿತ್ರಗಳ ಮೂಲಕವೇ. ಶಬ್ದಗಳು ಇದನ್ನು ನೆನಪಿನ ಮೇಲ್ಮೈಗೆ ತಂದು ನಿಲ್ಲಿಸುವ ಸಾಧನವಾಗುತ್ತದೆ. ಲಿಸ್ಲಿ ಲೆಕ್ರೋನ್‌ರ ಪ್ರಯೋಗಗಳಲ್ಲಿ, 45 ವರ್ಷ ವಯಸ್ಸಿನ ವ್ಯಕ್ತಿಯನ್ನು ಸುಪ್ತಾವಸ್ಥೆಗೆ ಕೊಂಡೊಯ್ದಾಗ, ಆ ವ್ಯಕ್ತಿಗೆ ಹಿಂದಿನ ಅನುಭವಗಳ ತರಂಗಗಳು ನಿಧಾನವಾಗಿ ಮನದಲ್ಲಿ ಮೂಡಲು ಪ್ರಾರಂಭವಾಯಿತು. ಮನಸ್ಸು ವಿವಿಧ ಸ್ಮೃತಿಯ ಸ್ಥರಗಳನ್ನು ದಾಟುತ್ತಾ, ಹಿಂದೆ ಸರಿಯುತ್ತಾ, ಕೊನೆಯಲ್ಲಿ ಮೂರು ವರ್ಷ ವಯಸ್ಸಿನ ಅನುಭವಗಳ ನೆನಪಿನ ಚಿತ್ರಗಳೊಂದಿಗೆ ತಾದಾತ್ಮ್ಯ ಪಡೆಯಿತು. ಆಗ ಆತನ ಉಸಿರಾಟದಲ್ಲಿ ವಿಸ್ಮಯಕಾರಿ ಬದಲಾವಣೆಗಳು ಆಗತೊಡಗಿತು. ಗೂರಲು ಕೆಮ್ಮು ಪ್ರಾರಂಭವಾಯಿತು. ಉಸಿರಾಡುವಾಗ ಕಷ್ಟದಿಂದ ತೆಗೆದುಕೊಳ್ಳುವ ಏದುಸಿರು ತೀವ್ರವಾಗಿ ಕಾಡಲು ಪ್ರಾರಂಭವಾಯಿತು. ನಾಡಿಯ ಬಡಿತದ ವೇಗ ತೀವ್ರವಾಯಿತು. ಅಸ್ತಮಾ ರೋಗದ ಎಲ್ಲ ಲಕ್ಷಣಗಳು ಆ ವ್ಯಕ್ತಿಯಲ್ಲಿ ಕಂಡು ಬಂದವು. ಎಚ್ಚರದ ಸ್ಥಿತಿಯಲ್ಲಿ ಆತನಿಗೆ ಆ ರೋಗದಿಂದ ನರಳಿದ ನೆನಪು ಸಹ ಇರಲಿಲ್ಲ. ಆ ರೋಗದ ಯಾವ ಲಕ್ಷಣವೂ ಆತನಲ್ಲಿ ಇರಲಿಲ್ಲ. ತಜ್ಞರು ಆತನ ತಾಯಿಯನ್ನು ಸಹಜವಾಗಿ ವಿಚಾರಿಸಿದಾಗ, ಮೂರನೇ ವಯಸ್ಸಿನಲ್ಲಿ ಆತನಿಗೆ ಅಸ್ತಮಾ ತೀವ್ರವಾಗಿ ಕಾಡಿದ್ದು ತಿಳಿದು ಬಂತು.

ಮನಸ್ಸೆಂಬ ಚಿತ್ರಗುಪ್ತನಿಂದ ಯಾವ ವಿಚಾರಗಳನ್ನೂ ಗುಪ್ತವಾಗಿಡಲು ಸಾಧ್ಯವೇ ಇಲ್ಲ. ಮನಸ್ಸು ಎಲ್ಲ ವಿಚಾರಗಳನ್ನು ಮುದ್ರಿಸಿಡುವುದು ಚಿತ್ರಗಳ ಮೂಲಕ. ಜೀವನಾನುಭವದ ನೋವು – ನಲಿವುಗಳ, ಸ್ಪಂದನೆ – ಪ್ರತಿಸ್ಪಂದನೆಗಳ ದಾಖಲೆಗಳು ಸಚಿತ್ರವಾಗಿ ಮನದಲ್ಲಿ ಉಳಿದುಬಿಟ್ಟಿರುತ್ತವೆ. ನಮ್ಮ ಮುಂದಿನ ಯೋಜನೆ, ಪಡೆಯಬಹುದಾದ ಅನುಭವಗಳು ಈಗಾಗಲೇ ಮನದಾಳದಲ್ಲಿ ದಾಖಲಾಗಿರುವ ಚಿಂತನೆ ಅನುಭವಗಳ ಒಟ್ಟು ಮೊತ್ತವೇ ಆಗಿರುತ್ತದೆ. ಹಾಗಾಗಿ ಎಂತಹುದೇ ಸಂದರ್ಭದಲ್ಲಿ ಪ್ರತಿಕ್ರಿಯಿಸುವಾಗ ಬಹಳ ಜಾಗ್ರತೆ ವಹಿಸುವುದೊಳಿತು. ನಮ್ಮ ಸುಪ್ತ ಮನಸ್ಸಿನಲ್ಲಿ ಚಿತ್ರತವಾಗುವ ಚಿತ್ರಗಳು, ಬಾಹ್ಯದಲ್ಲಿ ನಮ್ಮ ಜೀವನಚಿತ್ರದ ಚೌಕಟ್ಟನ್ನು ರೂಪಿಸುತ್ತದೆ.

## ಹನಿ ಮಳೆ

### ಹೆಚ್ಚಳ

ಒಂದರ ಮೇಲೆ ಒಂದು
ಬಸ್ಸು ಮೆಟ್ರೊ
ಹಾಲು ನೀರು
ಬೆಲೆ ಹೆಚ್ಚಳಕ್ಕೆ ಬೆಂಬಲ
ಹೊಸದಾಗಿ ಸೇರ್ಪಡೆ
ಶಾಸಕರ ಸಂಬಳ!
ಅದಕ್ಕೂ ಬೆಂಬಲ!

• ಮಹಾಂತೇಶ ಮಾಗನೂರ

## ಪದಬಂಧ

• ಸಿ.ರವಿಶಂಕರ ಶಾಸ್ತ್ರಿ, ದಂಟ



### ಎಡದಿಂದ ಬಲಕ್ಕೆ

2. ಆಕಸ್ಮಿಕವಾಗಿ ಬಂದವನು (4)
5. ನಂತರ ಮಾಡಿದ ತಿದ್ದುಪಡಿ (4)
6. ಶಾಪದಿಂದ ಬಿಡುಗಡೆ (3)
7. ತಿಂದಿದ್ದು ಅರಗುವಿಕೆ (3)
9. ವಿರಳವಾಗಿ ಬಂದಿರುವ ಮತ್ತೊಂದು ತಾವರೆ (3)
11. ದುಡ್ಡಿಲ್ಲದ ದೀನ (3)
12. ಕೆಟ್ಟ ಉದ್ದೇಶಕ್ಕೆ ಬಳಸುವುದು (5)
13. ಪುರದಲ್ಲಿ ದೊರೆತಿತು ಸಾಕ್ಷಿ (3)
14. ಅಸ್ತವ್ಯಸ್ತವಾಗಿ ಬಂದಿರುವ ಟಿಸಿಲು (3)
16. ಲೋಹವನ್ನು ಕಾಯಿಸಿ ಒಂದಕ್ಕೊಂದು ಜೋಡಿಸುವುದು (3)
18. ರೋಗದೊಂದಿಗೆ ಬರುವ ಜೋಡಿಪದ (3)
20. ವಾದ್ಯವನ್ನು ನುಡಿಸು (4)
21. ಮಾಡುವ ಕೆಲಸಕ್ಕೆ ಒಡ್ಡಿದ ಆಕ್ಷೇಪ (4)

### ಮೇಲಿನಿಂದ ಕೆಳಕ್ಕೆ

1. ಯಾವಾಗಲೂ ಸಿಗುವಂಥದ್ದಲ್ಲ, ವಿರಳವಾದುದು (4)
2. ಕೂಗು ಅಥವಾ ಶಬ್ದ (3)
3. ಕವನಗಳನ್ನು ಬರೆಯುವಾತ (2)
4. ಮತ್ತೊಂದು ಕಾಟ (4)
8. ಕಳವಳಗೊಳ್ಳು ಅಥವಾ ಒದ್ದಾಡು (5)
10. ಎರಡು ಜೀವಗಳನ್ನು ಬೆಸೆಯುವ ಪರಿಣಯ (3)
11. ಮಗ್ಗುಲು, ಕಂಕುಳು (3)
13. ಹೇಳಿದ್ದನ್ನೇ ಮತ್ತೆ ಮತ್ತೆ ಹೇಳುವುದು (4)
15. ಕಾಡಿನಲ್ಲಿ ಅರಳಿದ ಹೂವು (4)
17. ಬರುವಾಗ ಪರಚು (3)
19. ಬಾಗಿದ ಎಂದರ್ಥ (2)

### ಸರಿಯುತ್ತರಗಳು

# ರಾಮಕೃಷ್ಣ ಪರಮಹಂಸರ ಭಕ್ತಿಯ ಸ್ವರೂಪ

ರಾಮಕೃಷ್ಣ ಪರಮಹಂಸರು, ತೀವ್ರವಾದ ಕ್ಯಾನ್ಸರ್ ಖಾಯಿಲೆಯಿಂದ ಬಳಲುತ್ತಿದ್ದಾಗ, ಅವರ ಭಕ್ತರಾದ ಒಬ್ಬ ಪಂಡಿತರು, ಗುರುಗಳೇ, ನಿಮ್ಮ ಮನಸ್ಸನ್ನು ಕಾಯಿಲೆಯಾಗಿರುವ ದೇಹದ ಭಾಗದಲ್ಲಿ ಕೇಂದ್ರೀಕರಿಸಿ, ರೋಗವೇ,ನೀನು ಈ ಕ್ಷಣ ಈ ದೇಹ ಬಿಟ್ಟು ಹೊರಟು ಹೋಗು ಎಂದು ಆಜ್ಞಾಪಿಸಿದರೆ, ಅದು ನಿಮ್ಮ ದೇಹವನ್ನು ಬಿಟ್ಟು ಹೋಗುತ್ತದೆ, ಎಂದರು.

ಆಗ ರಾಮಕೃಷ್ಣರು, ನೀವು ವಿದ್ವಾಂಸರಾಗಿ ಹೀಗೆ ಹೇಳುವುದು ಸರಿಯೇ? ನನ್ನ ಸಂಪೂರ್ಣ ಮನಸ್ಸನ್ನು ನಾನು ಭಗವತಿಯಲ್ಲಿ ಕೇಂದ್ರೀಕರಿಸಿದ್ದೇನೆ. ಅದನ್ನು ಬಿಟ್ಟು ,ಈಗ ನಾನು ಈ ಕ್ಷುಲ್ಲಕವಾದ ದೇಹದ ಮೇಲೆ ಹೇಗೆ ತಾನೇ ಮನಸ್ಸನ್ನು ಕೇಂದ್ರೀಕರಿಸಲು ಸಾಧ್ಯ? ಅದು ನನ್ನಿಂದಾಗದು ಎಂದರು. ಆಗ ಪಂಡಿತರು, ಅದನ್ನೇ ಸ್ವಲ್ಪ ಬದಲಾಯಿಸಿ ಹೇಳಿದರು. ಸರಿ ಹಾಗಾದರೆ, ನೀವು ಭಗವತಿಯನ್ನೇ, ಈ ರೋಗ ವಾಸಿಮಾಡೆಂದು, ಬೇಡಿಕೊಳ್ಳಿ, ನಿಮಗೆ ಅವಳು ಇಲ್ಲ ಎನ್ನಲಾರಳು, ಎಂದರು.

ಅದಕ್ಕೆ ರಾಮಕೃಷ್ಣರು, ಅದು ನನ್ನಿಂದಲಂತೂ, ಸಾಧ್ಯವೇ ಇಲ್ಲ, ಎಂದರು. ಏಕೆ ಸಾಧ್ಯವಿಲ್ಲ? ಎಂದು ಪಂಡಿತರು ಕೇಳಿದರು.

ಪರಮಹಂಸರು ನಗುತ್ತಾ, ಜಗನ್ಮಾತೆ ಎಲ್ಲವನ್ನು ಅರಿತವಳಲ್ಲವೇ? ಅವಳಿಗೆ ಎಲ್ಲವೂ ಗೊತ್ತಿಲ್ಲವೇ? ನನಗೆ ಯಾವುದು ಒಳ್ಳೆಯದೊ, ಅದನ್ನೇ ಅವಳು ಮಾಡುತ್ತಾಳೆ, ಎಂದರು. ನಾನು ಅವಳಲ್ಲಿ ಇನ್ನಷ್ಟು ಭಕ್ತಿ ,ವೈರಾಗ್ಯ, ಆಧ್ಯಾತ್ಮಿಕ ಜ್ಞಾನ ಇವುಗಳನ್ನು ಕೊಡು ಎಂದು ಮಾತ್ರ ಬೇಡುತ್ತೇನೆ ಹೊರತು, ಈ ಕ್ಷುಲ್ಲಕವಾದ ದೇಹದ ಆರೋಗ್ಯದ ಬಗ್ಗೆ ನಾನು ಎಂದೂ ಅವಳಲ್ಲಿ ಬೇಡುವುದಿಲ್ಲ, ನೀವು ಇದರ ಬಗ್ಗೆ ಇನ್ನು ಜಾಸ್ತಿ ತಲೆ ಕೆಡಿಸಿಕೊಳ್ಳುವುದು ಬೇಡಾ ಎಂದರು.

ಶ್ರೀ ರಾಮಕೃಷ್ಣರು ಎಂದೂ ಕೂಡಾ ತಮ್ಮ ಪ್ರಾರ್ಥನೆಯನ್ನು, ಕ್ಷುಲ್ಲಕವಾದ ಸಣ್ಣ ವಿಷಯಗಳಿಗೆ ಉಪಯೋಗಿಸಲೇ ಇಲ್ಲ.

ನಾವು ಎಂದೂ ಕೂಡಾ, ಪ್ರಾಪಂಚಿಕ ವಿಷಯಗಳನ್ನು ಪಡೆಯುವುದಕ್ಕಾಗಿ ಭಗವಂತನಲ್ಲಿ ಪ್ರಾರ್ಥನೆ ಮಾಡಬಾರದು. ಅವನಲ್ಲಿ ನಮ್ಮ ಪ್ರಾರ್ಥನೆ, ಭಕ್ತಿ, ನಮ್ರತೆ ಮತ್ತು ಪ್ರೀತಿಯಿಂದ ಕೂಡಿರಬೇಕು, ನಾವು ಪ್ರಾರ್ಥನೆ ಮಾಡುವುದು, ಭಗವಂತ ನಮ್ಮ ಮೇಲೆ ಸಾಕಷ್ಟು ಕೃಪೆಯನ್ನು ತೋರಿದ್ದಕ್ಕೆ, ಧನ್ಯವಾದ ತಿಳಿಸುವುದಕ್ಕಾಗಿ, ಮಾತ್ರ ಆಗಿರಬೇಕು. ಬಾಕಿ, ಕೊಡುವುದು ಬಿಡುವುದು ಎಲ್ಲಾ ಅವನ ಇಚ್ಛೆಗೆ ಬಿಟ್ಟಿದ್ದು. ನಮ್ಮೆಲ್ಲಾ ಭಾರವನ್ನು ಅವನಿಗೆ ವಹಿಸಿ, ನಿಶ್ಚಿಂತೆಯಿಂದ ಇರುವುದು ಉತ್ತಮ. ನಮ್ಮ ಜವಾಬ್ದಾರಿಯನ್ನು ಆತನೇ ಹೊತ್ತು, ನಮ್ಮನ್ನು ಶಾಂತರನ್ನಾಗಿ ಮಾಡುತ್ತಾನೆ.

ಒಮ್ಮೆ ಯೋಚಿಸಿ ನೋಡಿ, ನಾವು ಬೆಳಗಿನಿಂದ ರಾತ್ರಿಯವರೆಗೆ ನಮ್ಮ ವಿಷಯಕ್ಕೆ, ನಮ್ಮ ಮನೆಯವರ ವಿಷಯಕ್ಕೆ, ಮಕ್ಕಳ ಸಲುವಾಗಿ ದೇವರಲ್ಲಿ ನೂರು ಬಾರಿ ಅಹವಾಲನ್ನು ಇಟ್ಟಿರುತ್ತೇವೆ. ನಮ್ಮಂತೆ ಬ್ರಹ್ಮಾಂಡದ ಪ್ರತಿ ಜೀವಿಯು ಕೂಡ ದೇವರಿಗೆ ಮೊರೆ ಹೋಗುತ್ತದೆ . ದೇವರು ಯಾರ್ಯಾರ ಮಾತನ್ನು ಆಲಿಸಬೇಕು ಯಾರ್ಯಾರ ಆಸೆಗಳನ್ನು ಪುರೈಸಬೇಕು. ಕೆಲವೊಮ್ಮೆ ಕೆಲವರು ತಮ್ಮ ಉದ್ಧಾರಕ್ಕಾಗಿ ಪ್ರಾರ್ಥಿಸುವುದರ ಜೊತೆಗೆ, ಮತ್ತೊಬ್ಬರನ್ನು ಹಾಳು ಮಾಡಲು ಕೂಡ ಪ್ರಾರ್ಥನೆ ಮಾಡುತ್ತಾರೆ ಎಂದರೆ ನೀವು ನಂಬಲೇಬೇಕು. ಇಂತಹ ವಿಕೃತ ಮನಸ್ಸಿನ ಜನರು ಕೂಡ ನಮ್ಮ ನಡುವೆ ಇರುತ್ತಾರೆ. ಆದ್ದರಿಂದಲೇ ಭಗವಂತನಲ್ಲಿ ಏನನ್ನಾದರೂ ಬೇಡ ಬೇಕಾದರೆ, ಸ್ವಾರ್ಥಕ್ಕಾಗಿ ಕೇಳಿಕೊಳ್ಳುವುದಕ್ಕಿಂತ ಎಲ್ಲರ ಕ್ಷೇಮ, ಸುಖ ಸಂತೋಷಕ್ಕಾಗಿ ಪ್ರಾರ್ಥಿಸಿದಾಗ ಅದು ಖಂಡಿತ ಬೇಗ ಈಡೇರುತ್ತದೆ.

ಪ್ರಪಂಚದ ಎಲ್ಲರೂ ಕೂಡ ಮತ್ತೊಬ್ಬರ ಒಳಿತಿಗಾಗಿ ಹಾರೈಸಿದಾಗ ವಿಶ್ವವೇ ಒಂದು ಸೌಹಾರ್ದ ಕುಟುಂಬವಾಗಿ ನೆಮ್ಮದಿಯಿಂದ ಕೂಡಿರುತ್ತದೆ.

ನಾವು ಮತ್ತೊಬ್ಬರಿಗಾಗಿ ನಿಷ್ಕಲ್ಮಶ ಮನಸ್ಸಿನಿಂದ ಪ್ರಾರ್ಥಿಸಿದಾಗ ಅದು ಬೇಗ ಈಡೇರುತ್ತದೆಯಂತೆ. ನಮಗಾಗಿ ಮತ್ತೊಬ್ಬರು ಹಾರೈಸಿದಾಗಲೂ ಸಹ ಅದಕ್ಕೆ ಹೆಚ್ಚು ಶಕ್ತಿ. ಅದಕ್ಕೇ ನಮ್ಮ ಸನಾತನ ಧರ್ಮದ ಪಾಲಕರಾದ ಹಿರಿಯರು ''ಸರ್ವೇ ಜನಾ ಸುಖಿನೋ ಭವಂತು, ಸಮಸ್ತ ಸನ್ಮಂಗಳಾದಿ ಭವಂತು , ಓಂ ಶಾಂತಿ ಶಾಂತಿ ಶಾಂತಿಃ'' ಎಂದು ಆಶೀರ್ವಾದ ಮಾಡುವುದು. ಇಂತಹ ಅಪೂರ್ವವಾದ ಭಾರತೀಯ ಸಂಸ್ಕಾರವನ್ನು ವಿಶ್ವಸೆಲ್ಲೆಡೆ ಪಸರಿಸೋಣ.

## ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

ಒಂದೊಳ್ಳೆ ಮಾತು
Vishwavani TV Special
ಯುಟ್ಯೂಬ್ ಚಾನೆಲ್‌ನಲ್ಲಿ!

# ಪಾಪದ ಸಮುದ್ರಕ್ಕೆ ಜ್ಞಾನದ ದೋಣಿ

## ನಿತ್ಯಜೀವನದಲ್ಲಿ ಭಗವದ್ಗೀತೆ



ಕೆ.ಶಿವಪ್ರಸಾದ್
ಹಿರಿಯ ಐಎಎಸ್ ಅಧಿಕಾರಿ

ಕುರುಕ್ಷೇತ್ರ ಯುದ್ಧದಲ್ಲಿ ತಾನು ಪಾಪ ಮಾಡುತ್ತಿದ್ದೇನೆ ಎಂಬ ಭಾವನೆ ಅರ್ಜುನನ ವಿಷಾದಕ್ಕೆ ಕಾರಣವಾಗಿದೆ. ತನ್ನ ಗುರುಗಳನ್ನು, ಸಂಬಂಧಿಗಳನ್ನು ಮತ್ತು ಗೆಳೆಯರನ್ನು ಕಳೆದುಕೊಳ್ಳುವುದು ಪಾಪವಲ್ಲದೆ ಮತ್ತೇನು ಅಲ್ಲ ಎಂದು ಅವನಿಗೆ ಅನಿಸುತ್ತದೆ ಮತ್ತು ಅಂತ ಕೃತ್ಯಗಳಿಂದ ದೂರವಿರಬೇಕೆಂದು ಅವನು ವಿಚಾರಿಸುತ್ತಾನೆ. ಅವನು ಮತ್ತು ಅವನ ಸಹೋದರರು ರಾಜ್ಯದ ಆಸೆಗಾಗಿ ತಮ್ಮ ಸಹೋದರರನ್ನೇ ಕೊಲ್ಲಲಿಕ್ಕೆ ತಯಾರಿ ನಡೆಸಿರುವುದು ಅವನನ್ನು ಇನ್ನು ವ್ಯಾಕುಲಗೊಳಿಸುತ್ತದೆ. ವಿಷಯವನ್ನು ಸರಿಯಾದ ದೃಷ್ಟಿಯಲ್ಲಿ ನೋಡಲು ಬೇರೆ ಬೇರೆ ಸಂದರ್ಭಗಳಲ್ಲಿ ಪಾಪದ ಬಗ್ಗೆ ಪದೇ ಪದೇ ಕೃಷ್ಣ ಅರ್ಜುನನಿಗೆ ತಿಳಿಸುತ್ತಾನೆ.

ಕೃಷ್ಣ ಹೇಳುತ್ತಾನೆ: ನೀನು ಪಾಪಿಗಳಲ್ಲಿಯೇ ಅತ್ಯಂತ ಪಾಪಿಯಾದರೂ ಜ್ಞಾನವೆಂಬ ದೋಣಿಯಲ್ಲಿ ಸುರಕ್ಷಿತವಾಗಿ ಪಾಪದ ಸಮುದ್ರವನ್ನು ದಾಟಬಹುದು. ಉರಿಯುವ ಜ್ವಾಲೆಯು ಕಟ್ಟಿಗೆಯನ್ನು ಬೂದಿ ಮಾಡುವಂತೆ ಧ್ಯಾನದ ಬೆಂಕಿಯೋ ನಿನ್ನೆಲ್ಲ ಕರ್ಮಗಳನ್ನು ಬೂದಿಯನ್ನಾಗಿಸುತ್ತದೆ.(4.37)

ಕೃಷ್ಣನಿಗೆ ಪಾಪವೆಂದರೆ ಜ್ಞಾನದ ಹಾಗೂ ಜಾಗೃತಿಯ ಪ್ರಕಾಶದಿಂದ ದೂರವಾಗುವ ಕತ್ತಲೆ ಇದ್ದಂತೆ. ಕತ್ತಲೆಯು ಬಹುಕಾಲದಿಂದ ಇರಬಹುದು ಅಥವಾ ಅದು ಕಗ್ಗತ್ತಲಾರಬಹುದು. ಆದರೆ ಪ್ರಕಾಶ ತಕ್ಷಣ ಅದನ್ನು ಹೊರಹಾಗುತ್ತದೆ. ಏನೇ ಇರಲಿ ಪಾಪ ಎಂಬ ಹಣೆಪಟ್ಟಿ ಹೊತ್ತಿರುವ ನಮ್ಮ ಕ್ರಿಯೆಗಳು ವಿಚಾರಗಳು ಹಾಗೂ ಅನಿಸಿಕೆಗಳಿಗೆ ಸಂಬಂಧಪಟ್ಟಂತೆ ಇರುವ ಧಾರ್ಮಿಕ ಬೋಧನೆಗಳಿಗೆ ಇದು ವಿರುದ್ಧವಾಗಿದೆ. ಅವುಗಳಿಗೆ ನೋವಿನ ದ್ವಂದ್ವ ಎಂದು ಹೆಸರಿಸಲಾಗಿದೆ. ಧರ್ಮಗಳು ಪ್ರಮಾಣ ಹಾಗೂ ಗುಣಮಟ್ಟದಲ್ಲಿ ಪಾಪಗಳಿಗಾಗಿ ತಪಸ್ಸನ್ನು ಬೋಧಿಸುತ್ತವೆ. ವಿವಿಧ ಅನುಷ್ಠಾನ ಹಾಗೂ ಧಾರ್ಮಿಕ ವಿಧಿವಿಧಾನಗಳ ಮೂಲಕ ಪಾಪವನ್ನು ದೂರ ಮಾಡಿ ಸಂತೋಷದ ದ್ವಂದ್ವವನ್ನು (ಧ್ರುವೀಯತೆಯನ್ನು) ಪಡೆಯಬಹುದು. ಪಾಪಗಳು ಸರಳವಾಗಿವೆಯೋ ಅಥವಾ ತೀವ್ರವಾಗಿವೆಯೋ ಎಂಬುದರ ಆಧಾರದ ಮೇಲೆ ತಪಸ್ಸು ಭಿನ್ನ-ಭಿನ್ನವಾಗಿರುತ್ತದೆ. ಬಹುಕಾಲದಿಂದ ಪಾಪ ಮಾಡುತ್ತಾ ಬಂದಿದ್ದರೆ ಹೆಚ್ಚಿನ ಪರಿತಾಪ ಹಾಗೂ ಪಶ್ಚಾತ್ತಾಪದ ಅವಶ್ಯಕತೆ ಇದೆ.

ಆದರೆ ಕೃಷ್ಣನಿಗೆ ಪಾಪದ ಅಗಲ ಹಾಗೂ ಆಳ ಸಂಬಂಧವಿಲ್ಲ. ಯಾವುದರಿಂದಾಗಿ ನಾವು ನಮ್ಮಲ್ಲಿ ಎಲ್ಲ ಜೀವಿಗಳನ್ನು ಹಾಗೂ ಪರಮಾತ್ಮನನ್ನು ಕಾಣುತ್ತೇವೆಯೋ, ಅದನ್ನು ತಿಳಿಯುವ ಅಗತ್ಯ ಇದೆ.

ನಮ್ಮಲ್ಲಿಯ ಪಾಪ ಪ್ರಜ್ಞೆಯಿಂದ ಧರ್ಮಗಳು ಏಳಿಗೆಯಾದರೆ ಅಧ್ಯಾತ್ಮ ಎನ್ನುವುದು ಕೃತಜ್ಞತೆ ಹಾಗೂ ಪಾಪ ಹಾಗೂ ಸದ್ಗುಣಗಳು ಒಂದೇ ನಾಣ್ಯದ ಎರಡು ಮುಖಗಳು ಎಂಬ ನಮ್ಮ ಜಾಗೃತಿಯ ಬಗ್ಗೆ ಇದೆ.


ನೀವೂ ಬರೆಯಬಹುದು | ನಮ್ಮ ವಿಳಾಸ: ಪುರವಣಿ ವಿಭಾಗ, ನಂ.1687, 3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು-560098 | e-mail: vishwavanimagazine@gmail.com

**ಸಕ್ಕರೆ ಮತ್ತು ಉಪ್ಪನ್ನು ಒಳಗೊಂಡ ಆಹಾರ ಪದಾರ್ಥಗಳನ್ನು ಸಾಧ್ಯವಾದಷ್ಟು ಕಮ್ಮಿ ಬಳಸುವುದು ಒಳಿತು ಎನ್ನುತ್ತಾರೆ ಆಹಾರ ತಜ್ಞರು ಮತ್ತು ವೈದ್ಯರು. ಏಕೆಂದರೆ ಈ ಎರಡರ ಸೇವನಾ ಪ್ರಮಾಣ ಶಿಸ್ತುಬದ್ಧವಾಗಿಲ್ಲದಿದ್ದರೆ ಆರೋಗ್ಯ ಸಮಸ್ಯೆ ತಪ್ಪಿದ್ದಲ್ಲ. ಈ ಪೈಕಿ, ಮಿತಿ ಮೀರಿದ ಸಕ್ಕರೆಯ ಅಂಶವು ಹೊತ್ತು ತರುವ ಮಧುಮೇಹದ ಸಮಸ್ಯೆಯು ಭಾರತದಲ್ಲಿ ದಿನಗಳೆದಂತೆ ಹೆಚ್ಚುತ್ತಿರುವುದು ಈ ಮಾತಿಗೆ ಪುಷ್ಟಿ ನೀಡುವಂತಿದೆ. ಈ ಕುರಿತಾದ ಕಿರುನೋಟ ಇಲ್ಲಿದೆ.**

# ಮಧುಮೇಹಕ್ಕೆ ಅರೆಯಬೇಕು ಮದ್ದು

ಯಗಟಿ ರಘು ನಾಡಿಗ್

ಆಹಾರ-ವಿಹಾರ ಮತ್ತು ಜೀವನಶೈಲಿಯ ವಿಷಯದಲ್ಲಿ ಕಾಲಾಂತರದಲ್ಲಿ ಗಮನಾರ್ಹ ಬದಲಾವಣೆಗಳಾಗಿವೆ. 'ಕಲ್ಲನ್ನು ಕೊಟ್ಟರೂ ತಿಂದು ಜೀರ್ಣಿಸಿಕೊಳ್ಳುವಷ್ಟು' ತಾಕತ್ತು ಇರುತ್ತಿದ್ದ ಅಂದಿನವರಿಗೂ, 'ತೀರ್ಥ ತಗೊಂಡ್ರೆ ಶೀತ, ಮಂಗಳಾರತಿ ತಗೊಂಡ್ರೆ ಉಷ್ಣ' ಎನ್ನುವಂಥ ಸೂಕ್ಷ್ಮ ದೇಹಸ್ಥಿತಿಯ ಇಂದಿನವರಿಗೂ ಹೋಲಿಸಲಾಗದು. ಹಿಂದೆಲ್ಲ ರಕ್ತದೊತ್ತಡ, ಮಧುಮೇಹದ ಸಮಸ್ಯೆ ತಲೆದೋರುತ್ತಿದ್ದುದು ತೀರಾ ವಯಸ್ಸಾದವರಲ್ಲಿ; ಆದರೀಗ ಇವೆರಡೂ ಸೇರಿದಂತೆ ಹತ್ತು ಹಲವು ಅಸ್ವಾಸ್ಥ್ಯಗಳಿಗೆ ವಯಸ್ಸಿನ ನಿರ್ಬಂಧವಿಲ್ಲ ಎಂಬುದು ಅಪ್ರಿಯಸತ್ಯ.

## ಏರುತ್ತಿದೆ ಮಧುಮೇಹಿಗಳ ಸಂಖ್ಯೆ

ಭಾರತದಲ್ಲಿ ಮಧುಮೇಹಿಗಳ ಸಂಖ್ಯೆಯು ಈ ಹಿಂದೆ ಲೆಕ್ಕಾಚಾರ ಹಾಕಿದ್ದಕ್ಕಿಂತ ಗಣನೀಯವಾಗಿ ಹೆಚ್ಚಾಗಿದೆ ಎನ್ನುತ್ತವೆ ಅಧ್ಯಯನ ಗಳು. 'ದಿ ಲ್ಯಾನ್ಸೆಟ್ ಡಯಾಬಿಟಿಸ್ ಆ್ಯಂಡ್ ಎಂಡೋಕ್ರೈನಾಲಜಿ ಜರ್ನಲ್'ನಲ್ಲಿ ಪ್ರಕಟವಾಗಿರುವ ರಾಷ್ಟ್ರವ್ಯಾಪಿ ಸಮೀಕ್ಷಾ ವರದಿಯೊಂದು ಬಹಿರಂಗಪಡಿಸಿರುವಂತೆ ಪ್ರಸ್ತುತ ಮಧುಮೇಹದಿಂದ ಬಳಲುತ್ತಿರುವ ಭಾರತೀಯರ ಪ್ರಮಾಣವು ಶೇ. 11.4ರಷ್ಟಿದೆ.

## ಮಧುಮೇಹ ಎಂದರೇನು?

ಮಧುಮೇಹವನ್ನು 'ಸಕ್ಕರೆ ಕಾಯಿಲೆ' ಎಂದೂ ಕರೆಯುವುದುಂಟು. ನಮ್ಮ ಶರೀರವು ಇನ್ಸುಲಿನ್ ಹಾರ್ಮೋನ್ ಅನ್ನು ಸಾಕಷ್ಟು ಉತ್ಪಾದಿಸ ದಿದ್ದಾಗ ಅಥವಾ ಉತ್ಪತ್ತಿ ಯಾಗುವ ಇನ್ಸುಲಿನ್ ಅನ್ನು ಸಮರ್ಥ ವಾಗಿ/ ಪರಿಣಾಮಕಾರಿಯಾಗಿ ಅದು ಬಳಸಿಕೊಳ್ಳದಿದ್ದಾಗ ಮಧುಮೇಹ ಸಂಭವಿಸುತ್ತದೆ. ಅಂದರೆ, ಇನ್ಸುಲಿನ್ ಸಂಗ್ರಹ ಇಲ್ಲದಿದ್ದಾಗ ಅಥವಾ ದೇಹದ ಜೀವ ಕೋಶಗಳು ಇನ್ಸುಲಿನ್‌ಗೆ ಪ್ರತಿಕ್ರಿಯಿಸುವುದನ್ನು ನಿಲ್ಲಿಸಿದಾಗ ಸಕ್ಕರೆಯ ಅಂಶವು ಹೆಚ್ಚು ಪ್ರಮಾಣದಲ್ಲಿ ರಕ್ತ ಪ್ರವಾಹದಲ್ಲಿ ಉಳಿದುಬಿಡುತ್ತದೆ. ಸಕಾಲದಲ್ಲಿ ಸೂಕ್ತ ಚಿಕಿತ್ಸೆ ತೆಗೆದುಕೊಳ್ಳದಿದ್ದಲ್ಲಿ ಮತ್ತು ಪಥ್ಯವನ್ನು ಪರಿಪಾಲಿಸದಿದ್ದಲ್ಲಿ ದೃಷ್ಟಿನಷ್ಟ, ಮೂತ್ರಪಿಂಡ ಸಮಸ್ಯೆ ಮತ್ತು ಹೃದ್ರೋಗದಂಥ ಗಂಭೀರ ಆರೋಗ್ಯ ಸಮಸ್ಯೆಗಳಿಗೂ ಅದು ಮೂಲವಾಗಬಹುದು.

## ಜಾಗೃತಿಗೆ ಪಾದಯಾತ್ರೆ

ಮಧುಮೇಹದ ಬಗ್ಗೆ ಜನಜಾಗೃತಿ ಮೂಡಿಸಲು ಮೈಸೂರಿನ ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದ ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿಯ ವರು ತಮ್ಮ ನೂರಾರು ಭಕ್ತರ ಜತೆಗೂಡಿ, ಮೈಸೂರಿನ ಆಶ್ರಮದಿಂದ ನಂಜನಗೂಡಿನ ಶ್ರೀಕಂಠೇಶ್ವರ ಸನ್ನಿಧಿಯವರೆಗೆ (ಸುಮಾರು 27 ಕಿ.ಮೀ.) ಮೊನ್ನೆ ಪಾದಯಾತ್ರೆ ನಡೆಸಿದರು. ನಂತರ ಶ್ರೀಕಂಠೇಶ್ವರನಿಗೆ ಸ್ವಾಮಿಗಳು ಅಭಿಷೇಕ, ವಿಶೇಷ ಪೂಜೆ ನೆರವೇರಿಸಿದರು.

## ಮಕ್ಕಳಿಗೂ ಬರುತ್ತಾ?

ಅಪ್ಪ ಅಥವಾ ಅಮ್ಮನ ಪೈಕಿ ಒಬ್ಬರಿಗೆ ಮಧುಮೇಹವಿದ್ದರೆ, ಅವರ ಮಕ್ಕಳಲ್ಲೂ ಈ ಸಮಸ್ಯೆ ಕಾಣಿಸಿಕೊಳ್ಳುವ ಸಾಧ್ಯತೆ ಶೇ.60ರಷ್ಟು ಹೆಚ್ಚು ಹಾಗೂ ಅಪ್ಪ-ಅಮ್ಮ ಇಬ್ಬರಿಗೂ ಮಧುಮೇಹವಿದ್ದರೆ, ಈ ಸಾಧ್ಯತೆ ಶೇ.90ರಷ್ಟು ಹೆಚ್ಚು ಎನ್ನುತ್ತವೆ ಅಧ್ಯಯನಗಳು.

## ಏನನ್ನು ತಿನ್ನಬಹುದು?

ಮಧುಮೇಹಿಗಳು ತರಕಾರಿಗಳು ಮತ್ತು ಕಾಳುಗಳ ಬಗ್ಗೆ ಹೆಚ್ಚಿನ ಒಲವು ಬೆಳೆಸಿಕೊಳ್ಳಬೇಕು. ಏಕೆಂದರೆ ಇವುಗಳಲ್ಲಿ ನಾರಿನಂಶ ಮಾತ್ರವಲ್ಲದೆ, ಕಬ್ಬಿಣ, ಪ್ರೋಟೀನ್, ಫೋಲೇಟ್, ಪೊಟ್ಯಾಷಿಯಂ ಅಂಶಗಳು ದಂಡಿಯಾಗಿ ರುತ್ತವೆ. ಅಗತ್ಯವಿರುವಷ್ಟು ಕಾರ್ಬೋಹೈಡ್ರೇಟ್ ಕೂಡ ಇವುಗಳಿಂದ ದೊರೆಯುತ್ತದೆ. ಸೀಬೆಕಾಯಿ, ನೇರಳೆ ಹಣ್ಣು ಮಧುಮೇಹಕ್ಕೆ ಲಗಾಮು ಹಾಕಬಲ್ಲವು ಎನ್ನಲಾಗುತ್ತದೆ; ಆದರೆ ಈ ವಿಷಯದಲ್ಲಿ ವೈದ್ಯರ ಸಲಹೆ ಪಡೆದು ಮುಂದುವರಿಯುವುದು ಒಳಿತು.

## ಜೀವನಶೈಲಿಯೂ ಕಾರಣ

ಮಧುಮೇಹವು ಅಮರಿಕೊಳ್ಳಲು ಇರುವ ಕಾರಣಗಳಲ್ಲಿ ನಮ್ಮ ಜೀವನಶೈಲಿಯೂ ಸೇರಿದೆ. ಕೆಲಸಕ್ಕೆ ತೆರಳುವ ಗಡಿಬಿಡಿಯಲ್ಲಿ ಮುಂಜಾನೆಯ ಉಪಾಹಾರವನ್ನು ತ್ಯಜಿಸುವಿಕೆ, ಯಾವಾಗಲೂ ಕುಳಿತುಕೊಂಡೇ ಕೆಲಸ ಮಾಡುವುದು, ರಾತ್ರಿ ತಡವಾಗಿ ಮತ್ತು ಹೆಚ್ಚು ಪ್ರಮಾಣದಲ್ಲಿ ಊಟ ಮಾಡುವಿಕೆ, ರಾತ್ರಿಯೆಲ್ಲಾ ಎಚ್ಚರವಿದ್ದು



ಕೆಲಸ ಮಾಡುವಿಕೆ ಹೀಗೆ ನಮ್ಮ ದೇಹದ 'ಜೈವಿಕ ಗಡಿಯಾರ'ವನ್ನು ಬಲವಂತವಾಗಿ ಬದಲಾಯಿಸಿಕೊಳ್ಳುವುದು ಕೂಡ ಮಧುಮೇಹದ ಆರಂಭಕ್ಕೆ ಕಾರಣವಾಗಬಹುದು. ಆಧುನಿಕ ಜಗತ್ತಿನಲ್ಲಿ ಅನಿವಾರ್ಯವಾಗಿರುವ 'ಒತ್ತಡ' ಎಂಬ ಪೆಡಂಭೂತವೂ ಮಧುಮೇಹಕ್ಕೆ ಕಾರಣವಾಗುತ್ತದೆ ಎನ್ನುತ್ತವೆ ಅಧ್ಯಯನಗಳು.

## ನಿರ್ಜಲೀಕರಣ ಅಪಾಯಕಾರಿ

ಅನಿಯಂತ್ರಿತ ಮಧುಮೇಹವು ಅತಿಯಾದ ಮೂತ್ರವಿಸರ್ಜನೆ, ಬಾಯಾರಿಕೆ ಮತ್ತು ನಿರ್ಜಲೀಕರಣವನ್ನು ಹೆಚ್ಚಿಸುತ್ತದೆ. ಆದ್ದರಿಂದ, ಮಧುಮೇಹಿಗಳು ಆಹಾರ, ಔಷಧಿ, ನಿದ್ರೆ, ವ್ಯಾಯಾಮಗಳ ರೀತಿಯಲ್ಲಿ ಯಥೋಚಿತ ಪ್ರಮಾಣದಲ್ಲಿ ನೀರು ಕುಡಿಯುವುದರ ಬಗ್ಗೆಯೂ ಗಮನ ಹರಿಸಬೇಕು. ಇದರಿಂದಾಗಿ ಮಧುಮೇಹವು ನಿಯಂತ್ರಣಕ್ಕೆ ಬರುತ್ತದೆ. ದೇಹದಲ್ಲಿ ನೀರಿನ ಕೊರತೆಯಿದ್ದರೆ ರಕ್ತದಲ್ಲಿನ ಸಕ್ಕರೆ ಮಟ್ಟವು ಹೆಚ್ಚಾಗುತ್ತದೆ.

## ತಪ್ಪು ಕಲ್ಪನೆಗಳನ್ನು ಬಿಡಿ

'ನನಗೆ ಮಧುಮೇಹವಿದೆ' ಎಂದಾಕ್ಷಣ, 'ಅನ್ನ ಬಿಡಿ, ರಾಗಿಮುದ್ದೆ ತಿನ್ನಿ. ಶುಗರ್ ಕಂಟ್ರೋಲಿಗೆ ಬರುತ್ತೆ' ಅಂತ ಕೆಲವರು ಸಲಹೆ ನೀಡುವುದಿದೆ. ಮಧುಮೇಹಿಗಳಿಗೆ ಯಾವುದು ಸೂಕ್ತ ಆಹಾರ? ಅಕ್ಕಿಯಾ, ಗೋಧಿಯಾ, ರಾಗಿಯಾ? ಎಂಬೆಲ್ಲ ಸಂದೇಹ ಸಾಕಷ್ಟು ಮಂದಿಯನ್ನು ಕಾಡುವುದಿದೆ. ಮಧುಮೇಹ ಶುರುವಾಗುತ್ತಿದ್ದಂತೆ ಬಹುತೇಕರು ಅನ್ನವನ್ನು ತ್ಯಜಿಸಿ ಗೋಧಿ ಚಪಾತಿ ಮತ್ತು ರಾಗಿಮುದ್ದೆಗೆ ತಮ್ಮ ಆಹಾರ ಕ್ರಮವನ್ನು ಬದಲಿಸಿಕೊಳ್ಳುತ್ತಾರೆ. ಒಂದು ವಿಷಯ ನೆನಪಿಡಿ- ಅಕ್ಕಿ, ಗೋಧಿ, ರಾಗಿ, ಜೋಳ ಎಲ್ಲವೂ ಕಾರ್ಬೋಹೈಡ್ರೇಟಿನ ವಿವಿಧ ಸ್ವರೂಪಗಳೇ; ಇವನ್ನು ಅತಿಯಾಗಿ ತಿಂದರೆ ಮಧುಮೇಹ ಹೆಚ್ಚಾಗುವುದು ಕಟ್ಟಿಟ್ಟಬುತ್ತಿ. ಆದ್ದರಿಂದ ಇವನ್ನು ಕಡಿಮೆ ಪ್ರಮಾಣದಲ್ಲಿ ಸೇವಿಸುವುದು ಒಳಿತು. ಇನ್ನು, ಸಕ್ಕರೆಯ ಬದಲು ಬೆಲ್ಲ ಅಥವಾ ಜೇನುತುಪ್ಪ ಬಳಸಿದರೆ ಒಳಿತು ಎಂಬ ತಪ್ಪುಕಲ್ಪನೆ ಸಾಕಷ್ಟು ಮಧು ಮೇಹಿಗಳಲ್ಲಿದೆ. ಸಕ್ಕರೆ-ಬೆಲ್ಲ-ಜೇನುತುಪ್ಪ ಇವುಗಳಲ್ಲಿ ಬಹಳ ವ್ಯತ್ಯಾಸವೇನಿಲ್ಲ, ಮೂರರಲ್ಲೂ ಹೆಚ್ಚು ಪ್ರಮಾಣದಲ್ಲಿ ಕ್ಯಾಲೊರಿಗಳಿರುತ್ತವೆ.

## ಎಚ್ಚರವಿರಲಿ, ಗಾಬರಿ ಬೇಡ

ಈಗಾಗಲೇ ಉಲ್ಲೇಖಿಸಿರುವಂತೆ ಮಧುಮೇಹವು ಈಗ ಯಾವ ವಯಸ್ಸಿನವರಲ್ಲಿ ಬೇಕಿದ್ದರೂ ಕಾಣಿಸಿಕೊಳ್ಳಬಹುದು. ಹಾಗಂತ, ಮಧುಮೇಹ ಅಮರಿಕೊಂಡಿರುವುದು ವೈದ್ಯಕೀಯ ಪರೀಕ್ಷೆಗಳಿಂದ ಅರಿವಾಗುತ್ತಿದ್ದಂತೆ ಗಾಬರಿಗೊಳ್ಳುವ ಅಗತ್ಯವಿಲ್ಲ. ಕಾರಣ, ಮಧುಮೇಹವು ಒಂದು 'ಜೀವನಶೈಲಿ ಸಂಬಂಧಿತ ಸಮಸ್ಯೆ'. ಆಹಾರ- ವಿಹಾರಗಳನ್ನು ಸರಿಯಾಗಿಟ್ಟುಕೊಂಡರೆ, ಈ ನಿಟ್ಟಿನಲ್ಲಿ ಶಿಸ್ತು ಪಾಲಿಸಿದರೆ, ವೈದ್ಯರು ಶಿಫಾರಸು ಮಾಡುವ ಔಷಧಿ- ಮಾತ್ರೆಗಳನ್ನು ತೆಗೆದುಕೊಳ್ಳುತ್ತ ವ್ಯಾಯಾಮ/ದೈಹಿಕ ಚಟುವಟಿಕೆಗಳನ್ನು ನಿಯತವಾಗಿ ಅನುಸರಿಸುತ್ತಿದ್ದರೆ ಮಧುಮೇಹವನ್ನು ಜತೆಗಿಟ್ಟುಕೊಂಡೇ ಜೀವನವನ್ನು ನಿರಾಳವಾಗಿ ಸಾಗಿಸಬಹುದು.

## ಲಕ್ಷಣಗಳು, ಬಗೆಗಳು

ಮಧುಮೇಹವು ಅಮರಿಕೊಳ್ಳುವುದಕ್ಕೂ ಮುನ್ನ ಒಂದಷ್ಟು ಮುನ್ಸೂಚನೆಗಳು ದೇಹದಲ್ಲಿ ಕಾಣಬರುತ್ತವೆ. ದೃಷ್ಟಿ ಮಂದವಾಗುವಿಕೆ, ಹೆಚ್ಚು ದಾಹವಾಗುವಿಕೆ, ಕೈ ಅಥವಾ ಕಾಲು ಮರಗಟ್ಟುವಿಕೆ, ಬಾಯಿ ಒಣಗುವಿಕೆ, ಪದೇಪದೆ ಮೂತ್ರ ವಿಸರ್ಜಿಸುವಂತಾಗುವಿಕೆ, ಅಸಹಜ ತೂಕನಷ್ಟ, ಹುಣ್ಣುಗಳು/ಗಾಯ ಗಳು ಬೇಗ ವಾಸಿಯಾಗದಿರುವಿಕೆ ಇಂಥ ಲಕ್ಷಣಗಳು ಕಂಡುಬಂದಲ್ಲಿ ವೈದ್ಯರನ್ನು ಸಂಪರ್ಕಿಸಿ, ಅವರು ಸೂಚಿಸುವಂತೆ ಮೂತ್ರ ಹಾಗೂ ರಕ್ತದ ಪರೀಕ್ಷೆ ಮಾಡಿಸಿಕೊಳ್ಳುವುದು ಒಳಿತು. ಮಧುಮೇಹದಲ್ಲಿ ಟೈಪ್-1, ಟೈಪ್-2 ಹಾಗೂ ಗಭಾವಸ್ಥೆಯ ಮಧುಮೇಹ (ಅಂದರೆ ಗರ್ಭಿಣಿಯರಲ್ಲಿ ತಲೆದೋರುವ ಮಧುಮೇಹ) ಎಂಬ 3 ಮುಖ್ಯ ಬಗೆಗಳಿವೆ. ಈ ಬಗೆಗಳು, ಅವುಗಳ ತೀವ್ರತೆ, ರೋಗಿಯ ವಯಸ್ಸು, ರೋಗ ವೃತ್ತಾಂತದ ಅನುಸಾರ ಔಷಧಿ-ಮಾತ್ರೆಗಳ ಶಿಫಾರಸು ಮತ್ತು ಚಿಕಿತ್ಸೆಯಲ್ಲಿ ವೈವಿಧ್ಯವಿರುತ್ತದೆ; ಎಲ್ಲ ಮಧುಮೇಹಿಗಳಿಗೂ ಒಂದೇ ಮಾತ್ರೆ/ ಔಷಧಿ ಎಂಬ ಪೂರ್ವನಿಗದಿಯಿಲ್ಲ ಎಂಬುದನ್ನು ಗಮನಿಸಬೇಕು.

## ಹಿಮ್ಮೆಟ್ಟಿಸುವಿಕೆಯ ಕಸರತ್ತು

'ಮಧುಮೇಹ ಒಮ್ಮೆ ಶುರುವಾಯಿತೆಂದರೆ, ಜೀವನಪರ್ಯಂತ ಔಷಧಿ/ ಮಾತ್ರೆಗಳನ್ನು ತೆಗೆದು ಕೊಳ್ಳಲೇಬೇಕು; ಇದನ್ನು ನಿಯಂತ್ರಣ ದಲ್ಲಿ ಇರಿಸಿಕೊಳ್ಳಬಹುದೇ ವಿನಾ, ನಿರ್ನಾಮ ಸಾಧ್ಯವಿಲ್ಲ' ಎಂಬ ಅಭಿಪ್ರಾಯ ಚಾಲ್ತಿಯಲ್ಲಿದೆ. ಈ ಮಧ್ಯೆ, ವಿಶ್ವದ ವಿವಿಧೆಡೆ, 'ಔಷಧ ಸೇವನೆ ಇಲ್ಲದೆಯೇ ಮಧುಮೇಹವನ್ನು ಹತೋಟಿಯಲ್ಲಿರಿಸಿಕೊಂಡು ಆರೋಗ್ಯಕರ ಜೀವನ ನಡೆಸುವುದು ಸಾಧ್ಯವಿದೆ' ಎಂಬ ಅಭಿಪ್ರಾಯ ಮತ್ತು ಅದಕ್ಕೆ ಪುಷ್ಟಿನೀಡುವ ಚಿಕಿತ್ಸಾಕ್ರಮ ಮುನ್ನೆಲೆಗೆ ಬಂದಿದೆ. ಇದಕ್ಕೆ 'ಮಧುಮೇಹವನ್ನು ಹಿಮ್ಮೆಟ್ಟಿಸುವಿಕೆ' ಅಥವಾ 'ಡಯಾಬಿಟಿಸ್ ರಿವರ್ಸಲ್' ಎನ್ನಲಾಗುತ್ತದೆ.

ಎರಡು ವರ್ಷದ ಹಿಂದೆ ನಿಧನರಾದ ನಾರಾಯಣ ನೇತ್ರಾಲಯದ ಸುಪ್ರಸಿದ್ಧ ವೈದ್ಯ ಡಾ. ಭುಜಂಗ ಶೆಟ್ಟಿಯವರು ಈ ಪದ್ಧತಿಯ ಪ್ರಬಲ ಪ್ರತಿಪಾದಕರಾಗಿದ್ದರು. ಮಧುಮೇಹಿಗಳು ಸೂಕ್ತ ಆಹಾರ ಕ್ರಮ, ದೈನಂದಿನ ವ್ಯಾಯಾಮ, ಕಡಿಮೆ ಒತ್ತಡ ಹಾಗೂ ಪುಷ್ಕಳ ನಿದ್ರೆಯ ನೆರವಿನಿಂದ ತಮ್ಮ ರೋಗಸ್ಥಿತಿಯನ್ನು ತೊಡೆದು, ದೇಹವನ್ನು ಪೂರ್ವಸ್ಥಿತಿಗೆ ತಂದುಕೊಳ್ಳಬಹುದು ಎಂಬುದು ಡಾ. ಶೆಟ್ಟಿಯವರ ಸಮರ್ಥನೆಯಾಗಿತ್ತು. 'ಡಯಾಬಿಟಿಸ್ ರಿವರ್ಸಲ್' ಚಿಕಿತ್ಸೆಗೆಂದು ತಮ್ಮ ಬಳಿ ನೋಂದಾಯಿಸಿಕೊಂಡಿದ್ದ ರೋಗಿಗಳ ಪೈಕಿ ಗಣನೀಯ ಮಂದಿ ಹೀಗೆ ಪೂರ್ವಸ್ಥಿತಿಗೆ ಮರಳಿದ್ದಾರೆ ಎಂದು ಅವರು ಹೇಳಿದ್ದುಂಟು.



'ಮಧುಮೇಹವು ಪ್ರಾರಂಭಿಕ ಸ್ಥಿತಿಯಲ್ಲಿದ್ದರೆ ಮತ್ತು ರೋಗಿಯು 2-3 ವರ್ಷಗಳಿಂದ ಮಧುಮೇಹದಿಂದ ಬಳಲುತ್ತಿದ್ದರೆ, ಈ ಚಿಕಿತ್ಸಾಕ್ರಮಕ್ಕೆ ಒಡ್ಡಿಕೊಳ್ಳುವ ಮೂಲಕ ಕೆಲವೇ ವಾರ ಗಳಲ್ಲಿ ಪೂರ್ವಸ್ಥಿತಿಗೆ ಮರಳಬಹುದು; ಆದರೆ ವ್ಯಕ್ತಿಯು ದೀರ್ಘಕಾಲದಿಂದ (ಅಂದರೆ, 10, 15 ಅಥವಾ 20 ವರ್ಷ ಗಳಿಂದ) ಮಧುಮೇಹಿಯಾಗಿದ್ದರೆ ಪೂರ್ವಸ್ಥಿತಿಗೆ ಮರಳಲು ಕಾಲಾವಕಾಶ ಬೇಕಾಗುತ್ತದೆ' ಎಂಬುದು ಡಾ. ಭುಜಂಗ ಶೆಟ್ಟಿ ಅವರ ಪ್ರತಿಪಾದನೆಯಾಗಿತ್ತು.

## ಪಥ್ಯಕ್ರಮ-ಚಿಕಿತ್ಸೆ

ಮಧುಮೇಹವನ್ನು ಹಿಮ್ಮೆಟ್ಟಿಸುವ ಚಿಕಿತ್ಸಾಕ್ರಮಕ್ಕೆ ಒಡ್ಡಿಕೊಳ್ಳುವವರು ಕಡಿಮೆ ಕಾರ್ಬೋಹೈಡ್ರೇಟ್ ಮತ್ತು ಆರೋಗ್ಯಕರ ಕೊಬ್ಬನ್ನು ಒಳಗೊಂಡಿರುವ ಕಟ್ಟುನಿಟ್ಟಾದ ಆಹಾರಕ್ರಮವನ್ನು ಅನುಸರಿಸಬೇಕಾಗುತ್ತದೆ. ಹೀಗಾಗಿ ಇವರಿಗೆ ಸಕ್ಕರೆಯುಕ್ತ ಆಹಾರಭಕ್ಷ್ಯ, ಸಿಹಿತಿಂಡಿಗಳು ಮತ್ತು ಕೆಲವೊಂದು ಧಾನ್ಯಗಳ ಸೇವನೆಗೆ ಕತ್ತರಿಹಾಕಿ, ಪಿಷ್ಟರಹಿತ ತರಕಾರಿಗಳನ್ನು ಹೆಚ್ಚು ತಿನ್ನಲು ಉತ್ತೇಜಿಸಲಾಗುತ್ತದೆ. ಇವನ್ನು ಪ್ರತಿ ಊಟಕ್ಕೂ ಮೊದಲು ಸೇವಿಸಬೇಕಾಗುತ್ತದೆ. ಹಣ್ಣುಗಳಲ್ಲಿ ಸಕ್ಕರೆ ಅಂಶ ಹೆಚ್ಚಿರುವ ಕಾರಣ ಅವನ್ನು ತ್ಯಜಿಸಬೇಕಾಗುತ್ತದೆ. ಒಟ್ಟಾರೆ, 'ಡಯಾಬಿಟಿಸ್ ರಿವರ್ಸಲ್' ಪದ್ಧತಿಯಲ್ಲಿ ಶೇ. 60ರಷ್ಟು ಚಿಕಿತ್ಸೆಯು ಕಟ್ಟುನಿಟ್ಟಾದ ಪಥ್ಯ ಅಥವಾ ಆಹಾರಕ್ರಮವನ್ನು ಒಳಗೊಂಡಿದ್ದು, ಶೇ.10ರಷ್ಟು ದೈಹಿಕ ಚಟುವಟಿಕೆ, ಒತ್ತಡವನ್ನು ತಗ್ಗಿಸುವಿಕೆ ಮತ್ತು 8 ಗಂಟೆಗಳ ಸಮರ್ಥ ನಿದ್ರೆಯ ಮೇಲೆ ಕೇಂದ್ರೀಕೃತವಾಗಿರುತ್ತದೆ. ಚಿಕಿತ್ಸಾವಧಿಯಲ್ಲಿ ಯಾವುದೇ ಮಾತ್ರೆ ಅಥವಾ ಇನ್ಸುಲಿನ್ ತೆಗೆದುಕೊಳ್ಳುವ ಅಗತ್ಯವಿರುವುದಿಲ್ಲ.

---

# ಚಿನ್ನದ ನಗರಿಗೆ ಟೌನ್‌ಶಿಪ್ ಗರಿ

ಜಿಲ್ಲಾ ನೋಟ

ಕೆ.ಎಸ್. ಮಂಜುನಾಥ ರಾವ್, ಕೋಲಾರ

ಚಿನ್ನದ ನಗರಿ ಕೆಜಿಎಫ್‌ನಲ್ಲಿ ಖಾಸಗಿ ಸಹಭಾಗಿತ್ವದಡಿ ಇಂಟಿಗ್ರೇಟೆಡ್ ಟೌನ್‌ಶಿಪ್ ಯೋಜನೆ ಟೇಕಾಫ್ ಸುದ್ದಿ ಹೊರ ಬಿದ್ದಿದೆ. ಇದನ್ನು ಖುದ್ದು ನಗರಾಭಿವೃದ್ಧಿ ಸಚಿವರೇ ಘೋಷಿಸಿದ್ದಾರೆ. ಈ ಬಹು ನಿರೀಕ್ಷಿತ ಯೋಜನೆಯನ್ನ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕೂಡ ತಮ್ಮ ಬಜೆಟ್‌ನಲ್ಲಿ ಪ್ರಕಟಿಸಿದ್ದಾರೆ.

## ಡಿಪಿಆರ್ ತಯಾರಿ

ಈ ಯೋಜನೆಗೆ ವಿಸ್ತೃತ ಯೋಜನೆ ವರದಿ ಸಿದ್ಧಪಡಿಸಲು ಒಂದು ವರ್ಷದ ಗಡುವು ಕೂಡ ನೀಡಿ ನಗರಾಭಿವೃದ್ಧಿ ಇಲಾಖೆ ಕಾರ್ಯದರ್ಶಿಗೆ ಇದರ ಜವಾಬ್ದಾರಿ ವಹಿಸಲಾಗಿದೆ. ಅತ್ತ ಬಜೆಟ್‌ನಲ್ಲಿ ಇದು ಹೊರಬೀಳುತ್ತಿದ್ದಂತೆ ಕೆಜಿಎಫ್‌ಗೆ ಆಗಮಿಸಿದ ನಗರಾಭಿವೃದ್ಧಿ ಸಚಿವ ಭೈರತಿ ಸುರೇಶ್ ಸ್ಥಳ ಪರಿಶೀಲನೆ ನಡೆಸಿದರು. ಬಂಗಾರಪೇಟೆ ಶಾಸಕ ಎಸ್.ಎನ್.ನಾರಾಯಣ ಸ್ವಾಮಿ ಹಾಗೂ ಕೆಜಿಎಫ್ ಶಾಸಕಿ ರೂಪಕಲಾ ಸಾಥ್ ನೀಡಿದರು.

ಕೋಲಾರ ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಸುರೇಶ್ ಸ್ಥಳ ಪರಿಶೀಲನೆ ನಡೆಸುತ್ತಿರುವುದು.

## 294 ಎಕರೆ ಪ್ರದೇಶ

ಮುಖ್ಯಮಂತ್ರಿಗಳ ಸಲಹೆ ಮಾರ್ಗದರ್ಶನದಂತೆ 294 ಎಕರೆ ಪ್ರದೇಶದಲ್ಲಿ ನಾಗರಿಕ ಸೌಲಭ್ಯಗಳ ಸುಸಜ್ಜಿತ ಟೌನ್‌ಶಿಪ್ ತಲೆ ಎತ್ತಲಿದೆ ಎಂದು ಮಾಹಿತಿ ನೀಡಿದ್ದಾರೆ. ಚೆನ್ನೈ-ಬೆಂಗ ಳೂರು ಎಕ್ಸ್‌ಪ್ರೆಸ್ ಹೆದ್ದಾರಿ ಕೆಜಿಎಫ್ ಮೂಲಕ ಹಾದು ಹೋಗಿದ್ದು ಟೌನ್‌ಶಿಪ್ ನಿರ್ಮಾಣ ಮಾಡಲು ಉದ್ದೇಶಿಸಿರುವ ಜಾಗದಿಂದ ಒಂದು ಕಿ.ಮೀ ಅಂತರದಲ್ಲಿದೆ.

## ಹೂಡಿಕೆ ಸುರಕ್ಷಿತವಲ್ಲ

**ಟೌನ್‌ಶಿಪ್ ನಿರ್ಮಾಣಕ್ಕೆ ಭೂಮಿ ಸರಕಾರದ್ದಾದರೂ ಅದಕ್ಕೆ ನಿಗದಿತ ಬೆಲೆ ತೆತ್ತು ಖರೀದಿಸಬೇಕಾಗುತ್ತದೆ. ಜಮೀನು ಬೆಲೆ ರಿಯಾಯಿತಿ ದರದಲ್ಲಿದ್ದರೂ ಮಾರು ಕಟ್ಟೆ ಬೆಲೆಗೆ ಆಸುಪಾಸಿರುತ್ತದೆ. ಅದೂ ಅಲ್ಲದೆ 30 ವರ್ಷದ ನಂತರ ಜಾಗ ಖಾಲಿ ಮಾಡಬೇಕಾಗುತ್ತದೆ. ಆರಂಭದ 10 ವರ್ಷ ಹಿಂದಿನ ನಷ್ಟ ತುಂಬಿಕೊಳ್ಳಬ ಹುದು. ಉಳಿದ 20 ವರ್ಷ ಅಸಲು,ಬಡ್ಡಿ, ಲಾಭ ನೋಡಬೇಕಾಗುತ್ತದೆ. ಹೀಗಾಗಿ ಲಾಭ ಸಿಗುವ ಹೊತ್ತಿಗೆ ಸರಕಾರಕ್ಕೆ ಬಿಟ್ಟು ಹೋಗಬೇ ಕಾಗುತ್ತದೆ ಎಂಬ ಆತಂಕದ ಪ್ರಶ್ನೆ ರಿಯಲ್ ಎಸ್ಟೇಟ್ ಉದ್ಯಮಿಗಳದು. ಮೇಲ್ನೋಟಕ್ಕೆ ಟೌನ್‌ಶಿಪ್ ಹೂಡಿಕೆ ಅಷ್ಟು ಸುರಕ್ಷಿತವಲ್ಲ. ಸರಕಾರಿ ಯೋಜನೆಗಳೇ ಕುಂಟುತ್ತಿರುವಾಗ ಖಾಸಗಿ ಸಹಭಾಗಿತ್ವ ಯಶಸ್ವಿ ಆಗುತ್ತದೆ ಎಂಬ ನಿರೀಕ್ಷೆ ಹೇಗೆ ಎಂಬ ಚರ್ಚೆಯೂ ನಡೆದಿದೆ.**

## ಏನೇನು ಸೌಲಭ್ಯ?

ಹೀಗಾಗಿ ಎಕ್ಸ್‌ಪ್ರೆಸ್ ಹೆದ್ದಾರಿಯಿಂದ ಟೌನ್‌ಶಿಪ್‌ಗೆ ನೇರ ಸಂಪರ್ಕ ಕಲ್ಪಿಸಲಾಗುತ್ತದೆ. ವಸತಿ ಯೋಜನೆ, ಕೈಗಾರಿಕೆಗಳು, ಆರೋಗ್ಯ ಘಟಕಗಳು, ಶೈಕ್ಷಣಿಕ ಸಂಸ್ಥೆಗಳು, ವಾಣಿಜ್ಯ ಮುಂಗಟ್ಟು, ಬ್ಯಾಂಕ್‌ಗಳು, ಉದ್ಯಾನ, ಮನರಂಜನ ತಾಣಗಳು, ರಿಂಗ್ ರೋಡು, ಪೊಲೀಸ್ ತರಬೇತಿ ಶಾಲೆ, ಹೀಗೆ ಹಲವು ಮೂಲ ಸೌಕರ್ಯಗಳನ್ನು ಟೌನ್‌ಶಿಪ್ ಒಳಗೊಳ್ಳಲಿದೆ.

## ಸ್ಥಳೀಯರಿಗೆ ಉದ್ಯೋಗ

ಈ ಬೃಹತ್ ಯೋಜನೆಯಿಂದಾಗಿ ಸ್ಥಳೀಯ ಕಟ್ಟಡ ನಿರ್ಮಾಣ ಕಾರ್ಮಿಕರಿಗೆ, ಇದಕ್ಕೆ ಸಂಬಂಧಿಸಿದ ವೃತ್ತಿ ಕೌಶಲ ವರ್ಗದವರಿಗೆ ಉದ್ಯೋಗ ಅವಕಾಶ ದೊರೆಯಲಿದೆ. ಈ ಇಂಟಿಗ್ರೇಟೆಡ್ ಟೌನ್‌ಶಿಪ್ ರಾಜ್ಯದಲ್ಲೇ ಮಾದರಿಯಾಗಿ ನಿರ್ಮಾಣ ಆಗಲಿದೆ.

## ಬಡವರ ಬದುಕು ತತ್ತರ

ಕೆಜಿಎಫ್ ಇಡೀ ವಿಶ್ವಕ್ಕೆ ಚಿನ್ನ ನೀಡುವ ಮೂಲಕ ಖ್ಯಾತಿ ಗಳಿಸಿದ ನಗರ. ಈಗ ಟೌನ್‌ಶಿಪ್ ಮೂಲಕ ಚಿನ್ನದ ನಗರಿಗೆ ಗತ ವೈಭವ ಬರಬಹುದು. ಬರಡು ಭೂಮಿಯಂತಿರುವ ಜಾಗವನ್ನು ಸಂಪದ್ಭರಿ ವಾಗಲಿದೆ. ಎಕ್ಸ್‌ಪ್ರೆಸ್ ಹೈವೇಗೆ ಬಂಗಾರಪೇಟೆ, ಕೆಜಿಎಫ್‌ನಿಂದ 2 ಸಂಪರ್ಕ ರಸ್ತೆಗ ಳನ್ನು ಟೌನ್‌ಶಿಪ್‌ಗೆ ಕಲ್ಪಿಸಲಾಗಿದೆ. ಚೆನ್ನೈ ಅಥವಾ ಬೆಂಗಳೂರನ್ನು ತ್ವರಿತವಾಗಿ, ಅಷ್ಟೇ ಸುಲಭವಾಗಿ ತಲುಪಬಹುದು. ಟೌನ್‌ಶಿಪ್‌ನಿಂದಾಗಿ ಸುತ್ತಮುತ್ತ ಬೆಲೆ ಏರಿಕೆ ಪರ್ವ ಯದ್ವತದ್ವಾ ಏರುಪೇರಾಗಬಹು ದಾ ಎಂಬ ಆತಂಕ ಕೆಜಿಎಫ್‌ನ ಮೂಲ ನಿವಾಸಿಗ ಳದು. ಇದರಿಂದಾಗಿ ಬಡವರ ಬದುಕು ತತ್ತರಿಸಬ ಹುದಾ? ಎಂಬ ವ್ಯಾಖ್ಯಾನಗಳೂ ಕೇಳಿ ಬರುತ್ತಿವೆ.

## ಭೂಮಿ ಸರಕಾರದ್ದು

**ಕೋಲಾರ ಜಿಲ್ಲೆಯಲ್ಲಿ ಮೆಡಿಕಲ್ ಕಾಲೇಜು, ಎಪಿಎಂಸಿ ಮಾರುಕಟ್ಟೆ, ಟೌನ್‌ಶಿಪ್‌ನ್ನು ಪಿಪಿಪಿ ಮಾದರಿಯಲ್ಲಿ ಮಾಡುವುದು ಕೂಡ ವಿಶೇಷ. ಕೋಲಾರವನ್ನು ಸಾರ್ವಜನಿಕ ಸಹಭಾಗಿತ್ವದ ಪ್ರಯೋಗ ಶಾಲೆಯ ನ್ನಾಗಿ ರೂಪಿಸಲಾಗುತ್ತಿದೆ. ಎಲ್ಲ ಯೋಜನೆಗಳಿಗೆ ಸರಕಾರ ಬಂಡವಾಳ ಹೂಡಲು ಸಾಧ್ಯವಿಲ್ಲ. ಏರ್‌ಪೋರ್ಟ್, ಹೈವೇ, ಇತರೆ ಬೃಹತ್ ಯೋಜನೆ ಗಳೆಲ್ಲವೂ ಪಿಪಿಪಿ ಮಾದರಿಯಲ್ಲೇ ಮಾಡಿದ್ದು. ಯಶಸ್ವಿಯೂ ಆಗಿದೆ. ಈ ಬಗ್ಗೆ ಯಾರೂ ಅನುಮಾನ ಪಡುವ ಅಗತ್ಯವಿಲ್ಲ. ಯಾವುದೇ ಹೊಸ ಯೋಜನೆ ಜಾರಿಗೆ ಕೇಂದ್ರ/ ರಾಜ್ಯ ಸರಕಾರ ಬಂಡವಾಳ ಹೂಡುವುದು ಸಾಮಾನ್ಯ. ಆದರೆ ಖಾಸಗಿ ಸಹಭಾಗಿತ್ವ ದಲ್ಲಿ ಯೋಜನೆ ಜಾರಿಗೊಳಿಸಿದರೆ ಜನರಿಗೆ ಅನುಕೂಲವೇ ಹೊರತು ಅನಾನುಕೂಲ ಖಂಡಿತಾ ಅಲ್ಲ. ವಿವಿಧ ಯೋಜನೆಗಳ ಜಾರಿಗೆ ಜಮೀನು ಒದಗಿಸುವುದಷ್ಟೇ ಸರಕಾರದ ಕೆಲಸ. ಬಂಡವಾಳ ಹೂಡುವುದು ಖಾಸಗಿಯವರದ್ದು ಎನ್ನುತ್ತಾರೆ ಕೋಲಾರ ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಸುರೇಶ್.**

## ಖಾಸಗಿ ಸಹಭಾಗಿತ್ವದ ಪ್ರಯೋಗಶಾಲೆ

ಟೌನ್‌ಶಿಪ್ ನಿರ್ಮಾಣದ ಉಸ್ತುವಾರಿಯನ್ನು ಕೆಯುಡಿಎಫ್‌ಸಿ ನಿಗಮಕ್ಕೆ ವಹಿಸಲಾಗಿದ್ದು ಡಿಪಿಆರ್ ತಯಾರಿಸಿದ ಬಳಿಕವಷ್ಟೇ ಯೋಜನೆಗೆ ಎಷ್ಟು ಹಣ ಖರ್ಚಾಗುತ್ತದೆಂಬ ಅಂದಾಜು ಸಿಕ್ಕಲಿದೆ. ಯಾವ ಕೈಗಾರಿಕೆಗಳು ಬರಬೇಕು ಎಂಬ ಆಧಾರದ ಮೇಲೆ ಯೋಜನಾ ವೆಚ್ಚ ಏರಿಳಿತವೂ ಆಗಬಹುದು. ಕೆಜಿಎಫ್‌ಗೆ ಸೇರಿದ್ದರೂ ಭೌತಿಕವಾಗಿ ಬಂಗಾರಪೇಟೆಗೆ ಸೇರಿರುವುದು ವಿವಾದಕ್ಕೆ ಈಡಾಗಿದ್ದು ಹೀಗಾಗಿ ಇಬ್ಬರೂ ಶಾಸಕರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಸೂಕ್ಷ್ಮವಾಗಿ ವ್ಯವಹರಿಸಬೇಕಾದ ಸಂದಿಗ್ಧತೆ ಸರಕಾರಕ್ಕಿದೆ. ರಾಷ್ಟ್ರೀಯ ಹೆದ್ದಾರಿ ಟೋಲ್‌ಗಳಲ್ಲಿ ಹಣ ಸಂಗ್ರಹಿಸುವ ಜವಾಬ್ದಾರಿ ಇಂತಿಷ್ಟು ವರ್ಷ ಕಾಲ ಖಾಸಗಿಯವರಿಗೆ ನೀಡಿದಂತೆ ಅವಧಿ ಮುಗಿದ ಬಳಿಕ ಮತ್ತೆ ಸರಕಾರವೇ ನಿರ್ವಹಿಸುವ ಮಾದರಿಯಲ್ಲೇ ಟೌನ್‌ಶಿಪ್ ನಿರ್ಮಾಣವನ್ನೂ ಪಿಪಿಪಿ ಸಹಭಾಗಿ ತ್ವದಲ್ಲಿ ಮಾಡಲು ಸರಕಾರ ಹೊರಟಿದೆ.

---

- ನಾಲ್ಕು ದಶಕಗಳಿಂದ ಚಳವಳಿಗೆ ಸಿಕ್ಕಿಲ್ಲ ಮುಕ್ತಿ
- ಫಲವತ್ತಾದ ಭೂಮಿ ಕಳೆದುಕೊಂಡ ಅನ್ನದಾತ
- ಸುಖಾಂತ್ಯ ಕಾಣದ ನೇಗಿಲ ಯೋಗಿ ಹೋರಾಟ

# ಕಾರಂಜಾ ಕಾರ್ಮೋಡ, ಸಂತ್ರಸ್ತರ ಕಾರ್ಪಣ್ಯ

ಜಿಲ್ಲಾ ನೋಟ

ಚನ್ನಬಸವ ಮೊಕ್ತೆದಾರ, ಬೀದರ

ಕಳೆದ ನಾಲ್ಕು ದಶಕಗಳಿಂದ ಫಲವತ್ತಾದ ಭೂಮಿ ಕಳೆದುಕೊಂಡ ಅನ್ನದಾತ ಸೂಕ್ತ ಪರಿಹಾರಕ್ಕಾಗಿ ತಮಗೆ ಸೇರಬೇಕಾದ ಪರಿಹಾರದ ಹಕ್ಕಿಗಾಗಿ ಮಳೆ, ಚಳಿ, ಬಿಸಿಲು ಲೆಕ್ಕಿಸದೆ ಅಹೋರಾತ್ರಿ ಧರಣಿ, ಸತ್ಯಾಗ್ರಹ, ಮಾನವ ಸರಪಳಿ, ಕೇಶಮುಂಡನ, ಉರುಳು ಸೇವೆ, ಹೀಗೆ ನಾನಾ ರೀತಿಯ ಸರಣಿ ಪ್ರತಿಭಟನೆಗಳು ನಡೆದಿವೆ. ಆದರೆ ಹೋರಾಟದ ಯಾವ ಅಸ್ತ್ರಗಳಿಗೂ ಜಗ್ಗುತ್ತಿಲ್ಲ ರಾಜ್ಯ ಸರಕಾರ..!

ಇನ್ನೂ ಇತ್ತೀಚೆಗೆ ಬೀದರನ ಕಾರಂಜಾ ಸಂತ್ರಸ್ತರ ಹಿತರಕ್ಷಣಾ ಸಮಿತಿಯಿಂದ ಕೊನೆಗೂ ಸಾಮೂಹಿಕ ಆತ್ಮಹತ್ಯೆಗೆ ಕೂಡ ನಿರ್ಧಾರ ಮಾಡಿದ್ದರು. ನಿತ್ಯ ಇದಕ್ಕಾಗಿ ಹೋರಾಟದ ದಾರಿ ಕಂಡುಕೊಳ್ಳಬೇಕಾಗಿದೆ ಎಂಬುದು ಘೋರ ದುರಂತ.

## ಕಾರಂಜಾ ನದಿಗೆ ಅಣೆಕಟ್ಟು

ಕಾರಂಜಾ ನೀರಾವರಿ ಯೋಜನೆಯು ಮಾಂಜ್ರಾ ನದಿಯ ಉಪನದಿಯಾದ ಕಾರಂಜಾ ನದಿಗೆ ಅಡ್ಡಲಾಗಿ ಬೀದರ ಜಿಲ್ಲೆಯ ಭಾಲ್ಕಿ ತಾಲೂಕಿನ ಬ್ಯಾಲಹಳ್ಳಿ ಗ್ರಾಮದ ಬಳಿ ನಿರ್ಮಿಸಿರುವ ಆಣೆಕಟ್ಟಿನಲ್ಲಿ ಭೂಮಿ ಕಳೆದುಕೊಂಡ ಸಂತ್ರಸ್ತರು ನಾಲ್ಕು ದಶಕಗಳ ಹೋರಾಟ ದಾಟಿ ಬಂದಿರುವುದಕ್ಕೆ ರಾಜಕಾರಣದ ವ್ಯವಸ್ಥೆ ನೇರ ಕಾರಣ. ಪರಿಹಾರ ಮಾತ್ರ ಭರವಸೆಯಲ್ಲಿಯೇ ಉಳಿದಿದೆ. ಹಿಂದಿನ ಸರಕಾರ ಬದಲಾದರೂ ಸಮಸ್ಯೆ ಬಗೆಹರಿದಿಲ್ಲ.

## ಇಚ್ಛಾಶಕ್ತಿ ಕೊರತೆ

ಗಡಿ ಜಿಲ್ಲೆಯ ಬೀದರನಲ್ಲಿ ಪ್ರಭಾವಿ ರಾಜಕಾರಣಿಗಳು ಕೇಂದ್ರ, ಸಚಿವರಾದರು. ರಾಜ್ಯ ಸರಕಾರದ ಮಂತ್ರಿ ಗಳಾಗಿ ಕೊಟ್ಟ ಜಿಲ್ಲೆಯ ಜಲ್ವಂತ ಸಮಸ್ಯೆಯೊಂದು ನಾಲ್ಕು ದಶಕಗಳಿಂದ ಜೀವಂತವಾಗಿರುವುದಕ್ಕೆ ಇದುವರೆಗೆ ಆಡಳಿತ ನಡೆಸಿದ ಸರಕಾರಗಳ ಇಚ್ಛಾಶಕ್ತಿಯ ಕೊರತೆ ಎದ್ದು ಕಾಣುತ್ತಿದೆ.

**ಅಣೆಕಟ್ಟು ನಿರ್ಮಾಣಕ್ಕಾಗಿ ಬಂಗಾರದಂಥ ಭೂಮಿ ಕಳೆದುಕೊಂಡ ರೈತರಿಗೆ ಅಂದಿನ ಕಾಲದಲ್ಲಿ ಎಕರೆಗೆ 8 ನೂರರಿಂದ 3 ಸಾವಿರ ರು.ವರೆಗೆ ಪರಿಹಾರ ನೀಡಲಾಗಿದೆ. ಸೂಕ್ತ ಪರಿಹಾರ ಒದಗಿಸಲು ಹೋರಾಟ ನಡೆಸಲಾಗಿದೆ. ಈಗಾಗಲೇ ಸಿಎಂ ಸಿದ್ದರಾಮಯ್ಯ ಅವರು ಸಮಿತಿ ರಚಿಸಿ ಪರಿಹಾರ ಒದಗಿಸುವ ಭರವಸೆ ನೀಡಿದ್ದಾರೆ.**

**-ಚಂದ್ರಶೇಖರ ಪಾಟೀಲ್,**
ಕಾರಂಜಾ ಸಂತ್ರಸ್ತರ ಹಿತರಕ್ಷಣಾ ಸಮಿತಿ ಅಧ್ಯಕ್ಷ

ನೇಗಿಲ ಯೋಗಿಯ ಸಮಸ್ಯೆ ಕೇಳಲು ಇನ್ನೆಷ್ಟು ದಿನ ಬೇಕು..?

## ನೀರಿಗೆ ಮೂಲ ಸೆಲೆ

ಜಿಲ್ಲೆಯಾದ್ಯಂತ ಕುಡಿಯುವ ನೀರು ಹಾಗೂ ಬಹುಗ್ರಾಮ ನೀರಿನ ಯೋಜನೆಗಳ ಮೂಲಾಧಾರ ಕಾರಂಜಾ ಜಲಾಶಯ. ಇದರ ನಿರ್ಮಾಣದ ವೇಳೆ ಸುಮಾರು 26 ಹಳ್ಳಿಯ ರೈತರು ತಮ್ಮ ಫಲವತ್ತಾದ 17 ಸಾವಿರ ಎಕರೆಯಷ್ಟು ಭೂಮಿಯನ್ನು ಕಳೆದುಕೊಂಡಿದ್ದರು. ಭೂಮಿ ಕಳೆದುಕೊಂಡ ರೈತರು ಸೂಕ್ತ ಪರಿಹಾರ ಕೊಡುವಂತೆ ಆಗ್ರಹಿಸಿ ಹೋರಾಟ ಮುಂದುವರೆಸಿದ್ದಾರೆ.

## ರೈತರ ಜೀವನಾಡಿ

ಕಾರಂಜಾ ಆಣೆಕಟ್ಟು ನಿರ್ಮಾಣಕ್ಕಾಗಿ 1981-82ರಲ್ಲಿ ರೈತರ ಭೂಮಿ ಸ್ವಾಧೀನ ಪಡಿಸಿಕೊಂಡಿತು. 29.227 ಹೆಕ್ಟೇರ್ ಭೂಮಿಗೆ ನೀರಾವರಿ ಸೌಲಭ್ಯ ಒದಗಿಸುವ ಉದ್ದೇಶ ಹೊಂದಿತ್ತು. ಇದು ಬೀದರ ಜಿಲ್ಲೆಯ ರೈತರ ಜೀವನಾಡಿ. ಸಾವಿರಾರು ಹೆಕ್ಟೇರ್ ಜಮೀನಿಗೆ ನೀರು ಬರುತ್ತಿದ್ದು. ರೈತರ ಆರ್ಥಿಕತೆ ಹೆಚ್ಚಿಸಿದೆ. 131 ಕಿ.ಮಿ. ಬಲದಂಡೆ.31 ಕಿ.ಮಿ.ಎಡದಂಡೆ ಕಾಲುವೆ ನಿರ್ಮಾಣದಿಂದ ರೈತರ ಬದುಕಿಗೆ ವರದಾನವಾಗಿದೆ.

## ಎಂಟು ಹಳ್ಳಿ ಮುಳುಗಡೆ

ಈ ಕಾರಂಜಾ ಜಲಾಶಯ ನಿರ್ಮಾಣದಿಂದ ಸಂಗುಳಗಿ, ಅತಿವಾಳ, ಕಮಲಾಪೂರ ಸೇರಿದಂತೆ ಒಟ್ಟು ಎಂಟು ಹಳ್ಳಿಗಳು ಮುಳುಗಡೆಯಾಗಿ ಮನೆ ಮಠ ಭೂಮಿ ಕಳೆದುಕೊಂಡು ನೂರಾರು ಕುಟುಂಬಗಳು ಬೀದಿಗೆ ಬಿದ್ದಿವೆ.

## ಸರಕಾರ ಸಮಿತಿ ರಚನೆ

ಕಾರಂಜಾ ಅಣೆಕಟ್ಟಿನಿಂದ ನಿರಾಶ್ರಿತರಾದ ರೈತರ ಬೇಡಿಕೆಗಳನ್ನು ಅಧ್ಯಯನ ಮಾಡಲು ಸಮಿತಿ ರಚಿಸಲಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ. ಬೆಳಗಾವಿಯ ಸುವರ್ಣ ಸೌಧದಲ್ಲಿ ಮುಖ್ಯಮಂತ್ರಿ ಹಾಗೂ ಸಚಿವ ಈಶ್ವರ ಖಂಡ್ರೆ, ರಹೀಂಖಾನ್ ಮತ್ತು ಕಾರಂಜಾ ಆಂದೋಲನ ಸಮಿತಿಯ ಸದಸ್ಯರ ನಡುವೆ ಸಭೆ ಜರುಗಿತು. ಜಿಲ್ಲೆಯ ಕಾರಂಜಾ ಯೋಜನೆಯಿಂದ ಸ್ಥಳಾಂತರಗೊಂಡ ರೈತ ಕುಟುಂಬಗಳಿಗೆ ಹೆಚ್ಚಿನ ಪರಿಹಾರ ನೀಡುವ ಬೇಡಿಕೆ ಅಧ್ಯಯನ ಮಾಡಲು ಸರಕಾರ ನೀರಾವರಿ, ಕಂದಾಯ ಮತ್ತು ಹಣಕಾಸು ಇಲಾಖೆ ತಜ್ಞರನ್ನು ಒಳಗೊಂಡ ತಾಂತ್ರಿಕ ಸಮಿತಿ ರಚಿಸಲಿದೆ. ನ್ಯಾಯಯುತ ಪರಿಹಾರಕ್ಕಾಗಿ ಹೋರಾಡುತ್ತಿರುವ ಸಂತ್ರಸ್ತರ ಸಮಸ್ಯೆಗಳನ್ನು ಸಮಿತಿ ಅಧ್ಯಯನ ಮಾಡುತ್ತದೆ.

**2008ರಲ್ಲಿ ಪ್ರಾರಂಭವಾದ ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಇದೀಗ 18ನೇ ಆವೃತ್ತಿಗೆ ಕಾಲಿಟ್ಟಿದೆ. ಐಪಿಎಲ್ ಆರಂಭಿಸಿದಾಗ ಈ ಚುಟುಕು ಕ್ರಿಕೆಟ್ ಇಷ್ಟರ ಮಟ್ಟಿಗೆ ಯಶಸ್ವಿಯಾಗಬಹುದು ಎಂದು ಮಾತ್ರ ಯಾರೂ ಊಹಿಸಿರಲಿಲ್ಲ. ಸದ್ಯ ಐಪಿಎಲ್ ಟೂರ್ನಿಯು ರಣಜಿ ಟ್ರೋಫಿ, ದುಲೀಪ್ ಟ್ರೋಫಿ ಮತ್ತಿತರ ದೇಶೀಯ ಕ್ರಿಕೆಟ್‌ನ ಖ್ಯಾತಿಯನ್ನೂ ಮೀರಿ, ಜಗತ್ತಿನ ಬೇರೆ ಯಾವ ವೃತ್ತಿಪರ ಕ್ರಿಕೆಟ್ ಟೂರ್ನಿಗೂ ಇಲ್ಲದ ಅಪಾರ ಜನಪ್ರಿಯತೆಯನ್ನು ಪಡೆದಿದೆ. ವಿದೇಶಿ ಆಟಗಾರರು ಕೂಡಾ ಐಪಿಎಲ್‌ನಲ್ಲಿ ಭಾಗಿಯಾಗಲು ತುದಿಗಾಲಲ್ಲಿ ನಿಲ್ಲುತ್ತಾರೆ. ಈ ವರೆಗೂ 17 ಆವೃತ್ತಿಯ ಟೂರ್ನಿಗಳು ನಡೆದಿದೆ. ಈ ಐಪಿಎಲ್ ವಿಜೇತ ತಂಡವು ಈ ವರ್ಷ 20 ಕೋಟಿ ರು. ನಗದು ಬಹುಮಾನವನ್ನು ಮತ್ತು ರನ್ನರ್ಸ್ ಅಪ್ ತಂಡವು 12.5 ಕೋಟಿ ರು. ನಗದು ಬಹುಮಾನದ ಮೊತ್ತವನ್ನೂ ಪಡೆಯಲಿದೆ. ಹಾಗಾದರೆ ವಿಶ್ವದ ದುಬಾರಿ ಕ್ರಿಕೆಟ್ ಲೀಗ್‌ನ ಹುಟ್ಟು ಹೇಗಾಯಿತು? ಮೊದಲ ಆವೃತ್ತಿ ಹೇಗೆ ಆರಂಭವಾಯಿತು ಎಂಬುದರ ಕುರಿತಾದ ಪಕ್ಷಿನೋಟ ಇಲ್ಲಿದೆ.**

# ಇಂದಿನಿಂದ ಐಪಿಎಲ್ ಕದನ

**ನರೇಂದ್ರ ಪಾರೆಕಟ್**

2007ರಲ್ಲಿ ಲಲಿತ್ ಮೋದಿ ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿಯ ಉಪಾಧ್ಯಕ್ಷರಾಗಿದ್ದ ವೇಳೆ ಇಂಗ್ಲೆಂಡ್ ಪ್ರೀಮಿಯರ್ ಲೀಗ್ ಮತ್ತು ಅಮೆರಿಕಾದ ನ್ಯಾಷನಲ್ ಬಾಸ್ಕೆಟ್‌ಬಾಲ್ ಲೀಗ್‌ನ ಯಶಸ್ಸಿನ ಸ್ಫೂರ್ತಿ ಪಡೆದು ನಮ್ಮ ದೇಶದಲ್ಲೂ ಕ್ರಿಕೆಟ್ ಪ್ರೀಮಿಯರ್ ಲೀಗ್‌ವೊಂದನ್ನು ನಡೆಸುವ ಕುರಿತಂತೆ ಘೋಷಣೆಯೊಂದನ್ನು ಮಾಡಿದರು. ತಂಡದ ಆಯ್ಕೆ ಪ್ರಕ್ರಿಯೆ ಮತ್ತು ಹರಾಜು ಪ್ರಕ್ರಿಯೆಯನ್ನು ಅಮೆರಿಕಾದ ಆ ಪಂದ್ಯಗಳ ರೀತಿಯಲ್ಲೇ ನಡೆಸಿದರು. ಆಗ ವಿಜಯ್ ಮಲ್ಯ ಬೆಂಗಳೂರು ತಂಡವನ್ನು ದುಬಾರಿ ಮೊತ್ತಕ್ಕೆ ಖರೀದಿಸಿದರು. ಡೆಕ್ಕನ್ ಕ್ರೋನಿಕಲ್ ಮಾಧ್ಯಮ ಸಂಸ್ಥೆಯು ಹೈದರಾಬಾದ್ ತಂಡವನ್ನು ಖರೀದಿಸಿದರೆ, ಚೆನ್ನೈ ತಂಡವನ್ನು ಇಂಡಿಯಾ ಸಿಮೆಂಟ್ಸ್ ತಂಡ ಖರೀದಿಸಿತು. ಆ ರೀತಿ ಐಪಿಎಲ್ ಒಂದನೇ ಆವೃತ್ತಿಯ ಉದ್ಘಾಟನೆ ಮತ್ತು ಪಂದ್ಯಗಳೆಲ್ಲವೂ ಅದ್ದೂರಿಯಾಗಿಯೇ ನಡೆಯಿತು.

ಈ ಎಲ್ಲಾ ಕಾರಣಕ್ಕಾಗಿಯೇ ಮೊದಲ ಆವೃತ್ತಿಯಿಂದಲೇ ಐಪಿಎಲ್ ಪಂದ್ಯಗಳು ಕ್ರೀಡಾ ಮನರಂಜನೆಗೆ ಹೊಸ ಭಾಷ್ಯವೊಂದನ್ನು ಬರೆಯಿತು. ಪ್ರತೀ ಪಂದ್ಯದಲ್ಲೂ ನಮ್ಮ ದೇಶದ ಮತ್ತು ವಿದೇಶಿ ಆಟಗಾರರ ಕಣ್ಸೆಳೆಯುವ ಕ್ಯಾಚ್‌ಗಳು, ಸ್ಟೇಡಿಯಂ ದಾಟುವ ಸಿಕ್ಸರ್‌ಗಳು ಮತ್ತು ಮಿಂಚಿನ ವೇಗದ ವಿಕೆಟ್‌ಗಳು, ಎಂದೆಂದಿಗೂ ಮುರಿಯದ ದಾಖಲೆಗಳು ಪ್ರೇಕ್ಷಕರ ಕಣ್ಮನ ಸೂರೆಗೊಂಡವು. ಈ ಕಾರಣಕ್ಕಾಗಿಯೇ ಪ್ರಪಂಚದಾದ್ಯಂತ ಕ್ರಿಕೆಟ್ ಅಭಿಮಾನಿಗಳು ಐಪಿಎಲ್ ಸೀಸನ್‌ಗಾಗಿ ಪ್ರತೀವರ್ಷ ಕಾಯುವಂತಾಯಿತು.

ಐಪಿಎಲ್ ಇತಿಹಾಸದ ಪುಟಗಳ ಕೆಲವು ದಾಖಲೆಗಳು ಇಂದಿಗೂ ಸ್ಮರಣೀಯ. ಅಂತಹ ದಾಖಲೆಗಳೆಂದರೆ ಒಂದೇ ಋತುವಿನಲ್ಲಿ ವಿರಾಟ್ ಕೊಹ್ಲಿ ಸಿಡಿಸಿದ 973 ರನ್, ವಿಂಡೀಸ್ ದೈತ್ಯ ಕ್ರಿಸ್‌ಗೇಲ್ ಕೇವಲ 30 ಎಸೆತಗಳಲ್ಲಿ ಗಳಿಸಿದ ಶತಕ ಇತ್ಯಾದಿ. ಇವಷ್ಟೇ ಅಲ್ಲದೆ ಐಪಿಎಲ್ ಇತಿಹಾಸದಲ್ಲಿ ಇನ್ನೂ ಹತ್ತಲವು ಸಾರ್ವಕಾಲಿಕ ದಾಖಲೆಗಳಿದ್ದು, ಅವುಗಳನ್ನು ಮುರಿಯುವುದೂ ಬಹುತೇಕ ಅಸಾಧ್ಯ.

**ಹೆಚ್ಚು ಬಾರಿ ಪ್ಲೇ ಆಫ್ ಪ್ರವೇಶಿಸಿದ ತಂಡ:** ಚೆನ್ನೈ ಸೂಪರ್ ಕಿಂಗ್ಸ್ (ಸಿಎಸ್‌ಕೆ) ಐಪಿಎಲ್ ಆವೃತ್ತಿಯುದ್ದಕ್ಕೂ ಸತತವಾಗಿ ಉತ್ತಮ ಪ್ರದರ್ಶನ ನೀಡಿದೆ. ಆ ಕಾರಣಕ್ಕಾಗಿ ಅದೊಂದು ಪ್ರಬಲ ತಂಡ ಎಂದು ಗುರುತಿಸಿಕೊಂಡಿದೆ. ಚೆನ್ನೈ ತಂಡವು ಐಪಿಎಲ್‌ನ 14 ಸೀಸನ್‌ಗಳಲ್ಲಿ 12 ಬಾರಿ ಪ್ಲೇ ಆಫ್‌ನಲ್ಲಿ ಆಡಿ, ದಾಖಲೆಯ 10 ಫೈನಲ್‌ಗಳಲ್ಲಿ ಸೆಣಸಾಡಿದೆ. ಚೆನ್ನೈ ಸೂಪರ್ ಕಿಂಗ್ಸ್ 16 ಐಪಿಎಲ್ ಸೀಸನ್‌ಗಳಲ್ಲಿ ಐದು ಬಾರಿ ಐಪಿಎಲ್ ಟ್ರೋಫಿ ಗೆದ್ದು, ಮುಂಬೈ ತಂಡದೊಂದಿಗೆ ಅಗ್ರಸ್ಥಾನವನ್ನು ಹಂಚಿಕೊಂಡಿದೆ. 10 ಬಾರಿ ಪ್ಲೇ ಆಫ್ ತಲುಪಿರುವ ಮುಂಬೈ ಇಂಡಿಯನ್ಸ್ ಎರಡನೇ ಸ್ಥಾನದಲ್ಲಿದೆ.

## ಜೊತೆಯಾಟ

2016ರ ಆವೃತ್ತಿಯಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ಸ್ಟಾರ್ ಬ್ಯಾಟರ್‌ಗಳಾದ ವಿರಾಟ್ ಕೊಹ್ಲಿ ಮತ್ತು ಎಬಿ ಡಿ.ವಿಲಿಯರ್ಸ್ ಗುಜರಾತ್ ಲಯನ್ಸ್ ವಿರುದ್ಧ 2ನೇ ವಿಕೆಟ್‌ಗೆ 229 ರನ್ ಸೇರಿಸಿದರು. ಅದು ಇಂದಿಗೂ ದಾಖಲೆಯಾಗಿ ಉಳಿದಿದೆ, ಐಪಿಎಲ್‌ನಲ್ಲಿ ಇನ್ಯಾವ ಜೋಡಿಯೂ ಈ ರೀತಿ ಜೊತೆಯಾಟ ಪ್ರದರ್ಶಿಸಿಲ್ಲ.



## ಧೋನಿ ಮಹಾನಾಯಕ

ಮಹೇಂದ್ರ ಸಿಂಗ್ ಧೋನಿ ಐಪಿಎಲ್ ಇತಿಹಾಸ ದಲ್ಲಿ ಅತೀ ಹೆಚ್ಚು ಪಂದ್ಯಗಳಲ್ಲಿ ತಂಡವನ್ನು ಮುನ್ನಡೆಸಿದ ನಾಯಕ ಎನಿಸಿಕೊಂಡಿದ್ದಾರೆ. 2008ರಲ್ಲಿ ಲೀಗ್ ಆರಂಭವಾದಾಗಿನಿಂದ ಚೆನ್ನೈ ಸೂಪರ್ ಕಿಂಗ್ಸ್ ತಂಡವನ್ನು ಮುನ್ನಡೆಸಿ ರುವ ಟೀಮ್ ಇಂಡಿಯಾ ಮಾಜಿ ನಾಯಕ, 16 ವರ್ಷಗಳ ಪಯಣದಲ್ಲಿ 226 ಪಂದ್ಯಗಳಲ್ಲಿ ನಾಯಕರಾಗಿದ್ದಾರೆ. 15 ಐಪಿಎಲ್ ಪಂದ್ಯಗಳಿಗೆ ನಾಯಕತ್ವ ವಹಿಸಿರುವ ರೋಹಿತ್ ಶರ್ಮಾ ಐಪಿಎಲ್ ಲೀಗ್‌ನಲ್ಲಿ 2ನೇ ಅತ್ಯಂತ ಪ್ರಭಾವಿ ನಾಯಕರಾಗಿದ್ದಾರೆ. ರೋಹಿತ್ ಸದ್ಯಕ್ಕೆ ನಾಯಕತ್ವ ಕಳೆದುಕೊಂಡಿರುವುದರಿಂದ ಧೋನಿ ದಾಖಲೆ ಸದ್ಯಕ್ಕೆ ದಾಖಲೆಯಾಗಿಯೇ ಉಳಿಯಲಿದೆ.

## ಕ್ರಿಸ್‌ಗೇಲ್ 175 ರನ್ ದಾಖಲೆ

ವೆಸ್ಟ್ ಇಂಡೀಸ್ ದೈತ್ಯ ಕ್ರಿಸ್‌ಗೇಲ್ 2013ರಲ್ಲಿ ಪುಣೆ ವಾರಿಯರ್ಸ್ ವಿರುದ್ಧ 66 ಎಸೆತಗಳಲ್ಲಿ 175 ರನ್ ಗಳಿಸಿದ್ದರು. ದಶಕ ಕಳೆದರೂ ಇಂಡಿಯನ್ ಪ್ರೀಮಿಯರ್ ಲೀಗ್ ಇತಿಹಾಸದಲ್ಲಿ ಅದು ಇನ್ನೂ ಗರಿಷ್ಠ ವೈಯಕ್ತಿಕ ಸ್ಕೋರ್ ಆಗಿದೆ, ಆ ಇನ್ನಿಂಗ್ಸ್‌ನಲ್ಲಿ ಗೇಲ್ 13 ಬೌಂಡರಿ ಮತ್ತು 17 ಸಿಕ್ಸರ್‌ಗಳನ್ನು ಬಾರಿಸಿದ್ದರು.

## ಐಪಿಎಲ್‌ನ ಟೂರ್ನಿಯ ಅತಿ ಹೆಚ್ಚು ಸ್ಕೋರ್‌ಗಳು

| ವರ್ಷ | ಸ್ಕೋರ್ | ತಂಡ | ಎದುರಾಳಿ |
|---|---|---|---|
| 2024 | 287/3 | ಎಸ್‌ಆರ್‌ಎಚ್ | ಆರ್‌ಸಿಬಿ ವಿರುದ್ಧ |
| 2024 | 277/3 | ಎಮ್‌ಐ | ಸನ್‌ರೈಸರ್ಸ್ ವಿರುದ್ಧ |
| 2024 | 272/7 | ಕೆಕೆಆರ್ | ಡಿಸಿ ವಿರುದ್ಧ |
| 2024 | 266/7 | ಡಿಸಿ | ಸನ್‌ರೈಸರ್ಸ್ ವಿರುದ್ಧ |
| 2013 | 263/5 | ಪುಣೆ | ಆರ್‌ಸಿಬಿ ವಿರುದ್ಧ |
| 2024 | 262/8 | ಪಂಜಾಬ್ ಕಿಂಗ್ಸ್ | ಲಕ್ನೋ ವಿರುದ್ಧ |
| 2024 | 261/7 | ಆರ್‌ಸಿಬಿ | ಕೆಕೆಆರ್ ವಿರುದ್ಧ |
| 2024 | 260/6 | ಆರ್‌ಆರ್ | ಸನ್‌ರೈಸರ್ಸ್ ವಿರುದ್ಧ |

22.03.2025 ಶನಿವಾರ
vishwavani.news

## ಪಿಚ್ ರಿಪೋರ್ಟ್

ಈಡನ್ ಗಾರ್ಡನ್ಸ್ ಸ್ಟೇಡಿಯಂನ ಪಿಚ್ ಬ್ಯಾಟರ್‌ಗಳಿಗೆ ಹೇಳಿ ಮಾಡಿಸಿದಂತಿದ್ದರೂ ಕೂಡ ಪಂದ್ಯ ಸಾಗಿದಂತೆ ಸ್ಪಿನ್ನರ್‌ಗಳು ಇಲ್ಲಿ ಹಿಡಿತ ಸಾಧಿಸಲಿದ್ದಾರೆ. ಅದರಲ್ಲೂ ಮಂಜಿನ ಕಾಟ ಇರುವ ಕಾರಣ ಚೇಸಿಂಗ್ ನಡೆಸುವ ತಂಡಗಳಿಗೆ ಇಲ್ಲಿ ಗೆಲುವಿನ ಅವಕಾಶ ಹೆಚ್ಚು. ಆದರೆ ಈ ಬಾರಿ ಹೊಸ ಚೆಂಡು ಬಳಕೆಗೂ ಅವಕಾಶ ಇದೆ. ಇದುವರೆಗೆ ಇಲ್ಲಿ 93 ಐಪಿಎಲ್ ಪಂದ್ಯಗಳು ನಡೆದಿವೆ. ಇದರಲ್ಲಿ 38 ಬಾರಿ ಮೊದಲು ಬ್ಯಾಟಿಂಗ್ ನಡೆಸಿದ ತಂಡ ಜಯಿಸಿದರೆ, 55 ಬಾರಿ ಚೇಸಿಂಗ್ ನಡೆಸಿದ ತಂಡ ಗೆದ್ದಿದೆ. ಹೀಗಾಗಿ ಟಾಸ್ ಗೆದ್ದ ತಂಡ ಬೌಲಿಂಗ್ ಆಯ್ದುಕೊಳ್ಳಬಹುದು.

## ಇಂದಿನಿಂದ ಐಪಿಎಲ್ | ಎರಡು ತಿಂಗಳ ಕಾಲ ಕ್ರಿಕೆಟ್‌ಪ್ರೇಮಿಗಳಿಗೆ ರಸದೌತಣ

# ಕೋಲ್ಕತ್ತಾಗೆ ಬೆಂಗಳೂರು ಚಾಲೆಂಜ್

**ಕೋಲ್ಕತ್ತಾ:** ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ತಂಡವು ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯ 18ನೇ ಆವೃತ್ತಿಯಲ್ಲಿ ತನ್ನ ಅಭಿಯಾನ ಆರಂಭಿಸಲು ಸಿದ್ಧವಾಗಿದೆ. ಇಲ್ಲಿನ ಈಡನ್ ಗಾರ್ಡನ್ಸ್‌ನಲ್ಲಿ ಹಾಲಿ ಚಾಂಪಿಯನ್ ಕೋಲ್ಕತ್ತಾ ನೈಟ್ ರೈಡರ್ಸ್ (ಕೆಕೆಆರ್) ತಂಡವನ್ನು ಶನಿವಾರ ಸಂಜೆ ನಡೆಯುವ ಟೂರ್ನಿಯ ಮೊದಲ ಪಂದ್ಯದಲ್ಲಿ ಆರ್‌ಸಿಬಿ ಎದುರಿಸಲಿದೆ. ಇದುವರೆಗಿನ 17 ಆವೃತ್ತಿಗಳಲ್ಲೂ ಕಪ್ ಗೆಲ್ಲದೆ ಅಭಿಮಾನಿಗಳ ಮನಸ್ಸಿಗೆ ನಿರಾಸೆ ಮೂಡಿಸಿದ್ದ ಆರ್‌ಸಿಬಿ, ತನ್ನ ಮೊದಲ ಪಂದ್ಯದಲ್ಲೇ ಶುಭಾರಂಭ ಮಾಡಿ ಈ ಸಲ 'ಕಪ್ ನಮ್ದೇ' ಎಂಬ ಕನಸನ್ನು ನನಸು ಮಾಡಬೇಕೆನ್ನುವ ಉಮೇದಿನಲ್ಲಿದೆ.

ಈ ಬಾರಿಯ ಟೂರ್ನಿಯಲ್ಲಿ ಆರ್‌ಸಿಬಿ ತಂಡವನ್ನು ರಜತ್ ಪಾಟೀದಾರ್ ಮುನ್ನಡೆಸಲಿದ್ದಾರೆ. ಫಾಫ್ ಡು ಪ್ಲೆಸಿಸ್ ಅವರನ್ನು ಬದಲಾಯಿಸುವ ಮೂಲಕ ಪಾಟಿದಾರ್ ತಂಡಕ್ಕೆ ಹೊಸ ಶಕ್ತಿಯನ್ನು ತರುವ ನಿರೀಕ್ಷೆಯಿದೆ. ದೇಶೀಯ ಕ್ರಿಕೆಟ್‌ನಲ್ಲಿ ಪ್ರಬಲ ಪ್ರದರ್ಶನ ನೀಡುತ್ತಿರುವ ಪಾಟಿದಾರ್, ಆರ್‌ಸಿಬಿಯನ್ನು ತಮ್ಮ ಮೊದಲ ಐಪಿಎಲ್ ಪ್ರಶಸ್ತಿಯತ್ತ ಕರೆದೊಯ್ಯುವ ಗುರಿಯನ್ನು ಹೊಂದಿದ್ದಾರೆ.

ಉಳಿದಂತೆ ಅವರಿಗೆ ಬ್ಯಾಟಿಂಗ್‌ನಲ್ಲಿ ತಂಡದ ಮಾಜಿ ನಾಯಕ ಹಾಗೂ ಭಾರತ ತಂಡದ ಸ್ಟಾರ್ ಬ್ಯಾಟ್ಸ್‌ಮನ್ ವಿರಾಟ್ ಕೊಹ್ಲಿ, ಸ್ಫೋಟಕ ಬ್ಯಾಟ್ಸ್‌ಮನ್ ದೇವದತ್ತ ಪಡಿಕ್ಕಲ್, ಫಿಲಿಪ್ ಸಾಲ್ಟ್, ಜಿತೇಶ್ ಶರ್ಮಾ ಮುಂತಾದವರು ಆರ್‌ಸಿಬಿಯ ದೈತ್ಯ ಬ್ಯಾಟಿಂಗ್ ಶಕ್ತಿ ಎಂಬುದನ್ನು ನಿರೂಪಿಸುತ್ತಾರೆ ಎಂಬ ನಿರೀಕ್ಷೆ ಆರ್‌ಸಿಬಿ ತಂಡದ ಅಭಿಮಾನಿಗಳಿಗಿದೆ. ಹಾಗೆಯೇ ಕೃಣಾಲ್ ಪಾಂಡ್ಯ, ಟಿಮ್ ಡೇವಿಡ್, ಎಲ್. ಲಿವಿಂಗ್‌ಸ್ಟೋನ್, ಜೇಕಬ್ ಬೆಥೆಲ್ ಮುಂತಾದವರು ಆರ್‌ಸಿಬಿಯ ಪಾಲಿಗೆ ಆಲ್ ರೌಂಡರ್ ಸ್ಥಾನವನ್ನು ಈ ಸಲ ತುಂಬಿದ್ದಾರೆ. ಬೌಲಿಂಗ್‌ನಲ್ಲಿ ಭುವನೇಶ್ವರ್ ಕುಮಾರ್ ಆರ್‌ಸಿಬಿ ತಂಡದ ಸ್ಟ್ರೈಕ್ ಬೌಲರ್. ಉಳಿದಂತೆ ಸುಯಾಶ್ ಶರ್ಮಾ, ಜೋಶ್ ಹ್ಯಾಜ್ಲೆವುಡ್, ರಿಶಿಕ್, ಲುಂಗಿಸಾನಿ ನಿಗ್ಡಿ, ಯಶ್ ದಯಾಳ್ ಮುಂತಾದವರು ಬೆಂಗಳೂರು ತಂಡದ ಬೌಲಿಂಗ್ ಲೈನ್ ಅಪ್‌ನ ಇತರ ಬೌಲರ್‌ಗಳಾಗಿದ್ದಾರೆ.

ಆರ್‌ಸಿಬಿಯ ಪ್ರತಿಸ್ಪರ್ಧಿಯಾಗಿರುವ ಕೋಲ್ಕತ್ತಾ ನೈಟ್ ರೈಡರ್ಸ್ (ಕೆಕೆಆರ್) ಯಾವಾಗಲೂ ತನ್ನ ಚಾಣಾಕ್ಷ ತಂತ್ರಗಳ ಮನೋಭಾವಕ್ಕೆ ಹೆಸರುವಾಸಿಯಾಗಿದೆ. ಈ ಆವೃತ್ತಿಯಲ್ಲಿ ಕೆಕೆಆರ್ ತಂಡವು ಹೊಸ ನಾಯಕ ಅಜಿಂಕ್ಯ ರಹಾನೆ ಅವರನ್ನು ಹೊಂದಿದೆ. ಭಾರತ ತಂಡದ ಅನುಭವಿ ಆಟಗಾರ ಎಂದೇ ಚಿರಪರಿಚಿತರಾಗಿರುವ ಅವರ ಶಾಂತ ಸ್ವಭಾವವು ಕೆಕೆಆರ್ ತಂಡದ ಪಾಲಿಗೆ ಪ್ರಮುಖ ಶಕ್ತಿ. ಸ್ಫೋಟಕ ಆಲ್‌ರೌಂಡರ್ ವೆಂಕಟೇಶ್ ಅಯ್ಯರ್ ಈ ಸಲ ತಂಡದ ಉಪನಾಯಕ.

ಕೆಕೆಆರ್ ತಂಡದ ರಿಂಕುಸಿಂಗ್, ಸುನಿಲ್ ನರೈನ್, ಮನೀಶ್ ಪಾಂಡೆ, ಪೊವೆಲ್ ಸೇರಿದಂತೆ ಉಳಿದವರು ಉತ್ತಮ ಬ್ಯಾಟಿಂಗ್ ಫಾರ್ಮ್‌ನಲ್ಲಿದ್ದಾರೆ. ರಣದೀಪ್ ಸಿಂಗ್, ಮೊಹ್ದಿನ್ ಆಲಿ, ಆ್ಯಂಡ್ರೆ ಆರ್‌ರೌಂಡರ್ ಸ್ಥಾನವನ್ನು ತುಂಬಿದ್ದಾರೆ. ಅದೇ ರೀತಿ ಬೌಲರ್‌ಗಳಾದ ಹರ್ಷಿತ್ ರಾಣಾ, ವರುಣ್ ಚಕ್ರವರ್ತಿ, ವೈಭವ್ ಅರೋರಾ ಬೌಲಿಂಗ್‌ನಲ್ಲಿ ಬಹಳ ಚೆನ್ನಾಗಿ ಮಿಂಚಬಲ್ಲವರು.

### ಆರ್‌ಸಿಬಿ +
- ಬ್ಯಾಟಿಂಗ್ ದೈತ್ಯ ಪಡೆ
- ಪಂದ್ಯದ ಗತಿ ಬದಲಿಸಬಲ್ಲ ಆಲ್‌ರೌಂಡರ್ಸ್

### ಆರ್‌ಸಿಬಿ −
- ವಿದೇಶಿ ಆಟಗಾರರ ಮೇಲೆ ಹೆಚ್ಚಿನ ಅವಲಂಬನೆ
- ಬೌಲಿಂಗ್ ಪಡೆಯ ಅಸ್ಥಿರ ಪ್ರದರ್ಶನ ಸಾಧ್ಯತೆ

### ಕೆಕೆಆರ್ +
- ದೈತ್ಯ ಬೌಲಿಂಗ್ ಪಡೆ
- ರಾಷ್ಟ್ರ ತಂಡ ಪ್ರತಿನಿಧಿಸಿದ ಆಟಗಾರರು

### ಕೆಕೆಆರ್ −
- ವಿದೇಶಿ ಆಟಗಾರರ ಮೇಲೆ ಹೆಚ್ಚಿನ ಅವಲಂಬನೆ
- ಬ್ಯಾಟಿಂಗ್ ಅಸ್ಥಿರತೆ
- ತಂಡದಲ್ಲಿ ಹೊಂದಾಣಿಕೆ ಕೊರತೆ ನಿರೀಕ್ಷೆ

## ಮಳೆ ಭೀತಿ

ಶನಿವಾರಂದಂದು ಕೋಲ್ಕತ್ತಾದಲ್ಲಿ ಗುಡುಗು ಸಹಿತ ಮಳೆ ಬರುವ ಸಾಧ್ಯತೆ ಇದ್ದೇ ಇದೆ ಎಂದು ವರದಿ ತಿಳಿಸಿದೆ. ಆದರೆ ಈಡನ್ ಗಾರ್ಡನ್ ಕ್ರೀಡಾಂಗಣದಲ್ಲಿ ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದ ಮಾದರಿಯಲ್ಲೇ ಒಳಚರಂಡಿ ವ್ಯವಸ್ಥೆ ಮಾಡಲಾಗಿದೆ. ಹೀಗಾಗಿ ಮಳೆ ಬಂದು ನಿಂತ ಕೆಲವೇ ಹೊತ್ತಲ್ಲಿ ಮೈದಾನದಲ್ಲಿನ ನೀರೆಲ್ಲಾ ಆರಿ ಪಂದ್ಯ ಬೇಗನೆ ಶುರು ಮಾಡಲು ಸಾಧ್ಯ. ಹೀಗಾಗಿ ತುಂಬ ಹೊತ್ತು ಮಳೆ ಕಾಟ ಇಲ್ಲದಿದ್ದಲ್ಲಿ ಪಂದ್ಯ ನಡೆಯಲು ಅಡ್ಡಿಯಾಗುವುದಿಲ್ಲ. ಆದರೆ ಪೂರ್ಣ ಪ್ರಮಾಣದಲ್ಲಿ ಎರಡು ತಂಡಗಳಿಗೂ 20 ಓವರ್ ಆಡಲು ಸಿಗುತ್ತದೋ ಇಲ್ಲವೋ ಎಂಬ ಬಗ್ಗೆ ಮಾತ್ರ ಖಾತ್ರಿ ಇಲ್ಲ.

## ಹೆಡ್-ಟು-ಹೆಡ್ ದಾಖಲೆ

**34** ಆಡಿದ ಒಟ್ಟು ಪಂದ್ಯಗಳು

**21** ಕೆಕೆಆರ್ ಗೆಲುವು

**13** ಆರ್‌ಸಿಬಿ ಗೆಲುವು

## ಆತಿಥ್ಯದ ತಾಣಗಳು

ಕಳೆದ ಬಾರಿಗಿಂತ ಈ ಸಲದ ಐಪಿಎಲ್ (2025) ಆವೃತ್ತಿ ಅವಧಿ 1 ದಿನ ಹೆಚ್ಚು. ಆದರೆ ಪಂದ್ಯದಲ್ಲಿ ಯಾವುದೇ ಬದಲಾವಣೆ ಇಲ್ಲಿ. ಈ ಬಾರಿಯೂ 74 ಪಂದ್ಯವಿದೆ. ಮಾ. 22ರಿಂದ ಮೇ 26ರ ವರೆಗೆ 13 ತಾಣಗಳಲ್ಲಿ ಪಂದ್ಯಾವಳಿ ನಡೆಯಲಿದೆ. 10 ತಂಡಗಳನ್ನು ತಲಾ 5ರಂತೆ ಎರಡು ಗುಂಪುಗಳನ್ನಾಗಿ ವಿಂಗಡಿಸಲಾಗಿದೆ. ಐಪಿಎಲ್‌ನ ನಿಯಮಗಳು ಹಿಂದಿಗಿಂತ ಈ ಬಾರಿ ???ಂಚ ಬಿಗಿಯಾಗಿವೆ. ಆಟಗಾರರು ತಂಡದ ಬಸ್‌ನಲ್ಲೇ ಪ್ರಯಾಣಿಸಬೇಕು, ಆಟಗಾರರ ಡ್ರೆಸ್ಸಿಂಗ್ ರೂಮ್‌ಗೆ ಕುಟುಂಬಸ್ಥರು ಬರುವಂತಿಲ್ಲ, ಸ್ಲೀವ್‌ಲೆಸ್ ಜೆರ್ಸಿಯಲ್ಲಿ ಬಹುಮಾನ ವಿತರಣೆಯಲ್ಲಿ ಪಾಲ್ಗೊಳ್ಳುವಂತಿಲ್ಲ, ಪಂದ್ಯದ ದಿನ ಅಭ್ಯಾಸ ಅಥವಾ ಫಿಟ್‌ನೆಸ್ ಪರೀಕ್ಷೆಯಲ್ಲಿ ಪಾಲ್ಗೊಳ್ಳುವಂತಿಲ್ಲ, ಹೀಗೆ ಹತ್ತು ಹಲವು ನಿಯಮವಿದೆ. ಈ ಬಾರಿ ಪಂದ್ಯಗಳು ನಡೆಯುವ ತಾಣಗಳ ಪಟ್ಟಿ ಹೀಗಿದೆ.

### ಆತಿಥ್ಯ ಕ್ರೀಡಾಂಗಣಗಳು

| | | |
|---|---|---|
| ಬೆಂಗಳೂರು | ಪಂದ್ಯ 07 | ಆಸನ ಸಾಮರ್ಥ್ಯ : 35000 |
| ಚೆನ್ನೈ | ಪಂದ್ಯ 07 | ಆಸನ ಸಾಮರ್ಥ್ಯ : 39000 |
| ಅಹಮದಾಬಾದ್ | ಪಂದ್ಯ 07 | ಆಸನ ಸಾಮರ್ಥ್ಯ :132000 |
| ಡೆಲ್ಲಿ | ಪಂದ್ಯ 05 | ಆಸನ ಸಾಮರ್ಥ್ಯ: 35200 |
| ಲಖನೌ | ಪಂದ್ಯ 07 | ಆಸನ ಸಾಮರ್ಥ್ಯ: 50000 |
| ಧರ್ಮಶಾಲಾ | ಪಂದ್ಯ 03 | ಆಸನ ಸಾಮರ್ಥ್ಯ: 21200 |
| ಗುವಾಹಟಿ | ಪಂದ್ಯ 02 | ಆಸನ ಸಾಮರ್ಥ್ಯ: 46000 |
| ಹೈದರಾಬಾದ್ | ಪಂದ್ಯ 09 | ಆಸನ ಸಾಮರ್ಥ್ಯ: 55000 |
| ಜೈಪುರ | ಪಂದ್ಯ 05 | ಆಸನ ಸಾಮರ್ಥ್ಯ: 25000 |
| ಕೋಲ್ಕತಾ | ಪಂದ್ಯ 09 | ಆಸನ ಸಾಮರ್ಥ್ಯ: 68000 |
| ಚಂಡೀಗಢ | ಪಂದ್ಯ 04 | ಆಸನ ಸಾಮರ್ಥ್ಯ: 38000 |
| ಮುಂಬೈ, | ಪಂದ್ಯ 07 | ಆಸನ ಸಾಮರ್ಥ್ಯ: 38100 |
| ವಿಶಾಖಪಟ್ಟಣಂ | ಪಂದ್ಯ 02 | ಆಸನ ಸಾಮರ್ಥ್ಯ: 27500 |

# ಮೂವರ ಮೇಲೆ ಕಣ್ಣು

**ಈ ಬಾರಿ ಆರ್‌ಸಿಬಿ ತಂಡ ಅತ್ಯುತ್ತಮ ಕಾಂಬಿನೇಷನ್ ಅನ್ನು ಹೊಂದಿದೆ. ಹಾಗಾಗಿ ಬೆಂಗಳೂರು ತಂಡವನ್ನು ಸೋಲಿಸುವುದು ಸುಲಭವಲ್ಲ. ಹಲವು ಮ್ಯಾಚ್ ವಿನ್ನರ್‌ಗಳು ಆರ್‌ಸಿಬಿಯಲ್ಲಿದ್ದಾರೆ. ಈಡನ್ ಗಾರ್ಡನ್ಸ್ ಕ್ರೀಡಾಂಗಣದಲ್ಲಿ ಕೆಕೆಆರ್ ಎದುರು ಆರ್‌ಸಿಬಿ ತಂಡವನ್ನು ಗೆಲ್ಲಿಸಬಲ್ಲ ಮೂವರು ಸ್ಟಾರ್ ಆಟಗಾರರನ್ನು ಇಲ್ಲಿ ವಿವರಿಸಲಾಗಿದೆ.**

### 1 ವಿರಾಟ್ ಕೊಹ್ಲಿ

ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡಕ್ಕೆ ವಿರಾಟ್ ಕೊಹ್ಲಿ ಕೂಡ ಮ್ಯಾಚ್ ವಿನ್ನರ್ ಆಗಿದ್ದಾರೆ. ಅವರು ಶನಿವಾರ ಕೋಲ್ಕತಾ ನೈಟ್ ರೈಡರ್ಸ್ ವಿರುದ್ಧ ತಮ್ಮ ತಂಡವನ್ನು ಗೆಲ್ಲಿಸಲು ಎದುರು ನೋಡುತ್ತಿದ್ದಾರೆ. ಕೆಕೆಆರ್ ವಿರುದ್ಧ ವಿರಾಟ್ ಕೊಹ್ಲಿ ಅತ್ಯುತ್ತಮ ದಾಖಲೆಯನ್ನು ಹೊಂದಿದ್ದಾರೆ.

### 2 ರಜತ್ ಪಾಟಿದಾರ್

ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡಕ್ಕೆ ನೂತನ ನಾಯಕನಾಗಿ ರಜತ್ ಪಾಟಿದಾರ್ ನೇಮಕಗೊಂಡಿದ್ದಾರೆ. ರಜತ್ ದೇಶೀಯ ಕ್ರಿಕೆಟ್‌ನಲ್ಲಿ ಉತ್ತಮ ಫಾರ್ಮ್‌ನಲ್ಲಿ ಇರುವ ಕಾರಣ ಈ ಸಲದ ಐಪಿಎಲ್‌ನಲ್ಲಿ ಮಿಂಚುವ ಸಾಧ್ಯತೆ ಹೆಚ್ಚು ಇದೆ.

### 3 ಭುವನೇಶ್ವರ್ ಕುಮಾರ್

ಪವರ್‌ಪ್ಲೇ ಹಾಗೂ ಡೆತ್ ಓವರ್‌ಗಳಲ್ಲಿ ಚಾಣಾಕ್ಷತನದಿಂದ ಬೌಲ್ ಮಾಡುವ ಭುವನೇಶ್ವರ್, ಕೋಲ್ಕತಾ ನೈಟ್ ರೈಡರ್ಸ್ ತಂಡಕ್ಕೆ ಕಠಿಣವಾಗಲಿದ್ದಾರೆ. ಕೋಲ್ಕತಾದ ಈಡನ್ ಗಾರ್ಡನ್ಸ್‌ನಲ್ಲಿ ಭುವನೇಶ್ವರ್ ಕುಮಾರ್ ಆಡಿರುವ 10 ಪಂದ್ಯಗಳಿಂದ 13 ವಿಕೆಟ್‌ಗಳನ್ನು ಕಬಳಿಸಿದ್ದಾರೆ.